ಮಂಗಳವಾರ, ಜೂನ್ 6, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 156 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ನಮ್ಮ ಆಹಾರದ
ಆಯ್ಕೆಗೂ
ಆರೋಗ್ಯಕ್ಕೂ ನೇರ
ಸಂಬಂಧವಿದೆ

ಆಳ-ಅಗಲ
ರೈಲ್ವೆಯಲ್ಲಿ ಸುರಕ್ಷತೆ ಕಡೆಗಣನೆ
ಅಪಘಾತ: ಸುರಕ್ಷಾ ಆಯುಕ್ತರ ತನಿಖೆ ಶುರು 9

ಸಿಗಂದೂರು ಲಾಂಚ್ ಸ್ಥಗಿತ? 4A

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,787 ▲	18,593 ▲	₹62,250 (ಬೆಂಗಳೂರು)	₹73,800 (ಬೆಂಗಳೂರು)	82.63 ▼

ಲೈಂಗಿಕ ಅಲ್ಪಸಂಖ್ಯಾತರಿಗೂ ಉಚಿತ ಪ್ರಯಾಣ • ಗೃಹ ಲಕ್ಷ್ಮಿ ನಿಯಮಾವಳಿ ಬಾಕಿ

‘ಜ್ಯೋತಿ’, ‘ಶಕ್ತಿ’ಗೂ ಮಾರ್ಗಸೂಚಿ

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು ಗ್ಯಾರಂಟಿಗಳ ಪೈಕಿ ‘ಗೃಹ ಜ್ಯೋತಿ’ ಮತ್ತು ‘ಶಕ್ತಿ’ ಯೋಜನೆಗಳ ಅನುಷ್ಠಾನಕ್ಕೆ ಸೋಮವಾರ ಮಾರ್ಗಸೂಚಿ ಪ್ರಕಟಿಸಲಾಗಿದೆ. ಇದರೊಂದಿಗೆ ನಾಲ್ಕು ಗ್ಯಾರಂಟಿಗಳ ಜಾರಿಗೆ ಮಾರ್ಗಸೂಚಿ ಪ್ರಕಟವಾಗಿದ್ದು, ‘ಗೃಹ ಲಕ್ಷ್ಮಿ’ಯ ಮಾರ್ಗಸೂಚಿಯಷ್ಟೇ ಬಾಕಿ ಉಳಿದಿದೆ

ಬಾಡಿಗೆದಾರರಿಗಿದೆಯೇ ‘ಗೃಹ ಜ್ಯೋತಿ’?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆ ಮನೆಯಲ್ಲಿ ವಾಸಿಸುವವರಿಗೂ ಗೃಹ ಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಪೂರೈಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಇಂಧನ ಸಚಿವ ಕೆ.ಜೆ. ಜಾರ್ಜ್ ಭರವಸೆ ನೀಡಿದ್ದರು. ಆದರೆ, ಮಾರ್ಗಸೂಚಿಯಲ್ಲಿ ಈ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ.

ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಗೃಹ ಬಳಕೆಯ ವಿದ್ಯುತ್ ಸಂಪರ್ಕಗಳಿದ್ದರೆ (ಆರ್.ಆರ್ ಸಂಖ್ಯೆ) ಒಂದು ಸಂಪರ್ಕಕ್ಕೆ ಮಾತ್ರ ಗೃಹ ಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಸೌಲಭ್ಯ ದೊರಕಲಿದೆ ಎಂದು ಮಾರ್ಗಸೂಚಿ ಹೇಳಿದೆ. ಬಾಡಿಗೆ ಮನೆಯಲ್ಲಿ ವಾಸಿಸುವವರಿಗೆ ಯೋಜನೆಯಡಿ ಅನುಕೂಲ ಕಲ್ಪಿಸುವ ಕುರಿತು ಯಾವುದೇ ಉಲ್ಲೇಖವಿಲ್ಲ.

ಬಾಡಿಗೆ ಮನೆಗಳಲ್ಲಿ ವಾಸಿಸುವ ಕುಟುಂಬಗಳ ಯಜಮಾನನ ಆಧಾರ್ ಹಾಗೂ ಬಾಡಿಗೆ ಕರಾರು ಪ್ರತಿಯ ಸಹಿತ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಪಡೆದು ಬಾಡಿಗೆದಾರ ಕುಟುಂಬಗಳಿಗೆ ಗೃಹ ಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಪೂರೈಸುವ ಪ್ರಸ್ತಾವವನ್ನು ಇಂಧನ ಇಲಾಖೆ ಸಿದ್ಧಪಡಿಸಿತ್ತು.

ಅರ್ಜಿ ಸಲ್ಲಿಸಿದವರಿಗಷ್ಟೆ ಗೃಹ ಜ್ಯೋತಿ

- ಗೃಹ ಜ್ಯೋತಿ ಯೋಜನೆಯಡಿ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಸೌಲಭ್ಯ ಪಡೆಯಬೇಕಾದರೆ ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು
- 2022–23ನೇ ಆರ್ಥಿಕ ವರ್ಷದಲ್ಲಿ ತಿಂಗಳಿಗೆ ಸರಾಸರಿ 200 ಯೂನಿಟ್‌ಗಳಿಗಿಂತ ಹೆಚ್ಚು ವಿದ್ಯುತ್ ಬಳಸಿರುವ ಕುಟುಂಬಗಳು ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ. ಅವರು ಬಿಲ್‌ನ ಪೂರ್ಣ ಮೊತ್ತ ಪಾವತಿಸಬೇಕು
- ಗೃಹ ಬಳಕೆಯ ವಿದ್ಯುತ್ ಸಂಪರ್ಕಗಳಿಗೆ ಮಾತ್ರ ಯೋಜನೆ ಅನ್ವಯ. ವಾಣಿಜ್ಯ ಉದ್ದೇಶದ ವಿದ್ಯುತ್ ಬಳಕೆಗೆ ಅನ್ವಯಿಸುವುದಿಲ್ಲ
- ಪ್ರತಿ ತಿಂಗಳು ಮೀಟರ್ ರೀಡಿಂಗ್ ಮಾಡಿದಾಗ ಒಟ್ಟು ವಿದ್ಯುತ್ ಬಳಕೆಯ ಪ್ರಮಾಣಕ್ಕೆ ಬಿಲ್ ನಮೂದಿಸಬೇಕು
- ಅರ್ಹ (2022–23ರಲ್ಲಿನ ತಿಂಗಳ ಸರಾಸರಿ ಬಳಕೆ ಮತ್ತು ಶೇ 10ರಷ್ಟು ಹೆಚ್ಚಿನ ಮೊತ್ತ) ಪ್ರಮಾಣದ ವಿದ್ಯುತ್‌ನ ಬಿಲ್ ಮೊತ್ತವನ್ನು ಕಡಿತಗೊಳಿಸಿ, ಉಳಿದ ಮೊತ್ತಕ್ಕೆ ಗ್ರಾಹಕರಿಗೆ ಬಿಲ್ ನೀಡಲಾಗುವುದು. ಈ ಮೊತ್ತವನ್ನು ಗ್ರಾಹಕರು ಪಾವತಿಸಬೇಕು
- ಅರ್ಹ ಮೊತ್ತಕ್ಕಿಂತ ಕಡಿಮೆ ಪ್ರಮಾಣದ ವಿದ್ಯುತ್ ಬಳಕೆಯಾಗಿದ್ದರೆ ಗ್ರಾಹಕರಿಗೆ ಶೂನ್ಯ ಮೊತ್ತಕ್ಕೆ ಬಿಲ್ ನೀಡಬೇಕು
- ಪ್ರತಿ ಫಲಾನುಭವಿ ಕಡ್ಡಾಯವಾಗಿ ತನ್ನ ಗ್ರಾಹಕರ ಗುರುತಿನ ಸಂಖ್ಯೆ (ಕಸ್ಟಮರ್ ಐಡಿ)/ ಖಾತೆಯ ಗುರುತಿನ ಸಂಖ್ಯೆಯನ್ನು (ಅಕೌಂಟ್ ಐಡಿ) ಆಧಾರ್ ಜತೆ ಜೋಡಣೆ ಮಾಡಬೇಕು
- ಜೂನ್ 30ಕ್ಕೆ ಕೊನೆಗೊಂಡಂತೆ ಜುಲೈ ತಿಂಗಳಲ್ಲಿ ನೀಡುವ ಬಿಲ್‌ನಲ್ಲಿರುವ ಬಾಕಿ ಮೊತ್ತವನ್ನು ಮೂರು ತಿಂಗಳೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಬಾಕಿ ಪಾವತಿಸದಿದ್ದರೆ ಅಂತಹ ಗ್ರಾಹಕರ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತದೆ
- ಗೃಹ ಬಳಕೆಯ ವಿದ್ಯುತ್ ಸಂಪರ್ಕಗಳಿಗೆ ಮೀಟರ್ ಅಳವಡಿಕೆ ಮತ್ತು ಮೀಟರ್ ಓದುವುದು ಕಡ್ಡಾಯ

ಉಚಿತ ಪ್ರಯಾಣಕ್ಕೆ ಸ್ಮಾರ್ಟ್ ಕಾರ್ಡ್

- ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಲು ‘ಶಕ್ತಿ ಸ್ಮಾರ್ಟ್ ಕಾರ್ಡ್’ ಪಡೆಯಬೇಕು. ಅದು ಸಿಗುವವರೆಗೆ ಕೇಂದ್ರ–ರಾಜ್ಯ ಸರ್ಕಾರ ನೀಡಿದ ಯಾವುದಾದರೂ ಗುರುತಿನ ಚೀಟಿ ಬಳಸಬಹುದು
- ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿಗಳನ್ನು ಪಡೆದು, ‘ಶಕ್ತಿ ಸ್ಮಾರ್ಟ್ ಕಾರ್ಡ್’ ವಿತರಿಸುವ ಪ್ರಕ್ರಿಯೆಯನ್ನು ಮೂರು ತಿಂಗಳೊಳಗೆ ಪೂರ್ಣಗೊಳಿಸಬೇಕು
- ‘ಶಕ್ತಿ’ ಸ್ಮಾರ್ಟ್ ಕಾರ್ಡ್ ವಿತರಿಸುವವರೆಗೂ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಇಲಾಖೆ, ಸರ್ಕಾರಿ ಸ್ವಾಮ್ಯದ ಕಚೇರಿಗಳಿಂದ ವಿತರಿಸಿರುವ ಭಾವಚಿತ್ರ ಹಾಗೂ ವಾಸದ ವಿಳಾಸವಿರುವ ಗುರುತಿನ ಚೀಟಿಗಳನ್ನು ಪರಿಗಣಿಸಿ ಶೂನ್ಯ ಟಿಕೆಟ್ ನೀಡುವುದು
- ರಾಜ್ಯದ ಒಳಗಿನ ಪ್ರಯಾಣಕ್ಕೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ. ಎಲ್ಲ ಅಂತರರಾಜ್ಯ ಸಾರಿಗೆ ಟ್ರಿಪ್‌ಗಳು ಯೋಜನೆಯಿಂದ ಹೊರಕ್ಕೆ
- ನಗರ ಸಾರಿಗೆ, ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ ಮಾತ್ರ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ
- ರಾಜಹಂಸ, ನಾನ್ ಎ.ಸಿ.– ಸ್ಲೀಪರ್, ವಜ್ರ, ವಾಯು ವಜ್ರ, ಐರಾವತ, ಐರಾವತ ಕ್ಲಬ್ ಕ್ಲಾಸ್, ಐರಾವತ ಗೋಲ್ಡ್ ಕ್ಲಾಸ್, ಅಂಬಾರಿ, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಉತ್ಸವ್, ಫ್ಲೈ ಬಸ್, ಇವಿ ಪವರ್ ಪ್ಲಸ್‌ಗಳಲ್ಲಿ ಶಕ್ತಿ ಯೋಜನೆ ಅನ್ವಯವಾಗುವುದಿಲ್ಲ
- ಬಿಎಂಟಿಸಿ ಹೊರತುಪಡಿಸಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಗಳ ಎಲ್ಲ ಬಸ್‌ಗಳಲ್ಲಿ (ಅಂತರ ರಾಜ್ಯ, ಹವಾ ನಿಯಂತ್ರಿತ ಮತ್ತು ಐಷಾರಾಮಿ ಹೊರತುಪಡಿಸಿ) ಶೇಕಡ 50ರಷ್ಟು ಆಸನಗಳನ್ನು ಪುರುಷರಿಗೆ ಮೀಸಲಿಡುವುದು
- ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಈ ಯೋಜನೆಯಡಿ ತಗಲುವ ವೆಚ್ಚವನ್ನು ಶೂನ್ಯ ಟಿಕೆಟ್ ಮತ್ತು ಶಕ್ತಿ ಸ್ಮಾರ್ಟ್ ಕಾರ್ಡ್ ದತ್ತಾಂಶದ ಆಧಾರದಲ್ಲಿ ಸಾರಿಗೆ ಇಲಾಖೆ ಭರಿಸಲಿದೆ
- **ಲೈಂಗಿಕ ಅಲ್ಪಸಂಖ್ಯಾತರಿಗೂ ಸೌಲಭ್ಯ:** ‘ಶಕ್ತಿ’ ಯೋಜನೆಯಡಿ ಮಹಿಳೆಯರ ಜತೆಗೆ ಲೈಂಗಿಕ ಅಲ್ಪಸಂಖ್ಯಾತರಿಗೂ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕದ ನಿವಾಸಿಗಳಷ್ಟೇ ಈ ಯೋಜನೆಯ ಪ್ರಯೋಜನ ಪಡೆಯಬಹುದು

‘ಮೋದಿ ವರ್ಚಸ್ಸಷ್ಟೇ ಸಾಲದು’

ಆರ್‌ಎಸ್‌ಎಸ್ ಮುಖವಾಣಿ ‘ದಿ ಆರ್ಗನೈಸರ್’ ಅಭಿಮತ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು ಹಾಗೂ ಹಿಂದುತ್ವ ಸಿದ್ಧಾಂತವನ್ನು ಮುನ್ನೆಲೆಗೆ ತರುವುದರಿಂದಷ್ಟೇ ಭವಿಷ್ಯದಲ್ಲಿ ಚುನಾವಣೆಗಳನ್ನು ಗೆಲ್ಲಲು ಸಾಧ್ಯವಿಲ್ಲ’

–ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖವಾಣಿ ‘ದಿ ಆರ್ಗನೈಸರ್’, ಕರ್ನಾಟಕ ವಿಧಾನ ಸಭೆ ಚುನಾವಣೆಯಲ್ಲಿ ಬಿಜೆಪಿಯ ಸೋಲನ್ನು ವಿಶ್ಲೇಷಿಸಿ ಬರೆದಿರುವ ಸಂಪಾದಕೀಯದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಸ್ಥಳೀಯವಾಗಿ ಬಲವಾದ ನಾಯಕತ್ವ ಹಾಗೂ ಯೋಜನೆಗಳ ಪರಿಣಾಮಕಾರಿ ಜಾರಿ ಇಲ್ಲದೇ ಮೋದಿ ಅವರ ವರ್ಚಸ್ಸು, ಹಿಂದುತ್ವ ಸಿದ್ಧಾಂತದಿಂದಲೇ ಚುನಾವಣೆಗಳನ್ನು ಗೆಲ್ಲಲಾಗದು. ರಾಜ್ಯದಲ್ಲಿ ಆಡಳಿತ ಉತ್ತಮವಿದ್ದಾಗ ಮಾತ್ರ ಸಿದ್ಧಾಂತ ಮತ್ತು ನಾಯಕತ್ವವು ಪಕ್ಷಕ್ಕೆ ನಿಜಕ್ಕೂ ಆಸ್ತಿಯಾಗುತ್ತದೆ’ ಎಂದು ವಿಶ್ಲೇಷಿಸಿದೆ.

ಮೇ 23ರ ಸಂಚಿಕೆಯಲ್ಲಿ ಈ ಕುರಿತು ಸಂಪಾದಕೀಯ ಬರೆದಿರುವ ಆರ್‌ಎಸ್‌ಎಸ್ ಮುಖವಾಣಿ ಪತ್ರಿಕೆಯು ಕರ್ನಾಟಕ ವಿಧಾನಸಭೆ ಚುನಾವಣೆ ಫಲಿತಾಂಶದ ಅಂಕಿ ಅಂಶಗಳನ್ನೇ 2024ರ ಸಾರ್ವತ್ರಿಕ ಚುನಾವಣೆಗೆ ಹೊಂದಿಸಿ ನೋಡಿದರೆ ಭೀತಿ ಮೂಡುತ್ತದೆ. ಕರ್ನಾಟಕದ ಫಲಿತಾಂಶವು ವಿರೋಧ ಪಕ್ಷಗಳ ನೈತಿಕಸ್ಥೈರ್ಯ ವೃದ್ಧಿಸಿದೆ ಎಂದಿದೆ.

ಭ್ರಷ್ಟಾಚಾರ ಆರೋಪ ಚುನಾವಣೆಯಲ್ಲಿ ಮುಖ್ಯಪಾತ್ರ ವಹಿಸಿತು. ಆಡಳಿತ ವಿರೋಧಿ ಅಲೆ ಎದುರು ಮೋದಿ ಜನಪ್ರಿಯತೆ ನಿಲ್ಲಲಿಲ್ಲ. ಮೋದಿ ಅವರು ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲಿಗೆ ಬಿಜೆಪಿ ಚುನಾವಣೆಯಲ್ಲಿ ಭ್ರಷ್ಟಾಚಾರವನ್ನು ಸಮರ್ಥಿಸಿಕೊಳ್ಳಬೇಕಾಯಿತು ಎಂದು ಹೇಳಿದೆ.

ಕರ್ನಾಟಕ ವಿಧಾನಸಭೆಗೆ ಈಚೆಗೆ ನಡೆದಿದ್ದ ಚುನಾವಣೆಯಲ್ಲಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಸಚಿವರಾಗಿದ್ದ ವಿ.ಸೋಮಣ್ಣ, ಡಾ.ಕೆ. ಸುಧಾಕರ್, ಬಿ.ಶ್ರೀರಾಮುಲು, ಗೋವಿಂದ ಕಾರಜೋಳ, ಮುರುಗೇಶ ನಿರಾಣಿ, ಜೆ.ಸಿ.ಮಾಧುಸ್ವಾಮಿ, ಬಿ.ಸಿ. ಪಾಟೀಲ, ಎಂ.ಟಿ.ಬಿ ನಾಗರಾಜ್, ಕೆ.ಸಿ. ನಾರಾಯಣಗೌಡ, ಬಿ.ಸಿ.ನಾಗೇಶ್ ಸೇರಿದಂತೆ ಹಲವು ಪ್ರಮುಖರು ಪರಾಭವಗೊಂಡಿದ್ದರು.

‘ಸ್ಥಳೀಯ ಮಟ್ಟದಲ್ಲಿ ನಡೆಸಿದ ಪ್ರಚಾರಗಳಿಂದ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವಾಯಿತು. ಚುನಾವಣೆಯಲ್ಲಿ ರಾಷ್ಟ್ರಮಟ್ಟದ ನಾಯಕರ ಪಾತ್ರವನ್ನು ಮಿತಗೊಳಿಸಿ, ಸ್ಥಳೀಯ ಮಟ್ಟದಲ್ಲಿಯೇ ಪ್ರಚಾರವನ್ನು ನಡೆಸಿದ್ದು ಕಾಂಗ್ರೆಸ್‌ಗೆ ಲಾಭವಾಗಿದೆ. ‘ಕುಟುಂಬ ನೇತೃತ್ವದ’ ಪಕ್ಷವು ಈ ಚುನಾವಣೆಯಲ್ಲಿ ರಾಜ್ಯಮಟ್ಟದಲ್ಲಿ ಸರ್ವಾನುಮತದ ನಾಯಕರನ್ನು ಮುನ್ನೆಲೆಯಲ್ಲಿ ಬಿಂಬಿಸಿದ್ದರಿಂದ 2018ರ ಚುನಾವಣೆಗೆ ಹೋಲಿಸಿದರೆ ಶೇ 5ರಷ್ಟು ಅಧಿಕ ಮತಗಳಿಸಿತು’ ಎಂದು ಆರ್ಗನೈಸರ್ ವಿಶ್ಲೇಷಿಸಿದೆ.

ಮೋದಿ ಆಡಳಿತಕ್ಕೆ ಮೆಚ್ಚುಗೆ

ಪ್ರಧಾನಿ ನರೇಂದ್ರ ಮೋದಿ ಮತ್ತು ಒಂಬತ್ತು ವರ್ಷಗಳಲ್ಲಿ ಬಿಜೆಪಿ ಸರ್ಕಾರದ ಸಾಧನೆಗಳಿಗೆ ಸಂಪಾದಕೀಯವು ಮೆಚ್ಚುಗೆ ಸೂಚಿಸಿದೆ. ‘2014ರಲ್ಲಿ ಹೆಚ್ಚಿನ ಭಾರತೀಯರು ಪ್ರಜಾಪ್ರಭುತ್ವ ಕುರಿತು ವಿಶ್ವಾಸ ಕಳೆದುಕೊಂಡಿದ್ದರು. ಆದರೆ, ಪ್ರಧಾನಿ ಮೋದಿ ಮತ್ತು ಅವರ ಸರ್ಕಾರ ಹಲವು ಕ್ಷೇತ್ರಗಳಲ್ಲಿ ಸಕಾರಾತ್ಮಕವಾಗಿ ಕಾರ್ಯನಿರ್ವಹಿಸಿತು. ಸಂಸ್ಕೃತಿ, ಆರೋಗ್ಯ, ಮೂಲಸೌಕರ್ಯ, ರಕ್ಷಣೆ, ರಾಷ್ಟ್ರೀಯ ಭದ್ರತೆ ಕ್ಷೇತ್ರಗಳಲ್ಲಿ ಜನರ ನಿರೀಕ್ಷೆಗಳಿಗೆ ಸ್ಪಂದಿಸಿದೆ’ ಎಂದು ಪತ್ರಿಕೆಯು ಹೇಳಿದೆ.

ವದಂತಿಗಳನ್ನು ನಂಬಬೇಡಿ ಎಂದ ಕುಸ್ತಿಪಟುಗಳು

ಹಿಂದೆ ಹೋಗಿಲ್ಲ: ಸಾಕ್ಷಿ ಮಲಿಕ್

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನಾವು ಪ್ರತಿಭಟನೆಯಿಂದ ಹಿಂದೆ ಸರಿದಿಲ್ಲ. ಆದರೆ ರೈಲ್ವೆಯ ನಮ್ಮ ಉದ್ಯೋಗಗಳಿಗೆ ಮರಳಿದ್ದೇವೆ’ ಎಂದು ಪ್ರತಿಭಟನೆನಿರತ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್ ಮತ್ತು ಭಜರಂಗ್ ಪೂನಿಯಾ ಅವರು ಸೋಮವಾರ ಹೇಳಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಕುಸ್ತಿಪಟುಗಳು ಶನಿವಾರ ಸಂಜೆ ಭೇಟಿಯಾಗಿ ಮಾತುಕತೆ ನಡೆಸಿದ್ದರು. ಅದರ ಬೆನ್ನಲ್ಲೇ ಈ ಸ್ಪಷ್ಟನೆ ನೀಡಿದ್ದಾರೆ.

ಲೈಂಗಿಕ ಕಿರುಕುಳ ಆರೋಪ ಹೊತ್ತಿರುವ ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಅವರ ವಿರುದ್ಧದ ಪ್ರತಿಭಟನೆಯನ್ನು ಮುನ್ನಡೆಸಿದ್ದ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ಭಜರಂಗ್ ಪೂನಿಯಾ ಮತ್ತು ವಿನೇಶಾ ಫೋಗಟ್ ಅವರು ಐದು ದಿನಗಳ ಹಿಂದೆಯೇ ಉದ್ಯೋಗಕ್ಕೆ ಮರುಸೇರ್ಪಡೆ ಆಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾಗಿ ವರದಿಯಾಗಿತ್ತು. ಕುಸ್ತಿಪಟುಗಳು ಪ್ರತಿಭಟನೆಯಿಂದ ಹಿಂದೆ ಸರಿದಿದ್ದಾರೆ ಎಂಬ ವದಂತಿಗಳು ಈ ವರದಿಯಿಂದಾಗಿ ಹಬ್ಬಿದ್ದವು. ಜೊತೆಗೆ, ಹದಿಹರೆಯದ ಬಾಲಕಿಯೂ ಸೇರಿ ಮಹಿಳಾ ಕುಸ್ತಿಪಟುಗಳು ಬ್ರಿಜ್‌ಭೂಷಣ್ ವಿರುದ್ಧದ ದೂರನ್ನೂ ಹಿಂದೆ ಪಡೆದಿದ್ದಾರೆ ಎಂಬ ಊಹಾಪೋಹಗಳು ಹರಿದಾಡಿದ್ದವು.

ಈ ಎಲ್ಲಾ ಊಹಾಪೋಹಗಳನ್ನು ಕುಸ್ತಿಪಟುಗಳು ನಿರಾಕರಿಸಿದ್ದಾರೆ.

ಅಮಿತ್ ಶಾ ಅವರ ಜೊತೆ ಸಾಮಾನ್ಯ ಮಾತುಕತೆ ನಡೆಯಿತು. ಯಾವುದೇ ಅಂತಿಮ ನಿರ್ಧಾರಕ್ಕೆ ಬರಲಾಗಲಿಲ್ಲ
ಸಾಕ್ಷಿ ಮಲಿಕ್, ಕುಸ್ತಿಪಟು

ದುರ್ಬಲ ಮಾಧ್ಯಮವು ಗೂಂಡಾಗಳ ಎದುರು ತೆವಳಲಾರಂಭಿಸಿದೆಯೇ ಹೊರತು ಮಹಿಳಾ ಕುಸ್ತಿಪಟುಗಳಲ್ಲ
ವಿನೇಶಾ ಫೋಗಟ್, ಕುಸ್ತಿಪಟು

‘ಈ ವರದಿಗಳು ಸಂಪೂರ್ಣವಾಗಿ ಸುಳ್ಳು. ನ್ಯಾಯಕ್ಕಾಗಿ ಹೋರಾಡುತ್ತಿರುವ ನಾವು ನಮ್ಮ ಹೆಜ್ಜೆಯನ್ನು ಹಿಂದಿಟ್ಟಿಲ್ಲ, ಇಡುವುದೂ ಇಲ್ಲ. ಸತ್ಯಾಗ್ರಹದ ಜೊತೆಗೆ ರೈಲ್ವೆಯ ನನ್ನ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದ್ದೇನೆ. ದಯವಿಟ್ಟು ಈ ಕುರಿತು ಸುಳ್ಳು ಸುದ್ದಿ ಹಬ್ಬಿಸಬೇಡಿ’ ಎಂದು ಸಾಕ್ಷಿ ಮಲಿಕ್ ಟ್ವೀಟ್ ಮಾಡಿದ್ದಾರೆ.

9ನೇ ಪುಟ ನೋಡಿ

ಹೊಸಕೆರೆಹಳ್ಳಿ ಕೆರೆಯ ಮಧ್ಯಭಾಗದಲ್ಲಿ ರಸ್ತೆ ನಿರ್ಮಿಸಿದ ಪ್ರಕರಣ

ಇಬ್ಬರು ಎಂಜಿನಿಯರ್‌ಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿ ಕೆರೆಯ ಮಧ್ಯಭಾಗದಲ್ಲಿ ರಸ್ತೆ ನಿರ್ಮಿಸಿದ ಪ್ರಕರಣದಲ್ಲಿ ಕರ್ತವ್ಯಲೋಪ ಎಸಗಿರುವ ಬಿಬಿಎಂಪಿಯ ಘನ ತ್ಯಾಜ್ಯ ನಿರ್ವಹಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಎಚ್.ಎಸ್.ಮೇಘ ಹಾಗೂ ಕೆರೆ ವಿಭಾಗದ ಸಹಾಯಕ ಎಂಜಿನಿಯರ್ ಶಿಲ್ಪಾ ಅವರನ್ನು ಅಮಾನತು ಮಾಡಲಾಗಿದೆ.

ವಿಧಾನಸೌಧದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಹೊಸಕೆರೆಹಳ್ಳಿ ಕೆರೆಯಲ್ಲಿ ರಸ್ತೆ ನಿರ್ಮಾಣಕ್ಕೆ ಕಾರಣರಾದ ಮಾಹಿತಿ ಕೇಳಿದ್ದರು. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸರಿಯಾದ ಮಾಹಿತಿ ನೀಡಿರಲಿಲ್ಲ. ಸಂಜೆ ವೇಳೆಗೆ ಕೆರೆ ಮಧ್ಯೆ ರಸ್ತೆ ನಿರ್ಮಿಸಲು ಕಾರಣರಾದ ಎಂಜಿನಿಯರ್‌ಗಳನ್ನು ಅಮಾನತು ಮಾಡಬೇಕು ಎಂದು ತಾಕೀತು ಮಾಡಿದ್ದರು.

ಮುಖ್ಯ ಆಯುಕ್ತರ ಸೂಚನೆಯಂತೆ, ಮಾರ್ಚ್ 23ರಂದು ಹೊಸಕೆರೆಹಳ್ಳಿ ಕೆರೆ ಪ್ರದೇಶದಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದ ಯೋಜನೆ ವಿಭಾಗದ ವಿಶೇಷ ಆಯುಕ್ತ ರವೀಂದ್ರ ಅವರು, ಘನತ್ಯಾಜ್ಯ ನಿರ್ವಹಣೆ ವಿಭಾಗ ಹಾಗೂ ಕೆರೆ ವಿಭಾಗದ ಮುಖ್ಯ ಎಂಜಿನಿಯರ್ ಅವರಿಗೆ ಮಾಹಿತಿ ನೀಡಲು ಸೂಚಿಸಿದ್ದರು.

ಕೆರೆ ಮಧ್ಯಭಾಗದಲ್ಲಿ 200 ಮೀಟರ್ ರ‍್ಯಾಂಪ್ ನಿರ್ಮಿಸಿದ್ದು, ಯಂತ್ರೋಪಕರಣ ಸಂಚರಿಸಲು ಬೇಕಾದ ಅಗತ್ಯಕ್ಕಿಂತ ಇದು ಹೆಚ್ಚಾಗಿದೆ. ಇದರಿಂದ ಪರಿಸರಕ್ಕೆ ಹಾನಿ ಉಂಟಾಗಿರುತ್ತದೆ. ಮಾಧ್ಯಮಗಳಲ್ಲೂ ಇದು ವರದಿಯಾಗಿದೆ. ಗುತ್ತಿಗೆದಾರರು ಅನವಶ್ಯಕವಾದ ಈ ಕೆಲಸವನ್ನು ಮಾಡುವಾಗ ಕಾರ್ಯಪಾಲಕ ಎಂಜಿನಿಯರ್ ಎಚ್.ಎಸ್.ಮೇಘ ಹಾಗೂ ಸಹಾಯಕ ಎಂಜಿನಿಯರ್ ಶಿಲ್ಪಾ ಅವರು ತಡೆಯಲು ವಿಫಲರಾಗಿದ್ದಾರೆ ಎಂದು ಘನತ್ಯಾಜ್ಯ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್ ವರದಿ ನೀಡಿದ್ದಾರೆ. ಆದ್ದರಿಂದ ಇವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವಂತೆ ವಿಶೇಷ ಆಯುಕ್ತರು ಜೂನ್ 5ರಂದು ಮುಖ್ಯ ಆಯುಕ್ತರಿಗೆ ವರದಿ ಸಲ್ಲಿಸಿದ್ದಾರೆ.

ಮೇಘ ಹಾಗೂ ಶಿಲ್ಪಾ ಅವರು ಹೊಸಕೆರೆಹಳ್ಳಿ ಕೆರೆ ಮಧ್ಯದಲ್ಲಿ ಬಂಡ್ ನಿರ್ಮಿಸಿರುವ ಕಾಮಗಾರಿಯಲ್ಲಿ ಬೇಜವಾಬ್ದಾರಿಯಿಂದ ದುರ್ನಡತೆ ತೋರಿರುವುದು ಕಂಡುಬಂದಿದೆ. ಅಲ್ಲದೆ, ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ ನಿರ್ವಹಿಸುತ್ತಿರುವ ಕಾಮಗಾರಿ ವ್ಯಾಪ್ತಿಗೂ ಇದು ಸೇರಿಲ್ಲದಿದ್ದರೂ, ಬಂಡ್ ನಿರ್ಮಿಸಿರುವುದು ನಿಯಮ ಬಾಹಿರವಾಗಿರುತ್ತದೆ. ಕೆರೆ ಅಂಗಳದಲ್ಲಿ ಕಾಮಗಾರಿ ನಡೆಸಲು ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ನಿರಾಕ್ಷೇಪಣಾ ಪತ್ರವನ್ನೂ ಪಡೆಯದೆ ಕರ್ತವ್ಯಲೋಪ ಎಸಗಿದ್ದಾರೆ ಎಂದು ಮುಖ್ಯ ಆಯುಕ್ತರು ವರದಿ ನೀಡಿದ್ದಾರೆ.

ಈ ವರದಿಯಂತೆ, ಲೋಕೋಪಯೋಗಿ ಇಲಾಖೆಯಿಂದ ಬಿಬಿಎಂಪಿಯಲ್ಲಿ ಎರವಲು ಸೇವೆಯಲ್ಲಿರುವ ಮೇಘ ಹಾಗೂ ಶಿಲ್ಪಾ ಅವರನ್ನು ಅಮಾನತುಗೊಳಿಸಿ ನಗರಾಭಿವೃದ್ಧಿ ಇಲಾಖೆ ಸೋಮವಾರ ರಾತ್ರಿ ಆದೇಶ ಹೊರಡಿಸಿದೆ.

‘ಜುಲೈ 7ರಂದು ಬಜೆಟ್ ಮಂಡನೆ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಜುಲೈ 3ರಿಂದ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಜುಲೈ 7ರಂದು ರಾಜ್ಯ ಬಜೆಟ್ ಮಂಡಿಸಲಾಗುವುದು’ ಎಂದು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು,‘ಜುಲೈ 3ರಂದು ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡುವರು. ನಂತರ 4 ದಿನ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ನಡೆಸಿ, ಬಜೆಟ್ ಮಂಡಿಸಲಾಗುವುದು’ ಎಂದರು.

ಹಾಲು ಖರೀದಿ ದರ ಯಥಾಸ್ಥಿತಿ

ಬೆಂಗಳೂರು: ರೈತರಿಂದ ಖರೀದಿಸುವ ಹಾಲಿನ ದರ ₹1.50 ಕಡಿತಗೊಳಿಸಿದ ಆದೇಶ ಹಿಂಪಡೆದು, ಮೊದಲಿನಂತೆ ಪ್ರತಿ ಲೀಟರ್‌ಗೆ ₹34 ನಿಗದಿಪಡಿಸುವಂತೆ ಬೆಂಗಳೂರು ಸಹಕಾರ ಹಾಲು ಒಕ್ಕೂಟಕ್ಕೆ (ಬಮೂಲ್) ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಲ (ಕೆಎಂಎಫ್) ನಿರ್ದೇಶನ ನೀಡಿದೆ.

ರೈತರಿಂದ ಖರೀದಿಸುವ ಹಾಲಿನ ದರವನ್ನು ಜೂನ್ 1ರಿಂದ ಅನ್ವಯವಾಗುವಂತೆ ಕಡಿತ ಮಾಡಲಾಗಿತ್ತು.

ಈ ವಿಷಯದ ಕುರಿತು, ಕೆಎಂಎಫ್‌ಗೆ ಸೂಚನೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಾಲು ಉತ್ಪಾದಕರ ಹಿತದೃಷ್ಟಿಯಿಂದ ಆದೇಶ ಹಿಂಪಡೆಯುವಂತೆ ನಿರ್ದೇಶಿಸಿದ್ದರು.

ಶಾಲಾ ಮಕ್ಕಳಿಗೆ ಕಳಪೆ ಗುಣಮಟ್ಟದ ಸಮವಸ್ತ್ರ ಬಟ್ಟೆ ಪೂರೈಕೆ ಆರೋಪ

ಕೆಎಚ್‌ಡಿಸಿ ಎಂ.ಡಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಯ ಮಕ್ಕಳಿಗೆ ಕಳಪೆ ಗುಣಮಟ್ಟದ ಸಮವಸ್ತ್ರ ಬಟ್ಟೆ ಪೂರೈಕೆ ಮತ್ತು ನಿಗಮದ ಜಾಗವನ್ನು ಬಾಡಿಗೆಗೆ ನೀಡುವಾಗ ನಿಯಮ ಉಲ್ಲಂಘಿಸಿ ಟೆಂಡರ್ ಆಹ್ವಾನಿಸಿದ ಆರೋಪಗಳಲ್ಲಿ ಸತ್ಯಾಂಶ ಇದೆ ಎಂಬುದು ಮೇಲ್ನೋಟಕ್ಕೆ ಕಂಡ ಕಾರಣ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ (ಕೆಎಚ್‌ಡಿಸಿ) ವ್ಯವಸ್ಥಾಪಕ ನಿರ್ದೇಶಕ ಎಸ್. ಮುದ್ದಯ್ಯ ಅವರನ್ನು ಅಮಾನತುಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2020–21ನೇ ಸಾಲಿನಲ್ಲಿ ವಿದ್ಯಾ ವಿಕಾಸ ಯೋಜನೆಯಲ್ಲಿ ಒಂದರಿಂದ 10ನೇ ತರಗತಿವರೆಗಿನ ಗಂಡು ಮಕ್ಕಳಿಗೆ ಮತ್ತು ಒಂದರಿಂದ ಏಳನೇ ತರಗತಿವರೆಗಿನ ಹೆಣ್ಣು ಮಕ್ಕಳಿಗೆ ಸಮವಸ್ತ್ರ, ಎಂಟರಿಂದ 10ನೇ ತರಗತಿವರೆಗಿನ ಹೆಣ್ಣು ಮಕ್ಕಳಿಗೆ ಚೂಡಿದಾರ್ ಸೇರಿ ಎರಡು ಜೊತೆ ಸಮವಸ್ತ್ರಕ್ಕೆ ಒಟ್ಟು 1.34 ಕೋಟಿ ಮೀಟರ್ ಬಟ್ಟೆ ಪೂರೈಸಲು ಸಾರ್ವಜನಿಕ ಶಿಕ್ಷಣ ಇಲಾಖೆಯು ನಿಗಮಕ್ಕೆ ಕಾರ್ಯಾದೇಶ ನೀಡಿತ್ತು. ಆದರೆ, ನಿಗಮ ಪೂರೈಸಿದ ಬಟ್ಟೆಯು ಕಳಪೆ ಗುಣಮಟ್ಟದ್ದು ಎಂದು 2023ರ ಫೆ. 21ರಂದು ಕೇಂದ್ರ ರೇಷ್ಮೆ ಮಂಡಳಿ ವರದಿ ನೀಡಿತ್ತು.

ಬಟ್ಟೆಯನ್ನು ಕೆಟಿಪಿಪಿ ಕಾಯ್ದೆ ಅನ್ವಯ, ನಿಗಮದ ನೋಂದಾಯಿತ ಕೈಮಗ್ಗ ನೇಕಾರರಿಂದ ಖರೀದಿಸುವ ಬದಲು ಮುದ್ದಯ್ಯ ಅವರು ಕೇಂದ್ರೀಯ ಭಂಡಾರ ಮತ್ತು ಎನ್‌ಸಿಸಿಎಫ್ ಸಂಸ್ಥೆಯಿಂದ ಖರೀದಿಸಿ ಪೂರೈಸಿದ್ದರು. ಕಳಪೆ ಗುಣಮಟ್ಟದ ಸಮವಸ್ತ್ರ ಬಟ್ಟೆ ಸರಬರಾಜು ಮಾಡಿರುವ ದಾಖಲೆಗಳು ಲಭ್ಯವಾಗಿವೆ ಎಂದು ಅಮಾನತು ಆದೇಶದಲ್ಲಿ ವಿವರಿಸಲಾಗಿದೆ.

4B ಪುಟ ನೋಡಿ

ಎರಡು ಪ್ರತ್ಯೇಕ ದೂರು

ನಿಯಮ ಉಲ್ಲಂಘಿಸಿ ಹೊರ ರಾಜ್ಯಗಳಿಂದ ಸಮವಸ್ತ್ರ ಬಟ್ಟೆ ಖರೀದಿಗೆ ಅವಕಾಶ ಮಾಡಿದ ನಿಗಮದ ಎಲ್ಲ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯರಾಗಿದ್ದ ಮೋಹನ್‌ಕುಮಾರ್ ಕೊಂಡಜ್ಜಿ ಅವರು ಈ ಹಿಂದೆಯೇ ಜವಳಿ ಸಚಿವರಿಗೆ ದೂರು ನೀಡಿದ್ದರು. ಹೊರ ರಾಜ್ಯಗಳಿಂದ ಬಟ್ಟೆ ಖರೀದಿ ಕುರಿತು ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಪ್ರಶ್ನಿಸಿದಾಗ ತಪ್ಪು ಉತ್ತರ ನೀಡಿ ದಾರಿ ತಪ್ಪಿಸಲಾಗಿದೆ ಎಂದೂ ಅವರು ಉಲ್ಲೇಖಿಸಿದ್ದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ನಿಗಮದ ಒಡೆತನದಲ್ಲಿರುವ ಜಾಗವನ್ನು ನಿಗಮದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಆಡಳಿತ ಮಂಡಳಿಗೆ ತಪ್ಪು ಮಾಹಿತಿ ನೀಡಿ ಖಾಸಗಿಯವರಿಗೆ ಕೇವಲ ₹8 ಲಕ್ಷಕ್ಕೆ ಬಾಡಿಗೆಗೆ ನೀಡಿ ಅವ್ಯವಹಾರ ನಡೆಸಿದ್ದಾರೆ ಎಂದು ಆರೋಪಿಸಿ ನಿಗಮದ ನಿವೃತ್ತ ನೌಕರ ಹುಬ್ಬಳ್ಳಿಯ ಮಹೇಶ ಎಲ್. ಪಾಟೀಲ ಅವರು ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗೆ ದೂರು ನೀಡಿದ್ದರು.

ವಿಭಜಕಕ್ಕೆ ಡಿಕ್ಕಿ: ಆರೋಪಿ ಪೊಲೀಸ್ ವಶಕ್ಕೆ

ತಡವಾದದ್ದಕ್ಕೆ ಬಸ್ಸನ್ನೇ ಕೊಂಡೊಯ್ದ!

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್): ತನ್ನೂರಿನ ಬಸ್ಸಿಗೆ ಕಾದು ಕಾದು ಸುಸ್ತಾದ ವ್ಯಕ್ತಿಯೊಬ್ಬರು ಸೋಮವಾರ ಪಟ್ಟಣದ ನಿಲ್ದಾಣದಲ್ಲಿ ನಿಂತಿದ್ದ ಬಸ್ಸನ್ನೇ ಚಲಾಯಿಸಿಕೊಂಡು ಹೋಗಿ ಅಪಘಾತ ಮಾಡಿದ್ದಾರೆ.

ಯಶಪ್ಪ

ಬಸ್ ಅನ್ನು ಚಲಾಯಿಸಿಕೊಂಡು ಹೋಗಿದ್ದ ತಾಲ್ಲೂಕಿನ ಕರಂಜಿ (ಕೆ) ಗ್ರಾಮದ ಯಶಪ್ಪ ಸೂರ್ಯವಂಶಿ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಯಶಪ್ಪ ಅವರು ಬೆಳಿಗ್ಗೆ 11ಕ್ಕೆ ಪಟ್ಟಣದ ಬಸ್ ನಿಲ್ದಾಣಕ್ಕೆ ಬಂದು ಊರಿಗೆ ಹೋಗಲು ಬಸ್ಸಿಗೆ ಕಾಯುತ್ತ ಕುಳಿತಿದ್ದಾರೆ. ಸುಮಾರು ಹೊತ್ತಾದರೂ ಬಸ್ ಬಂದಿರಲಿಲ್ಲ. ಇದರಿಂದ ಸಿಟ್ಟಾದ ಅವರು ನಿಲ್ದಾಣದಲ್ಲಿದ್ದ ಬಸ್ ಏರಿ ತಾವೇ ಚಲಾಯಿಸಿಕೊಂಡು ಹೋಗಿದ್ದು, ನಿಲ್ದಾಣ ಸಮೀಪದ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆಸಿದ್ದಾರೆ. ಅಲ್ಲಿಯೇ ಇದ್ದ ಜೀಪಿಗೂ ಹಾನಿಯಾಗಿದೆ. ಪ್ರಯಾಣಿಕರು ಗಾಬರಿಯಾಗಿ ಕಿರುಚಿಕೊಂಡಿದ್ದಾರೆ. ಇದನ್ನು ಗಮನಿಸಿದ ಅಲ್ಲಿದ್ದವರು ಯಶಪ್ಪ ಅವರನ್ನು ಬಸ್ಸಿನಿಂದ ಕೆಳಗಿಳಿಸಿದ್ದಾರೆ’ ಎಂದು ಪ್ರತ್ಯಕ್ಷದರ್ಶಿಗಳು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಔರಾದ್ ಪಟ್ಟಣದಲ್ಲಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ನಿಂತ ಬಸ್

ವಿಷಯ ತಿಳಿದು ಸ್ಥಳಕ್ಕೆ ಬಂದ ಎಎಸ್‌ಐ ಸುನೀಲ ಕೋರೆ ಅವರು ಯಶಪ್ಪ ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದರು.

‘ಯಶಪ್ಪ ಮದ್ಯಪಾನ ಮಾಡಿದ್ದ. ತನ್ನೂರಿಗೆ ಬಸ್ ವಿಳಂಬವಾಗಿದೆ ಎಂದು ಸಿಟ್ಟಾಗಿ ಬೀದರ್‌ಗೆ ತೆರಳಬೇಕಿದ್ದ ಬಸ್ ಅನ್ನು ಚಲಾಯಿಸಿಕೊಂಡು ಹೋಗಿದ್ದ. ಘಟನೆಯಲ್ಲಿ ಯಾರಿಗೂ ಯಾವುದೇ ರೀತಿಯ ತೊಂದರೆ ಆಗಿಲ್ಲ. ಯಶಪ್ಪ ಮೇಲೆ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ’ ಎಂದು ಸಾರಿಗೆ ಸಂಸ್ಥೆ ಘಟಕ ವ್ಯವಸ್ಥಾಪಕ ಎಸ್.ಪಿ. ರಾಠೋಡ್ ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಗರದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸ್ಮಾರಕ ಉಪನ್ಯಾಸ ಕಾರ್ಯಕ್ರಮ

ಮಕ್ಕಳ ನಾಪತ್ತೆ ಪ್ರಕರಣಗಳು ಹೆಚ್ಚಳ: ಸತ್ಯಾರ್ಥಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ವ್ಯವಸ್ಥೆ ತೊಲಗಿಸಲು ಸಾಕಷ್ಟು ಹೋರಾಟಗಳು ನಡೆದರೂ ಜಾತಿ ವ್ಯವಸ್ಥೆ ಇನ್ನೂ ಮುಂದುವರಿದಿದೆ. ಸಮಾಜ ಸುಧಾರಣೆಗಾಗಿ ನ್ಯಾಯಪರ ಹಾಗೂ ಜಾತಿ ವ್ಯವಸ್ಥೆ ವಿರುದ್ಧ ಕೆಲಸಗಳು ನಡೆಯಬೇಕಿದೆ' ಎಂದು ಮಕ್ಕಳ ಹಕ್ಕುಗಳ ಹೋರಾಟಗಾರ, ನೊಬೆಲ್ ಪ್ರಶಸ್ತಿ ಪುರಸ್ಕೃತ ಕೈಲಾಶ್ ಸತ್ಯಾರ್ಥಿ ಕರೆ ನೀಡಿದರು.

ನಗರದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ)ಯಲ್ಲಿ ಸೋಮವಾರ ಆಯೋಜಿಸಿದ್ದ ಡಾ.ಎಂ.ಎಸ್. ರಾಮಯ್ಯ ಸ್ಮಾರಕ ಉಪನ್ಯಾಸದಲ್ಲಿ ಅವರು ಮಾತನಾಡಿದರು.

'ನಾನು ಚಿಕ್ಕವಯಸ್ಸಿನಲ್ಲೇ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟಕ್ಕೆ ಇಳಿದೆ. ಸಾಕಷ್ಟು ಆಂದೋಲನ ನಡೆಸಿದ್ದೇನೆ. ಆದರೂ, ಈ ವ್ಯವಸ್ಥೆ ಬದಲಾಗಿಲ್ಲ. ಜಾತಿ ಮತಬಿಟ್ಟು ನಾವೆಲ್ಲರೂ ಒಂದೇ ಕುಟುಂಬದಂತೆ ಬದುಕಬೇಕು' ಎಂದು ಕರೆ ನೀಡಿದರು.

ಡಾ.ಎಂ.ಎಸ್.ರಾಮಯ್ಯ ಸ್ಮಾರಕ ಉಪನ್ಯಾಸ – 2023ರಲ್ಲಿ ಮಕ್ಕಳ ಹಕ್ಕುಗಳ ಹೋರಾಟಗಾರ, ನೊಬೆಲ್ ಪ್ರಶಸ್ತಿ ಪುರಸ್ಕೃತ ಕೈಲಾಶ್ ಸತ್ಯಾರ್ಥಿ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಗೋಕುಲ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಆರ್.ರಾಮಯ್ಯ, ಸಂಸ್ಥೆಯ ಅಧ್ಯಕ್ಷ ಎಂ.ಆರ್.ಜಯರಾಮ್, ಸಂಸ್ಥೆಯ ಉಪಾಧ್ಯಕ್ಷ ಎಂ.ಆರ್.ಸೀತಾರಾಂ ಹಾಜರಿದ್ದರು

> **ಮಕ್ಕಳನ್ನು ಅಶ್ಲೀಲ ಚಿತ್ರಗಳ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇದರ ವಿರುದ್ಧ ಯುವ ಸಮೂಹ ಹೋರಾಟ ನಡೆಸಬೇಕು. ಎಲ್ಲರೂ ಮಕ್ಕಳ ಕಲ್ಯಾಣಕ್ಕೆ ಕೆಲಸ ಮಾಡಬೇಕು**
> **ಕೈಲಾಶ್ ಸತ್ಯಾರ್ಥಿ**, ಮಕ್ಕಳ ಹಕ್ಕುಗಳ ಹೋರಾಟಗಾರ

> **ಭಾರತವು ಜಾಗತಿಕ ಮಟ್ಟದಲ್ಲಿ ಜನಪ್ರಿಯವಾಗಿದೆ. ರಾಷ್ಟ್ರದ ಮೇಲೆ ಪ್ರತಿಯೊಬ್ಬರೂ ಪ್ರೀತಿ ಬೆಳೆಸಿಕೊಳ್ಳಬೇಕು. ಆಗ ಮತ್ತಷ್ಟು ಶ್ರೇಷ್ಠವಾಗಲಿದೆ**
> **ಎಂ.ಆರ್.ಜಯರಾಮ್,** ಅಧ್ಯಕ್ಷ, ಗೋಕುಲ ಎಜುಕೇಷನ್ ಫೌಂಡೇಷನ್

'ದೇಶದಲ್ಲಿ ಮಕ್ಕಳ ನಾಪತ್ತೆ ಪ್ರಕರಣಗಳು ಹೆಚ್ಚುತ್ತಿವೆ. ಮಾನವ ಕಳ್ಳ ಸಾಗಾಣಿಕೆಯೂ ನಡೆಯುತ್ತಿದೆ. ಪ್ರತಿಬಾರಿ ಅಧಿಕಾರಿಗಳು ದಾಳಿ ನಡೆಸಿದಾಗಲೂ ಅಮಾಯಕ ಹಾಗೂ ಬಡ ಮಕ್ಕಳು ಪತ್ತೆಯಾಗುತ್ತಿದ್ದಾರೆ. ಮಕ್ಕಳನ್ನು ಬಾಲ ಕಾರ್ಮಿಕ ಪದ್ಧತಿಗೆ ತಳ್ಳಲಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ರಾಜಕಾರಣಿಗಳು ಚುನಾವಣೆ ವೇಳೆ ತಂತ್ರ ನಡೆಸುತ್ತಾರೆ. ಮತಕ್ಕಾಗಿ ದಲಿತರ ಮನೆಯಲ್ಲೂ ಊಟ ಮಾಡುತ್ತಿದ್ದಾರೆ. ಅವರ ಹಿಂದಿನ ಮರ್ಮವನ್ನು ದೇಶದ ಜನರು ಅರ್ಥೈಸಿಕೊಳ್ಳಬೇಕು' ಎಂದು ಮನವಿ ಮಾಡಿದರು.

'ರಾಷ್ಟ್ರದಲ್ಲಿ ಹಿಂದುಳಿದ ಸಮಾಜದ ಸ್ಥಿತಿ ಶೋಚನೀಯವಾಗಿದೆ. ಅವರಿಗೆ ಸೌಲಭ್ಯಗಳೂ ತಲುಪುತ್ತಿಲ್ಲ. ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರುವ ಕೆಲಸಗಳು ನಡೆಯಬೇಕು' ಎಂದು ಹೇಳಿದರು.

ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್. ಜಯರಾಮ್ ಮಾತನಾಡಿ, 'ದೇಶದಲ್ಲಿ ಶಿಕ್ಷಣ ವ್ಯವಸ್ಥೆ ಉತ್ತಮವಾಗಿದೆ. ಕೊರೊನಾ ಸಾಂಕ್ರಾಮಿಕ ಕಾಯಿಲೆ ನಿಯಂತ್ರಣಕ್ಕೆ ಭಾರತದಲ್ಲೇ ಲಸಿಕೆ ಕಂಡುಹಿಡಿಯಲಾಯಿತು. ಪ್ರತಿಯೊಬ್ಬರಿಗೂ ದೇಶದ ಮೇಲೆ ನಂಬಿಕೆ, ವಿಶ್ವಾಸ ಇರಬೇಕು' ಎಂದು ಹೇಳಿದರು.

ಸಂಸ್ಥೆಯ ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಮುಖ್ಯ ಕಾರ್ಯನಿರ್ವಾಹಕ ಬಿ.ಎಸ್.ರಾಮಪ್ರಸಾದ್, ಆರ್‌ಐಟಿ ಪ್ರಾಂಶುಪಾಲರಾದ ಡಾ.ಎನ್.ಆರ್.ವಿ. ನಾಯ್ಡು ಇದ್ದರು.

ಸುದ್ದಿ 2 ನಿಮಿಷ

'ಮಹೇಶ್ ಜೋಶಿ ವಿರುದ್ಧ ಜೂ.12ರಂದು ಪ್ರತಿಭಟನೆ'

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮಹೇಶ್ ಜೋಶಿ ಅಧಿಕಾರ ವಹಿಸಿಕೊಂಡ ಬಳಿಕ ದುರಾಡಳಿತ ನಡೆಸುತ್ತಿದ್ದಾರೆ, ಇದನ್ನು ಖಂಡಿಸಿ ಜೂನ್ 12ರಂದು ಬೆಳಿಗ್ಗೆ 11ಕ್ಕೆ ಪರಿಷತ್ತಿನ ಎದುರು ಪ್ರತಿಭಟನೆ ನಡೆಸಲಾಗುವುದು' ಎಂದು ಸಮಾನ ಮನಸ್ಕರ ವೇದಿಕೆಯ ಸಂಚಾಲಕ ಸಿ.ಕೆ. ರಾಮೇಗೌಡ ತಿಳಿಸಿದರು.

ನವೀಕರಣದ ಹೆಸರಲ್ಲಿ ಪರಿಷತ್ತಿನ ಸಭಾಂಗಣವನ್ನು ವಿರೂಪಗೊಳಿಸಿದ್ದಾರೆ. ಬಾಡಿಗೆ ಹೆಚ್ಚಳ ಮಾಡಿದ್ದಾರೆ. ಮುಖ್ಯದ್ವಾರದಲ್ಲಿದ್ದ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ನಾಮ ಫಲಕವನ್ನು ತೆಗೆದುಹಾಕಿದ್ದಾರೆ. ಮೂರನೇ ಮಹಡಿಯಲ್ಲಿದ್ದ ಕುವೆಂಪು ಸಭಾಂಗಣವನ್ನು ಮುಚ್ಚಿದ್ದಾರೆ. ಇದರಿಂದ ಪುಸ್ತಕ ಬಿಡುಗಡೆ, ಕವಿಗೋಷ್ಠಿ ಮುಂತಾದ ಸಾಹಿತ್ಯ ಚಟುವಟಿಕೆಗೆ ಅವಕಾಶ ಇಲ್ಲದಂತಾಗಿದೆ. ಅಧ್ಯಕ್ಷರ ಕಚೇರಿ ಮುಂಭಾಗದಲ್ಲಿದ್ದ ಪರಿಷತ್ತಿನ ಸ್ಥಾಪಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯನ್ನು ತೆಗೆದು ಹಾಕಿದ್ದಾರೆ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ನಾಲ್ವಡಿ ಕೃಷ್ಣರಾಜ ಒಡೆಯ' ಪ್ರಶಸ್ತಿಯೂ ಸೇರಿದಂತೆ ಕುವೆಂಪು, ರಾಜಕುಮಾರ್, ವಿಷ್ಣುವರ್ಧನ್ ಮುಂತಾದ ಮಹನೀಯರ ಹೆಸರಿನಲ್ಲಿರುವ ದತ್ತಿ ಪ್ರಶಸ್ತಿಗಳನ್ನು ಸ್ಥಗಿತಗೊಳಿಸಿದ್ದಾರೆ. ಪರಿಷತ್ತಿನ ಸದಸ್ಯರಿಗೂ ಪರಿಷತ್ತಿಗೂ ಸಂಪರ್ಕ ಸೇತುವೆಯಾಗಿದ್ದ ಕನ್ನಡ ನುಡಿ ಪತ್ರಿಕೆಯನ್ನು ಪ್ರಕಟಿಸುತ್ತಿಲ್ಲ. ನಿಯಮ ಮೀರಿ ಸಿಬ್ಬಂದಿಯ ನೇಮಕಾತಿ ಮಾಡಿದ್ದಾರೆ ಎಂದು ದೂರಿದರು. ಸಂಚಾಲಕ ಶಂಕರ್ ಹೂಗಾರ್, ಎಂ.ಜಿ. ದಯಾನಂದ ಕಡ್ಡಿ, ಸಿ. ಪುಟ್ಟರಾಜು, ಎಂ. ಲಕ್ಷ್ಮೀನರಸಿಂಹ ಇದ್ದರು.

ಜಾನಪದ ವಿ.ವಿ. ಕುಲಸಚಿವರ ವಿರುದ್ಧ ಲೋಕಾಯುಕ್ತಕ್ಕೆ ದೂರು

ಶಿಗ್ಗಾವಿ (ಹಾವೇರಿ): ತಾಲ್ಲೂಕಿನ ಗೊಟಗೋಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಾಗೂ ಅದಕ್ಕೆ ಕಾರಣರಾಗಿದ್ದಾರೆ ಎನ್ನಲಾದ ವಿವಿ ಕುಲಸಚಿವ ಪ್ರೊ.ಸಿ.ಟಿ.ಗುರುಪ್ರಸಾದ್ ವಿರುದ್ಧ ತನಿಖೆ ನಡೆಸಬೇಕೆಂದು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸರ್ವಾಂಗೀಣ ಹಿತರಕ್ಷಣಾ ಟ್ರಸ್ಟ್ ಅಧ್ಯಕ್ಷ ಬಸವರಾಜ ಗೊಬ್ಬಿ ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ.

ಜಾನಪದ ವಿಶ್ವವಿದ್ಯಾಲಯದಲ್ಲಿ ಈ ಹಿಂದೆ ವಿಧಾನಸಭೆ ಚುನಾವಣೆ ಸಂದರ್ಭ ನೀತಿಸಂಹಿತೆ ಉಲ್ಲಂಘಿಸಿ, ಪರೀಕ್ಷೆ ನಡೆಸಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿತ್ತು. ಇದಕ್ಕೆ ಹಲವಾರು ಮಂದಿ ಆಕ್ಷೇಪ ವ್ಯಕ್ತಪಡಿಸಿದ್ದರೂ ಪ್ರಕ್ರಿಯೆ ಮುಂದುವರಿಸಲಾಗಿತ್ತು ಎಂದು ಗೊಬ್ಬಿ ಈ ಹಿಂದೆ ಆರೋಪ ಮಾಡಿದ್ದರು. ನೇಮಕಾತಿ ಪ್ರಕ್ರಿಯೆ ತರಾತುರಿಯಲ್ಲಿ ನಡೆಸುವುದನ್ನು ಪ್ರಶ್ನಿಸಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಗೆ ದೂರು ನೀಡಿದ ಮೇರೆಗೆ, ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಇಲಾಖೆ ಮೇ 26ರಂದು ತಾತ್ಕಾಲಿಕ ತಡೆ ನೀಡಿತ್ತು.

ಮೂವರಿಗೆ ಕನ್ನಡ ಕಾಯಕ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಪ್ರಭು ಚನ್ನಬಸವ ಸ್ವಾಮೀಜಿ

ಶಿವಾನಂದ ಕಳವೆ

ಹೆಲನ್ ಮೈಸೂರು

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ 2022ನೇ ಸಾಲಿನ ಕನ್ನಡ ಕಾಯಕ ದತ್ತಿ ಪ್ರಶಸ್ತಿ ಪ್ರಕಟಿಸಲಾಗಿದೆ. ಬೆಳಗಾವಿಯ ಅಥಣಿ ಮೊಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ, ಉತ್ತರ ಕನ್ನಡ ಜಿಲ್ಲೆ ಶಿರಸಿಯ ಶಿವಾನಂದ ಕಳವೆ ಹಾಗೂ ಹೆಲನ್ ಮೈಸೂರು ಆಯ್ಕೆಯಾಗಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಗೌರವ ಕಾರ್ಯದರ್ಶಿ ವ.ಚ. ಚನ್ನೇಗೌಡ ಅವರು ಪರಿಷತ್ತಿನ ಮಾಸಿಕ ಗೌರವ ಸಂಭಾವನೆಯನ್ನು ದತ್ತಿ ರೂಪದಲ್ಲಿ ಇಟ್ಟಿದ್ದರು. ಕನ್ನಡ ಪರ ಹೋರಾಟ, ಸೇವೆ, ಕೃತಿ ರಚನೆ ಮಾಡಿದ ಮೂವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಪ್ರಶಸ್ತಿಯು ತಲಾ ₹10,000, ಸ್ಮರಣಿಕೆಯನ್ನು ಹೊಂದಿದೆ.

ಮಹೇಶ ಜೋಶಿ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಭ.ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು ಇದ್ದರು.

ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಮಂಡಳಿ ಸಭೆ

ಕಾರ್ಮಿಕ ವಿರೋಧಿ ಕಾಯ್ದೆ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕ ವಿರೋಧಿ ಕಾಯ್ದೆಯನ್ನು ತಕ್ಷಣವೇ ವಾಪಸ್ ಪಡೆಯುವುದು ಹಾಗೂ ಅಂಗನವಾಡಿ, ಅಕ್ಷರ ದಾಸೋಹ, ಆಶಾ ಕಾರ್ಯಕರ್ತರ ಗೌರವಧನ ಹೆಚ್ಚಳವೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಮಂಡಳಿ ಸಭೆಯಲ್ಲಿ ಆಗ್ರಹಿಸಲಾಯಿತು.

ನಗರದಲ್ಲಿ ಎರಡು ದಿನ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಬಿನೋಯ ವಿಶ್ವಂ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಲವು ನಿರ್ಣಯ ಕೈಗೊಳ್ಳಲಾಯಿತು.

ಹಿಂದಿನ ಸರ್ಕಾರವು ಕಾರ್ಮಿಕ ಕಾಯ್ದೆ ತಿದ್ದುಪಡಿ ಮೂಲಕ ಜಾರಿ ಮಾಡಿದ ಕೆಲಸದ ಅವಧಿ ಹೆಚ್ಚಳ, ಮಹಿಳೆಯರ ರಾತ್ರಿ ಪಾಳಿ ಕೆಲಸವನ್ನು ಹಿಂದಕ್ಕೆ ಪಡೆಯುವುದಾಗಿ ಕಾಂಗ್ರೆಸ್ ಸರ್ಕಾರವು ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಆ ಭರವಸೆಯಂತೆ ಕಾರ್ಮಿಕ ವಿರೋಧಿ ಕಾಯ್ದೆಯನ್ನು ತಕ್ಷಣವೇ ವಾಪಸ್ ಪಡೆಯಬೇಕು. ಅಲ್ಲದೇ ಹಿಂದಿನ ಸರ್ಕಾರವು ಕೈಗೊಂಡ ರೈತ ವಿರೋಧಿ ಕಾಯ್ದೆ ಹಾಗೂ ಜನವಿರೋಧಿ ಕಾಯ್ದೆಗಳ ತಿದ್ದುಪಡಿಯನ್ನೂ ವಾಪಸ್ ಪಡೆಯಬೇಕು ಎಂದು ಆಗ್ರಹಿಸಲಾಯಿತು.

ರಾಜ್ಯದಲ್ಲಿ ನಿವೇಶನ ಹಾಗೂ ವಸತಿ ರಹಿತ ಕುಟುಂಬಗಳು ಲಕ್ಷಾಂತರ ಸಂಖ್ಯೆಯಲ್ಲಿವೆ. ಆ ಕುಟುಂಬಗಳ ಸಮೀಕ್ಷೆಗೆ ವಸತಿ ಸಚಿವರು ಕೂಡಲೇ ಆದೇಶ ಮಾಡಬೇಕು. ನಿವೇಶನಕ್ಕೆ ಅಗತ್ಯವಿರುವ ಭೂಮಿಯನ್ನು ಸರ್ಕಾರವು ಕಾಯ್ದಿರಿಸಬೇಕು ಎಂದು ಆಗ್ರಹಿಸಲಾಯಿತು.

ನಗರದಲ್ಲಿ ಸೋಮವಾರ ಪ್ರೊ.ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿದ್ದ ಪ್ರೊ. ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ ಮತ್ತು 'ಜ್ಞಾನಸೂತ್ರ' ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಅಹಲ್ಯಾ ಶರ್ಮಾ ಅವರು ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ ಪ್ರಾಧ್ಯಾಪಕಿ ಡಾ.ಕೆ.ಶಾರದಾ ಅವರಿಗೆ 'ಪ್ರೊ. ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ' ಯನ್ನು ಪ್ರದಾನ ಮಾಡಿದರು. ಲೇಖಕಿ ಶೈಲಜಾ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಮನು ಬಳಿಗಾರ್, ಕರ್ನಾಟಕ ಗಾಂಧಿಸ್ಮಾರಕ ನಿಧಿ ಅಧ್ಯಕ್ಷ ವೊಡೇ ಪಿ. ಕೃಷ್ಣ, ಪ್ರೊ.ಮಲ್ಲೇಪುರಂ, ಗುಲ್ಬರ್ಗ ವಿಶ್ವವಿದ್ಯಾಲದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಡಿ. ಪೋತೆ ಹಾಜರಿದ್ದರು. ಪ್ರಜಾವಾಣಿ ಚಿತ್ರ

'ಒಣತ್ಯಾಜ್ಯ ಆಯುವವರಿಗೆ ಒಂದು ವರ್ಷದಿಂದ ವೇತನ ಬಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಜ್ಯ ಆಯುವವರಿಗೆ ಒಪ್ಪಂದ ಪ್ರಕಾರ ಬಿಬಿಎಂಪಿ ನೀಡಬೇಕಾದ ವೇತನವನ್ನು ಒಂದು ವರ್ಷದಿಂದ ನೀಡಿಲ್ಲ ಎಂದು ತ್ಯಾಜ್ಯ ಶ್ರಮಿಕರ ಸಂಘ ಆರೋಪಿಸಿದೆ.

ಒಣತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ಬೆಂಗಳೂರಿನಲ್ಲಿ 2011ರಲ್ಲಿ ರಚಿಸಲಾಗಿತ್ತು. ತ್ಯಾಜ್ಯ ಆಯುವವರಿಗೆ ವೃತ್ತಿ ಗುರುತಿನ ಚೀಟಿ ನೀಡಲಾಗಿತ್ತು. ಒಣ, ಹಸಿ ಮತ್ತು ಬೇಡದ ಕಸವನ್ನು ವಾರಕ್ಕೆ ಎರಡು ಬಾರಿ ಪ್ರತ್ಯೇಕವಾಗಿ ಸಂಗ್ರಹಿಸುವಂತೆ 2020ರಲ್ಲಿ ಸುತ್ತೋಲೆ ಹೊರಡಿಸಲಾಗಿತ್ತು. ಆರು ತಿಂಗಳು ಒಣ ತ್ಯಾಜ್ಯ ಸಂಗ್ರಹ ಮಾಡಲು ಒಂದು ಕೇಂದ್ರಕ್ಕೆ ₹56,316 ನೀಡಲು ಬಿಬಿಎಂಪಿ ನಿಗದಿ ಮಾಡಿತ್ತು. ಬಿಬಿಎಂಪಿಯಿಂದ ಕಸ ಸಂಗ್ರಹ ವಾಹನವನ್ನು ನೀಡದೇ ಇದ್ದರೆ ತಿಂಗಳಿಗೆ ₹ 23,316 ವಾಹನ ಬಾಡಿಗೆಯನ್ನು ನೀಡಲಾಗುವುದು ಎಂದು ಬಿಬಿಎಂಪಿ ತಿಳಿಸಿತ್ತು. ಒಣ ತ್ಯಾಜ್ಯ ಸಂಗ್ರಹ ಮಾಡುವವರಿಗೆ ಮಾತ್ರ ಒಂದು ವರ್ಷಕ್ಕೂ ಅಧಿಕ ಸಮಯದಿಂದ ಈ ಹಣವನ್ನು ನೀಡಿಲ್ಲ. ಹಸಿ ಕಸ, ಬೇಡದ ಕಸ ಸಂಗ್ರಹ ಮಾಡುವವರಿಗೆ ಹಣ ಪಾವತಿಯಾಗುತ್ತಿದೆ ಎಂದು ಶ್ರಮಿಕರ ಸಂಘದ ಇಂದಿರಾ, ಮನ್ಸೂರ್, ಕುಮುದಾ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೂಡಲೇ ಹಣವನ್ನು ಪಾವತಿಸಬೇಕು. ಇಲ್ಲದೇ ಇದ್ದರೆ ಬಿಬಿಎಂಪಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ತ್ಯಾಜ್ಯ ಶ್ರಮಿಕರ ಸಂಘ, ಹಸಿರುದಳ, ಸ್ವಚ್ಛ ಪರಿಸರ ಪರಿಹಾರ, ಗಿಲ್ಗಲ್ ಚಾರಿಟಬಲ್ ಟ್ರಸ್ಟ್‌ನ ಪದಾಧಿಕಾರಿಗಳಾದ ಪರಮೇಶ್, ಅಂಜಲಿ, ಮುರಳಿ, ನದಿಯಾ, ಇಂದುಮತಿ, ಅನಿತಾ, ಗೀತಾ, ನಳಿನಿ ಇದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

JOB OPPORTUNITY for Retired Men, House wife & Graduates in Reputed Company. Age 40 to 75, Bangalorians only, Earn upto 40,000/- Contact-9741401834

Manager

LADY MANAGER (PS) required to handle multiple roles. Salary: 15k- 22k. Kannada English must. ravikp93@rediffmail.com

Marketing & Sales

URGENTLY HIRING Marketing Executive for Bangalore location. Local resident preferred. Min 5 years exposure in Chemical or Ferrous & nonferrous metal marketing Contact 9007815589 or email cv to resume@ambahind.com

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

GET OWN BUSINESS 10 LAKHS INVESTMENT MONTHLY INCOME 1L FOR GREEN HERBAL AYURVEDIC: 8892501007/ 9606701007

REAL ESTATE SELLING

Flat

Basavanagudi

SALE PRIME LOCATIONS 2 BHK FLATS, CARPARK, 24hrs CAUVERY WATER, ELECTRICITY, SECURITY, LIFTS, GARDEN FACILITIES: 9886019240/ 26623994

PERSONAL

Lost

I, BASAVARAJA K.P. S/o Parameshwarappa K R/a#163, 6th cross, Teachers colony, Banashankari 2nd stage, Bangalore-70. Have,lost my Electrical & Electronics Original Diploma Certificate, Year;09-07-2012 Serial No.B035914 Issued by Board of Technical Examination, Govt.of Karnataka. If anybody found`please call:9844499873 or Nearby Police Station

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CONNECT ಕ್ಲಾಸಿಫೈಡ್ಸ್

ಇಂಡಿಯನ್ ಹಾಟ್ ಫೆಸ್ಟಿವಲ್
Indian Haat Festival
A Shopping Fest
Arts, Crafts, Handlooms and Lifestyle Exhibition
FRIDAY TO SUNDAY
2nd to 11th JUNE 2023
Timings : 11:00 AM to 7:00 PM
10 Days Exhibition | Entry Free
Grand Flea Market
Venue: Karnataka Chitrakala Parishath
Kumara Krupa Road, Near Shivananda Circle
Bengaluru - 560 001.
The Cartoon Show Live — Date: 10th June 2023 — Timings: 5.30 PM to 6.30 PM
The Fire Show Live — Date: 11th June 2023 — Timings: 5.30 PM to 6.30 PM
100+ Stalls | Live Performance | 10Days Exhibition | Entry Free
Art & Craft | Jewellers | Clothings | Fashion Accessories | Home Decore & More
For Details Contact: 6364685716 / 9036658774

ಪ್ರಥಮ ಬಾರಿಗೆ ರಾಜರಾಜೇಶ್ವರಿ ನಗರದಲ್ಲಿ ಮದುವೆ ಸಮಾರಂಭಗಳ ಪ್ರಯುಕ್ತ! ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ
OPENING TOMORROW
ಅಭಿವೃದ್ಧಿ ಸಿಲ್ಕ್ ಇಂಡಿಯಾ® 2023
Exclusive Wedding Collections
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ, ಉಪ್ಪಡಾ, ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೂಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೊತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು
7 ರಿಂದ 13 ಜೂನ್ 2023 ರವರೆಗೆ | ಸಮಯ : ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ
ಶ್ರೀ ವಾಸವಿ ಮಹಲ್ (ಕಲ್ಯಾಣ ಮಂಟಪ)
1ನೇ ಮಹಡಿ, ಐಡಿಯಲ್ ಹೋಮ್ಸ್ ಟೌನ್‌ಶಿಪ್, ಶ್ರೀರಾಜರಾಜೇಶ್ವರೀ ನಗರ, ಬೆಂಗಳೂರು
Entry Free | All Credit & Debit Cards Accepted | Contact : +91 86607 14252
Organised by : abhivrudhi
(Registered with O/o D C (H) Ministry of Textiles, Govt. of India)

Change of Name

I, PADMASINI. S, residing at No.2866, 13th Main, E Block, Subramanyanagar, Rajajinagar 2nd Stage, Bangalore 560010, have changed my name from PADMASINI. S to PADMASANI. S vide affidavit dated 01/06/2023, sworn before Kundan Babu. M, Notary, Bangalore.

I,MEGHANATHAN RESIDING #1031 4th Cross Sannakkibaylu Kamakshipalya Bangalore North 560079 have changed my name to N.MEGANATHAN vide affidavit dated 2-6-2023 sworn before V.Rajashekhara Notary Bangalore Henceforth I shall be called as N.MEGANATHAN only

I C Jagadeeswari spouse of Guntur Subramanayam No. 13911999F Hav/pota currently residing at 15, JSLV nilayam, 3rd main 14th Cross, B street, hoysalanagar, Bangalore 560016 have changed my name from C Jagadeswari to C Jagadeeswari vide affidavit no. 100 page no.33 book no. 1 dated 31/5/2023 Sworn in before notary RAVI S Bangalore.

I,SMT LATHA R W/O Gangananjaiah, R/a #17,10th Main, 5th Cross, Byatarayanapura, Bangalore-560026 Declare That LATHA P. R.and LATHA R. Both the names belong to me . Henceforth, I will be known as LATHA R. vide affidavit dated 03-06-2023 before Notary Ravi, Bangalore.

DH DECCAN HERALD | ಪ್ರಜಾವಾಣಿ
REAL ESTATE
BOOK YOUR REAL ESTATE AD IN DECCAN HERALD ALL KARNATAKA & PRAJAVANI ALL KARNATAKA
@800/-* Per Sqcm Single Column | @900/-* Per Sqcm Multi Column
For More Details Contact:
9731810277 | 9901641752
9845114560 | 9886213331
080- 45557163 | 45557164
conditions apply*

ನೈಋತ್ಯ ರೈಲ್ವೆ G20
ಇ–ಟೆಂಡರು ಸೂಚನೆ ಸಂ.: Deadapproach_LC_40Nos_1. ದಿನಾಂಕ: 01.06.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ 40 ಸಂಖ್ಯೆ – ಇಂಜಿನಿಯರಿಂಗ್ ಇಂಟರ್‌ಲಾಕಿಂಗ್ ಮಾಡಲಾದ ಎಲ್‌ಸಿ ಗೇಟ್‌ಗಳಿಗೆ ಡೆಡ್ ಅಪ್ರೋಚ್ ಲಾಕಿಂಗ್‌ಗಳ ಪೂರೈಕೆ.	ರೂ. 42,71,567.72

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.06.2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಬೆಂಗಳೂರು
PUB/146/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20
ಇ–ಟೆಂಡರು ಸೂಚನೆ ಸಂ.: Y/E.29/2023-24/15 ದಿನಾಂಕ: 29.05.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು ವಿಭಾಗದಲ್ಲಿ ಹಳೆಯದಾದ ಸಾಮರ್ಥ್ಯರಹಿತ ಪಂಪ್ ಸೆಟ್ ಅನ್ನು 5 ಸ್ಟಾರ್ ರೇಟಿಂಗ್‌ನ ಶಕ್ತಿ ಸಾಮರ್ಥವುಳ್ಳ ಎಲೆಕ್ಟ್ರಿಕಲ್ ಪಂಪ್ ಸೆಟ್‌ಗಳಿಗೆ ಮಾರ್ಪಡಿಸುವುದು.	ರೂ. 71,06,290/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.06.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಮೈಸೂರು
PUB/148/AAD/PRB/SWR/2023-24
S.W.Railways SWRRLY SWRRLY

PUBLIC NOTICE

My client intends to purchase the property mentioned in the Schedule hereunder from its Owners, 1) Sri. Abbas Khan, 2) Sri. Imitiyaz Khan, 3) Sri. Ayub Khan and 4) Sri. Majeed Khan, all sons of Late Ammanulla Khan. The Owners represent that there are no other person/s having any right, title, interest, claims or minor's claims, share, etc., of whatsoever nature over the Schedule Property. The Owners have not mortgaged, created charge, sold, transferred, created any lien or encumbered the Schedule Property or part thereof in any manner. It is further represented that the Owners have not entered into any Agreement of Sale / Development Agreement / Memorandum of Understanding / Arrangement etc. and have not executed any power of attorney in favour of any person/s with respect to the Schedule Property or part thereof. If any person/s having any objection/s or claims with respect to the sale and transfer of the Schedule Property shall with documentary evidence lodge their objection/claim within 10 (Ten) days from the date of this notice with the Undersigned, failing which, my client shall proceed with the above-mentioned transaction and claim/s if any shall be deemed to have been waived.

Schedule

All that piece and parcel of residential building bearing No. 3 (Old Nos. 3, 3/1 & 3/2), BBMP PID No. 78-50-3, residential building comprising basement, ground, first, second and third floors, having super built-up area of 9000.071 Sq. ft. situated at, No.3, Miller Tank Bund Road, in Corporation Ward No. 93, Bengaluru and ad-measuring North: 74 ft., South : 60 Plus 24 ft: East : 40 ft: West :49 ft, measuring in total 3627.15 Sq. ft. and is bounded on the:

East by : Millers Tank Bund Road;
West by : 3/10, Private Property;
North by : Private Property; and
South by : 12, Private Property

Place : Bengaluru
Date : 06-06-2023

Satish.R, Advocate, No.68, TLVA, Hebbagodi Village, Electronic City Phase I, Bengaluru. Ph : 9886720139

ನಗರದ ಅಭಿವೃದ್ಧಿಗಾಗಿ ಶಾಸಕರು, ಸಂಸದರ ಜತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚರ್ಚೆ

ವಿಶ್ವ ಮನ್ನಣೆಗಾಗಿ 'ಗ್ಲೋಬಲ್ ಬೆಂಗಳೂರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿಗೆ ಮತ್ತೆ ವಿಶ್ವಮಟ್ಟದ ಮನ್ನಣೆ ಸಿಗಬೇಕು. 'ಬ್ರ್ಯಾಂಡ್ ಬೆಂಗಳೂರು' 'ಬೆಟರ್ ಬೆಂಗಳೂರು' ಆಗಬೇಕು. ಅದಕ್ಕಾಗಿ 'ಗ್ಲೋಬಲ್ ಬೆಂಗಳೂರು' ನಿರ್ಮಾಣ ಮಾಡಬೇಕಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬೆಂಗಳೂರಿನ ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳ ಜತೆಗೆ ಸುಮಾರು ಮೂರು ತಾಸು ಸಭೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಎಸ್.ಎಂ.ಕೃಷ್ಣ ಅವರ ಅವಧಿಯಲ್ಲಿ ನಾರಾಯಣ ಮೂರ್ತಿ ನೇತೃತ್ವದಲ್ಲಿ ಬೆಂಗಳೂರಿನ ಅಭಿವೃದ್ಧಿಗಾಗಿ ಸಲಹಾ ಸಮಿತಿ ಮಾಡಲಾಗಿತ್ತು. ಅದೇ ರೀತಿ ಬೆಂಗಳೂರಿನ ಬಗ್ಗೆ ಕಾಳಜಿ ಉಳ್ಳವರ ಜತೆ ಸಭೆ ನಡೆಸಲು ತೀರ್ಮಾನಿಸಿ ದ್ದೇನೆ. ಬೆಂಗಳೂರು ಅಭಿವೃದ್ಧಿ ಕುರಿತು ಸಲಹಾ ಸಮಿತಿ ರೂಪಿಸಲಾಗುವುದು' ಎಂದು ಅವರು ಹೇಳಿದರು.

'ಬೆಂಗಳೂರು ಅಂತರ ರಾಷ್ಟ್ರೀಯ ನಗರ. ಅದರ ಘನತೆ ಮತ್ತು ವೈಭವವನ್ನು ನಾವು ಪುನರ್ ಸ್ಥಾಪಿಸಬೇಕು. ಬಿಜೆಪಿ ನಾಯಕರೇ ಈ ಹಿಂದಿನ ಸರ್ಕಾರದ ಕಾರ್ಯ ವೈಖರಿ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಸರ್ಕಾರಿ ಇಲಾಖೆಗಳ ನಡುವೆ ಹೊಂದಾಣಿಕೆ ಇಲ್ಲ ಎಂದು ಅನೇಕ ನಾಯಕರು ಅಭಿ-ಪ್ರಾಯಪಟ್ಟಿದ್ದು, ಈ ವಿಚಾರವಾಗಿ ಸಭೆಯಲ್ಲಿ ಸಲಹೆ ನೀಡಿದ್ದಾರೆ' ಎಂದರು.

'ಕುಡಿಯುವ ನೀರು, ತ್ಯಾಜ್ಯ ನಿರ್ವಹಣೆ, ಸಂಚಾರ ದಟ್ಟಣೆ ನಿಯಂತ್ರಣದ ವಿಚಾರವಾಗಿ ಮಾಸ್ಟರ್ ಪ್ಲಾನ್ ಕೇಳಿದ್ದೇನೆ. ರಾಜಕಾಲುವೆ ಒತ್ತುವರಿ, ಹೂಳು ತೆಗೆಯುವ ಕೆಲಸದ ಕುರಿತು ಮಾಹಿತಿ ಮತ್ತು ದಾಖಲೆ ಕೇಳಿದ್ದೇನೆ. ಪ್ರವಾಹ ಪರಿಸ್ಥಿತಿ ಎದುರಾದಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕಾರ್ಯ ಯೋಜನೆ ಸಿದ್ಧಪಡಿಸುವಂತೆಯೂ ಅಧಿಕಾರಿಗಳಿಗೆ ತಿಳಿಸಿದ್ದೇನೆ' ಎಂದು ಹೇಳಿದರು.

ಬೆಂಗಳೂರಿನಲ್ಲಿ ನಡೆಯುವ ಪ್ರತಿ ಕಾಮಗಾರಿಯ ವಿಚಾರದಲ್ಲಿ ಅಧಿಕಾರಿಗಳು ಪಾರದರ್ಶಕ ಮತ್ತು ಹೊಣೆಗಾರಿಕೆಯಿಂದ ಇರಬೇಕು. ಪ್ರತಿ ವಾರ್ಡ್ ಮಟ್ಟದಲ್ಲಿ ಎಷ್ಟು ರಸ್ತೆ ಇದೆ. ಯಾವ ಇಲಾಖೆಯಿಂದ ಯಾವ ಕೆಲಸ ಆಗುತ್ತಿದೆ ಎಂಬ ಬಗ್ಗೆ ವಾರ್ಡ್ ಮಟ್ಟದ ವರದಿ ನೀಡಬೇಕು. ಯಾವುದೇ ಕೆಲಸ ಆರಂಭವಾಗುವ ಮುನ್ನ, ಆರಂಭವಾದ ನಂತರ ಹಾಗೂ ಕೆಲಸ ಮುಗಿದ ನಂತರ ಫೋಟೊ ಹಾಗೂ ವಿಡಿಯೊ ದಾಖಲಾತಿ ಇರಬೇಕು. ಪಾರದರ್ಶಕತೆ ಹಾಗೂ ಹೊಣೆಗಾರಿಕೆ ತರಲು ಈ ವ್ಯವಸ್ಥೆ ಪರಿ-ಚಯಿಸಲಾಗುತ್ತಿದೆ. ಕೆಲಸ ಮಾಡದೇ ಬಿಲ್ ಬರೆಯುವ ಪದ್ಧತಿಗೆ ತಿಲಾಂಜಲಿ ಹಾಡಲಾಗುವುದು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಕಸ ವಿಲೇವಾರಿ ಕುರಿತು ಸಭೆಯಲ್ಲಿದ್ದ ಅನೇಕರು ಸಲಹೆ ನೀಡಿದ್ದಾರೆ. ಹೀಗಾಗಿ ಕಸ ತೆಗೆದುಕೊಂಡು ಹೋಗುವ ವಾಹನಗಳ ಮಾಹಿತಿ ಇರಬೇಕು. ಇದಕ್ಕಾಗಿ ವ್ಯವಸ್ಥೆ ರೂಪಿಸಲು ಪಾಲಿಕೆ, ಸಾರಿಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೇನೆ. ಕಸ ವಿಲೇವಾರಿ ಬಗ್ಗೆ ಸಂಸದ ತೇಜಸ್ವಿ ಸೂರ್ಯ ಅವರು ನೀಡಿರುವ ಸಲಹೆಗಳ ಬಗ್ಗೆ ಗಮನಹರಿಸುತ್ತೇನೆ' ಎಂದರು.

'ಬಿಡಿಎ ಕಾಂಪ್ಲೆಕ್ಸ್‌ಗಳಲ್ಲಿ ಅನೇಕ ಮಳಿಗೆಗಳು ಖಾಲಿ ಇವೆ. ಇವುಗಳನ್ನು ರೀಮಾಡೆಲಿಂಗ್ ಮಾಡಲು ಒತ್ತು ನೀಡುತ್ತೇನೆ. ಕೆಲವು ವಾರ್ಡ್‌ಗಳಿಗೆ ವಾರ, 15 ದಿನಗಳಾದರೂ ನೀರು ಪೂರೈಸುತ್ತಿಲ್ಲ. ನೀರಿನ ವಿಚಾರದಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಪುಲಕೇಶಿನಗರದ ಶಾಸಕರು ಸೇರಿದಂತೆ ಹಲವರು ತಿಳಿಸಿದ್ದಾರೆ. ಈ ವಿಚಾರವಾಗಿ ಪ್ರತಿ ಕ್ಷೇತ್ರವಾರು ಜನಸಂಖ್ಯೆ, ನಿಗದಿಯಾದ ನೀರಿನ ಪ್ರಮಾಣದ ಕುರಿತು ಪರಿಶೀಲನೆ ನಡೆಸುತ್ತೇನೆ' ಎಂದು ಅವರು ಹೇಳಿದರು.

ಬೆಂಗಳೂರು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು. ಸಚಿವರಾದ ಕೆ.ಜೆ.ಜಾರ್ಜ್, ರಾಮಲಿಂಗಾರೆಡ್ಡಿ, ಸಂಸದರಾದ ಡಿ.ಕೆ.ಸುರೇಶ್, ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಶಾಸಕ ಗೋಪಾಲಯ್ಯ ಇದ್ದರು ಪ್ರಜಾವಾಣಿ ಚಿತ್ರ

'ಬಿಬಿಎಂಪಿ ಚುನಾವಣೆಗೆ ಕಾನೂನು ತೊಡಕು'

'ಬಿಬಿಎಂಪಿ ಚುನಾವಣೆ ಬಗ್ಗೆ ಚರ್ಚಿಸಿಲ್ಲ. ಈ ವಿಚಾರವಾಗಿ ನ್ಯಾಯಾಲಯದಲ್ಲಿ ಕೆಲವು ವಿಚಾರಗಳಿವೆ. ಕಾನೂನಾತ್ಮಕವಾಗಿ ಇರುವ ಅಡೆತಡೆ ನಿವಾರಿಸಿಕೊಂಡ ನಂತರ ತೀರ್ಮಾನ ಮಾಡುತ್ತೇವೆ' ಎಂದು ಶಿವಕುಮಾರ್ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಕಾಂಗ್ರೆಸ್ ಶಾಸಕರು, ಈ ಹಿಂದೆ ಮಾಡಿರುವ ವಾರ್ಡ್‌ಗಳ ಕ್ಷೇತ್ರ ಪುನರ್‌ವಿಂಗಡಣೆ ಸರಿಯಾಗಿ ಆಗಿಲ್ಲ. ಮತ್ತೊಮ್ಮೆ ಮಾಡಬೇಕು ಎಂದು ಒತ್ತಾಯಿಸಿದರು.

ಬಿಬಿಎಂಪಿಯನ್ನು ಮೂರು ಪಾಲಿಕೆಗಳಾಗಿ ವಿಂಗಡಿಸಬೇಕು ಎಂದು ಸಚಿವ ದಿನೇಶ್ ಗುಂಡೂರಾವ್ ಸಲಹೆ ನೀಡಿದರು.

ಹಸ್ತಕ್ಷೇಪ ಇಲ್ಲ: 'ರಾಜಕಾಲುವೆ ಒತ್ತುವರಿ ತೆರವು ವಿಚಾರದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಅಧಿಕಾರಿಗಳು ಅವರ ಕೆಲಸ ಮಾಡಲಿದ್ದಾರೆ' ಎಂದು ಶಿವಕುಮಾರ್ ಹೇಳಿದರು.

ಸೂಚನೆ: ಈಜಿಪುರ ಮೇಲ್ಸೇತುವೆ ಯೋಜನೆಯನ್ನು ತಕ್ಷಣ ಪೂರ್ಣಗೊಳಿಸಬೇಕು. ಈ ಬಗ್ಗೆ ಅಗತ್ಯವಿರುವ ಆಡಳಿತಾತ್ಮಕ ನಿರ್ಣಯಗಳನ್ನು ತಕ್ಷಣ ಕೈಗೊಳ್ಳಬೇಕು ಎಂದು ತುಷಾರ್ ಗಿರಿನಾಥ್ ಅವರಿಗೆ ಸೂಚನೆ ಕೊಟ್ಟರು.

ಸಭೆಯಿಂದ ಹೊರನಡೆದ ಬಿಜೆಪಿ ಶಾಸಕರು

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿಗದಿತ ಸಮಯಕ್ಕೆ ಬರಲಿಲ್ಲ ಎಂದು ಅಸಮಾಧಾನಗೊಂಡ ಬಿಜೆಪಿಯ ಕೆಲವು ಶಾಸಕರು ಸಭೆಯಿಂದಲೇ ಹೊರ ನಡೆದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬೆಳಿಗ್ಗೆ 11ಕ್ಕೆ ಸಭೆ ನಿಗದಿಯಾಗಿತ್ತು. ಬೆಂಗಳೂರಿನ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಸಂಸದರು ಸಭೆಯಲ್ಲಿ ಪಾಲ್ಗೊಂಡಿದ್ದರು. ಕೆಲವು ಶಾಸಕರು ಸಮಯಕ್ಕೆ ಸರಿಯಾಗಿ ಹಾಜರಿದ್ದರು. ಆದರೆ, ಶಿವಕುಮಾರ್ ಅವರು ಒಂದು ಗಂಟೆ ತಡವಾಗಿ ಸಭೆಗೆ ಬಂದರು.

ಬಿಜೆಪಿ ಶಾಸಕರಾದ ಎಸ್.ಟಿ.ಸೋಮಶೇಖರ್, ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಬೈರತಿ ಬಸವರಾಜ ಮತ್ತು ಎಸ್.ಆರ್.ವಿಶ್ವನಾಥ್ ಮಧ್ಯಾಹ್ನ 12 ಗಂಟೆಗೆ ಸಭಾಂಗಣದಿಂದ ಎದ್ದು ಹೊರ ನಡೆದರು.

'ಭಾನುವಾರ ಸಂಜೆ ವಾಟ್ಸ್ ಆ್ಯಪ್ ಮೂಲಕ ನಮಗೆ ಸಭೆಯ ಆಹ್ವಾನ ಕಳಿಸಲಾಗಿತ್ತು. ಸಮಯಕ್ಕೆ ಸರಿಯಾಗಿ ನಾವು ಬಂದಿದ್ದೇವೆ. ಉಪ ಮುಖ್ಯ-ಮಂತ್ರಿಯವರು ವಿಳಂಬವಾಗಿ ಬರುವ ಕುರಿತು ನಮಗೆ ಯಾವುದೇ ಮಾಹಿತಿ ನೀಡಿಲ್ಲ' ಎಂದು ಈ ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

'ನಾವು ಕೂಡ ಸಚಿವರಾಗಿ ಕೆಲಸ ಮಾಡಿದ್ದೇವೆ. ಸಚಿವರು ಬರುವುದು ತಡವಾದರೆ ತಿಳಿಸಬೇಕಿತ್ತು. ನಮಗೆ ಬೇರೆ ಕಾರ್ಯಕ್ರಮಗಳಿವೆ. ಆದ್ದರಿಂದ ಅಧಿಕಾರಿಗಳಿಗೆ ತಿಳಿಸಿ, ಹೊರ ಬಂದಿದ್ದೇವೆ. ಇದು ಸಭೆಯ ಬಹಿಷ್ಕಾರವಲ್ಲ' ಎಂದರು.

ಬಿಜೆಪಿ ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಶಾಸಕರಾದ ಕೆ.ಗೋಪಾಲಯ್ಯ, ಎಂ.ಕೃಷ್ಣಪ್ಪ, ಎಲ್.ಎ.ರವಿಸುಬ್ರಮಣ್ಯ, ಸಿ.ಕೆ.ರಾಮಮೂರ್ತಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ರೈಲು ದುರಂತ ಪ್ರಕರಣ: ತನಿಖೆ ಆರಂಭಿಸಿದ ಸಿಬಿಐ

ಭುವನೇಶ್ವರ (ಪಿಟಿಐ): ಬಾಲೇಶ್ವರ್‌ನಲ್ಲಿ ಸಂಭವಿಸಿದ ರೈಲು ದುರಂತ ಕುರಿತಂತೆ ಸಿಬಿಐ ಸೋಮವಾರ ತನಿಖೆ ಆರಂಭಿಸಿದೆ. 10 ಸದಸ್ಯರ ತಂಡ ಅಪಘಾತದ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಿತು ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದರು.

ಖುರ್ದಾ ರೋಡ್ ವಿಭಾಗದ ಡಿಆರ್‌ಎಂ ರಿಂತೇಶ್ ರೇ ಅವರು, 'ಸಿಬಿಐ ತಂಡ ತನಿಖೆ ಆರಂಭಿಸಿದೆ. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ' ಎಂದರು. ರೈಲ್ವೆ ಮಂಡಳಿಯು ಭಾನುವಾರ ಅಪಘಾತದ ತನಿಖೆಯ ಹೊಣೆಯನ್ನು ಸಿಬಿಐಗೆ ಒಪ್ಪಿಸಿತ್ತು.

ಮೃತರ ಸಂಖ್ಯೆ 278ಕ್ಕೆ ಏರಿಕೆ: ಈ ಮಧ್ಯೆ ರೈಲ್ವೆ ಅಪಘಾತದಲ್ಲಿ ಗಾಯಗೊಂಡಿದ್ದ ಮೂವರು ಮೃತಪಟ್ಟಿದ್ದು, ಮೃತರ ಸಂಖ್ಯೆ 278ಕ್ಕೆ ಏರಿದೆ. ಒಟ್ಟು 1,100 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿ ರಿಂತೇಶ್ ರೇ ತಿಳಿಸಿದ್ದಾರೆ.

ಮೃತರ ಪೈಕಿ 177 ಜನರ ಗುರುತು ಪತ್ತೆಯಾಗಿದ್ದು, ಇನ್ನೂ 101 ಜನರ ಗುರುತು ಪತ್ತೆಯಾಗಬೇಕಿದೆ. ಶವಗಳನ್ನು ವಿವಿಧ ಆರು ಆಸ್ಪತ್ರೆಗಳಲ್ಲಿ ವೈಜ್ಞಾನಿಕ ಕ್ರಮದಲ್ಲಿ ರಕ್ಷಿಸಿಡಲಾಗಿದೆ ಎಂದು ತಿಳಿಸಿದ್ದಾರೆ.

ನಾಪತ್ತೆಯಾದವರ ವಿವರ ಸಂಗ್ರಹಿಸಲು ರೈಲ್ವೆ ಇಲಾಖೆಯು ಒಡಿಶಾ, ಪಶ್ಚಿಮ ಬಂಗಾಳ, ಜಾರ್ಖಂಡ್, ಛತ್ತೀಸಗಢ, ಬಿಹಾರ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡಿಗೆ ಸಿಬ್ಬಂದಿಯನ್ನು ಕಳುಹಿಸಿದೆ.

'ಮುಂದಿನ ಚುನಾವಣೆಗಳಲ್ಲಿ ಬಿಜೆಪಿ-ಶಿವಸೇನಾ ಒಟ್ಟಿಗೆ ಸ್ಪರ್ಧೆ'

ಮುಂಬೈ (ಪಿಟಿಐ): ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಸೇರಿ ಮುಂಬರುವ ಎಲ್ಲ ಚುನಾವಣೆಗಳಲ್ಲಿ ಶಿವಸೇನಾ ಮತ್ತು ಬಿಜೆಪಿ ಒಟ್ಟಾಗಿ ಸ್ಪರ್ಧಿಸಲಿವೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.

ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರೊಂದಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭಾನುವಾರ ರಾತ್ರಿ ನವದೆಹಲಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಶಿಂದೆ ಟ್ವಿಟರ್‌ನಲ್ಲಿ ಈ ವಿಷಯ ಹಂಚಿಕೊಂಡಿದ್ದಾರೆ.

'ಗೃಹ ಸಚಿವರ ಭೇಟಿಯ ವೇಳೆ ಮುಂಬರುವ ಸ್ಥಳೀಯ ಸಂಸ್ಥೆಗಳು, ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಒಟ್ಟಾಗಿ ಸ್ಪರ್ಧಿಸಲು ಚರ್ಚೆ ನಡೆಸಿದೆವು. ಮುಂದಿನ ಎಲ್ಲ ಚುನಾವಣೆಗಳಲ್ಲಿ ಶಿವಸೇನಾ ಮತ್ತು ಬಿಜೆಪಿ ಒಟ್ಟಾಗಿ ಸ್ಪರ್ಧಿಸಲಿವೆ ಮತ್ತು ಬಹುಮತ ಪಡೆಯಲಿವೆ' ಎಂದು ಶಿಂದೆ ಹೇಳಿದ್ದಾರೆ. ಅಮಿತ್ ಶಾ ಅವರನ್ನು ಭೇಟಿಯಾದ ಚಿತ್ರವನ್ನೂ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

'ಕೃಷಿ ಮತ್ತು ಸಹಕಾರ ವಲಯ ಸಂಬಂಧಿತ ವಿಷಯಗಳ ಕುರಿತು ಸಚಿವ ಶಾ ಅವರೊಂದಿಗೆ ಚರ್ಚಿಸಲಾಯಿತು. ರಾಜ್ಯದಲ್ಲಿ ನನೆಗುದಿಗೆ ಬಿದ್ದಿದ್ದ ಹಲವು ಯೋಜನೆಗಳಿಗೆ ಈಗ ಚುರುಕು ನೀಡಲಾಗಿದ್ದು, ಅವು ಪೂರ್ಣಗೊಳ್ಳುವ ಹಂತದಲ್ಲಿವೆ. ವಿವಿಧ ಯೋಜನೆಗಳಿಗೆ ನಾವು ಸದಾ ಪ್ರಧಾನಿ ಅವರ ಮಾರ್ಗದರ್ಶನವನ್ನು ಪಡೆಯುತ್ತಿದ್ದೇವೆ' ಎಂದು ಶಿಂದೆ ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

ಮಹಿಳೆ ಸಾವು: ಕಲುಷಿತ ನೀರು ಸೇವನೆ ಶಂಕೆ

ಕನಕಗಿರಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಬಸರಿಹಾಳ ಗ್ರಾಮದಲ್ಲಿ ಐದು ದಿನದ ಹಿಂದೆ ಹೊನ್ನಮ್ಮ ಶಿವಪ್ಪ (55) ಎಂಬ ಮಹಿಳೆ ಮೃತಪಟ್ಟಿದ್ದು, ಇವರ ಸಾವಿಗೆ ಕಲುಷಿತ ನೀರು ಸೇವನೆ ಕಾರಣವಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಹೊನ್ನಮ್ಮ ಶಿವಪ್ಪ

ಇವರು ಮೃತಪಟ್ಟ ಬಳಿಕ ಜನರಲ್ಲಿ ಆತಂಕ ಹೆಚ್ಚಾಗಿದೆ. ಕನಕಗಿರಿ, ಗಂಗಾವತಿ, ಸಿಂಧನೂರು ಮತ್ತು ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಕೆಲವರು ದಾಖಲಾಗಿದ್ದಾರೆ. ಒಟ್ಟು 10ಕ್ಕೂ ಹೆಚ್ಚು ಜನ ಆಸ್ಪತ್ರೆಯಲ್ಲಿದ್ದಾರೆ. ಅವರೆಲ್ಲರೂ ಮೂರ್ನಾಲ್ಕು ದಿನಗಳಿಂದ ವಾಂತಿ-ಭೇದಿಯಿಂದ ಬಳಲುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಶಾಸಕಿಗೆ ನಿಂದನೆ: 8 ಮಂದಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ದೇವದುರ್ಗ: ಶಾಸಕಿ ಕರೆಮ್ಮ ಜಿ.ನಾಯಕ ಅವರನ್ನು ನಿಂದಿಸಿದ ಆರೋಪದ ಮೇಲೆ ಮಾಜಿ ಶಾಸಕ ಕೆ.ಶಿವನಗೌಡ ನಾಯಕ ಅವರ ಸಹೋದರ ಸೇರಿ ಬಿಜೆಪಿಯ ಎಂಟು ಮುಖಂಡರ ವಿರುದ್ಧ ದೂರು ದಾಖಲಾಗಿದೆ.

ತಾಲ್ಲೂಕಿನ ಆಲದಮರ ತಾಂಡಾದಲ್ಲಿ ಭಾನುವಾರ ಲೈನ್‌ಮನ್ ವಿರೂಪಾಕ್ಷ ಮೃತಪಟ್ಟ ಸ್ಥಳಕ್ಕೆ ಶಾಸಕಿ ಕರೆಮ್ಮ ಭೇಟಿ ನೀಡಿದ್ದರು. ಈ ವೇಳೆ ಬಿಜೆಪಿ ಮುಖಂಡರು ಶಾಸಕಿಯನ್ನು ಅಶ್ಲೀಲ ಪದಗಳಿಂದ ನಿಂದಿಸಿದ್ದರು. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಪ್ರಸಾರ ಆಗುತ್ತಿದ್ದಂತೆ ಬಿಜೆಪಿ ಮುಖಂಡರನ್ನು ಬಂಧಿಸುವಂತೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

'ಪೊಲೀಸರ ವೈಫಲ್ಯದಿಂದ ಈ ಘಟನೆ ನಡೆಯುತ್ತಿವೆ. ಶಾಸಕರಿಗೆ ರಕ್ಷಣೆ ಇಲ್ಲ. ಪಿಐ ಹೊಸಕೆರೆಪ್ಪ ತಾಲ್ಲೂಕಿನಲ್ಲಿ ಅರಾಜಕತೆ ಸೃಷ್ಟಿಸುತ್ತಿದ್ದಾರೆ. ಪಿಐ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಜೆಡಿಎಸ್ ಮುಖಂಡ ಬಸವರಾಜ ನಾಯಕ ಕೊತ್ತದೊಡ್ಡಿ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದರು.

ಎಸ್‌ಪಿ ನಿರ್ದೇಶನ ನೀಡಿದ ನಂತರ ಪಿಐ ಹೊಸಕೆರೆಪ್ಪ ಅವರು ಬಿಜೆಪಿಯ ಮಾಜಿ ಶಾಸಕ ಕೆ.ಶಿವನಗೌಡ ಸಹೋದರ ಭಗವಂತ್ರಾಯ ನಾಯಕ ಸೇರಿದಂತೆ 8 ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿಕೊಂಡರು.

ಆರೋಪಿಗಳನ್ನು 24 ಗಂಟೆಯೊಳಗೆ ಬಂಧಿಸದಿದ್ದರೆ ಠಾಣೆಗೆ ಮತ್ತೆ ಮುತ್ತಿಗೆ ಹಾಕಲಾಗುವುದು ಎಂದು ಜೆಡಿಎಸ್ ಕಾರ್ಯಕರ್ತರು ಎಚ್ಚರಿಸಿದ್ದಾರೆ.

ನಗರದಲ್ಲಿ ಇಂದು

ಡಿ.ದೇವರಾಜ ಅರಸು ಅವರ 41ನೇ ಪುಣ್ಯಸ್ಮರಣೆ: ಪ್ರತಿಮೆಗೆ ಮಾಲಾರ್ಪಣೆ: ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಶಿವರಾಜ್ ಎಸ್. ತಂಗಡಗಿ, ಆಯೋಜನೆ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸ್ಥಳ: ವಿಧಾನಸೌಧದ ಪಶ್ಚಿಮ ದ್ವಾರ ಮುಂಭಾಗ, ಬೆಳಿಗ್ಗೆ 10

'ಮ್ಯಾಳ ಕಲಿಯೋಣ ಬಾರ' ದೊಡ್ಡಾಟ-ಮೂಡಲಪಾಯ ಯಕ್ಷಗಾನ ಶಿಬಿರ ಸಮಾರೋಪ: ಅತಿಥಿಗಳು: ಕಲ್ಮನೆ ನಂಜಪ್ಪ, ಸಂಪಿಗೆ ತೋಂಟದಾರ್ಯ, ಶ್ರೀನಿವಾಸ ಜಿ.ಕಪ್ಪಣ್ಣ, ಜಯಪ್ರಕಾಶಗೌಡ, ಜಯರಾಂ ರಾಯಪುರ, ಬೈರಮಂಗಲ ರಾಮೇಗೌಡ, ಎನ್.ರಮೇಶ್, ಶ್ರೀಕಂಠಮೂರ್ತಿ ಕೆ.ಆರ್., ಅಭಿನಂದನೆ: ಮ್ಯಾಳಗುರು ಎ.ಆರ್. ಪುಟ್ಟಸ್ವಾಮಿ, ಆಯೋಜನೆ: ರಂಗಮಂಡಲ-ಸಿವಗಂಗ ಟ್ರಸ್ಟ್, ಸ್ಥಳ: ಸಿವಗಂಗ ರಂಗಮಂದಿರ, ಸರ್ ಎಂ.ವಿ. ಬಡಾವಣೆ, 1ನೇ ವಿಭಾಗ, ಕೆಂಗೇರಿ ಉಪನಗರ, ಸಂಜೆ 5

ವಿಶ್ವ ಪರಿಸರ ದಿನಾಚರಣೆ: ಸಂಜೆ 6.30ಕ್ಕೆ 'ಕೃಷ್ಣ ಕಾಸ್ಮಿಕ್ ಸರ್ಕಲ್ ಆಫ್ ಲೈಫ್' ಸಾಕ್ಷ್ಯಚಿತ್ರ ಪ್ರದರ್ಶನ, ಸಂಜೆ 7.30ಕ್ಕೆ ಪಕ್ಷಿಗಳಿಂದ ಪ್ರೇರಿತವಾದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸ್ಥಳ: ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್, ದೊಮ್ಮಲೂರು ಎರಡನೇ ಹಂತ

ಹಜ್ ಯಾತ್ರಿಕರ ವಿಮಾನ ಯಾನ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಅತಿಥಿಗಳು: ಸ್ಮೃತಿ ಇರಾನಿ, ಯು.ಟಿ. ಖಾದರ್, ಡಿ.ಕೆ. ಶಿವಕುಮಾರ್, ಜಮೀರ್ ಅಹ್ಮದ್ ಖಾನ್, ರಹೀಮ್ ಖಾನ್, ಆಯೋಜನೆ: ಹಜ್ ಸಮಿತಿ, ಸ್ಥಳ: ಹಜ್ ಭವನ, ತಿರುಮೇನಹಳ್ಳಿ, ಹೆಗಡೆನಗರ ಮುಖ್ಯ ರಸ್ತೆ, ಸಂಜೆ 7

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಯನ್ನು ಅದರ ಪ್ರಸಕ್ತ ಮಾಲೀಕರಾಗಿರುವ (1) **ಶ್ರೀಮತಿ ನಾರಾಯಣಮ್ಮ**, ಕೋಂ ಲೇಟ್ ಶ್ರೀ ಲಕ್ಷ್ಮಯ್ಯ, ವಯಸ್ಸು ಸುಮಾರು 83 ವರ್ಷ, (2) **ಶ್ರೀಮತಿ ಕೆಂಪಮ್ಮ** ವಯಸ್ಸು ಸುಮಾರು 63 ವರ್ಷ, ಬಿನ್ ಲೇಟ್ ಶ್ರೀಲಕ್ಷ್ಮಯ್ಯ, (3) **ಶ್ರೀ ಟಿ. ನರಸಿಂಹಮೂರ್ತಿ**, ವಯಸ್ಸು ಸುಮಾರು 61 ವರ್ಷ, ಬಿನ್ **ಲೇಟ್** ಶ್ರೀ ಲಕ್ಷ್ಮಯ್ಯ (4) **ಶ್ರೀ ಎಲ್ ನಾಗರಾಜ್**, ವಯಸ್ಸು ಸುಮಾರು 60 ವರ್ಷ, ಬಿನ್ ಲೇಟ್ ಶ್ರೀ ಲಕ್ಷ್ಮಯ್ಯ, ಮತ್ತು (5) **ಶ್ರೀ ವೆಂಕಟಲಕ್ಷ್ಮಮ್ಮ** ವಯಸ್ಸು ಸುಮಾರು 45ವರ್ಷ, ಕೋಂ ಲೇಟ್ ಶ್ರೀ ಎಲ್ ವರದರಾಜು, (5ಎ) **ಕುಮಾರಿ ವೀಣಾ ವಿ**, ವಯಸ್ಸು ಸುಮಾರು 22 ವರ್ಷ, ಬಿನ್ ಲೇಟ್ ಶ್ರೀ ಎಲ್ ವರದರಾಜು, (5ಬಿ) **ಕುಮಾರಿ ಅಂಕಿತಾ ವಿ**, ವಯಸ್ಸು ಸುಮಾರು 17 ವರ್ಷ, ಬಿನ್ ಲೇಟ್ ಶ್ರೀ ಎಲ್ ವರದರಾಜು ಮತ್ತು (5ಸಿ) **ಮಾಸ್ಟರ್ ಮಾರುತಿ ವಿ**, ವಯಸ್ಸು ಸುಮಾರು 13 ವರ್ಷ, ಬಿನ್ ಲೇಟ್ ಶ್ರೀ ಎಲ್ ವರದರಾಜು, **ಮತ್ತು ಇವರ ಕುಟುಂಬಸ್ಥರು** ಇವರೆಲ್ಲರು ಗುಂಡಮಾಗೆರೆ ಗ್ರಾಮ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಪ್ರಸಕ್ತ ವಾಸವಾಗಿದ್ದು, ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಯಾವುದೇ ವ್ಯಕ್ತಿ / ವ್ಯಕ್ತಿಗಳು ಕೆಳಗೆ ನಮೂದಿಸಿದ ಷೆಡ್ಯೂಲ್ ಆಸ್ತಿಯ ವ್ಯವಹಾರದ ಬಗ್ಗೆ ಅಥವಾ ಯಾವುದೇ ವ್ಯಕ್ತಿ/ಗಳು ಇದರ ಬಗ್ಗೆ ಯಾವುದೇ ಕ್ಲೈಮು, ಹಕ್ಕು, ಟೈಟಲ್ ಅಥವಾ ಆಸಕ್ತಿ ಹೊಂದಿದಲ್ಲಿ ಅಥವಾ ಮಾಲೀಕರ ಮತ್ತು ಅಥವಾ ಷೆಡ್ಯೂಲ್ ಆಸ್ತಿಯ ಬಗೆಗಿನ ಸಂಬಂಧ ಯಾವುದೇ ಇದ್ದಲ್ಲಿ, ಆತ/ಅವಳು ಈ ನೋಟೀಸ್ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಲಿಖಿತ ಮೂಲಕ ಸಂಬಂಧಿಸಿದ ಸೂಕ್ತ ದಾಖಲೆಗಳ ಸಹಿತ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು. ಯಾವುದೇ ರೀತಿಯ ನಿಜವಾದ ಮತ್ತು/ ಅಥವಾ ಹಕ್ಕಿನ ಆಕ್ಷೇಪಣೆ ಮತ್ತು /ಅಥವಾ ಕ್ಲೈಮುಗಳು ಈ ಸಮಯದೊಳಗೆ ಸಲ್ಲಿಕೆಯಾಗದಿದ್ದಲ್ಲಿ, ನನ್ನ ಕಕ್ಷಿದಾರರು ಯಾರೂ ಕ್ಲೈಮುದಾರರು ಇಲ್ಲ ಎಂದು ಪರಿಗಣಿಸಿ, ಷೆಡ್ಯೂಲ್ ಖರೀದಿಸಲು **ಮುಂದಾಗುತ್ತಾರೆ.** ನಂತರ ಬಂದ ಯಾವುದೇ ರೀತಿಯ ಕ್ಲೈಮುಗಳನ್ನು ಪರಿಗಣಿಸಲಾಗುವುದಿಲ್ಲ ಇಲ್ಲವೇ ಅದು ನಮ್ಮ ಕಕ್ಷಿದಾರರಿಗೆ ಸಂಬಂಧಿಸಿದ್ದಾಗಿರುವುದಿಲ್ಲ.

ಷೆಡ್ಯೂಲ್ ಆಸ್ತಿ

ಕೃಷಿ ಭೂಮಿಯ ಹೊಸ ಸರ್ವೆ ನಂ. 36 (ಹಳೆ ನಂ. 9/ಪಿ11), ವಿಸ್ತೀರ್ಣ 4 ಎಕರೆಗಳು ಹೊಸನಾಗೇನಹಳ್ಳಿ ಗ್ರಾಮ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿದ್ದು, ಚಕ್ಕುಬಂದಿ

ಪೂರ್ವಕ್ಕೆ : ರಸ್ತೆ
ಪಶ್ಚಿಮಕ್ಕೆ : ಸರ್ವೆ ನಂ. 9ರ ಜಮೀನು
ಉತ್ತರಕ್ಕೆ : ಸರ್ವೆ ನಂ. 9ರ ಭೂಮಿ ಮತ್ತು ಸರ್ವೆ ನಂ.25
ದಕ್ಷಿಣಕ್ಕೆ : ಸರ್ವೆ ನಂ. 9ರ ಜಮೀನು

ಬೆಂಗಳೂರು
ದಿನಾಂಕ: 06-06-2023

ಸದಾನಂದ ಪಿ ನಾಗನೂರು
ಸದಾನಂದ ಆಂಡ್ ಕೋ., ನಂ. 54/1, 8ನೇ ಕ್ರಾಸ್ ಹತ್ತಿರ, ಸೆಂಟ್ರಲ್ ಸ್ಟ್ರೀಟ್, ಕುಮಾರ ಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ, ಬೆಂಗಳೂರು – 560020.
ದೂರವಾಣಿ: 080–23449994.

ಕ್ಷೇಮ ಕುಶಲ

> ಜೀವನದಲ್ಲಿ ಸಂತೋಷವಾಗಿರಬೇಕು ಎಂದು ಬಯಸುತ್ತೇವೆ. ಅದರಲ್ಲೇ ಜೀವನದ ಸಾರ್ಥಕತೆಯನ್ನು ಕಾಣಬೇಕೆಂದುಕೊಳ್ಳುತ್ತೇವೆ. ಆದರೆ ಮಕ್ಕಳು ಆಟದಲ್ಲಿ ಸಂತೋಷವಾಗಿರುವುದನ್ನು ಕಂಡಾಗ 'ಈ ಆಟದಿಂದ ಅವರ ಭವಿಷ್ಯಕ್ಕೆ ಏನಾದರೂ ಉಪಯೋಗವಿದೆಯೇ?', 'ಆಟದಿಂದ ಪಾಠಕ್ಕೆ ತೊಂದರೆಯಾದೀತಾ ಹೇಗೆ?' ಎಂದೆಲ್ಲಾ ಯೋಚಿಸುತ್ತೇವೆ.

ಆಟ, ಅದು ಪಾಠವೂ ಹೌದು

ರಮ್ಯಾ ಶ್ರೀಹರಿ

ಮಕ್ಕಳಿಗೆ ಆಟದ ಅಗತ್ಯವಿದೆ ಎಂದು ನಾವು ಹೇಳುವಾಗ ಮುಖ್ಯವಾಗಿ ಆಟವು ಅವರ ದೈಹಿಕ, ಮಾನಸಿಕ ಆರೋಗ್ಯವನ್ನು ಹೇಗೆ ಸುಸ್ಥಿತಿಯಲ್ಲಿಡುತ್ತದೆ, ಬೇರೆ ಮಕ್ಕಳೊಡನೆ ಬೆರೆಯುವುದನ್ನು ಹೇಗೆ ಕಲಿಸಿಕೊಡುತ್ತದೆ, ಏಕಾಗ್ರತೆ, ಸೃಜನಶೀಲತೆ, ಬುದ್ಧಿಮತ್ತೆ - ಈ ಎಲ್ಲದರ ವಿಕಾಸಕ್ಕೆ ಆಟ ಹೇಗೆ ಪೂರಕ ಎಂದೆಲ್ಲ ಮಾತನಾಡುತ್ತಾ ಒಂದು ಸೂಕ್ಷ್ಮವಾದ ಪ್ರಮುಖ ವಿಷಯವನ್ನೇ ಮರೆತುಬಿಡುತ್ತೇವೆ!

ಆಟದಲ್ಲಿ ಮಕ್ಕಳು ಸಂಭ್ರಮಿಸುತ್ತಾರೆ, ಖುಷಿಯಿಂದಿರುತ್ತಾರೆ, ಕುಣಿದು ಕುಪ್ಪಳಿಸಿ 'ಈ ಕ್ಷಣವಷ್ಟೇ ಸತ್ಯ' ಎಂಬಂತೆ ವರ್ತಮಾನದಲ್ಲಿರುತ್ತಾರೆ; ಆಟದಲ್ಲಿ ಸೋತಾಗ ಅಳುತ್ತಾರೆ, ಗೆದ್ದಾಗ ಪ್ರಪಂಚವನ್ನೇ ಗೆದ್ದಂತೆ ಬೀಗುತ್ತಾರೆ; ಆಟದಲ್ಲಿ ದುಃಖವಿದೆ, ಸುಖವಿದೆ, ಸಿಟ್ಟು-ಕೋಪ, ಮತ್ಸರ, ಹತಾಶೆ, ತುಂಟತನ, ಮೋಸ, ಜಗಳ, ಬಾಂಧವ್ಯ ಎಲ್ಲವೂ ಇದೆ.

ಆಟವೆಂದರೆ ಜೀವನ, ಮಕ್ಕಳು ಆಟವಾಡುವಾಗ ಜೀವನವನ್ನು ಅದರ ಅನೇಕ ಛಾಯೆಗಳಲ್ಲಿ ಕಣ್ಣಾರೆ ಕಂಡು ಮನಃಪೂರ್ವಕವಾಗಿ ಅನುಭವಿಸುತ್ತಿರುತ್ತಾರೆ. ಜೀವನವನ್ನು ಇಷ್ಟು ಹತ್ತಿರದಿಂದ ಕಂಡು, ಬದುಕನ್ನು ಆಲಿಂಗಿಸಿಕೊಳ್ಳುವ ಆಟದಲ್ಲಿ ಅವರು ತಮ್ಮನ್ನು ತಾವು ತಾದಾತ್ಮ್ಯದಿಂದ ತೊಡಗಿಸಿಕೊಳ್ಳುವುದನ್ನು ನಾವೂ ನೋಡಿ ಆನಂದಿಸಿ, ಅದಕ್ಕಾಗಿ ಅವರನ್ನು ಅಭಿನಂದಿಸಬಾರದೇಕೆ? ಅವರ ಇರುವಿಕೆಗೆ, ಇರುವಿಕೆಯ ಚೆಲುವನ್ನು ಆಸ್ವಾದಿಸುವ ಅವರ ಚೈತನ್ಯಕ್ಕೆ ಮೆಚ್ಚುಗೆ ಸೂಚಿಸಿ ಪ್ರೋತ್ಸಾಹಿಸಬಾರದೇಕೆ?

ನಾವು ಜೀವನದಲ್ಲಿ ಸಂತೋಷವಾಗಿರಬೇಕು ಎಂದು ಬಯಸುತ್ತೇವೆ. ಅದರಲ್ಲೇ ಜೀವನದ ಸಾರ್ಥಕತೆಯನ್ನು ಕಾಣಬೇಕೆಂದುಕೊಳ್ಳುತ್ತೇವೆ. ಆದರೆ ಮಕ್ಕಳು ಆಟದಲ್ಲಿ ಸಂತೋಷವಾಗಿರುವುದನ್ನು ಕಂಡಾಗ 'ಈ ಆಟದಿಂದ ಅವರ ಭವಿಷ್ಯಕ್ಕೆ ಏನಾದರೂ ಉಪಯೋಗವಿದೆಯೇ?', 'ಆಟದಿಂದ ಪಾಠಕ್ಕೆ ತೊಂದರೆಯಾದೀತಾ ಹೇಗೆ?' ಎಂದೆಲ್ಲಾ ಯೋಚಿಸುತ್ತೇವೆ.

'ಮೊದಲು ಪಾಠ, ನಂತರ ಆಟ', 'ಮೊದಲು ಕೆಲಸ, ನಂತರ ಸಂತೋಷ', 'ಸುಮ್ಮನೆ ಸಂತೋಷವಾಗಿರುವುದು ಸಲ್ಲದು, ಏನನ್ನಾದರೂ ಸಾಧಿಸಿ ಸಂತೋಷವಾಗಿರುವುದಕ್ಕೆ ಅರ್ಹತೆ ಪಡೆದುಕೊಳ್ಳಬೇಕು' ಎಂದು ಅವರ ಜೀವನದ ಆದ್ಯತೆಗಳನ್ನು ಪೋಷಕರು ಪರೋಕ್ಷವಾಗಿ ನಿರ್ಧರಿಸುತ್ತಿರುತ್ತಾರೆ. ಇದು ಮಕ್ಕಳು ಮುಂದೆ ತಮ್ಮ ಕೆಲಸ ಮತ್ತು ಜೀವನದ ನಡುವಿನ ಸಮತೋಲನವನ್ನು ಹೇಗೆ ಗ್ರಹಿಸುತ್ತಾರೆ ಎನ್ನುವುದನ್ನು ಪ್ರಭಾವಿಸುತ್ತದೆ.

ಮಕ್ಕಳು ಪಾಠದಲ್ಲಿ ಏನೆಲ್ಲಾ ಕಲಿಯುತ್ತಾರೆ! ಕಣ್ಣಿಗೇ ಕಾಣದ ಗ್ರಹ, ನಕ್ಷತ್ರ, ಅಣು, ಪರಮಾಣು, ಪ್ರಕೃತಿಯ ನಿಯಮಗಳು, ಇಂದ್ರಿಯಾನುಭವಕ್ಕೇ ನಿಲುಕದ ಗಣಿತದ ಪರಿಕಲ್ಪನೆಗಳು, ನಾಗರಿಕತೆಯ ಹುಟ್ಟು, ಸಾವು, ಯುದ್ಧ, ಸಾಮಾಜಿಕ ಕ್ರಾಂತಿ – ಹೀಗೆ ಎಷ್ಟೆಲ್ಲಾ ಇದೆ. ಆದರೆ ತಮ್ಮ ದೇಹದ ಬಗ್ಗೆ, ದೇಹದ ಮತ್ತು ಮನಸ್ಸಿನ ನಂಟಿನ ಬಗ್ಗೆ ಅವರಿಗೆಷ್ಟು ಗೊತ್ತು? ಮನುಷ್ಯನ ದೇಹ-ಮನಸ್ಸಿನ ರಚನೆ ಮತ್ತು ಕಾರ್ಯವೈಖರಿಯ ಬಗ್ಗೆ ವಿಜ್ಞಾನದ ಪಾಠವಿರಬಹುದು. ಆದರೆ ತಮ್ಮ ವೈಯಕ್ತಿಕ ಅನುಭವಗಳಿಂದ ತಮ್ಮ ಸ್ವಂತ ದೇಹದ ಮತ್ತು ಮನಸ್ಸಿನ ಬಗ್ಗೆ ಅವರು ಕಲಿತಿರುವುದೇನು?

ಆಟವಾಡುವಾಗ ಹೃದಯದ ಬಡಿತ ಒಮ್ಮೆಲೇ ಜೋರಾಗಿ ಮತ್ತೆ ಸಮಸ್ಥಿತಿಗೆ ಬರುವುದನ್ನು, ಉಸಿರಾಟದ ಏರುಪೇರನ್ನು, ದೇಹದಲ್ಲೆಲ್ಲಾ ರಕ್ತ ಸಂಚಾರವಾಗುವುದನ್ನು, ದೇಹಕ್ಕಿರುವ ಬಲ, ಚಲಿಸುವ, ಒತ್ತಡವನ್ನು ಸಹಿಸುವ, ಬಾಗಿ ಬಳುಕುವ ಅದರ ಗುಣ, ಸೋಲು–ಗೆಲುವುಗಳಿಗೆ ದೇಹ ಸ್ಪಂದಿಸುವ ರೀತಿ – ಹೀಗೆ ಆಟದಲ್ಲಿ ಮಕ್ಕಳು ತಮ್ಮ ಮನವೆಂಬ ಸಣ್ಣ ಗೂಡನ್ನು ತೊರೆದು ದೇಹವೆಂಬ ವಿಶಾಲ ಆಕಾಶದಲ್ಲಿ ವಿಹರಿಸುತ್ತಿರುತ್ತಾರೆ; ದೇಹದ ಕಣಕಣದೊಂದಿಗೂ ಸಂಪರ್ಕದಲ್ಲಿರುತ್ತಾರೆ; ಆಟವನ್ನು ಹೇಗೋ ಬದುಕನ್ನೂ ಹಾಗೆ ದೇಹದಲ್ಲಿ ಆಗುವ ಏರುಪೇರುಗಳೊಂದಿಗೆ ಅರ್ಥಮಾಡಿಕೊಳ್ಳುವ ಅವಕಾಶ ಅವರಿಗಿರುತ್ತದೆ. ಮನಸ್ಸಿಗೆ ನಿಲುಕದೆಷ್ಟೋ ಸತ್ಯಗಳನ್ನು ದೇಹ ಕ್ಷಣಮಾತ್ರದಲ್ಲಿ ಗ್ರಹಿಸಿರುತ್ತದೆ ಎನ್ನುವುದನ್ನು ಇತ್ತೀಚಿನ ಅನೇಕ ಮನೋವೈಜ್ಞಾನಿಕ ಅಧ್ಯಯನಗಳು ಸಾಬೀತುಪಡಿಸಿವೆ.

ಮನಸ್ಸು ಭೂತ–ಭವಿಷ್ಯಗಳಲ್ಲಿ ಅಲೆದಾಡುತ್ತದೆ; ಒಮ್ಮೊಮ್ಮೆ ನಿಷ್ಕ್ರಿಯವೂ ಆಗುತ್ತದೆ. ಆದರೆ ದೇಹ ಹಾಗಲ್ಲ; ಅದು ಪ್ರತಿಕ್ಷಣವೂ ವರ್ತಮಾನದಲ್ಲೇ ನೆಲೆಯಾಗಿರುವಂಥದ್ದು. ಆಟ ಎನ್ನುವುದು ವರ್ತಮಾನದ ಎಚ್ಚರದ ಸ್ಥಿತಿಯೊಂದಿಗಿನ ಸಂಬಂಧ; ನಮ್ಮ ಇರುವಿಕೆ ನಮ್ಮ ಅನುಭವಕ್ಕೆ ಬರುವ ಕ್ಷಣ. ಹಾಗಾಗಿಯೇ ಆಟ ಸ್ವಚ್ಛವಾದ, ತಂಪಾದ, ಹರಿಯುವ ನೀರಿನಲ್ಲಿ ಮಿಂದುಬಂದಂತಹ ಉಲ್ಲಾಸವನ್ನು ನೀಡುತ್ತದೆ, ಆಟ ಎನ್ನುವುದು (ಮನಸಿನಲ್ಲಿ ಸಹಜವಾಗಿ ಆಗುವಂತೆ) ಹಳೆಯ ವಿಚಾರಗಳ ಪುನರಾವರ್ತನೆಯಲ್ಲ ಬದಲಾಗಿ ಕಾಲದ ಹರಿಯುವಿಕೆಯಲ್ಲಿ ಒಂದಾಗುವ ಪ್ರಕ್ರಿಯೆ, ಈ ಅರ್ಥದಲ್ಲಿ ನೋಡಿದಾಗ ಆಟ ಎನ್ನುವುದು ನಮ್ಮ ಅಸ್ತಿತ್ವದ ನಿಜವನ್ನು ಸಂಭ್ರಮಿಸುವ ಕ್ರಿಯೆ.

ಮಗುವಿನ ಅಂತರಂಗದ ವಿಕಾಸಕ್ಕೆ ಪಾಠವೆಷ್ಟು ಮುಖ್ಯವೋ, ಆಟವೂ ಅಷ್ಟೇ ಮುಖ್ಯ; ಒಮ್ಮೊಮ್ಮೆ ಈ ಎರಡರ ನಡುವಿನ ಸಮತೋಲನ ತಪ್ಪಿಯೂ ಹೋಗುತ್ತದೆ. ಆಟ–ಪಾಠ ಒಂದಕ್ಕೊಂದು ಪೂರಕವಾಗಿರುವಂತೆ ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಲವು ವಿಚಾರಗಳು ಉಪಯುಕ್ತವಾಗಬಹುದು:

1 ಕಲಿಕೆ ಬುದ್ಧಿಗೆ ಮಾತ್ರ ಸಂಬಂಧಪಟ್ಟಿದ್ದು ಎನ್ನುವ ಕಲ್ಪನೆಯಿಂದ ಹೊರಬಂದಾಗ ಕಲಿಕೆಗಿರುವ ಅಗಾಧ ಹರವಿನ ಅರಿವಾಗುತ್ತದೆ. ಆಟದ ಅನುಭವಗಳ ವೈವಿಧ್ಯವನ್ನು ಒಮ್ಮೆ ಮನಸ್ಸಿಗೆ ತಂದುಕೊಳ್ಳಿ - ದೇಹಕ್ಕೆ ವಿಶಿಷ್ಟವಾದ ಅನುಭವಗಳಿಗೆ ದಾರಿಮಾಡಿಕೊಡುವ ಫುಟ್ಬಾಲ್, ಕ್ರಿಕೆಟ್, ಬಾಸ್ಕೆಟ್ಬಾಲ್ ಮುಂತಾದ ಕ್ರೀಡೆಗಳು, ಮಣ್ಣಿನ ಸ್ಪರ್ಶ, ಘಮ, ಬಣ್ಣ ನೀಡುವ ಆನಂದವನ್ನು ಅನುಭವಿಸುತ್ತಾ ಮಣ್ಣಿನಾಕೃತಿಗಳನ್ನು ಮಾಡಿ, ಅಳಿಸಿ, ಹೊಸದಾಗಿ ರಚಿಸುವ ಮಣ್ಣಿನಾಟ, ಆಟಿಕೆಗಳಿಂದ ಆಡುವ ಆಟಗಳು, ಉದ್ಯಾನವನದಲ್ಲಿ ಆಡುವ ಜಾರುಬಂಡೆ, ಜೋಕಾಲಿಯಂತಹ ಮೋಜಿನ ಆಟಗಳು, ಬೇರೆ ಮಕ್ಕಳೊಡನೆ ಸೇರಿ ನಿಯಮಗಳನ್ನು ಕಲಿತು, ಅವಕ್ಕೆ ಬದ್ಧರಾಗಿ, ಕೆಲವೊಮ್ಮೆ ಮಾರ್ಪಡಿಸಿಕೊಂಡು ಆಡುವ ಆಟಗಳು, ಈಜಾಡುವುದು, ಸೈಕ್ಲಿಂಗ್ ಮುಂತಾದ ಒಬ್ಬರೇ ಆಡಬಹುದಾದ ಆಟಗಳು, ಚಿಕ್ಕ ಮಕ್ಕಳು ಆಡುವ ಕಾಲ್ಪನಿಕ ಆಟಗಳು, ಟೀಚರ್-ಮಕ್ಕಳು, ಕಳ್ಳ-ಪೊಲೀಸ್ ಪಾತ್ರಗಳಾಗಿ ರೂಪಾಂತರಗೊಳ್ಳುವ ಕಲೆಗೂ ಆಟಕ್ಕೂ ಇರುವ ನಂಟನ್ನು ಅದರ ಪ್ರಾರಂಭಿಕ ಹಂತದಲ್ಲಿ ಪರಿಚಯಿಸುವ ಆಟಗಳು - ಎಷ್ಟೆಲ್ಲಾ ಅನುಭವಗಳು! ಇಷ್ಟೊಂದು ಬಗೆಬಗೆಯ ಅನುಭವಗಳ ಮೇಲೆ ಬೆಳಕುಚೆಲ್ಲುವಂತಹ ಮಾತು-ಮಂಥನ ಮಕ್ಕಳ, ಪೋಷಕರ, ಶಿಕ್ಷಕರ ನಡುವೆ ನಡೆದರೆ ಅದು ಯಾವ ಕಲಿಕೆಗೆ ಕಡಿಮೆಯಾದೀತು?

2 ಮಕ್ಕಳು ಆಟಕ್ಕೆ ತೆರಳುವ ಮುನ್ನ ಅವರನ್ನು ಬೆಂಬಲಿಸುವ 'ತೃಪ್ತಿಯಿಂದ ಆಡಿಕೊಂಡು ಬಾ', 'ಆಟವನ್ನು ಆಸ್ವಾದಿಸು' ಎನ್ನುವ ಮಾತುಗಳನ್ನು ಪೋಷಕರು ಹೇಳಿಕಳಿಸುವುದು, ಆಟದಿಂದ ಬಂದಮೇಲೆ ನಗುಮುಖದಿಂದ ಬರಮಾಡಿಕೊಂಡು ಉಪಚರಿಸುವುದು ಮಕ್ಕಳಿಗೆ ತಮ್ಮ ಖುಷಿಯಲ್ಲಿ ಪೋಷಕರೂ ಭಾಗಿಯಾಗಿದ್ದಾರೆಂಬ ವಿಶ್ವಾಸವನ್ನು ಮೂಡಿಸುತ್ತದೆ.

3 ಆಟ ಎನ್ನುವುದು ಪಾಠದಿಂದ ತಪ್ಪಿಸಿಕೊಳ್ಳುವ ಒಂದು ನೆಪವಾಗದಂತೆ ಕೂಡ ಎಚ್ಚರ ವಹಿಸಬೇಕಾಗುತ್ತದೆ. ಇದಕ್ಕೆ ಆಟ ಮತ್ತು ಪಾಠದ ನಡುವೆ ಸಮಯ ವಿಂಗಡಣೆ ಮಾಡಿಕೊಳ್ಳುವುದಷ್ಟೇ ಅಲ್ಲ, ಅದನ್ನು ಅನುಸರಿಸಲು ದೃಢಮನಸ್ಸು ಕೂಡ ಬೇಕಾಗುತ್ತದೆ. ಈ ವಿಚಾರದಲ್ಲಿ ಪೋಷಕರ ಕಟ್ಟುನಿಟ್ಟಿನ ವರ್ತನೆ ಅವಶ್ಯಕ. ಮಕ್ಕಳು ತಾವೇ ಸ್ವಯಂಪ್ರೇರಿತರಾಗಿ ಆಟದಿಂದ ಮನೆಗೆ ಮರಳಿ ಓದುವುದಕ್ಕೆ ಕುಳಿತುಕೊಳ್ಳಲು ಪೋಷಕರು ಮಾರ್ಗದರ್ಶಕರಾಗಬೇಕಾಗುತ್ತದೆ.

4 ಮಕ್ಕಳು ಯಾರೊಂದಿಗೆ ಎಲ್ಲಿ ಆಟವಾಡುತ್ತಿದ್ದಾರೆ; ಸ್ನೇಹಿತರ ಮನೆ, ಅವರ ಪೋಷಕರ ಪರಿಚಯ; ಯಾವ ಬಗೆಯ ಆಟಗಳನ್ನಾಡುತ್ತಾರೆ; ಆಟದ ಸಮಯದಲ್ಲಿ ಗ್ಯಾಡ್ಜೆಟ್‌ಗಳ ಬಳಕೆ ಮಾಡುತ್ತಿದ್ದಾರೆಯೇ; ಅವರುಗಳ ನಡುವಿನ ಬಾಂಧವ್ಯ ಹೇಗಿದೆ; ಜಗಳಗಳನ್ನು ಹೇಗೆ ಬಿಡಿಸಿಕೊಳ್ಳುತ್ತಾರೆ; ಒಬ್ಬರಿಗೊಬ್ಬರು ಹೇಗೆ ಮಾತನಾಡಿಸಿಕೊಳ್ಳುತ್ತಾರೆ – ಈ ಎಲ್ಲದರ ಬಗ್ಗೆ ಪೋಷಕರು ಮಾಹಿತಿಯನ್ನು ಹೊಂದಿರಬೇಕು.

5 ಮಕ್ಕಳು ಉತ್ಸಾಹ, ಕಾತರಗಳಿಂದ ಆಟಕ್ಕೆ ತೆರಳುತ್ತಾರೆ; ಆಡುವಾಗ ಅವರ ಈ ಹುಮ್ಮಸ್ಸು ಮುಗಿಲುಮುಟ್ಟುತ್ತದೆ. ವಾಪಸ್ಸು ಮನೆಗೆ ಬರುವಾಗ ಒಲ್ಲದ ಮನಸ್ಸಿನಿಂದಲೇ ಬರಬಹುದು ಅಥವಾ ಆಡಿ ದಣಿದು ಸಂತಸಪಟ್ಟ ಸಂತೃಪ್ತಿಯಿರಬಹುದು. ಇನ್ನೂ ಕೆಲವೊಮ್ಮೆ ಆಟದಲ್ಲಿ ಆದ ಬೇಸರವನ್ನು ಮನೆಗೆ ಹೊತ್ತು ತರುವುದು, ಅದೇ ಗುಂಗಿನಲ್ಲಿ ಓದುವುದನ್ನು ನಿರ್ಲಕ್ಷಿಸುವುದೂ ಇರಬಹುದು. ಅದೆಲ್ಲ ಏನೇ ಇದ್ದರೂ ಎಲ್ಲ ಭಾವನೆಗಳನ್ನು ಒಂದು ಹದಕ್ಕೆ ತಂದುಕೊಂಡು ಮನಸ್ಸನ್ನು ಓದಿನಲ್ಲಿ ತೊಡಗಿಸುವುದು ಕಡ್ಡಾಯ. ಅದಲ್ಲದೆ ಬೇರೆ ದಾರಿಯಿಲ್ಲ ಎನ್ನುವುದನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟಾಗ ಸಹಜವಾಗಿ ಓದಿನಲ್ಲಿ ಶಿಸ್ತು ಬೆಳೆಯುತ್ತದೆ. ❖

ಕಸ ತಿನ್ನುವುದಕ್ಕಿಂತ ತುಸು ತಿನ್ನುವುದು ಲೇಸು

ಡಾ. ಸತ್ಯನಾರಾಯಣ ಭಟ್ ಪಿ.

> 'ಜಂಕ್' ಎಂಬ ಪದಕ್ಕೆ 'ಕಸ'ಎಂಬ ಅರ್ಥ ಹೆಚ್ಚು ಅನ್ವಯವಾದೀತು!. ಎಳೆಯ ಮಕ್ಕಳಿಂದ ಆರಂಭಿಸಿ ಎಲ್ಲ ವಯೋಮಾನದವರಿಗೆ ಜಂಕ್ ಆಹಾರದ ಚಟ ಹಿಡಿದಿರುವುದು ದುರದೃಷ್ಟ. ಆದರೆ ಅದು ತರುವ ಅನಾಹುತದ ಪರಿವೆಯನ್ನು ನಮ್ಮ ಹೊಸ ಪೀಳಿಗೆಗೆ ಅರ್ಥ ಮಾಡಿಸುವುದೂ ದುಸ್ತರ. ಒಂದೆರಡು ನಿದರ್ಶನ ಓದಿದರೆ ಕಣ್ತೆರೆದೀತು. ಉಣ್ಣುವ ತಿನ್ನುವ ಬಗ್ಗೆ ಖಂಡಿತ ಅಸಡ್ಡೆ ಬೇಡ ಎಂಬುದನ್ನು ಮನಗಾಣಿರಿ.

ಅಜಯನಿಗೆ ಹನ್ನೊಂದು ವರ್ಷ. ಅಪ್ಪನಿಗೆ ಗಾರೆ ಕೆಲಸದ ವೃತ್ತಿ. ತಾತನಿಗೆ ಪೆನ್ಶನ್ ದೊರಕುವ ನಿವೃತ್ತಿಯ ಜೀವನ. ಇಬ್ಬರಿಗೂ ಅಜಯನ ಮೇಲೆ ವಿಪರೀತ ಅಕ್ಕರೆ. ರಸ್ತೆ ಬದಿಯ ಗೂಡಂಗಡಿಯ ಅಗ್ಗದ ಪೊಟ್ಟಣದ ಸರಕು ತಿಳಿಯಿತಲ್ಲ. ಪೇಟೆ, ಗ್ರಾಮದ ಎಲ್ಲ ಮೂಲೆಯಲ್ಲಿಯೂ ಇಂದು ಇಂತಹ ಅಗ್ಗದ ನಾಲಿಗೆಗೆ ರುಚಿಯ ಗೀಳು ಹತ್ತಿಸುವ ಪೊಟ್ಟಣದ ಮಾಲೆ ಮಾಲೆ ನೇತು ಹಾಕುವರಲ್ಲ. ಈ ಮೂಲೆಯ ಅಂಗಡಿಗಳು ಬಾಳೆಹಣ್ಣು ಮಾರುವುದು ಇದೀಗ ವಿರಳ. ಅಂತಹ ಪೊಟ್ಟಣದ ಸರಕು ಅದೆಂತೋ ಅಜಯನ ಎಳೆಯ ನಾಲಿಗೆಗೆ ರುಚಿ ಹತ್ತಿತು. ಆತನ ಎಳವೆಯ ಪ್ರಧಾನ ಆಹಾರ ಎನಿಸಿಬಿಟ್ಟಿತು. ತಾತ, ತಂದೆಗೆ ಸ್ಪರ್ಧೆ. ತಾತ ದಿನವೂ ಮೂರು ಪೊಟ್ಟಣ ಖರೀದಿಸಿ ಮೊಮ್ಮಗನ ನಾಲಿಗೆಗೆ ಅರ್ಪಿಸಿದರು. ತಂದೆ ದಿನವೂ ಸಂಜೆ ಮನೆಗೆ ಮರಳುವ ವೇಳೆ ಎರಡು ಪೊಟ್ಟಣ ತರಲು ಮರೆಯುತ್ತಿರಲಿಲ್ಲ. ದಿನ, ಮಾಸ, ವರ್ಷಗಳು ಸಂದವು. ಏಕಾಏಕಿ ಮಗುವಿನ ಬೆಳವಣಿಗೆ ಕುಂಠಿತವಾಯಿತು. ದಿನೇ ದಿನೇ ತೂಕ ಇಳಿಯತೊಡಗಿತು. ವೈದ್ಯರ ಬಳಿಗೋಡಿದರು. ಅಜಯನಿಗೆ ಹಲವು ತಪಾಸಣೆಗಳು ನಡೆದವು. ಟೈಪ್ ಒನ್ ಡಯಾಬಿಟಿಸ್ ಪತ್ತೆಯಾಯಿತು. ಅಮಾಯಕ ಅಜಯನ ಜೀವನ ಪರ್ಯಂತದ ಕಾಯಿಲೆಗೆ ಹೊಣೆ ಯಾರು?

ಟಿ.ವಿ ಎಂಬ ಮಾಯಾಪೆಟ್ಟಿಗೆಯಲ್ಲಿ ಢಾಳಾಗಿ ಕಾಣುವ ಜಾಹೀರಾತು. ಕೇವಲ ಒಂದು ಮಿನಿಟಲ್ಲಿ ತಯಾರಾಗುವ ಒತ್ತು ಶೇವಿಗೆ ಅಥವಾ ಹೊಸ ಪೀಳಿಗೆಯ ಭಾಷೆಯಲ್ಲಿ ಅರ್ಥವಾಗುವ ನೂಡಲ್ಸ್. ಇಬ್ಬರೂ ದುಡಿಯುವ ಪುಟ್ಟ ಕುಟುಂಬ. ಅಪರೂಪಕ್ಕೆ ಹಲವು ವರ್ಷ ಸಂದ ಬಳಿಕ ಹುಟ್ಟಿದ ವಿನೋದನಿಗೆ ಈಗ ಆರು ತುಂಬಿತ್ತು. ಕನಿಷ್ಠ ಮೂರು ವರ್ಷ, ವಾರದ ಐದಾರು ದಿನ ತಪ್ಪದೆ ತಿನ್ನುತ್ತಿದ್ದ ಒನ್ ಮಿನಿಟ್ ಆಹಾರದ ಪರಿಣಾಮ ವಿನೋದನ ಬಾಲ್ಯದ ಬೆಳವಣಿಗೆಗೆ ಗಾಸಿ ಮಾಡಿಯೇಬಿಟ್ಟಿತು. ಶೈಶವದ ಮಧುಮೇಹಕ್ಕೆ ವಿನೋದ ಒಳಗಾಗಿದ್ದು ದುರಂತದ ಸಂಗತಿ. ದಿನಕ್ಕೆರಡು ಬಾರಿ ನೋವಿನ ಇನ್ಸುಲಿನ್ ಅನ್ನು ಚುಚ್ಚಿಸಿಕೊಳ್ಳುವ, ಬಾಲ್ಯದ ಕಾಯಿಲೆಯು ಜೀವನ ಪರ್ಯಂತ ವಿನೋದನಿಗೆ ಬಯಸದೆ ಬಂದ ವಿಧಿಯ ಶಾಪ. ತಪ್ಪು ಮಗುವಿನದೋ? ಹಿರಿಯರದೋ? ಅಥವಾ ಢಾಳಾಗಿ ಪ್ರಸಾರವಾಗುವ ಜಾಹೀರಾತಿನದೋ?

ಆಯೇಷಾಳಿಗೆ ಹನ್ನೊಂದರ ಹರೆಯ. ಅಮ್ಮನೇ ದುಡಿಯುವ ಮತ್ತು ಪಾಲನೆ ಮಾಡುವ ಅನಿವಾರ್ಯತೆ. ಖಾಸಗಿ ಶಾಲೆಯ ಶಿಕ್ಷಕಿ ಅಮ್ಮ ಮಗಳನ್ನು ತನ್ನ ಕಣ್ಣಿನ ಪಾಪೆಯಂತೆ ಮುದ್ದು ಮಾಡುತ್ತಿದ್ದಳು. ಸಂಜೆ ಶಾಲೆಯ ವೇಳೆ ಕಳೆದರೂ ಅಮ್ಮನಿಗೆ ಶಾಲೆಯ ಪಾಳಿ ಕೊನೆಯಾಗಲು ತಾಸು ಹಿಡಿಯುತ್ತಿತ್ತು. ಮಗು ಶಾಲೆಯ ಗೇಟಿನಾಚೆ ಠಳಾಯಿಸುವ ವೇಳೆಗೆ ಏನಾದರೂ ತಿನ್ನಲಿ ಎಂದು ಅಮ್ಮ ಅಯೇಷಾಳ ಕೈಗೆ ಹತ್ತು ರೂಪಾಯಿಯನ್ನು ತುರುಕುತ್ತಿದ್ದಳು. ಅಗ್ಗದ ಹಸಿ ಬಿಸಿ ಕಾರ್ನ್ ಕೋನ್ ಕೊಂಡು ತಿನ್ನುತ್ತಿದ್ದ ಆಯೇಷಾಳ ದಿನಚರಿ ವರ್ಷಗಟ್ಟಲೆ ಸಂದಿತು. ಏಕಾಏಕಿ ಹೊಟ್ಟೆನೋವು ಬಂದಿತು. ತಪಾಸಣೆಗಳು ನಡೆದವು. ಪಿತ್ತಕೋಶದಲ್ಲಿ ಕಲ್ಲು ಎಂಬ ವರದಿ ಬಂದಿತು. ಪುಟ್ಟ ಬಾಲಕಿಯ ಪಿತ್ತಕೋಶಕ್ಕೆ ಕತ್ತರಿ ಬೀಳುವ ಅನಿವಾರ್ಯತೆ ಬಂತು. ಇಲ್ಲಿ ತಪ್ಪು ಯಾರದ್ದು ಎಂಬುದು ಗೌಣ. ಆದರೆ ಆಹಾರದ ಶಿಸ್ತು ಪಾಲಿಸುವ ಜವಾಬ್ದಾರಿ ಹೆತ್ತವರದ್ದೇ ಅಥವಾ ಮಕ್ಕಳದ್ದೇ ಎಂಬುದನ್ನು ಯೋಚಿಸಬೇಕಾದ ಅನಿವಾರ್ಯತೆ ನಮ್ಮ ಮೇಲಿದೆ. ಈಗ ಮನದಟ್ಟಾಯಿತಲ್ಲ, 'ಕಸ ತಿನ್ನುವುದಕ್ಕಿಂತ ತುಸು ತಿನ್ನುವುದು ಲೇಸು' ಎಂಬ ಗಾದೆಯ ಮಾತು ಎಷ್ಟು ಪ್ರಸ್ತುತ ಎಂಬ ಸಂಗತಿ. ಆಂಗ್ಲಗಾದೆಯೊಂದು ಹೇಳುತ್ತದೆ: 'ವಿ ಆರ್ ವಾಟ್ ವೀ ಈಟ್!' ಚರಕಮುನಿಯ ಮಾತು ಹೀಗಿದೆ: 'ಆಹಾರ ಸಂಭವಂ ವಸ್ತುಃ ರೋಗಾಶ್ಚಾಹಾರ ಸಂಭವಃ'. ಇದರ ಅರ್ಥ ತುಂಬ ಸರಳ. ಆಂಗ್ಲಗಾದೆಯ ತದ್ರೂಪ. ನಮ್ಮ ಹುಟ್ಟಿನ ಹಿಂದೆ ಆಹಾರವೇ ಇದೆ. ನಾವು ಅನುಭವಿಸುವ ಕಾಯಿಲೆಗಳೂ ನಮ್ಮ ಆಹಾರದ ಮೇಲೆ ಅವಲಂಬಿತ.

ಜನಸಾಮಾನ್ಯರ ಪರಿಭಾಷೆಯಲ್ಲಿ 'ಡೈಜೆಷನ್' ಅಂದರೆ ಮಲಪ್ರವೃತ್ತಿ. ಅಂದರೆ ತಿಂದ ಆಹಾರದ ಜೀರ್ಣಪ್ರಕ್ರಿಯೆ ಸರಿ ಇದ್ದರೆ ಮಲ ಸರಾಗ. ಬೇಕಾದ ಪೋಷಕಾಂಶ ದೇಹಕ್ಕೆ ಒದಗುತ್ತದೆ; ಬೇಡದ ತ್ಯಾಜ್ಯ ಹೊರಬೀಳುತ್ತದೆ. ಮೇಲೆ ಹೇಳಿದ ಮೂರೂ ನಿದರ್ಶನಗಳನ್ನೇ ವಿಶ್ಲೇಷಿಸೋಣ. ಬೇಡದ ಕಚರಾ ವಸ್ತುವನ್ನೆ ವೈಭವೀಕರಿಸಿ ನಾಲಿಗೆಗೆ ಮಾತ್ರ ರುಚಿ ಎನಿಸುವ ಪೊಟ್ಟಣದ ಕೃತಕ ಆಹಾರಗಳು ಅವು. ಅದರ ಜೀರ್ಣಪ್ರಕ್ರಿಯೆ ದೇಹದಲ್ಲಿ ಉಂಟಾಗುವುದು ದುಸ್ತರ. ಮಲ ರೂಪದಲ್ಲಿ ಹೊರ ಹಾಕುವ ತ್ಯಾಜ್ಯವಸ್ತು ಅಂತಹ ಕೃತಕ ತಿನಿಸುಗಳಲ್ಲಿ ಏನಿದೆ ಎಂಬದು ನೀವೇ ತರ್ಕಿಸಿ. ಕೂಸು ಹಸಿದಾಗಲೆಲ್ಲ, ಅತ್ತಾಗಲೆಲ್ಲ ಇಂತಹ ಕೃತಕ ಘನ ಅಥವಾ ದ್ರವ ಪೇಯಗಳನ್ನೇ ನೀಡಿದರೆ ಉಂಟಾಗುವ ದುಷ್ಪರಿಣಾಮಗಳನ್ನು ಊಹಿಸಲು ಇಂತಹ ನಿದರ್ಶನಗಳು ಸಾಲವೇ?

ಸರ್ವಜ್ಞ ಕವಿಯ ಈ ಪದ್ಯವನ್ನು ಓದಿರಿ. ಆಹಾರದ ಶಿಸ್ತನ್ನು ರೂಢಿಸುವ ಉತ್ತಮ ಮಾರ್ಗದರ್ಶನ ಇದರಲ್ಲಿದೆ: 'ಹಸಿದು ಹಸಿದಿರಬೇಡ, ಹಸಿಯದಿರೆ ಉಣಬೇಡ, ಬಿಸಿ ಬೇಡ, ತಂಗೂಳನುಣಬೇಡ ವೈದ್ಯನಾ ಬೇಸನವೆ ಬೇಡ ಸರ್ವಜ್ಞ'. ಪದೇ ಪದೇ ತಿನ್ನುವ ಚಪಲವೇ ಹಸಿಯದಿದ್ದರೂ ಉಣುವ ಪರಿಪಾಠ. ಅದು 'ಆಮ' ಅಂದರೆ ಅಜೀರ್ಣದ ಮೂಲ ಕಾರಣ. ಆಮದಿಂದ ಆಮಯ ಅಥವಾ ರೋಗ. ಮೇಲಿನ ಮೂರೂ ಉದಾಹರಣೆಗಳಲ್ಲಿ ಅದು ನಿಚ್ಚಳ. ಪೊಟ್ಟಣದ ಆಹಾರ, ಬಾಟಲೀಕೃತ ಪೇಯ ತಂಗಳೋ ಅಲ್ಲವೋ, ನಿರ್ಧಾರ ನಿಮ್ಮದಾಗಲಿ. ಗೀತೆಯ ಮಾತೊಂದು ಹೀಗಿದೆ: 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ಜಾಠರಾಶ್ರಿತಃ.' ಅಂದರೆ ಉದರದ ಅಗ್ನಿಯೂ ಭಗವಂತನೇ ಎಂಬರ್ಥ. ಅಂತಹ ಜಠರಾಗ್ನಿಗೆ ನಾವು ಸಮರ್ಪಿಸಬೇಕಾದ ಸಮಿಧೆಯೇ ನಮ್ಮ ಆಹಾರ! 'ನಮ್ಮೊಳಗಿನ ದೇವರಿಗೆ ಎಂತಹ ಪ್ರಸಾದ ಸಮರ್ಪಣೆ ಮಾಡುವುದು' – ಎಂಬ ಸಂಗತಿ ನಮಗೇ ಬಿಟ್ಟದ್ದು. ❖



ಓದಿನ ಪ್ರೀತಿ

ರೂಪಾ ಕೆ.ಎಂ.

ಮಕ್ಕಳಿಗೆ ಶಾಲೆಯೇನೋ ಶುರುವಾಗಿದೆ. ಅಂದಿನ ಪಾಠವನ್ನು ಅಂದೇ ಓದಿಕೊಂಡರೆ ಪರೀಕ್ಷೆಯ ಸಂದರ್ಭದಲ್ಲಿ ಮಕ್ಕಳಿಗೆ ಹೊರೆಯಾಗದು. ಹೀಗೆ ಹೇಳುವುದು ಬಲು ಸುಲಭ. ಆದರೆ, ಪುಸ್ತಕವೆಂದರೆ ದೂರ ಓಡುವ ಮಕ್ಕಳಿರುತ್ತಾರೆ. ಅಂಥವರಿಗೆ ಶಾಲೆಯ ಪಠ್ಯವನ್ನು ಕಂಡರೆ ಅಷ್ಟಕ್ಕಷ್ಟೆ. ಶಾಲೆಯ ಪಠ್ಯ ರುಚಿಸಬೇಕಾದರೆ ಮಕ್ಕಳಿಗೆ ಮೊದಲು ಪುಸ್ತಕದ ಬಗ್ಗೆ ಪ್ರೀತಿ ಹುಟ್ಟುವಂತಾಗಬೇಕು. ಪುಟ್ಟ ಬೆರಳುಗಳಲ್ಲಿ ಅಕ್ಷರವನ್ನು ಕೂಡಿಸಿ ಓದುವ ಹಂತದಿಂದಲೇ ಮಕ್ಕಳಲ್ಲಿ ಅಕ್ಷರಪ್ರೀತಿಯನ್ನು ಬಿತ್ತಬೇಕು. ಇದಕ್ಕೆ ಮೊದಲು ಪೋಷಕರಲ್ಲಿ ಸ್ವಲ್ಪವಾದರೂ ಓದುವ ಹವ್ಯಾಸ ರೂಢಿಯಾಗಿರಬೇಕು.

ಓದುವ ಹವ್ಯಾಸ ಬೆಳೆಸಿಕೊಳ್ಳುವ ಮಕ್ಕಳಿಗೆ ಒಂದೊಮ್ಮೆ ಪಠ್ಯದ ವಿಷಯವನ್ನು ಗ್ರಹಿಸಲು ಕಷ್ಟವೆನಿಸಿದರೂ ಇಷ್ಟಪಟ್ಟು ಅದನ್ನು ಓದಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಹವ್ಯಾಸ ಮಕ್ಕಳ ಗ್ರಹಿಕಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ; ಜೊತೆಗೆ ಕುತೂಹಲ, ಕಲ್ಪನಾಶಕ್ತಿಯನ್ನೂ ಹಿಗ್ಗಿಸುತ್ತದೆ.

ಹಾಗಾದರೆ ಶಾಲೆಗೆ ದಾಖಲಾಗುವ ಮುನ್ನವೇ ಆಟ ಆಡಿಕೊಂಡಿರುವ ಮಕ್ಕಳಿಗೆ ಪುಸ್ತಕದ ಗುಂಗು ಹಿಡಿಸುವುದು ಹೇಗೆ? ಇಲ್ಲಿವೆ ಕೆಲವು ಸಲಹೆಗಳು:

ನಿತ್ಯ ಓದುವ ಅಭ್ಯಾಸವಿರಲಿ: ರಾತ್ರಿ ಮಲಗುವ ಸಮಯದಲ್ಲಿ ಬಣ್ಣ ಬಣ್ಣದ ಚಿತ್ರಗಳಿರುವ ಮಕ್ಕಳಕಥೆ ಪುಸ್ತಕವೊಂದನ್ನು ಗಟ್ಟಿಯಾಗಿ ಓದಿ ಹೇಳುವ ಅಭ್ಯಾಸವನ್ನು ಪೋಷಕರು ಬೆಳೆಸಿಕೊಳ್ಳಬಹುದು. ಕಥೆ, ಕಾದಂಬರಿ, ನಿಯತಕಾಲಿಕೆ, ಗ್ರಾಫಿಕ್ ಕಾದಂಬರಿ – ಹೀಗೆ ಯಾವುದೂ ಆಗಬಹುದು. ನಿಮ್ಮ ಮಗುವಿನ ಮುಂದೆ ಅದನ್ನು ಗಟ್ಟಿಯಾಗಿ ಓದುವ ಪ್ರಯತ್ನ ಮಾಡಿ. ಇದು ಭಾಷಾ ಕಲಿಕೆಗೂ ಸಹಕಾರಿಯಾಗುವುದು; ಓದಿನ ರುಚಿ ಹತ್ತಲೂ ನೆರವಾಗುತ್ತದೆ.

ಓದುವ ಕಾರ್ನರ್ ಇರಲಿ: ದೊಡ್ಡ ದೊಡ್ಡ ಪುಸ್ತಕಗಳ ರಾಶಿಯೇ ಇರಬೇಕು ಎಂದೇನಿಲ್ಲ. ಮಕ್ಕಳಿಗಾಗಿ ಇರುವ ಕೆಲವೇ ಪುಸ್ತಕಗಳ ಸ್ಪೇಸ್‌ವೊಂದು ಸೃಷ್ಟಿಸಿಟ್ಟರೆ, ಸಮಯ ಸಿಕ್ಕಾಗೆಲ್ಲ ಬೇಸರಿಕೆ ಕಳೆಯಲು ಮಕ್ಕಳು ಪುಟಗಳನ್ನು ತಿರುವಲು ಮನಸ್ಸು ಮಾಡಿಯಾರು. ಮುಂದೇ ಇದೇ ಓದುವ ಹವ್ಯಾಸವಾಗಿ ಮಾರ್ಪಾಡಾಗುತ್ತದೆ.

ಗ್ರಂಥಾಲಯಕ್ಕೆ ಆಗಾಗ್ಗೆ ಭೇಟಿ ನೀಡಿ: ಆಗಾಗ್ಗೆ ಮಕ್ಕಳನ್ನು ಶಾಪಿಂಗ್ ಮಾಲ್‌ಗೆ ಕರೆದುಕೊಂಡು ಹೋಗುವಂತೆ ಗ್ರಂಥಾಲಯಕ್ಕೂ ಭೇಟಿ ನೀಡಲು ಸಮಯ ಮಾಡಿಕೊಳ್ಳಿ. ವೈವಿಧ್ಯಮಯ ಪುಸ್ತಕದ ರಾಶಿಯ ನಡುವೆ ಮಗು ತನಗಿಷ್ಟವಾದ ಪುಸ್ತಕವನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ನೀಡಿ. ಪುಸ್ತಕ ಹಿಡಿದ ಮಗು ಕುತೂಹಲ ತಣಿಸಿಕೊಳ್ಳಲು ಸಿಕ್ಕಾಪಟ್ಟೆ ಪ್ರಶ್ನೆ ಕೇಳುತ್ತದೆ ಎಂದೆಲ್ಲ ತಲೆಬಿಸಿ ಮಾಡಿಕೊಳ್ಳದೇ ಸೂಕ್ಷ್ಮವಾಗಿ ಸ್ಪಂದಿಸಲು ಪ್ರಯತ್ನಿಸಿ. ಕುತೂಹಲ ಮುರುಟದಂತೆ ಪ್ರೋತ್ಸಾಹದಾಯಕ ಮಾತುಗಳನ್ನಾಡಿ.

ನಿತ್ಯದ ಭಾಗವಾಗಲಿ: ಶಾಲೆ, ಟ್ಯೂಷನ್ ಎಂದೆಲ್ಲ ಅತಿಯಾದ ಒತ್ತಡದ ನಡುವೆ ಇರುವ ಮಕ್ಕಳಿಗೆ ಓದುವುದು ಹೊರೆಯಾಗಬಾರದು. ಅದೊಂದು ಖುಷಿಯ ಸಂಗತಿ ಎನಿಸಬೇಕು. ಹಾಗೆ ಎನಿಸಬೇಕಾದರೆ ಪಠ್ಯವಲ್ಲದೇ ಬೇರೆ ಏನನ್ನಾದರೂ ಓದುವುದು ನಿತ್ಯ ಚಟುವಟಿಕೆಯ ಭಾಗವಾಗಬೇಕು. ಮಕ್ಕಳಿಗೆ ಇಷ್ಟವಾಗುವ ಪುಸ್ತಕವನ್ನು ಮತ್ತೆ ಮತ್ತೆ ಓದಿಸಿ; ಅದರಿಂದೇನೂ ತೊಂದರೆಯಾಗದು. ❖

ಮಳೆಯ ಕೊರತೆ: ಬರಿದಾದ ಲಿಂಗನಮಕ್ಕಿ ಜಲಾಶಯದ ಒಡಲು

ಸಿಗಂದೂರು ಲಾಂಚ್ ಸ್ಥಗಿತ?

● ಸುಕುಮಾರ ಎಂ.

ತುಮರಿ: ಬಿಸಿಲ ಬೇಗೆ, ವಾಡಿಕೆಯಷ್ಟು ಮಳೆ ಸುರಿಯದೇ ಲಿಂಗನಮಕ್ಕಿ ಅಣೆಕಟ್ಟೆ ಬರಿದಾಗಿದೆ. ಹೀಗಾಗಿ ಶರಾವತಿ ಹಿನ್ನೀರಿನ ಜನರನ್ನು ಹೊತ್ತೊಯ್ಯುತ್ತಿದ್ದ 'ಸಿಗಂದೂರು ಲಾಂಚ್' (ಕಡವು) ಸ್ಥಗಿತಗೊಳ್ಳುವ ಆತಂಕ ಉಂಟಾಗಿದೆ. ಇದರಿಂದ ಸಿಗಂದೂರು ಚೌಡೇಶ್ವರಿ ದರ್ಶನಕ್ಕೆ ರಾಜ್ಯದ ವಿವಿಧೆಡೆಯಿಂದ ಬರುವ ಯಾತ್ರಿಕರಿಗೆ ತೊಂದರೆಯಾಗಲಿದೆ.

ಸಾರ್ವತ್ರಿಕ ಚುನಾವಣೆಯ ನಂತರ ಸಾಲು ರಜೆಗಳ ಕಾರಣ ಒಂದೆಡೆ ಸಿಗಂದೂರು, ಕೊಲ್ಲೂರು, ಕೊಡಚಾದ್ರಿಗೆ ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚುತ್ತಿದೆ. ಲಾಂಚ್ ಕಾರ್ಯಾಚರಣೆ ನಿಲ್ಲಿಸಿದರೆ ಹೊಸನಗರ ತಾಲ್ಲೂಕಿನ ನಗರ, ಸಂಪೇಕಟ್ಟೆ, ನಿಟ್ಟೂರು ಮೂಲಕ 90 ಕಿ.ಮೀ ಸುತ್ತು ಬಳಸಿ ಪ್ರವಾಸಿಗರು ಸಿಗಂದೂರಿಗೆ ಬರಬೇಕಾಗುತ್ತದೆ. ಇನ್ನೊಂದೆಡೆ ಶರಾವತಿ ನದಿ ಕಣಿವೆ ವ್ಯಾಪ್ತಿಯ ಹಳ್ಳಿಗಳಲ್ಲಿನ 30,000 ಜನ ಸಂಪರ್ಕ ಕಡಿತದ ಭೀತಿಗೆ ಒಳಗಾಗಿದ್ದಾರೆ.

ಸಾಗರ ತಾಲ್ಲೂಕಿನ ಸಿಗಂದೂರು, ತುಮರಿ, ಬ್ಯಾಕೋಡು, ಕಟ್ಟಿನಕಾರು ಭಾಗದ ಪ್ರಮುಖ ಸಂಪರ್ಕ ಕೊಂಡಿಯಾದ ಹೊಳೆಬಾಗಿಲು ತಟದಲ್ಲಿ ನಿರಂತರವಾಗಿ ನೀರಿನ ಹರಿವು ಕಡಿಮೆಯಾಗಿದೆ.

ಮುಖ್ಯಾಂಶಗಳು

- ಮೂರು ಪ್ರದೇಶಗಳಲ್ಲಿ 5 ಲಾಂಚ್ ಸಂಚಾರ
- ಭಕ್ತರು, ದ್ವೀಪದ ಜನರ ಸಂಪರ್ಕ ಕೊಂಡಿ
- ಜನರ ಸುರಕ್ಷತೆಗೆ ಬೇಕಿದೆ ಆದ್ಯತೆ

ಜೂನ್ ಬಂದರೂ ಮಳೆ ಆಗದೆ ನೀರಿನ ಹರಿವು ಕಡಿಮೆ ಇದೆ. ಈಗಿನ ಸ್ಥಿತಿಯಲ್ಲಿ ಇನ್ನು 5 ದಿನ ಮಾತ್ರ ಲಾಂಚ್ ಬಳಸಬಹುದು. ಅಧಿಕಾರಿಗಳ ಜೊತೆ ಶೀಘ್ರ ಚರ್ಚಿಸಿ ತೀರ್ಮಾನಿಸಲಾಗುವುದು

ಧನೇಂದ್ರ ಕುಮಾರ್, ಕಡವು ನಿರೀಕ್ಷಕ

ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದೇನೆ. ಜನರ ಸುರಕ್ಷತೆಗೆ ಆದ್ಯತೆ ನೀಡಲಾಗುವುದು. ಭಕ್ತರು, ಸ್ಥಳೀಯರಿಗೆ ತೊಂದರೆ ಆಗದಂತೆ ಲಾಂಚ್ ಸೇವೆ ನೀಡಲು ಸೂಚಿಸಿದ್ದೇನೆ

ಗೋಪಾಲಕೃಷ್ಣ ಬೇಳೂರು, ಶಾಸಕ, ಸಾಗರ

ಈಗಾಗಲೇ ಲಾಂಚ್ ನಿಲ್ಲಿಸುವ ಹೊಳೆಬಾಗಿಲು, ಅಂಬಾರಗೋಡ್ಲು ಎರಡು ತಟದಲ್ಲಿನ ಪ್ಲಾಟ್ ಫಾರ್ಮ್‌ಗಳು ಬಳಕೆಗೆ ಬಾರದಂತಾಗಿವೆ. ಭಾನುವಾರ ಲಾಂಚ್ ನಿಲ್ಲಿಸಲು ಸಮಸ್ಯೆ ತಲೆದೋರಿ ಚಾಲಕರು ಹರಸಾಹಸಪಟ್ಟರು.

ತುರ್ತು ಆರೋಗ್ಯ ಸೇವೆಗೆ ಆತಂಕ: ದಿನನಿತ್ಯ ಈ ಭಾಗದಲ್ಲಿ ಸೇವೆ ನೀಡುವ ಇಲಾಖೆ ಅಧಿಕಾರಿಗಳು ಈ ಭಾಗದ ಜನರು ತಾಲ್ಲೂಕು ಕಚೇರಿ, ಕೋರ್ಟ್, ಶಾಲಾ ಕಾಲೇಜು ವಿದ್ಯಾರ್ಥಿಗಳು, ಗರ್ಭಿಣಿಯರು ಆಸ್ಪತ್ರೆಗೆ ತೆರಳಲು ಈ ಮಾರ್ಗ ಬಳಸುತ್ತಿದ್ದು, ಸಾಕಷ್ಟು ಅನಾನುಕೂಲ ಆಗುವ ಸಾಧ್ಯತೆ ಇದೆ.

ಸಾಗರ ತಾಲ್ಲೂಕಿನ ಶರಾವತಿ ಹಿನ್ನೀರಿನ ಹೊಳೆಬಾಗಿಲಿನಲ್ಲಿ ಲಾಂಚ್ ಸಂಚಾರಕ್ಕೆ ಕಾದಿರುವ ವಾಹನಗಳು.

ಹಿನ್ನೀರಿನ ಎರಡು ಮಾರ್ಗ ಸ್ಥಗಿತ

ಶರಾವತಿ ಹಿನ್ನೀರು ಕಡಿಮೆ ಆಗಿದ್ದು, ಈಗಾಗಲೇ ಸಾಗರ ತಾಲ್ಲೂಕಿನ ಮುಪ್ಪಾನೆಯಲ್ಲಿ ಲಾಂಚ್ ಸೇವೆ ಮೇ 26ರಿಂದ ಸ್ಥಗಿತಗೊಂಡಿದೆ.

ಹೊಸನಗರ ತಾಲ್ಲೂಕಿನ ಹಸಿರುಮಕ್ಕಿ ಲಾಂಚ್ ಸಹ ಜೂನ್ 4ರಿಂದ ಸ್ಥಗಿತವಾಗಿರುವ ಬಗ್ಗೆ ಮೂಲ ಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಮಾಹಿತಿ ನೀಡಿದೆ.

ಸಂದಲ್...

ಕಲಬುರಗಿಯಲ್ಲಿ ಸೋಮವಾರ ಸಂತ ಹಜರತ್ ಖಾಜಾ ಬಂದಾನವಾಜ್ ಉರುಸ್ ಅಂಗವಾಗಿ ಮಹಾನಗರ ಪಾಲಿಕೆ ಉದ್ಯಾನದಿಂದ ದರ್ಗಾವರೆಗೆ ನಡೆದ ಸಂದಲ್ (ಗಂಧ) ಮೆರವಣಿಗೆಯಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಮುಸ್ಲಿಂ ಸಾಹಿತ್ಯ ಪ್ರಶಸ್ತಿ: ಕೃತಿ ಆಹ್ವಾನ

ಮಂಗಳೂರು: ಕರ್ನಾಟಕ ಮುಸ್ಲಿಂ ಲೇಖಕರ ಸಂಘವು ಮುಸ್ಲಿಂ ಬರಹಗಾರರ ಅತ್ಯುತ್ತಮ ಕನ್ನಡ ಕೃತಿಗೆ ನೀಡುವ ರಾಜ್ಯಮಟ್ಟದ 'ಮುಸ್ಲಿಂ ಸಾಹಿತ್ಯ ಪ್ರಶಸ್ತಿ'ಗೆ ಕೃತಿಗಳನ್ನು ಆಹ್ವಾನಿಸಿದೆ. ₹10 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

2022ನೇ ಸಾಲಿನ ಕೃತಿಯ ನಾಲ್ಕು ಪ್ರತಿಗಳನ್ನು ಜೂನ್ 20ರ ಒಳಗಾಗಿ ಸಂಚಾಲಕರು, ಮುಸ್ಲಿಂ ಸಾಹಿತ್ಯ ಪ್ರಶಸ್ತಿ, ಮುಸ್ಲಿಂ ಲೇಖಕರ ಸಂಘ, ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು – 575001 (ಸಂಪರ್ಕ ಸಂಖ್ಯೆ– 9845054191, 0824–2410358) ಈ ವಿಳಾಸಕ್ಕೆ ಕಳುಹಿಸಲು ಮುಸ್ಲಿಂ ಲೇಖಕರ ಸಂಘದ ಅಧ್ಯಕ್ಷ ಉಮರ್ ಯು.ಎಚ್. ತಿಳಿಸಿದ್ದಾರೆ.

ಚುನಾವಣಾ ರಾಜಕೀಯಕ್ಕೆ ಸಂಸದ ಉದಾಸಿ ವಿದಾಯ

ಪ್ರಜಾವಾಣಿ ವಾರ್ತೆ

ಹಾವೇರಿ: ಗದಗ-ಹಾವೇರಿ ಲೋಕಸಭಾ ಕ್ಷೇತ್ರದ ಸಂಸದ ಶಿವಕುಮಾರ ಉದಾಸಿ ಅವರು ಚುನಾವಣಾ ರಾಜಕೀಯಕ್ಕೆ ವಿದಾಯ ಹೇಳಿರುವುದು ಜಿಲ್ಲೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ.

2009, 2014 ಮತ್ತು 2019ರ ಮೂರು ಲೋಕಸಭಾ ಚುನಾವಣೆಗಳಲ್ಲೂ ಶಿವಕುಮಾರ ಉದಾಸಿ ಅವರು ಬಿಜೆಪಿಯಿಂದ ಸ್ಪರ್ಧಿಸಿ, ಹ್ಯಾಟ್ರಿಕ್ ಗೆಲುವು ಸಾಧಿಸಿದ್ದರು.

2024ರ ಲೋಕಸಭಾ ಚುನಾವಣೆಗೆ ಒಂದು ವರ್ಷ ಬಾಕಿ ಇರುವ ಸಂದರ್ಭದಲ್ಲಿ ಇವರು ಚುನಾವಣಾ ರಾಜಕೀಯಕ್ಕೆ ಗುಡ್ ಬೈ ಹೇಳಿರುವುದು ಪಕ್ಷದ ಕಾರ್ಯಕರ್ತರಲ್ಲಿ ಆಘಾತ ಮತ್ತು ಅಚ್ಚರಿ ತಂದಿದೆ.

ಶಿವಕುಮಾರ ಉದಾಸಿ

'ಕಳೆದ ಒಂದು ವರ್ಷದ ಹಿಂದೆಯೇ ಚುನಾವಣೆಗೆ ನಿಲ್ಲುವುದಿಲ್ಲ ಎಂದು ನಿರ್ಧಾರ ತೆಗೆದುಕೊಂಡಿದ್ದೇನೆ. ಈ ಬಗ್ಗೆ ನಮ್ಮ ಪಕ್ಷದ ಮುಖಂಡರಿಗೆ ತಿಳಿಸಿದ್ದೇನೆ. ನನ್ನ ಖಾಸಗಿ ವ್ಯವಹಾರಗಳ ಜವಾಬ್ದಾರಿ ಮತ್ತು ವೈಯಕ್ತಿಕ ಕಾರಣದಿಂದ ಚುನಾವಣಾ ರಾಜಕೀಯಕ್ಕೆ ವಿದಾಯ ಹೇಳಲು ತೀರ್ಮಾನಿಸಿದ್ದೇನೆ. ಹೀಗಾಗಿ, ನಾನು 2024ರ ಲೋಕಸಭಾ ಚುನಾವಣೆಯ ಆಕಾಂಕ್ಷಿಯಾಗಿಲ್ಲ' ಎಂದು ಸಂಸದ ಶಿವಕುಮಾರ ಉದಾಸಿ ಸ್ಪಷ್ಟಪಡಿಸಿದರು.

ಮಾಜಿ ಸಚಿವ ದಿ.ಸಿ.ಎಂ. ಉದಾಸಿ ಅವರ ಪುತ್ರರಾಗಿರುವ ಶಿವಕುಮಾರ ಉದಾಸಿ ಅವರಿಗೆ 56 ವರ್ಷವಾಗಿದ್ದು, ಬಿಇ ಪದವೀಧರ. ಜಲಸಂಪನ್ಮೂಲ, ಹಣಕಾಸು, ವಿದೇಶಾಂಗ ವ್ಯವಹಾರಗಳ ಸ್ಥಾಯಿ ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ.

ಪ್ರಸ್ತುತ ಜಲಶಕ್ತಿ ಸಚಿವಾಲಯದ ಇಂಧನ ಮತ್ತು ಸಲಹಾ ಸಮಿತಿಯ ಸ್ಥಾಯಿ ಸಮಿತಿಯ ಸದಸ್ಯರಾಗಿದ್ದಾರೆ.

ನಂಜುಂಡೇಗೌಡರಿಗೆ 'ಖಾದ್ರಿ ಶಾಮಣ್ಣ' ಪ್ರಶಸ್ತಿ

ಬೆಂಗಳೂರು: ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ನೀಡುವ 2023 ನೇ ಸಾಲಿನ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'ಗೆ 'ಪ್ರಜಾವಾಣಿ'ಯ ಬಳ್ಳಾರಿ ಜಿಲ್ಲೆಯ ವಿಶೇಷ ವರದಿಗಾರ ಹೊನಕೆರೆ ನಂಜುಂಡೇಗೌಡ ಭಾಜನರಾಗಿದ್ದಾರೆ. ಪ್ರಶಸ್ತಿಯು ₹ 15 ಸಾವಿರ ನಗದು ಹಾಗೂ ಫಲಕ ಹೊಂದಿದೆ.

'ಈವರೆಗೆ 29 ಹಿರಿಯ ಪತ್ರಕರ್ತರು ಪ್ರಶಸ್ತಿಗೆ ಪಾತ್ರರಾಗಿದ್ದಾರೆ. 'ಪ್ರಜಾವಾಣಿ'ಯಲ್ಲಿ ಹಲವು ದಶಕಗಳಿಂದ, ವಿವಿಧ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸಿರುವ ನಂಜುಂಡೇಗೌಡ ಅವರು ಕನ್ನಡ ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಸೇವೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಟ್ರಸ್ಟ್ ಪರವಾಗಿ ಎಚ್.ಆರ್. ಶ್ರೀಶ ತಿಳಿಸಿದ್ದಾರೆ.

ಅಕ್ರಮ ಆಸ್ತಿ ಗಳಿಕೆ, ಹಣ ಅಕ್ರಮ ವರ್ಗಾವಣೆ ಆರೋಪ: ಇ.ಡಿ ಪ್ರಕರಣ

ಕಪಿಲ್ ಮೋಹನ್ ಪತ್ನಿಗೆ ನೀಡಿದ್ದ ಸಮನ್ಸ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ಐಎಎಸ್ ಅಧಿಕಾರಿ ಕಪಿಲ್ ಮೋಹನ್ ಅವರ ಪತ್ನಿ ರಿಚಾ ಸಕ್ಸೇನಾ ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ಜಾರಿಗೊಳಿಸಿದ್ದ ಸಮನ್ಸ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ, 'ಜಾರಿ ನಿರ್ದೇಶನಾಲಯ ನನ್ನ ವಿರುದ್ಧ 2023ರ ಫೆಬ್ರುವರಿ 2ರಂದು ಜಾರಿಗೊಳಿಸಿರುವ ಸಮನ್ಸ್ ರದ್ದುಪಡಿಸಬೇಕು' ಎಂದು ಕೋರಿ ರಿಚಾ ಸಕ್ಸೇನಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲಾದ 'ಬಿ' ರಿಪೋರ್ಟ್ ಅನ್ನು ಒಪ್ಪಿಕೊಂಡಿರುವ ನ್ಯಾಯಾಲಯ ಅರ್ಜಿದಾರರ ವಿರುದ್ಧದ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದೆ. ಆದರೂ, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಪುನಃ ಸಮನ್ಸ್ ಜಾರಿಗೊಳಿಸಿರುವುದು ನ್ಯಾಯಸಮ್ಮತವಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ರಿಚಾ ವಿರುದ್ಧದ ಸಮನ್ಸ್ ರದ್ದುಪಡಿಸಿ ಆದೇಶಿಸಿದೆ.

ಪ್ರಕರಣವೇನು?: ಹುಬ್ಬಳ್ಳಿಯಲ್ಲಿನ ಕ್ರಿಕೆಟ್ ಬೆಟ್ಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಬುಕ್ಕಿಗಳು ನೀಡಿದ್ದ ಮಾಹಿತಿ ಆಧರಿಸಿ ಹುಬ್ಬಳ್ಳಿ ಹಳೆ ಠಾಣೆಯ ಪೊಲೀಸರು 2015ರಲ್ಲಿ ಭಾರತೀಯ ದಂಡ ಸಂಹಿತೆಯ ಅಡಿ ದರೋಡೆ, ಅಪರಾಧಿಕ ಒಳಸಂಚು, ಸಾಕ್ಷ್ಯನಾಶದ ಪ್ರಕರಣವೊಂದನ್ನು ದಾಖಲಿಸಿದ್ದರು. ಈ ಪ್ರಕರಣದಲ್ಲಿ ರಿಚಾ ಸಕ್ಸೇನಾ ಅವರನ್ನು ಆರೋಪಿಯನ್ನಾಗಿ ಮಾಡಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ (ಐಟಿ) ಮತ್ತು ಸಿಐಡಿ ಪೊಲೀಸರು ಜಂಟಿಯಾಗಿ ರಿಚಾ ಸಕ್ಸೇನಾ ಅವರ ಮನೆ ಮೇಲೆ ದಾಳಿ ಮಾಡಿದ್ದರು. ಶೋಧನೆ ವೇಳೆ ₹ 4.7 ಕೋಟಿ ನಗದು, 2.5 ಕೆ.ಜಿ. ಚಿನ್ನ ಮತ್ತು ವಜ್ರದ ಆಭರಣ ದೊರೆತಿದ್ದವು. ಇದನ್ನು ಆಧರಿಸಿ ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರತ್ಯೇಕ ಪ್ರಕರಣ ದಾಖಲಿಸಿದ್ದರು.

ಪ್ರಕರಣದ ತನಿಖೆ ನಡೆಸಿದ್ದ ಅಧಿಕಾರಿಗಳು ವಿಚಾರಣಾ ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು.

ನ್ಯಾಯಾಲಯ 2021ರ ಏಪ್ರಿಲ್ 20ರಂದು 'ಬಿ' ರಿಪೋರ್ಟ್ ಅನ್ನು ಒಪ್ಪಿಕೊಂಡಿತ್ತು ಮತ್ತು ರಿಚಾ ಸಕ್ಸೇನಾ ವಿರುದ್ಧದ ಪ್ರಕರಣವನ್ನು ಮುಕ್ತಾಯಗೊಳಿಸಿತ್ತು. ನಂತರ ಇಡಿ, ರಿಚಾ ಸಕ್ಸೇನಾ ಅವರಿಗೆ ಸಮನ್ಸ್ ಜಾರಿಗೊಳಿಸಿತ್ತು. ಈ ಸಮನ್ಸ್ ಅನ್ನು ಪ್ರಶ್ನಿಸಿ ರಿಚಾ ಸಕ್ಸೇನಾ ಹೈಕೋರ್ಟ್ ಮೆಟ್ಟಿಲೇರಿದ್ದರು.

ಬೆಳಗಾವಿಯ ಕಾಹೇರ್ 13ನೇ ಘಟಿಕೋತ್ಸವ

ಅನುಜಾಗೆ ಮೂರು ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಕೆಎಲ್‌ಇ ಸೆಂಟೇನರಿ ಕನ್ವೆನ್ಷನ್ ಸೆಂಟರ್‌ನಲ್ಲಿ ಸೋಮವಾರ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್ (ಕಾಹೇರ್)ನ 13ನೇ ಘಟಿಕೋತ್ಸವ ನಡೆಯಿತು.

ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಬೇನಾಡಿಯ ಕೃಷಿ ಕುಟುಂಬದ ಡಾ.ಅನುಜಾ ಜನವಾಡೆ ಅವರು, ಆಯುರ್ವೇದ ವೈದ್ಯಶಾಸ್ತ್ರ (ಬಿಎಎಂಎಸ್) ಕೋರ್ಸ್‌ನಲ್ಲಿ 3 ಚಿನ್ನದ ಪದಕ ಪಡೆದುಕೊಂಡರು. ವಿವಿಧ ಕೋರ್ಸ್‌ಗಳಲ್ಲಿ ಸಾಧನೆ ಮೆರೆದ ವಿದ್ಯಾರ್ಥಿಗಳಿಗೆ 23 ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಆರೋಗ್ಯ ವಿಜ್ಞಾನದ ವಿವಿಧ ವಿಭಾಗಗಳಲ್ಲಿ 1,451 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 445 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ, 981 ಮಂದಿಗೆ ಪದವಿ, ಇಬ್ಬರಿಗೆ ಸ್ನಾತಕೋತ್ತರ ಡಿಪ್ಲೊಮಾ, ತಲಾ 7 ಜನರಿಗೆ ಫೆಲೋಷಿಪ್, ಪಿಎಚ್.ಡಿ ಮತ್ತು 9 ಮಂದಿಗೆ ಪೋಸ್ಟ್ ಡಾಕ್ಟರಲ್ ಪ್ರಮಾಣಪತ್ರ ನೀಡಲಾಯಿತು.

ರಾಜ್ಯಪಾಲ ಥಾವರಚಂದ್ ಗೆಹ್ಲೋತ್ ಘಟಿಕೋತ್ಸವ ಭಾಷಣ ಮಾಡಿದರು. ಕುಲಪತಿ ಡಾ.ಪ್ರಭಾಕರ ಕೋರೆ ಅಧ್ಯಕ್ಷತೆ ವಹಿಸಿದ್ದರು.

ಬೆಳಗಾವಿಯಲ್ಲಿ ಸೋಮವಾರ ನಡೆದ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್‌ನ(ಕಾಹೇರ್) 13ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಗಳಿಸಿದ ವಿದ್ಯಾರ್ಥಿಗಳು

ಪಿಯು ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ 1,049 ವಿದ್ಯಾರ್ಥಿಗಳು

ಈ ಕಾಲೇಜಿಗೆ ಭಾರಿ ಬೇಡಿಕೆ!

• ಇಮಾಮ್‌ಹುಸೇನ್ ಗೂಡುನವರ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಪ್ರತಿಷ್ಠಿತ ಖಾಸಗಿ ಪಿಯು ಕಾಲೇಜುಗಳಲ್ಲಿ ಪ್ರವೇಶ ಗಿಟ್ಟಿಸಲು ವಿದ್ಯಾರ್ಥಿಗಳು ಮುಗಿಬೀಳುವುದು ಸಾಮಾನ್ಯ. ಇಂಥದ್ದೇ ಚಿತ್ರಣ ಬೈಲಹೊಂಗಲದ ಸರ್ಕಾರಿ ಪಿಯು ಕಾಲೇಜಿನಲ್ಲೂ ಕಂಡುಬರುತ್ತಿದೆ.

2007ರಲ್ಲಿ 25 ವಿದ್ಯಾರ್ಥಿಗಳೊಂದಿಗೆ ಆರಂಭಿಸಲಾದ ಈ ಕಾಲೇಜಿನಲ್ಲೀಗ ಪ್ರತಿ ವರ್ಷವೂ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಓದುತ್ತಿದ್ದಾರೆ. 2023–24ನೇ ಸಾಲಿನಲ್ಲಿ ಪಿಯು ಪ್ರಥಮ ವರ್ಷದ ತರಗತಿಗೆ(ಮೇ 29ರವರೆಗೆ) 1,049 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಇನ್ನೂ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಕಾತರರಾಗಿದ್ದಾರೆ. ಆದರೆ, ಸ್ಥಳಾವಕಾಶದ ಕೊರತೆಯಿಂದಾಗಿ ಅವರಿಗೆ ಪ್ರವೇಶ ನೀಡಲು ಕಾಲೇಜಿನವರು ಹಿಂದೇಟು ಹಾಕುತ್ತಿದ್ದಾರೆ.

ಪ್ರಜಾವಾಣಿ ವಿಶೇಷ

ಈ ಮಹಾವಿದ್ಯಾಲಯ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳನ್ನು ಹೊಂದಿದ್ದು, 21 ತರಗತಿ ಕೊಠಡಿಗಳಿವೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದರಿಂದ ಬೆಳಿಗ್ಗೆ ವಿಜ್ಞಾನ, ಮಧ್ಯಾಹ್ನ ವಾಣಿಜ್ಯ ಮತ್ತು ಕಲಾ ವಿಭಾಗಗಳ ತರಗತಿ ನಡೆಸಲಾಗುತ್ತಿದೆ. ಪ್ರಥಮ ವರ್ಷಕ್ಕೆ ಪ್ರವೇಶ ಪಡೆದಿರುವ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಈಗ ಲಭ್ಯವಿರುವ ಕೊಠಡಿ ಸಾಕಾಗಲಿವೆ. ಇನ್ನಷ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದರೆ, ಅವರಿಗೆ ಕೊಠಡಿಗಳನ್ನು ಹೊಂದಿಸುವುದಾದರೂ ಹೇಗೆ ಎಂಬುದು ಉಪನ್ಯಾಸಕರ ಚಿಂತೆ.

ಕಾಲೇಜಿನಲ್ಲಿರುವ ಸೌಲಭ್ಯಗಳು: ಸುಸಜ್ಜಿತ ಕಟ್ಟಡ ಹೊಂದಿರುವ ಕಾಲೇಜಿನಲ್ಲಿ 6 ವಿಜ್ಞಾನ ಪ್ರಯೋಗಾಲಯಗಳು, ಒಂದು ಕಂಪ್ಯೂಟರ್ ಲ್ಯಾಬ್ ಇದೆ. ವಿವಿಧ ಕಲಿಕಾ ಸೌಕರ್ಯಗಳನ್ನು ಒದಗಿಸಲು ಕಳೆದ ಐದು ವರ್ಷಗಳಲ್ಲಿ ಶಾಸಕ ಮಹಾಂತೇಶ ಕೌಜಲಗಿ ಈ ಕಾಲೇಜಿಗೆ ₹ 3.5 ಕೋಟಿ ಅನುದಾನವನ್ನು ತಂದಿದ್ದಾರೆ.

ಬೇಡಿಕೆ ಹೆಚ್ಚಲು ಕಾರಣವೇನು?: 'ನಮ್ಮಲ್ಲಿ 8 ಮಂದಿ ಪೂರ್ಣಕಾಲಿಕ ಉಪನ್ಯಾಸಕರು, 42 ಅತಿಥಿ ಉಪನ್ಯಾಸಕರಿದ್ದೇವೆ. ಪರೀಕ್ಷಾ ಫಲಿತಾಂಶ ಸುಧಾರಣೆಗಾಗಿ ಪ್ರತಿ ಭಾನುವಾರ ವಿಶೇಷ ತರಗತಿ ನಡೆಸುತ್ತಿದ್ದೇವೆ. ಪರಿಣಾಮಕಾರಿಯಾಗಿ ಪಾಠ ಬೋಧಿಸುತ್ತೇವೆ. ಪರೀಕ್ಷೆಗಳು ಸಮೀಪಿಸಿದಾಗ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಶೈಕ್ಷಣಿಕ ಕಾರ್ಯಾಗಾರ ನಡೆಸುತ್ತೇವೆ. ಪ್ರವೇಶ ಶುಲ್ಕವೂ ಅತಿ ಕಡಿಮೆ. ಹಾಗಾಗಿ ನಮ್ಮ ಕಾಲೇಜಿನಲ್ಲಿ ಪ್ರವೇಶಕ್ಕೆ ಬೇಡಿಕೆ ಹೆಚ್ಚಿದೆ' ಎನ್ನುತ್ತಾರೆ ಉಪನ್ಯಾಸಕರಾದ ಬಸವರಾಜ ಪುರಾಣಿಕಮಠ, ಬಿ.ಎಂ. ಕೊಳವಿ.

2022-23ನೇ ಸಾಲಿನ ಪಿಯು ದ್ವಿತೀಯ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಕಾಲೇಜು ಶೇ 92.59 ಫಲಿತಾಂಶ ದಾಖಲಿಸಿದೆ. 21 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ 100ಕ್ಕೆ 100 ಅಂಕ ಗಳಿಸಿದ್ದಾರೆ. ಇದೇ ವರ್ಷ ಸಹನಾ ಕಡಕೋಳ ಎಂಬ ವಿದ್ಯಾರ್ಥಿನಿ ಕಲಾ ವಿಭಾಗದಲ್ಲಿ 600ಕ್ಕೆ 592 ಅಂಕ ಗಳಿಸಿ ರಾಜ್ಯಕ್ಕೆ 3ನೇ ಸ್ಥಾನ ಗಳಿಸಿದ್ದಾರೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಸಾಧನೆಯಲ್ಲಿ ವಿದ್ಯಾರ್ಥಿಗಳು ಮುಂದಿದ್ದಾರೆ.

ಬೈಲಹೊಂಗಲದ ಸರ್ಕಾರಿ ಪಿಯು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಸೋಮವಾರ ವಿದ್ಯಾರ್ಥಿನಿಯರು ಸರದಿ ಸಾಲಿನಲ್ಲಿ ನಿಂತಿದ್ದರು

ಪ್ರಜಾವಾಣಿ ಚಿತ್ರ: ರವಿ ಹುಲಕುಂದ

ಶಾಸಕರು, ಕಾಲೇಜು ಅಭಿವೃದ್ಧಿ ಸಮಿತಿಯ ಸಹಕಾರ, ಉಪನ್ಯಾಸಕರ ಪ್ರಾಮಾಣಿಕ ಪ್ರಯತ್ನದಿಂದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಾಧ್ಯವಾಗುತ್ತಿದೆ. ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಿದೆ

ಬಸವರಾಜ ಕುರಿ, ಪ್ರಭಾರ ಪ್ರಾಚಾರ್ಯ

ಬೈಲಹೊಂಗಲ ಸರ್ಕಾರಿ ಪಿಯು ಕಾಲೇಜಿನಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿದೆ. ನುರಿತ ಉಪನ್ಯಾಸಕರ ಬಳಗವಿದೆ. ಪರೀಕ್ಷೆ ಫಲಿತಾಂಶವೂ ಉತ್ತಮವಿದೆ. ಹಾಗಾಗಿ ಇಲ್ಲಿ ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆದಿದ್ದೇನೆ

ಲಕ್ಷ್ಮಿ ಹಿರೇಮಠ, ವಿದ್ಯಾರ್ಥಿನಿ

5 ಕೊಠಡಿ ಮಂಜೂರಾಗಿವೆ

'ಬೈಲಹೊಂಗಲ ಸರ್ಕಾರಿ ಪಿಯು ಕಾಲೇಜಿಗೆ 5 ತರಗತಿ ಕೊಠಡಿ ಮಂಜೂರಾಗಿದ್ದು, ಶೀಘ್ರವೇ ಕಾಮಗಾರಿ ಆರಂಭಿಸಿ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲ ಕಲ್ಪಿಸಲಾಗುವುದು. ಉಪನ್ಯಾಸಕರ ಕೊರತೆ ನೀಗಿಸಲು ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಲಾಗುವುದು' ಎಂದು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆಗಿರುವ ಶಾಸಕ ಮಹಾಂತೇಶ ಕೌಜಲಗಿ 'ಪ್ರಜಾವಾಣಿ'ಗೆ ತಿಳಿಸಿದರು.

20 ಸಾವಿರ ಹೆಕ್ಟೇರ್ ಬೆಳೆ ನಾಶ

ಸಮೀಕ್ಷೆ ನಡೆಸಿ ವರದಿ ಸಲ್ಲಿಸಿ; ಅಧಿಕಾರಿಗಳಿಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ರಾಜ್ಯದಲ್ಲಿ ಈಚೆಗೆ ಸುರಿದಿರುವ ಮುಂಗಾರು ಪೂರ್ವ ಮಳೆಗೆ 20 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆ ಹಾನಿಯಾಗಿದೆ. ಕೂಡಲೇ ಈ ಕುರಿತು ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಿದ್ದು, ಎಸ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ಪರಿಹಾರಕ್ಕೆ ಕೇಂದ್ರ ಸರ್ಕಾರಕ್ಕೆ ವರದಿ ಕಳಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮುಖ್ಯಮಂತ್ರಿಯಾದ ಬಳಿಕ ಇದೇ ಮೊದಲ ಬಾರಿಗೆ ದಾವಣಗೆರೆಗೆ ಭೇಟಿ ನೀಡಿದ ಅವರು, ಜಿಲ್ಲಾ ಪಂಚಾಯಿತಿ ಸಭಾಭವನದಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

'ಜೂನ್ 9ರಂದು ಮುಂಗಾರು ಪ್ರವೇಶಿಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರೈತರಿಗೆ ಸಕಾಲಕ್ಕೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕ ಒದಗಿಸಲು ಮುಂಚಿತವಾಗಿಯೇ ಸಿದ್ಧವಾಗಿರಬೇಕು. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಮಾಡಿದಂತೆ ಆಗಬಾರದು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರ ದುರುಪಯೋಗ; ನಿರ್ದಾಕ್ಷಿಣ್ಯ ಕ್ರಮ: 'ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರದ ಬಗ್ಗೆ ವ್ಯಾಪಕ ದೂರು ಬರುತ್ತಿದ್ದು, ಜಿಲ್ಲಾಧಿಕಾರಿ ಹಾಗೂ ಸಿಇಒಗಳು ಹವಾನಿಯಂತ್ರಿತ ವ್ಯವಸ್ಥೆಯಡಿ ಕೂತು ಕೆಲಸ ಮಾಡದೇ, ತಾಲ್ಲೂಕು, ಗ್ರಾಮ ಮಟ್ಟದ ಕಚೇರಿಗೂ ಭೇಟಿ ನೀಡಿ ಭ್ರಷ್ಟಾಚಾರ ನಡೆಯದಂತೆ ಎಚ್ಚರ ವಹಿಸಬೇಕು. ಅಧಿಕಾರ ದುರುಪಯೋಗ ಮಾಡಿಕೊಳ್ಳುವ ಸಿಬ್ಬಂದಿಗೆ ಇಲ್ಲಿ ಜಾಗವಿಲ್ಲ. ಅಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು' ಎಂದು ಮುಖ್ಯಮಂತ್ರಿ ಎಚ್ಚರಿಸಿದರು.

'ನಾವು ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳನ್ನು ಜಾರಿಗೊಳಿಸಬೇಕಿದೆ. ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಬಜೆಟ್ ಗಾತ್ರ ನಿರ್ಧರಿಸಲಾಗುವುದು. ಈ ಕುರಿತು ಈಗಲೇ ಏನನ್ನೂ ಹೇಳಲಾಗದು' ಎಂದರು.

'ವಿದ್ಯುತ್ ಶುಲ್ಕವನ್ನು ನಾವು ಹೆಚ್ಚಿಸಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಮಂಡಳಿ ದರ ಹೆಚ್ಚಳಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಈಗ ನಾವು ಅದನ್ನು ಜಾರಿಗೊಳಿಸಿದ್ದೇವೆ ಅಷ್ಟೇ' ಎಂದು ವಿದ್ಯುತ್ ದರ ಹೆಚ್ಚಳವನ್ನು ಸಮರ್ಥಿಸಿಕೊಂಡ ಅವರು, 'ಇಂದಿರಾ ಕ್ಯಾಂಟೀನ್ ಪುನರಾರಂಭದ ಕುರಿತು ಸಿದ್ಧತೆ ಕೈಗೊಳ್ಳಲು ಸೂಚಿಸಿದ್ದೇನೆ. ಟೆಂಡರ್‌ದಾರರಿಗೆ ಬಾಕಿ ಉಳಿದಿರುವ ಬಿಲ್, ಅಲ್ಲಿನ ನೌಕರರಿಗೆ ಸಂಬಳ ಕೊಡಿಸಬೇಕಿದೆ' ಎಂದು ಹೇಳಿದರು.

ಗೋಹತ್ಯೆ ನಿಷೇಧ: ಸಂಪುಟ ಸಭೆಯಲ್ಲಿ ಚರ್ಚೆ

'ಗೋಹತ್ಯೆ ನಿಷೇಧ ಕಾಯ್ದೆ ವಾಪಸಾತಿ ನಿರ್ಧಾರ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, '1964ರಲ್ಲಿಯೇ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ಬಂದಿದೆ. ಅದರ ಪ್ರಕಾರ 12 ವರ್ಷ ತುಂಬಿದ ರಾಸುಗಳು, ಬರಡು ರಾಸು, ವ್ಯವಸಾಯಕ್ಕೆ ಉಪಯೋಗವಿಲ್ಲದ ರಾಸುಗಳ ವಧೆಗೆ ಅವಕಾಶವಿತ್ತು. ಬಿಜೆಪಿ ಸರ್ಕಾರ ಆ ಕಾಯ್ದೆಗೆ ತಿದ್ದುಪಡಿ ತಂದಿದೆ. ಸಚಿವ ಕೆ.ವೆಂಕಟೇಶ್ ಈ ಕುರಿತು ಸರಿಯಾಗಿ ಮಾಹಿತಿ ನೀಡಿಲ್ಲ. ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸುತ್ತೇವೆ' ಎಂದರು.

ಎಂ.ಡಿ ಅಮಾನತು

ಒಂದನೇ ಪುಟದಿಂದ...

ಅಲ್ಲದೆ, ನಿಗಮದ ಒಡೆತನದಲ್ಲಿ ಪೀಣ್ಯ ಎರಡನೇ ಹಂತದಲ್ಲಿರುವ ಪ್ರಿಯದರ್ಶಿನಿ ಬಟ್ಟೆ ಸಂಸ್ಕರಣಾ ಕೇಂದ್ರದ 2 ಎಕರೆ 34 ಗುಂಟೆ ಜಾಗದಲ್ಲಿರುವ ಏಳು ಕೈಗಾರಿಕಾ ಶೆಡ್‌ಗಳನ್ನು ಗುತ್ತಿಗೆ ಆಧಾರದಲ್ಲಿ ನೀಡಲು ವಿವಿಧ ಅಳತೆಯ ನಾಲ್ಕು ಭಾಗಗಳಾಗಿ ವಿಂಗಡಿಸಿದ್ದ ಮುದ್ದಯ್ಯ ಪ್ರತಿ ಭಾಗಕ್ಕೆ ₹2 ಲಕ್ಷ ಬಾಡಿಗೆ ನಿಗದಿಪಡಿಸಿದ್ದರು. ಬಾಡಿಗೆ ನಿಗದಿಪಡಿಸುವ ಮೊದಲು ಸಕ್ಷಮ ಪ್ರಾಧಿಕಾರದಿಂದ ಮಾರುಕಟ್ಟೆ ದರ ಕುರಿತು ವರದಿ ಪಡೆಯದೆ, 22 ವರ್ಷ ಬಾಡಿಗೆಗೆ ನೀಡಲು ತಮ್ಮ ಹಂತದಲ್ಲೇ ತೀರ್ಮಾನಿಸಿ ಅಲ್ಪಾವಧಿ ಟೆಂಡರ್ ಕರೆದಿದ್ದರು. ಕೆಟಿಟಿಪಿ ನಿಯಮದ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ ಟೆಂಡರ್ ಕರೆಯದೆ ನಿಯಮ ಉಲ್ಲಂಘಿಸಿರುವುದು ಪತ್ತೆಯಾಗಿದೆ.

ಈ ಎರಡೂ ಪ್ರಕರಣಗಳಲ್ಲಿ ಮುದ್ದಯ್ಯ ಕರ್ತವ್ಯ ದುರುಪಯೋಗ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಶಿಸ್ತು ಕ್ರಮ ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಜವಳಿ) ಉಪ ಕಾರ್ಯದರ್ಶಿಯು ಆದೇಶದಲ್ಲಿ ವಿವರಿಸಿದ್ದಾರೆ.

ಕೊಳೆತ ಸ್ಥಿತಿಯಲ್ಲಿ ಆನೆಯ ದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ನಲ್ವತ್ತೊಕ್ಲು ಗ್ರಾಮದಲ್ಲಿ, ಕೊಳೆತ ಸ್ಥಿತಿಯಲ್ಲಿ ಕಾಡಾನೆ ಶವ ಪತ್ತೆಯಾಗಿದೆ.

20 ವರ್ಷದ ಗಂಡಾನೆಯು ವಿದ್ಯುತ್ ಆಘಾತದಿಂದ 4ರಿಂದ 5 ದಿನದ ಹಿಂದೆಯೇ ಮೃತಪಟ್ಟಿರಬಹುದು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ ತಂತಿಗಳು ಸುಮಾರು 30 ಅಡಿಯಷ್ಟು ಎತ್ತರದಲ್ಲಿದ್ದರೂ ಮೃತದೇಹದ ಮೇಲೆ ವಿದ್ಯುತ್ ಆಘಾತದಿಂದ ಉಂಟಾಗಿರುವ ಸುಟ್ಟ ಕಲೆಗಳು ಪತ್ತೆಯಾಗಿವೆ.

ಸ್ಥಳಕ್ಕೆ ಅರಣ್ಯ ಅಧಿಕಾರಿಗಳ ಜತೆಗೆ ಸೆಸ್ಕ್ ಅಧಿಕಾರಿಗಳ ತಂಡವೂ ಪರಿಶೀಲನೆ ಭೇಟಿ ನೀಡಿತ್ತು.

'ವಿದ್ಯುತ್ ಕಂಬಕ್ಕೆ ಕಟ್ಟಿರುವ ತಂತಿಗೆ ಸಿಡಿಲು ಹೊಡೆದಾಗ ವಿದ್ಯುತ್ ಹರಿದು ಅದನ್ನು ಸ್ಪರ್ಶಿಸಿ ಆನೆ ಸತ್ತಿರುವ ಸಾಧ್ಯತೆ ಇದೆ' ಎಂದು ಅವರು ಹೇಳಿದ್ದಾರೆ. ಸ್ಥಳಕ್ಕೆ ತೆರಳಿದ ಡಿಸಿಎಫ್ ಶರಣ ಬಸಪ್ಪ ಪರಿಶೀಲನೆ ನಡೆಸಿದರು.

'ಮರಣೋತ್ತರ ಪರೀಕ್ಷೆ ಬಂದ ಬಳಿಕವಷ್ಟೇ ಸಾವಿಗೆ ನಿಖರ ಕಾರಣ ಸಿಗಲಿದೆ' ಎಂದು ಆನೆ ಕಾರ್ಯಪಡೆ ಡಿಸಿಎಫ್ ಪೂವಯ್ಯ ತಿಳಿಸಿದರು.

ಬಾರ್ ಕ್ಯಾಶಿಯರ್ ಕೊಲೆ: ಆರೋಪಿ ಕಾಲಿಗೆ ಗುಂಡೇಟು

ಆಯನೂರಿನಲ್ಲಿ ಪೊಲೀಸರ ಎದುರೇ ನಡೆದಿದ್ದ ಘಟನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ತಾಲ್ಲೂಕಿನ ಕುಂಸಿಯ ಬಾರ್ ಒಂದರಲ್ಲಿ ಭಾನುವಾರ ರಾತ್ರಿ ಕುಡಿಯುತ್ತ ಕುಳಿತಿದ್ದವರಿಗೆ, ಬಿಲ್ ಕೊಟ್ಟು ಮನೆಗೆ ಮರಳುವಂತೆ ಮನವಿ ಮಾಡಿದ್ದ ಕ್ಯಾಶಿಯರ್‌ಗೆ ಪೊಲೀಸರ ಎದುರೇ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದ ಮೂವರು ಆರೋಪಿಗಳಲ್ಲಿ ಒಬ್ಬನ ಕಾಲಿಗೆ ಗುಂಡು ಹೊಡೆದು ಬಂಧಿಸಲಾಗಿದೆ.

ಆಯನೂರು ಕೋಟೆ ತಾಂಡಾದ ನಿವಾಸಿ ಸತೀಶ ನಾಯ್ಕ ಗುಂಡೇಟು ತಿಂದ ಆರೋಪಿ. ಬಂಧಿಸಲು ತೆರಳಿದ್ದ ಕುಂಸಿ ಠಾಣೆ ಇನ್‌ಸ್ಪೆಕ್ಟರ್ ಪ್ರವೀಣ್ ಹಾಗೂ ಕಾನ್‌ಸ್ಟೆಬಲ್ ಶಿವರಾಜ್ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದಾಗ ಪಿಎಸ್‌ಐ ರಾಜುರೆಡ್ಡಿ ಆರೋಪಿಯ ಕಾಲಿಗೆ ಗುಂಡು ಹೊಡೆದಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್ ತಿಳಿಸಿದ್ದಾರೆ.

ಆರೋಪಿ ಹಾಗೂ ಗಾಯಾಳು ಪೊಲೀಸರನ್ನು ಚಿಕಿತ್ಸೆಗಾಗಿ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಅದೇ ತಾಂಡಾದ ನಿವಾಸಿಗಳಾದ ನಿರಂಜನ್ ನಾಯ್ಕ ಹಾಗೂ ಅಶೋಕ ನಾಯ್ಕ ಎಂಬುವವರನ್ನು ಬಂಧಿಸಲಾಗಿದೆ. ಕುಡಿದ ಮತ್ತಿನಲ್ಲಿ ಮೂವರೂ ಬಾರ್‌ನಲ್ಲಿ ದಾಂಧಲೆ ನಡೆಸಿದ ಸಂದರ್ಭ ಮನೆಗೆ ತೆರಳುವಂತೆ ಸೂಚಿಸಿದ್ದ ಕ್ಯಾಶಿಯರ್, ಸೊರಬದ ಸಚಿನ್ ಕುಮಾರ್ (27) ಪೊಲೀಸರಿಗೆ ಕರೆ ಮಾಡಿ ಕರೆದಿದ್ದರು. ಪೊಲೀಸರ ಎದುರೇ ಮೂವರು ಚಾಕುವಿನಿಂದ ಇರಿದಿದ್ದರಿಂದ ಸಾವಿಗೀಡಾಗಿದ್ದರು.

ಕಾನೂನು–ಸುವ್ಯವಸ್ಥೆ ಪಾಲನೆ ಹಿನ್ನೆಲೆಯಲ್ಲಿ ಇಂತಹ ಸಂಗತಿ ಪುನರಾವರ್ತನೆ ಆಗದಂತೆ ತಡೆಯಲು ಮುಂದಿನ ದಿನಗಳಲ್ಲಿ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳಲಾಗುವುದು

ಜಿ.ಕೆ.ಮಿಥುನ್‌ಕುಮಾರ್, ಶಿವಮೊಗ್ಗ ಎಸ್ಪಿ

'ಶಾಂತಿಯುತ ಕರ್ನಾಟಕ' ಸಹಾಯವಾಣಿಗೆ ಸಲಹೆ

ಬೆಂಗಳೂರು: ರಾಜ್ಯದಲ್ಲಿ ಯಾವುದೇ ರೀತಿಯ ದ್ವೇಷ ಹರಡದಂತೆ ಮತ್ತು ಅಂತಹ ಅನಪೇಕ್ಷಿತ ಘಟನೆಗಳ ಬಗ್ಗೆ ಕಣ್ಗಾವಲು ಇರಿಸಲು 'ಶಾಂತಿಯುತ ಕರ್ನಾಟಕ' ಎಂಬ ಹೊಸ ಸಹಾಯವಾಣಿ ಆರಂಭಿಸಬೇಕು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸಲಹೆ ನೀಡಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, 'ನಮ್ಮ ಗುರಿ ಅಭಿವೃದ್ಧಿ ಮತ್ತು ಪ್ರಗತಿ ಹಾಗೂ ಬ್ರ್ಯಾಂಡ್ ಕರ್ನಾಟಕ ರಕ್ಷಿಸುವುದು. ಆದ್ದರಿಂದ ಸಹಾಯವಾಣಿ ಆರಂಭಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪಾಟೀಲ ಮನವಿ ಮಾಡಿದ್ದಾರೆ.

ಐಪಿಎಸ್ ಅಧಿಕಾರಿ ಡಿ.ರೂಪಾ ಅರ್ಜಿ

ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ತಮ್ಮ ವಿರುದ್ಧ ಹೂಡಿರುವ ಮಾನನಷ್ಟಕ್ಕೆ ಸಂಬಂಧಿಸಿದ ಖಾಸಗಿ ದೂರನ್ನು ರದ್ದುಪಡಿಸುವಂತೆ ಕೋರಿ, ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಸಲ್ಲಿಸಿರುವ ಅರ್ಜಿ ವಿಚಾರಣೆಯಿಂದ ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಹಿಂದೆ ಸರಿದಿದ್ದಾರೆ.

ಈ ಕುರಿತಂತೆ ಡಿ.ರೂಪಾ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಸೋಮವಾರ ವಿಚಾರಣೆಗೆ ನಿಗದಿಯಾಗಿತ್ತು.

ಮುಖ್ಯಾಂಶಗಳು

- ₹ 1 ಕೋಟಿ ಮೊತ್ತದ ಮಾನನಷ್ಟ ಪ್ರಕರಣ
- ಪ್ರಕರಣ ರದ್ದುಗೊಳಿಸುವಂತೆ ಹೈಕೋರ್ಟ್‌ಗೆ ಮೊರೆ

ವಿಚಾರಣೆ ವೇಳೆ ನ್ಯಾಯಮೂರ್ತಿಗಳು, 'ನಾನು ಈ ಹಿಂದೆ ವಕೀಲಿಕೆ ಮಾಡುವಾಗ ಬೇರೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ರೋಹಿಣಿ ಸಿಂಧೂರಿ ಅವರನ್ನು ಪ್ರತಿನಿಧಿಸಿದ್ದೆ. ಹೀಗಾಗಿ, ಈ ಅರ್ಜಿ ವಿಚಾರಣೆ ನಡೆಸುವುದಿಲ್ಲ' ಎಂದು ಹಿಂದೆ ಸರಿಯುತ್ತಿರುವುದಕ್ಕೆ ಕಾರಣ ನೀಡಿದರು.

ಅರ್ಜಿಯನ್ನು ಬೇರೊಂದು ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಪಡಿಸುವಂತೆ ಕಡತವನ್ನು ಮುಖ್ಯ ನ್ಯಾಯಮೂರ್ತಿ ಅವರ ಮುಂದಿರಿಸಲು ರಿಜಿಸ್ಟ್ರಾರ್‌ಗೆ ನಿರ್ದೇಶಿಸಿದರು.

ಪ್ರಕರಣವೇನು?: 'ಡಿ.ರೂಪಾ ಮೌದ್ಗಿಲ್ 2023ರ ಫೆಬ್ರುವರಿ 18 ಮತ್ತು 19ರಂದು ತಮ್ಮ ಫೇಸ್ ಬುಕ್ ಖಾತೆಯಲ್ಲಿ ನನ್ನ ವಿರುದ್ಧ ಕೀಳು ಅಭಿರುಚಿಯಿಂದ ಕೂಡಿದ ಆರೋಪ ಮಾಡಿದ್ದಾರೆ. ಟಿ.ವಿ. ಮಾಧ್ಯಮಗಳಲ್ಲೂ ಹೇಳಿಕೆ ನೀಡಿದ್ದಾರೆ. ಈ ಆರೋಪಗಳು ನನ್ನ ತೇಜೋವಧೆ ಮಾಡುವ ದುರದ್ದೇಶದಿಂದ ಕೂಡಿವೆ. ಇದು ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿ, ಮಾನಸಿಕ ಯಾತನೆ ಉಂಟು ಮಾಡಿದೆ' ಎಂದು ಆರೋಪಿಸಿ ರೋಹಿಣಿ ಸಿಂಧೂರಿ ಮಾರ್ಚ್ 3ರಂದು ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. 'ಪರಿಹಾರವಾಗಿ ₹ 1 ಕೋಟಿ ನೀಡಲು ಡಿ. ರೂಪಾಗೆ ಆದೇಶಿಸಬೇಕು ಮತ್ತು ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದರು.

ದೂರನ್ನು ಪರಿಗಣಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ರೂಪಾ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಲು ಆದೇಶಿಸಿತ್ತು. ಪ್ರಕರಣ ರದ್ದುಪಡಿಸುವಂತೆ ಕೋರಿ ರೂಪಾ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಅವರ ವಕೀಲ ಮಧುಕರ್ ದೇಶಪಾಂಡೆ ವಕಾಲತ್ತು ವಹಿಸಿದ್ದಾರೆ.

ಕರಾರುವಕ್ಕಾದ ಮಾಹಿತಿ ಕೊಡುವ 'ಧಾಮಿನಿ', 'ಸಿಡಿಲು'

ಸಿಡಿಲಿನ ಮುನ್ಸೂಚನೆ ನೀಡುವ ಆ್ಯಪ್

● ಕೆ.ಎಸ್.ಗಿರೀಶ

ಮಡಿಕೇರಿ: ಮುಂಗಾರು ಪೂರ್ವದಲ್ಲಿ ಬರುವ ಸಿಡಿಲಿನ ಮುನ್ಸೂಚನೆ ನೀಡುವ ಎರಡು ಅಧಿಕೃತ ಆ್ಯಪ್‌ಗಳು ಸಕ್ರಿಯವಾಗಿವೆ. ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ರೂಪಿಸಿರುವ 'ಸಿಡಿಲು' ಆ್ಯಪ್ ಸಿಡಿಲು ಉಂಟಾಗುವ ಕೆಲ ನಿಮಿಷಗಳ ಮುನ್ನ ಮುನ್ಸೂಚನೆ ನೀಡುತ್ತದೆ. ಭಾರತೀಯ ಹವಾಮಾನ ಇಲಾಖೆಯ 'ಧಾಮಿನಿ' ಆ್ಯಪ್ ಕೂಡ ನೋಟಿಫಿಕೇಶನ್ ರವಾನಿಸುತ್ತದೆ.

'ಸಿಡಿಲು' ಆ್ಯಪ್‌ನಲ್ಲಿ ನಾವಿರುವ ಸ್ಥಳ ಹಾಗೂ ಸುತ್ತಲಿನ 5 ಕಿ.ಮೀ ವ್ಯಾಪ್ತಿಯಲ್ಲಿ ಸೂಚನೆಗಳು ಬರಲಾರಂಭಿಸುತ್ತವೆ. ಒಂದು ಕಿ.ಮೀ ವ್ಯಾಪ್ತಿಯಲ್ಲಿ ಸಿಡಿಲು ಉಂಟಾಗುತ್ತಿದ್ದಂತೆ 'ಮನೆಯ ಒಳಗಿರಿ ಸಿಡಿಲು ಬರುತ್ತದೆ' ಎಂಬ ಮಾಹಿತಿ ರವಾನಿಸುತ್ತದೆ. ಇದರ ಆಧಾರದ ಮೇಲೆ ಸಿಡಿಲನ್ನು ಮುಂಚಿತವಾಗಿಯೇ ಗ್ರಹಿಸಿ ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆಯಬಹುದು.

ಮಳೆ ಮೋಡಗಳ ಹಾದಿ, ಅದರ ಚಲನವಲನಗಳನ್ನೂ ಸಚಿತ್ರವಾಗಿ ಆ್ಯಪ್‌ನಲ್ಲಿ ನೋಡಬಹುದು. ಮಳೆ ಮೋಡಗಳು ಎಷ್ಟು ವ್ಯಾಪ್ತಿಯಲ್ಲಿವೆ, ಅವುಗಳ ಸಾಂದ್ರತೆ ಎಷ್ಟು ಎಂಬುದರ ಮಾಹಿತಿಯೂ ಈ ಆ್ಯಪ್ ಲಭ್ಯವಾಗುತ್ತದೆ.



'ಧಾಮಿನಿ' ಮತ್ತು 'ಸಿಡಿಲು' ಆ್ಯಪ್‌ನಲ್ಲಿ ಸಿಡಿಲಿನ ಮುನ್ಸೂಚನೆ ಬಂದಿರುವುದು

ಮುನ್ಸೂಚನೆ ನೀಡಲೆಂದೇ ಕೇಂದ್ರ ಸರ್ಕಾರದ ಭೂವಿಜ್ಞಾನ ಇಲಾಖೆ 'ಧಾಮಿನಿ' ಎಂಬ ಆ್ಯಪ್ ರೂಪಿಸಿದೆ. ಇದರಲ್ಲಿ 21 ನಿಮಿಷಗಳಿಂದ ಸುತ್ತಲಿನ 40 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಸಿಡಿಲು ಉಂಟಾಗಿದೆ ಎಂಬ ಮಾಹಿತಿ ಸಿಗುತ್ತದೆ. 40 ಕಿ.ಮೀ. ದೂರದಲ್ಲಿ ಸಿಡಿಲು ಬಂದರೆ ಹಳದಿ ಬಣ್ಣದಲ್ಲಿ 20 ಕಿ.ಮೀ. ವ್ಯಾಪ್ತಿಯಲ್ಲಿ ಸಿಡಿಲು ಬಂದರೆ ಕೆಂಪು ಬಣ್ಣದಲ್ಲಿ ಮುನ್ಸೂಚನೆ ನೀಡುತ್ತದೆ. ಜೊತೆಗೆ, ಸಿಡಿಲಿನ ಸಾಧ್ಯತೆ ಹೆಚ್ಚಾದರೆ ಮೊಬೈಲ್‌ಗೆ ನೇರವಾಗಿ ನೋಟಿಫಿಕೇಶನ್ ಸಹ ಬರುತ್ತದೆ.

ಅರಿವಿನ ಕೊರತೆ: 'ಈ ಎರಡೂ ಆ್ಯಪ್‌ಗಳ ಕುರಿತು ಹೆಚ್ಚಿನ ಅರಿವು ಜನರಲ್ಲಿ ಇಲ್ಲ. ವಿದ್ಯಾವಂತರು ಸುಲಭವಾಗಿ ಈ ಆ್ಯಪ್ ಅನ್ನು ಬಳಸುತ್ತಾರೆ. ಆದರೆ ಹಳ್ಳಿಗರ ಪಾಲಿಗೆ ಕಷ್ಟ ಎನಿಸಿದೆ. ಬಹುತೇಕ ಮಂದಿಗೆ ಇಂಥದ್ದೊಂದು ಆ್ಯಪ್ ಇದೆ ಎನ್ನುವುದು ತಿಳಿದಿಲ್ಲ.

ಸಿಡಿಲಿಗೆ ಹೆಚ್ಚಾಗಿ ಕುರಿಗಾಹಿಗಳು ಹಾಗೂ ಹೊಲದಲ್ಲಿ ಉಳುಮೆ ಮೊದಲಾದ ಕೆಲಸ ಮಾಡುವವರೆ ಬಲಿಯಾಗುತ್ತಿದ್ದಾರೆ. ಇವರಲ್ಲಿ ಬಹುತೇಕ ಸ್ಮಾರ್ಟ್ ಫೋನ್ ಇಲ್ಲ. ಹಾಗಾಗಿ, ಇಲಾಖೆಗಳು ರೂಪಿಸಿರುವ ಈ ಆ್ಯಪ್‌ಗಳು ಸಿಡಿಲಿನಿಂದಾಗುವ ಪ್ರಾಣಹಾನಿ ತಪ್ಪಿಸುವಲ್ಲಿ ಯಶಸ್ವಿಯಾಗಿಲ್ಲ' ಎಂದು ಹೇಳುತ್ತಾರೆ ಅಧಿಕಾರಿಗಳು

> 'ಧಾಮಿನಿ' ಮತ್ತು 'ಸಿಡಿಲು' ಆ್ಯಪ್‌ಗಳು ಸಿಡಿಲಿನ ಮುನ್ಸೂಚನೆ ನೀಡಲೆಂದೇ ರೂಪಿತವಾಗಿವೆ. ಜನರು ಇದನ್ನು ಬಳಸಿ ಸಿಡಿಲಿನಿಂದ ರಕ್ಷಿಸಿಕೊಳ್ಳಬಹುದು
>
> **ಎಸ್.ಕೆ.ಚೆಂಗಪ್ಪ,** ಹವಾಮಾನ ಪರಿವೀಕ್ಷಕ, ಜಿಲ್ಲಾ ಕೃಷಿ ಹವಾಮಾನ ಘಟಕ, ಗೋಣಿಕೊಪ್ಪಲು

ಮುಂಗಾರಿನಲ್ಲಿ ನಿದ್ದೆಗೆ ಜಾರುವ ಆ್ಯಪ್‌ಗಳು: ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ರೂಪಿಸಿರುವ 'ಸಿಡಿಲು' ಆ್ಯಪ್ ಮುಂಗಾರು ಮಳೆ ಆರಂಭವಾಗುತ್ತಿದ್ದಂತೆ ನಿಷ್ಕ್ರಿಯಗೊಳ್ಳುತ್ತದೆ. ಈ ವೇಳೆ ಮೋಡಗಳ ಚಲನವಲನಗಳನ್ನೂ ಅದು ತೋರಿಸುವುದಿಲ್ಲ. ಕೇವಲ ಮುಂಗಾರು ಪೂರ್ವ ಅವಧಿಯಲ್ಲಷ್ಟೇ ಇದು ಸಕ್ರಿಯವಾಗಿರುತ್ತದೆ.

ಈ ಎರಡೂ ಆ್ಯಪ್‌ಗಳನ್ನೂ ಗೂಗಲ್ ಪ್ಲೇಸ್ಟೋರ್ ನಲ್ಲಿ ಉಚಿತವಾಗಿ ಡೌನ್‌ಲೋಡ್ ಮಾಡಬಹುದಾಗಿದೆ.

ಜಾವಗಲ್: ಬಡಾವಣೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಜಾವಗಲ್ (ಹಾಸನ ಜಿಲ್ಲೆ): ಅರಕಲಗೂಡು ತಾಲ್ಲೂಕಿನ ಜಾವಗಲ್ ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ 2 ಗಂಟೆಗೂ ಹೆಚ್ಚು ಕಾಲ ಸುರಿದ ಭಾರಿ ಮಳೆಗೆ ಹಲವು ಬಡಾವಣೆಗಳು ಜಲಾವೃತಗೊಂಡವು. ನೀರನ್ನು ಹೊರ ಹಾಕಲು ಮನೆಗಳ ಮಾಲೀಕರು ಪರದಾಡಿದರು. ಚರಂಡಿ ನೀರು ಉಕ್ಕಿ ಹರಿದು ರಸ್ತೆಗಳು ನದಿಗಳಂತಾಗಿದ್ದವು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನೀರು ನಿಂತು ವಿದ್ಯಾರ್ಥಿಗಳು ಹೊರಬರಲು ಆಗಲಿಲ್ಲ.

ಜಾವಗಲ್ ಗ್ರಾಮದ ಸಂತೆ ಮೈದಾನದ ರಸ್ತೆಯಲ್ಲಿ ಮಳೆ ನೀರು ಶೇಖರಣೆ ಗೊಂಡಿರುವುದು

ದಕ್ಷಿಣ ಒಳನಾಡಿನಲ್ಲಿ ಬಿರುಗಾಳಿ ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಂಗಳವಾರ ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ. ಜತೆಗೆ, ಗಾಳಿಯು 30ರಿಂದ 40 ಕಿ.ಮೀ ವೇಗದಲ್ಲಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಉತ್ತರ ಒಳನಾಡು ಭಾಗದ ಕೆಲವು ಪ್ರದೇಶದಲ್ಲಿ ಗುಡುಗು ಮಿಂಚು ಸಹಿತ ಮಳೆಯಾಗಲಿದೆ ಎಂದು ಸೂಚನೆ ನೀಡಿದೆ.

ಸೋಮವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಕಳೆದ 24 ಗಂಟೆಗಳಲ್ಲಿ ವಿಜಯಪುರದ ತಾಳಿಕೋಟೆ, ಬೆಳಗಾವಿ ಬೈಲಹೊಂಗಲದಲ್ಲಿ ತಲಾ 4 ಸೆಂ.ಮೀ, ವಿಜಯಪುರದ ಬಿ.ಬಾಗೇವಾಡಿ, ಉತ್ತರ ಕನ್ನಡದ ಶಿರಾಳಿ, ಕೊಪ್ಪಳದ ಮುನಿರಾಬಾದ್, ಬೀದರ್‌ನಲ್ಲಿ 2 ಸೆಂ.ಮೀ ಮಳೆಯಾಗಿದೆ. ಉತ್ತರ ಕನ್ನಡದ ಕಾರವಾರ, ಉಡುಪಿಯ ಸಿದ್ದಾಪುರ, ಬೀದರ್‌ನ ನಿಟ್ಟೂರು, ರಾಜೇಶ್ವರ್, ಕಲಬುರಗಿಯ ಸೇಡಂ, ಗದಗ ನಗರಗುಂದ, ತುಮಕೂರಿನ ವೈ.ಎನ್. ಹೊಸಕೋಟೆಯಲ್ಲಿ ತಲಾ 1 ಸೆಂ.ಮೀ ಮಳೆ ಸುರಿದಿದೆ.

100ನೇ ವರ್ಷದ ಜನ್ಮ ದಿನೋತ್ಸವ

06.06.1923 – 08.06.1974

ಡಾ. ಎಂ. ಅಪ್ಪಾಜಿ

ಎಂ.ಬಿ.ಬಿ.ಎಸ್., ಪಿ.ಹೆಚ್‌ಡಿ.

ಮಾಜಿ ಡೀನ್, ಕಿದ್ವಾಯಿ ಮೆಮೋರಿಯಲ್ ಕ್ಯಾನ್ಸರ್ ಆಸ್ಪತ್ರೆ, ಬೆಂಗಳೂರು.

ಇವರ ಜನ್ಮ ಶತಾಬ್ದಿ ದಿನದಂದು ಸ್ಮರಿಸುವ ಹಾಗೂ ಅವರ ನೆನಪಿನಲ್ಲಿರುವ

ಮಗ, ಸೊಸೆ, ಮೊಮ್ಮಕ್ಕಳು, ಅಳಿಯಂದಿರು, ಮುಮ್ಮೊಕ್ಕಳು ಹಾಗೂ ಬಂಧು ವರ್ಗದವರು

ಅಭಿ–ಅವಿವಾ ವಿವಾಹ

ನಟ, ದಿವಂಗತ ಅಂಬರೀಶ್ ಹಾಗೂ ನಟಿ, ಸಂಸದೆ ಸುಮಲತಾ ಅವರ ಪುತ್ರ ನಟ ಅಭಿಷೇಕ್ ಅಂಬರೀಶ್ ಹಾಗೂ ಪ್ರಸಾದ್ ಬಿದ್ದಪ್ಪ ಅವರ ಪುತ್ರಿ ಅವಿವಾ ಬಿದ್ದಪ್ಪ ಜೋಡಿಯ ಮದುವೆ ಸೋಮವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಿತು. ನಟರಾದ ರಜನಿಕಾಂತ್, ಮೋಹನ್ ಬಾಬು, ಸುದೀಪ್, ಯಶ್ ಸೇರಿದಂತೆ ಚಿತ್ರರಂಗದ ಗಣ್ಯರು ಹೊಸ ಜೋಡಿಗೆ ಹಾರೈಸಿದರು.

ಅನುಚಿತ ವರ್ತನೆ: ಸಂತ್ರಸ್ತನ ದೂರು

ಮಂಗಳೂರು: 'ಸೋಮೇಶ್ವರ ಕಡಲ ಕಿನಾರೆಯಲ್ಲಿ ನಮ್ಮ ಮೇಲೆ ಈಚೆಗೆ ಮತೀಯ ಗೂಂಡಾಗಿರಿ ನಡೆದ ಸಂದರ್ಭದಲ್ಲಿ ಸ್ಥಳೀಯ ಪೊಲೀಸ್ ಠಾಣೆಯ ಸಿಬ್ಬಂದಿಯೂ ನನ್ನ ಮೇಲೆ ಹಲ್ಲೆ ನಡೆಸಿ, ಅನುಚಿತವಾಗಿ ವರ್ತಿಸಿದ್ದಾರೆ' ಎಂದು ಈ ಪ್ರಕರಣದ ಸಂತ್ರಸ್ತ ವಿದ್ಯಾರ್ಥಿಯೊಬ್ಬರು ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಆರ್. ಜೈನ್ ಅವರಿಗೆ ದೂರು ನೀಡಿದ್ದಾರೆ.

'ವಿದ್ಯಾರ್ಥಿಗಳ ಮೇಲೆ ನಡೆದ ಹಲ್ಲೆ ಪ್ರಕರಣದಲ್ಲಿ ಸಂತ್ರಸ್ತ ವಿದ್ಯಾರ್ಥಿಯೊಬ್ಬರು ಸ್ಥಳೀಯ ಠಾಣೆಯ ಸಿಬ್ಬಂದಿ ಅನುಚಿತವಾಗಿ ವರ್ತಿಸಿರುವ ಕುರಿತು ನೀಡಿರುವ ದೂರನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಈ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಅವರಿಗೆ ಸೂಚನೆ ನೀಡಿದ್ದೇನೆ. ಸ್ಥಳೀಯ ಠಾಣೆಯ ಸಿಬ್ಬಂದಿ ತಪ್ಪೆಸಗಿದ್ದರೆ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಿದ್ದೇವೆ' ಎಂದು ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

'ನಮ್ಮ ಮೇಲೆ ಹಲ್ಲೆ ನಡೆದ ಬಳಿಕ ಸ್ಥಳೀಯ ಠಾಣೆಯ ಪಿಎಸ್‌ಐ ನಮ್ಮನ್ನು ಠಾಣೆಗೆ ಕರೆಸಿಕೊಂಡು ಖಾಲಿ ಕಾಗದಕ್ಕೆ ಬಲವಂತದಿಂದ ಸಹಿ ಪಡೆದಿದ್ದರು. ಇದನ್ನು ಪ್ರಶ್ನಿಸಿದಾಗ ಅವರೂ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಸಂತ್ರಸ್ತ ವಿದ್ಯಾರ್ಥಿ ಪೊಲೀಸ್ ಕಮಿಷನರ್ ಅವರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ ಎಂದು ಗೊತ್ತಾಗಿದೆ.

ನಗರದ ಪ್ಯಾರಾ ಮೆಡಿಕಲ್ ಕಾಲೇಜಿನ ಮೂವರು ವಿದ್ಯಾರ್ಥಿನಿಯರು ಮೂವರು ವಿದ್ಯಾರ್ಥಿಗಳ ಜೊತೆ ಗುರುವಾರ ಸೋಮೇಶ್ವರ ಕಿನಾರೆಗೆ ತೆರಳಿದ್ದರು. ಯುವತಿಯರು ಬೇರೆ ಧರ್ಮದ ವಿದ್ಯಾರ್ಥಿಗಳ ಜೊತೆಗೆ ಕಿನಾರೆಗೆ ಬಂದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಸ್ಥಳೀಯ ವಿದ್ಯಾರ್ಥಿನಿಯ ಜೊತೆಗಿದ್ದ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದರು.

SAINIK SCHOOL KODAGU
(Under Ministry of Defence, Govt. of India)
PO Kudige Dist: Kodagu, Karnataka PIN: 571232

RECRUITMENT NOTIFICATION

Applications are invited for following vacancies at Sainik School Kodagu and the details are as follows:-

S. No.	Name of the Post	No. of Posts Type of Post	Age as on 06 JUN 2023	Category
1	Ward boys	06 (Contractual)	21-35 Years	Unreserved-05, OBC-01
2	Counsellor	01 (Contractual)	21-35 Years	Unreserved

How to Apply. For detailed Notification and Application Form, visit School website **www.sainikschoolkodagu.edu.in** from **07 Jun 2023 (Wednesday).** The School administration reserves the right to cancel any or all vacancies due to administrative reasons. Last date of receipt of filled in applications is **26 Jun 2023 (Monday).**

PRINCIPAL

ಕರ್ನಾಟಕ ಸರ್ಕಾರ

ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ

ಸರ್ಕಾರಿ ವಸತಿ ಪಾಠಶಾಲೆ ಕಟ್ಟಡ, ಸರ್ಕಾರಿ ವಿಜ್ಞಾನ ಕಾಲೇಜು ಎದುರು, ಚಿತ್ರದುರ್ಗ–577501. ಫೋ:08194–295954 e-mail : ddswdcta@gmail.com

ಸಂ:ಉನಿ/ಸಕಇ/ಚಿದು/ನಿಪಕೇಆಹಾರ ಟೆಂಡರ್/ಸಿಆರ್–01/2022–23 ದಿ: 01.06.2023

ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಚಿತ್ರದುರ್ಗ ತಾಲ್ಲೂಕಿನ ಗೋನೂರು ಗ್ರಾಮದಲ್ಲಿನ **ನಿರಾಶ್ರಿತರ ಪರಿಹಾರ ಕೇಂದ್ರ**ದಲ್ಲಿರುವ ನಿರಾಶ್ರಿತರಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಅವಶ್ಯಕ ಸಾಮಗ್ರಿಗಳನ್ನು ಪೂರೈಸಲು ಇ-ಪ್ರಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ಮಾಹಿತಿಯು ಈ ಕೆಳಕಂಡಂತಿದೆ. 1) Tender Number: SWD/2023-24/IND0014 Date: 01-06-2023 2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ: 1,29,53,787/– 3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 01–06–2023 4) ಪ್ರೀ ಬಿಡ್ ಸಭೆಯ ದಿ:09–06–2023/11.00 am 5) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 15–06–2023/5.00 pm 6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ: 17–06–2023/11.00 am 7) ಆರ್ಥಿಕ ಲಕೋಟೆ ತೆರೆಯುವ ದಿನಾಂಕ :– 19–06–2023/11.00 am 8) ಇ.ಎಂ.ಡಿ ಮೊತ್ತ ರೂ: 2,59,075/–

DIPR/CTA/KSMCA/30/2021-22

ಸಹಿ/ಉಪನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಚಿತ್ರದುರ್ಗ

'ಟೋಲ್' ಗಲಾಟೆ: ಸಿಬ್ಬಂದಿ ಕೊಲೆ

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯ ಬಿಡದಿ ಹೋಬಳಿ ಶೇಷಗಿರಿಹಳ್ಳಿ ಬೆಂಗಳೂರು–ಮೈಸೂರು ದಶಪಥ ಎಕ್ಸ್‌ಪ್ರೆಸ್ ವೇ ಟೋಲ್ ಪ್ಲಾಜಾ ಬಳಿ ಭಾನುವಾರ ರಾತ್ರಿ ಯುವಕರು ಗುಂಪೊಂದು ಟೋಲ್ ಸಿಬ್ಬಂದಿಯೊಬ್ಬರನ್ನು ಕೊಲೆ ಮಾಡಿದೆ.

ಪವನ್

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾರವರೆಕೆರೆಯ ಸಿಕ್ಕೆಪಾಳ್ಯದ ಪವನ್ ಕುಮಾರ್ ನಾಯಕ್ (26) ಕೊಲೆಯಾದವರು. ಭಾನುವಾರ ರಾತ್ರಿ 12 ಗಂಟೆ ಸುಮಾರಿಗೆ ಘಟನೆ ನಡೆದಿದೆ.

ಮೈಸೂರು ಕಡೆಯಿಂದ ಕಾರಿನಲ್ಲಿ ರಾತ್ರಿ 9.30ರ ಸುಮಾರಿಗೆ ಬೆಂಗಳೂರು ಮೂಲದ ನಾಲ್ಕೈದು ಯುವಕರ ಗುಂಪು ಟೋಲ್ ಪ್ಲಾಜಾ ಬಳಿ ಬಂದಿದೆ. ಶುಲ್ಕ ಪಾವತಿಸಿದ ಬಳಿಕ, ಬೂಮ್ ಬ್ಯಾರಿಯರ್ ತೆಗೆಯುವುದು ಸ್ವಲ್ಪ ವಿಳಂಬವಾಗಿದೆ.

ಇದರಿಂದ ಸಿಟ್ಟಿಗೆದ್ದ ಯುವಕರು ಸ್ಥಳದಲ್ಲಿದ್ದ ಪವನ್ ಹಾಗೂ ಸಿಬ್ಬಂದಿಯನ್ನು ನಿಂದಿಸಿದರು. ಇಬ್ಬರ ನಡುವಿನ ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿ, ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಘಟನೆ ಬಳಿಕ ಯುವಕರು ಟೋಲ್‌ನಿಂದ ಸ್ವಲ್ಪ ದೂರ ಕಾರು ನಿಲ್ಲಿಸಿಕೊಂಡಿದ್ದರು.

ಪವನ್ ಮತ್ತು ಮಂಜುನಾಥ್ ಅವರು ಕರ್ತವ್ಯ ಮುಗಿಸಿಕೊಂಡು ಹೋಗುವಾಗ, ಹಿಂಬಾಲಿಸಿಕೊಂಡು ಬಂದು ದೊಣ್ಣೆಯಿಂದ ಇಬ್ಬರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ. ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಪವನ್ ಸ್ಥಳದಲ್ಲಿ ಮೃತಪಟ್ಟರು.

ಗಂಭೀರವಾಗಿ ಗಾಯಗೊಂಡಿರುವ ಮಂಜುನಾಥ್ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಯುವಕರು ಹಾಗೂ ಟೋಲ್ ಸಿಬ್ಬಂದಿ ಹೊಡೆದಾಟ ದೃಶ್ಯ ಸಮೀಪದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಬಿಡದಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆ: ಟೋಲ್ ಸಿಬ್ಬಂದಿ ಕೊಲೆ ಖಂಡಿಸಿ, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಟೋಲ್ ಪ್ಲಾಜಾ ಬಳಿ ನಡೆಸಿದರು. ಪವನ್ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ದಿನದ 24 ಗಂಟೆ ಕೆಲಸ ಮಾಡುವ ಟೋಲ್ ಸಿಬ್ಬಂದಿಗೆ ರಕ್ಷಣೆ ಇಲ್ಲವಾಗಿದೆ. ರಾತ್ರಿ ಕೊಲೆಯಾದರೂ, ಸಂಬಂಧಪಟ್ಟವರು ತಕ್ಷಣ ಸ್ಥಳಕ್ಕೆ ಹೋಗಿಲ್ಲ ಎಂದು ದೂರಿದ ಕಾರ್ಯಕರ್ತರು, ಆರೋಪಿಗಳನ್ನು ತಕ್ಷಣ ಬಂಧಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಸಾಧ್ಯತೆ: ಬೊಮ್ಮಾಯಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಾಂಗ್ರೆಸ್ಸಿಗೆ ಎರಡೇ ದಿನದಲ್ಲಿ ಅಧಿಕಾರದ ಅಮಲು ಹೆಚ್ಚಾಗಿದೆ. ಜನರ ವಾಕ್ ಸ್ವಾತಂತ್ರ್ಯ ಕಿತ್ತುಕೊಂಡ ರೀತಿಯಲ್ಲಿ ಮಂತ್ರಿಗಳು ಮಾತನಾಡುತ್ತಿದ್ದಾರೆ. ಅತಿ ಶೀಘ್ರದಲ್ಲೇ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ತಲೆದೋರಬಹುದು' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದಲ್ಲಿ ಸೋಮವಾರ ಬಿಜೆಪಿ ಮುಖಂಡರ ಸಭೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಅವರು ತುರ್ತು ಪರಿಸ್ಥಿತಿ ಹೇರಿದರೂ ಬಿಜೆಪಿ ಅದಕ್ಕೆ ಅವಕಾಶ ನೀಡುವುದಿಲ್ಲ. ಜನರ ಪರವಾಗಿ ನಿಂತು ಹೋರಾಡುತ್ತದೆ' ಎಂದರು.

'ಗೋಹತ್ಯೆ ನಿಷೇಧ, ಪಠ್ಯಪುಸ್ತಕ ಪರಿಷ್ಕರಣೆ ಮುಂತಾದ ವಿಷಯಗಳ ಕುರಿತು ಮಂತ್ರಿಗಳು ಬೇಕಾಬಿಟ್ಟಿ ಮಾತನಾಡುತ್ತಿದ್ದಾರೆ. ಯಾರಾದರೂ ಸರ್ಕಾರನ್ನು ಪ್ರಶ್ನಿಸಿದರೆ ಜೈಲಿಗೆ ಹಾಕುತ್ತೇವೆ ಎಂದು ಹೆದರಿಸುತ್ತಿದ್ದಾರೆ. ಅಧಿಕಾರದ ಅಮಲು ನೆತ್ತಿಗೇರಿದೆ' ಎಂದು ದೂರಿದರು.

ಇದೇನು ಇಸ್ಲಾಂ ರಾಷ್ಟ್ರವಲ್ಲ: 'ಅಧಿಕಾರಿಗಳು ಕೆಲಸ ಮಾಡದಿದ್ದರೆ ಚಾಕುವಿನಿಂದ ಹೊಡೆಯುತ್ತೇವೆ, ಜೈಲಿಗೆ ಹಾಕುತ್ತೇವೆ ಎಂದು ಸ್ವತಃ ಸಚಿವರೇ ಹೇಳುತ್ತಿದ್ದಾರೆ. ಜನ ಕೊಟ್ಟ ಅಧಿಕಾರವನ್ನು ಈ ರೀತಿ ದುರುಪಯೋಗ ಮಾಡಿಕೊಳ್ಳಬಾರದು. ತಾಕತ್ತು ಬಳಸಿ ಜನರನ್ನೇ ಮಣಿಸುತ್ತೇವೆ ಎನ್ನಲು ಇದೇನು ಇಸ್ಲಾಂ ರಾಷ್ಟ್ರವಲ್ಲ' ಎಂದೂ ಬೊಮ್ಮಾಯಿ ಕಿಡಿ ಕಾರಿದರು.

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3 ಮತ್ತು 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001. E-Mail: splocaima21@gmail.com ದೂರವಾಣಿ ಸಂಖ್ಯೆ : 080–29565353, 29566556

No. SPLOCA/ADM/GEN/09/2023-24 Date: 02/06/2023

ಟೆಂಡರ್ ಪ್ರಕಟಣೆ

The SPECIAL OFFICER & COMPETENT AUTHORITY IMA & OTHER KPIDFE SCAM CASES **(hereafter, SPLOCA)** hereby invites tenders under e-tendering system from **Registered Manufacturers and Authorised Dealers in Karnataka** for supply of MATERIALS & STATIONERY FOR SPLOCA, as detailed in Annexure-I of this Tender, as per the Karnataka Transparency in Public Procurement Act 1999 and Rules 2000, there under **(Under Two Cover System). Only those who have supplied similar items (80% of the quantity of this tender) to Govt. Departments, Institutions, Autonomous Bodies in last 2 years need to apply. Those with Annual Turnover for last three years i.e., 2019-20, 2020-21 & 2021-22, not less than Rs. 20 Lakhs per annum or total cumulative turnover Rs.50 Lakhs for last three Years are eligible to participate in this Tender.**

1) The Bidder is expected to carefully examine the specifications and terms & conditions of the Tender. Failure to furnish all information required in the Tender or submission of a bid not substantially responsive to the Tender in every respect will be at the Bidder's risk and may result in the rejection of the bid.

2) Tenderer / Bidder should submit the proposal on the **http://eproc.karnataka.gov.in.** The first part will consist of Eligibility Proposal and the second part will consist of Financial Proposal. Complete bid document terms and conditions and tender form containing all the details have been published on the websites **http://eproc.karnataka.gov.in**

3) Late submission of bids will not be permitted by the e-Tendering System.

4) Last minute submission of bids should be avoided. As such, Tenderer will not be responsible for any failures in submission of bids.

5) Incomplete or Conditional bids will be summarily rejected.

6) For any of the assistance regarding participation in the e-Tender contact JS in SPLOCA OFFICE 3RD FLOOR PODIUM BLOCK VV TOWERS Bengaluru, e-mail: **splocaima21@gmail.com**

ವೇಳಾಪಟ್ಟಿ

ಇ– ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್: https://eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭದ ದಿನಾಂಕ:	05.06.2023
ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ :	09.06.2023 ಸಂಜೆ 5.00 ಗಂಟೆಯವರೆಗೆ
ಪ್ರಿ–ಬಿಡ್ ಮೀಟಿಂಗ್ ದಿನಾಂಕ :	12.06.2023 ಬೆಳಿಗ್ಗೆ 11.00 ಗಂಟೆಗೆ
ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ :	14.06.2023 ಸಂಜೆ 5.00 ಗಂಟೆಯವರೆಗೆ
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ :	16.06.2023 ಮಧ್ಯಾಹ್ನ 12.00 ಗಂಟೆಯವರೆಗೆ
ಮೂಲ ದಾಖಲೆಗಳ ಪರಿಶೀಲನೆಯ ದಿನಾಂಕ:	ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ದಾಖಲೆಗಳಲ್ಲಿ ಮಾಡಲಾಗುತ್ತದೆ.
ಮಾದರಿಗಳನ್ನು ಸಲ್ಲಿಸುವ ದಿನಾಂಕ :	20.06.2023 ಬೆಳಿಗ್ಗೆ 11.00 ಗಂಟೆಗೆ
ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ :	ತಿಳಿಸಲಾಗುವುದು
ಟೆಂಡರ್‌ನ ಅಂದಾಜು ಮೊತ್ತ :	ರೂ. 18.00 ಲಕ್ಷಗಳು

For any query contact: O/o SPLOCA, IMA & other KPIDFE SCAM cases, 3rd floor, Podium Block, V.V Towers, Bengaluru-560001. e-mail: **splocaima21@gmail.com** Contact: 080-29566556/8217203930. Details regarding Tender, terms and conditions are available at **https://eproc.karnataka.gov.in/**

ಸಹಿ/–
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು

DIPR/CP/175/Zenkar/2023-24

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

42ನೇ ವಾರ್ಷಿಕ ಸರ್ವಸದಸ್ಯರ ಸಭೆ ಮತ್ತು ವಿ–ಮತದಾನ ಮಾಹಿತಿ ಸೂಚನೆ

ಈ ಕೆಳಕಂಡಂತೆ ಸೂಚಿಸಲಾಗಿದೆ:

1. ಇನ್‌ಫೋಸಿಸ್ ಲಿಮಿಟೆಡ್ ("ಕಂಪನಿ")ನ 42ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (ಎಜಿಎಮ್) ಬುಧವಾರ, ಜೂನ್ 28, 2023 ಭಾರತೀಯ ಕಾಲಮಾನ ಸಂಜೆ 4:00ಕ್ಕೆ ಸರಿಯಾಗಿ ವಿಡಿಯೋ ಕಾನ್ಫರೆನ್ಸ್/ಇತರೆ ದೃಶ್ಯಶ್ರಾವ್ಯ ಮಾಧ್ಯಮದ (ವಿಸಿ) ಮೂಲಕ ನಡೆಸಲಾಗುವುದು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಮ್‌ಸಿಎ) ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ 10/2022, ದಿನಾಂಕ ಡಿಸೆಂಬರ್ 28, 2023, ಅನ್ವಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಹೊರಡಿಸಿರುವ ಸುತ್ತೋಲೆ ಸಂಖ್ಯೆ SEBI/HO/CFD/PoD-2/P/CIR/2023/4 ದಿನಾಂಕ ಜನವರಿ 5, 2023, (ಇನ್ನು ಮುಂದೆ ಸಂಗ್ರಾಹ್ಯವಾಗಿ "ಸುತ್ತೋಲೆಗಳು" ಎಂದು ಸೂಚಿಸಲಾಗುವುದು), ಅನ್ವಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಸಿ ಮೂಲಕ, ಒಂದು ಸ್ಥಳದಲ್ಲಿ ಸದಸ್ಯರು ಭೌತಿಕ ಉಪಸ್ಥಿತಿಯಿಲ್ಲದೆ ನಡೆಸಲು ಅನುವುಮಾಡಿಕೊಡುತ್ತವೆ. ಆದ್ದರಿಂದ, ಕಂಪನಿಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಸಿ ಮೂಲಕ ದಿನಾಂಕ ಮೇ 31, 2023ರ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆಯಲ್ಲಿ ಹೇಳಲಾದಂತೆ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸಲು ನಡೆಸಲಾಗುವುದು.
2. ಮೇಲ್ಕಾಣಿಸಿದ ಸುತ್ತೋಲೆಗಳಂತೆ, ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಹಾಗೂ ಸಂಯೋಜಿತ ವಾರ್ಷಿಕ ವರದಿ 2022-23 ಇವುಗಳನ್ನು ಯಾವ ಸದಸ್ಯರು ವಿದ್ಯುನ್ಮಾನ ಅಂಚೆ, ಕಂಪನಿ/ಡಿಪಾಸಿಟರಿ ಪಾರ್ಟಿಸಿಪೇಂಟ್(ಗಳು) ("ಡಿಪಿ") ಇವರಲ್ಲಿ ನೋಂದಾಯಿತವಾಗಿದೆಯೋ ಆ ವಿದ್ಯುನ್ಮಾನ ಅಂಚೆಗಳಿಗೆ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಸದರಿ ದಸ್ತಾವೇಜುಗಳು ಕಂಪನಿಯ ಜಾಲತಾಣ www.infosys.com ದಲ್ಲಿಯೂ ಸ್ಟಾಕ್ ಎಕ್ಸ್‌ಚೇಂಜ್ ಅಂದರೆ, www.bseindia.com ನಲ್ಲಿ ಬಿಎಸ್‌ಇ ಲಿಮಿಟೆಡ್ ('ಬಿಎಸ್‌ಇ') ಮತ್ತು www.nseindia.com ನಲ್ಲಿ ಕ್ರಮವಾಗಿ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ('ಎನ್‌ಎಸ್‌ಇ') ಜಾಲತಾಣಗಳಲ್ಲಿಯೂ ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್)ನ ಜಾಲತಾಣ https://www.evoting.nsdl.com.ಗಳಲ್ಲಿಯೂ ಲಭ್ಯವಿರುತ್ತದೆ. ವಿದ್ಯುನ್ಮಾನ ಅಂಚೆಯ ಮೂಲಕ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಕಳುಹಿಸುವ ಪ್ರಕ್ರಿಯೆ ದಿನಾಂಕ ಜೂನ್ 2, 2023ರಂದು ಪೂರ್ಣಗೊಳಿಸಲಾಗಿದೆ.
3. ನಿರ್ಣಾಯಕ ದಿನಾಂಕದಂತೆ ಅಂದರೆ ಜೂನ್ 21, 2023 ಭೌತಿಕ ಅಥವಾ ಡಿಮೆಟೀರಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರುಗಳು ವಿದ್ಯುನ್ಮಾನ ರೂಪದಲ್ಲಿ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆಯಲ್ಲಿ ಹೇಳಿದಂತೆ ಎನ್‌ಎಸ್‌ಡಿಲ್‌ನ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ (ಸದೂರ ವಿ–ಮತದಾನ) ಮತಚಲಾಯಿಸಬಹುದಾಗಿರುತ್ತದೆ. ಸದಸ್ಯರ ಮತದಾನದ ಹಕ್ಕುಗಳು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಈಕ್ವಿಟಿ ಷೇರುಗಳಿಗೆ ಅನುಗುಣವಾಗಿರುತ್ತವೆ. ವಿಸಿ ಮೂಲಕ ಭಾಗವಹಿಸುವ ಷೇರುದಾರರನ್ನು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 103 ರ ಅಡಿಯಲ್ಲಿ ಕೋರಂ ಅನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ ಎಣಿಸಲಾಗುತ್ತದೆ.
4. ಎಲ್ಲ ಷೇರುದಾರರಿಗೆ ಈ ಕೆಳಕಂಡಂತೆ ಮಾಹಿತಿನೀಡಲಾಗಿರುತ್ತದೆ:
   i. ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆಯಲ್ಲಿ ತಿಳಿಸಿರುವಂತೆ ವ್ಯಾಪಾರ ವಹಿವಾಟುಗಳನ್ನು ಸದೂರ ವಿ–ಮತದಾನ ಅಥವಾ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುತ್ತಿರುವಾಗ ನಡೆಸಬಹುದಾಗಿರುತ್ತದೆ.
   ii. ಸದೂರ ವಿದ್ಯುನ್ಮಾನ ವಿಧಾನದಲ್ಲಿ ಅಥವಾ ವಿದ್ಯುನ್ಮಾನ ವಿಧಾನದಲ್ಲಿ ವಾರ್ಷಿಕ ಸರ್ವಸದ್ಯಸರ ಸಭೆಯಲ್ಲಿ ಮತಚಲಾಯಿಸುವ ಅರ್ಹತೆ ಗೊತ್ತುಪಡಿಸುವ ನಿರ್ಣಾಯಕ ದಿನಾಂಕ ಜೂನ್ 21, 2023;
   iii. ಸದೂರ ವಿ–ಮತದಾನ (ರಿಮೋಟ್ ಇ–ವೋಟಿಂಗ್) ಶುಕ್ರವಾರ, ದಿನಾಂಕ ಜೂನ್ 23, 2023 (ಭಾರತೀಯ ಕಾಲಮಾನ ಬೆಳಿಗ್ಗೆ 9:00 ಗಂಟೆಗೆ)ರಂದು ಆರಂಭವಾಗುತ್ತದೆ.
   iv. ಸದೂರ ವಿ–ಮತದಾನ (ರಿಮೋಟ್ ಇ–ವೋಟಿಂಗ್) ಮಂಗಳವಾರ, ದಿನಾಂಕ ಜೂನ್ 27, 2023 (ಭಾರತೀಯ ಕಾಲಮಾನ ಸಂಜೆ 5:00 ಗಂಟೆಗೆ)ರಂದು ಮುಕ್ತಾಯವಾಗುತ್ತದೆ.
   v. ದಿನಾಂಕ ಜೂನ್ 27, 2023 ಎನ್‌ಎಸ್‌ಡಿಎಲ್ ನಿಂದ ಭಾರತೀಯ ಕಾಲಮಾನ ಸಂಜೆ 5:00 ಗಂಟೆಯ ನಂತರ ವಿದ್ಯುನ್ಮಾನ ಕ್ರಮದಲ್ಲಿ ಸದೂರ ವಿ–ಮತದಾನದ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗುವುದು.
   vi. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಯಾವುದೇ ವ್ಯಕ್ತಿ ಮತ್ತು ವ್ಯಕ್ತಿಯೇತರ ಸದಸ್ಯರು ಯಾರು ಕಂಪನಿಯ ಷೇರುಗಳನ್ನು ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆ ರವಾನೆಯಾದ ನಂತರ ಪಡೆದುಕೊಂಡು ಕಂಪನಿಯ ಸದಸ್ಯರಾಗುತ್ತಾರೋ ನಿರ್ಣಾಯಕ ದಿನಾಂಕವಾದ, ಅಂದರೆ ಜೂನ್ 21, 2023ದೊಳಗೆ ತಮ್ಮ ಸೇರ್ಪಡೆ ಗುರುತು ಪದ ಮತ್ತು ಗುಪ್ತಪದಗಳನ್ನು evoting@nsdl.co.in ಇಲ್ಲಿಗೆ ಕೋರಿಕೆ ಸಲ್ಲಿಸಿ ಪಡೆದುಕೊಳ್ಳಬಹುದು.
   vii. ಷೇರುದಾರರು ಡಿಮೆಟೀರಿಲೈಸ್ಡ್ ರೂಪದಲ್ಲಿ ಕಂಪನಿಯ ಸೆಕ್ಯುರಿಟಿಗಳನ್ನು ಸೂಚನೆ ರವಾನೆಯಾದ ನಂತರ ಪಡೆದುಕೊಂಡು ಕಂಪನಿಯ ಸದಸ್ಯರಾಗುತ್ತಾರೋ ಮತ್ತು ನಿರ್ಣಾಯಕ ದಿನಾಂಕ ಅಂದರೆ ಜೂನ್ 21, 2023 ರೊಳಗೆ ಷೇರುಗಳನ್ನು ಹೊಂದಿರುತ್ತಾರೋ ಅವರು ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯಲ್ಲಿ "ವಿ–ಮತದಾನಕ್ಕೆ ಸೂಚನೆಗಳು" ವಿಭಾಗದಲ್ಲಿ ಹೇಳಿರುವ ಸೂಚನೆಗಳನ್ನು ಅನುಸರಿಸಬಹುದಾಗಿರುತ್ತದೆ.
   viii. ಸದಸ್ಯರ ಗಮನಕ್ಕೆ:
      ಅ) ಒಮ್ಮೆ ಠರಾವಿನ ಮೇಲೆ ಸದಸ್ಯರು ಮತಚಲಾಯಿಸಿದ ನಂತರ ಸದಸ್ಯರು ಅದನ್ನು ಬದಲಿಸಲು ಅವಕಾಶವಿರುವುದಿಲ್ಲ.
      ಆ) ಮತಚಲಾಯಿಸುವ ಸೌಲಭ್ಯ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುವ ಸ್ಥಳದಲ್ಲಿಯೂ ಲಭ್ಯವಿದ್ದು ವಿಡಿಯೋ ಕಾನ್ಫರೆನ್ಸ್ (ವಿಸಿ) ವ್ಯವಸ್ಥೆಯಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಹಾಜರಿರುವ ಸದಸ್ಯರು ಯಾರು ಠರಾವುಗಳ ಕುರಿತಾಗಿ ಸದೂರ ವಿದ್ಯುನ್ಮಾನ ಮತದಾನದ ಮೂಲಕ ಮತಚಲಾಯಿಸಿಲ್ಲವೋ ಹಾಗೂ ಮತದಾನ ಮಾಡದಂತೆ ನಿರ್ಬಂಧಿಸಿಲ್ಲವೋ ಅವರು ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುತ್ತಿರುವಾಗ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಮತದಾನ ಮಾಡಬಹುದಾಗಿರುತ್ತದೆ.
      ಇ) ವಾರ್ಷಿಕ ಸರ್ವಸದಸ್ಯರ ಸಭೆಗೆ ಮುಂಚಿತವಾಗಿ ಸದೂರ ವಿ–ಮತದಾನದ ಮೂಲಕ ಮತಚಲಾಯಿಸಿದವರು ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾಗಬಹುದು, ಆದರೆ ಮತ್ತೊಮ್ಮೆ ಮತಚಲಾಯಿಸುವ ಅವಕಾಶವಿರುವುದಿಲ್ಲ; ಮತ್ತು
      ಈ) ನಿರ್ಣಾಯಕ ದಿನಾಂಕದೊಳಗೆ ಸದಸ್ಯರ ವಹಿಯಲ್ಲಿ ದಾಖಲಾಗಿರುವ ಹೆಸರಿನ ಷೇರುದಾರರು ಅಥವಾ ಡಿಪಾಸಟರೀಸ್ ಅವರಲ್ಲಿನ ಲಾಭಹಕ್ಕುದಾರರ ವಹಿಯಲ್ಲಿ ದಾಖಲಾಗಿರುವ ಷೇರುದಾರರು ಮಾತ್ರ ಸದೂರ ವಿ–ಮತದಾನ ಅಥವಾ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿನ ವಿದ್ಯುನ್ಮಾನ ಮತದಾನದ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿರುತ್ತದೆ.
   ix. ಷೇರುಗಳನ್ನು ಭೌತಿಕ, ಡಿಮೆಟೀರಿಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಹಾಗೂ ವಿದ್ಯುನ್ಮಾನ ಅಂಚೆಯನ್ನು ನೋಂದಾಯಿಸಿಲ್ಲದ ಷೇರುದಾರಿಗೆ ಸದೂರ ವಿ–ಮತದಾನದ ಕ್ರಮವನ್ನು ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರದಲ್ಲಿ ನೀಡಲಾಗಿದೆ. ಸದರಿ ವಿವರಗಳನ್ನು ಕಂಪನಿಯ ಜಾಲತಾಣದಲ್ಲಿಯೂ ಸಹ ಒದಗಿಸಲಾಗಿದೆ. ಷೇರುದಾರರು ವಿವರಗಳಿಗಾಗಿ www.infosys.com ಜಾಲತಾಣವನ್ನು ಸಂಪರ್ಕಿಸಬಹುದಾಗಿರುತ್ತದೆ.
   x. ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಯಾರು ತಮ್ಮ ಕೆವೈಸಿ ಮಾಹಿತಿಯನ್ನು ಒದಗಿಸಿಲ್ಲವೋ ಅವರು ತಮ್ಮ ವಿದ್ಯುನ್ಮಾನ ಅಂಚೆ (ಈ ಮೇಲ್) ಅನ್ನು ಇತರ ಕೆವೈಸಿ ಮಾಹಿತಿಗಳೊಂದಿಗೆ ತಮ್ಮ ಡೆಪಾಸಿಟರಿಯವರಲ್ಲಿ ಅವರ ಡೆಪಾಸಿಟೊರಿ ಪಾರ್ಟಿಸಿಪೇಂಟ್ ಮೂಲಕ ನೋಂದಾಯಿಸಲು ಕೋರಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಹಾಗೂ ತಮ್ಮ ಕೆವೈಸಿ ಮಾಹಿತಿಯನ್ನು ಒದಗಿಸಿಲ್ಲವೋ ಅವರು ನಮೂನೆ ಐಎಸ್‌ಆರ್–1 (ನಿಗದಿತ ನಮೂನೆಯು https://www.infosys.com/investors/shareholder-services/investors-service.html ಜಾಲತಾಣದಲ್ಲಿ ಲಭ್ಯ) ಅನ್ನು ತಮ್ಮ ವಿದ್ಯುನ್ಮಾನ ಅಂಚೆ, ಬ್ಯಾಂಕ್ ಖಾತೆ ವಿವರಗಳು ಮತ್ತು ಇತರ ಕೆವೈಸಿ ಮಾಹಿತಿಯನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರು (ಆರ್‌ಟಿಎ), ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಭರ್ತಿ ಮಾಡಿದ ನಮೂನೆಯನ್ನು einward.ris@kfintech.com ಇಲ್ಲಿಗೆ ವಿದ್ಯುನ್ಮಾನ ಅಂಚೆ ಮೂಲಕ ರವಾನಿಸಲು ಕೋರಲಾಗಿದೆ. ಇದು ಷೇರುದಾರರು 2022-23ನೇ ಸಾಲಿನ ಸಂಯೋಜಿತ ವಾರ್ಷಿಕ ವರದಿ, ಸೂಚನೆ, ಸದೂರ ವಿದ್ಯುನ್ಮಾನ ಮತದಾನಕ್ಕೆ ಸೂಚನೆಗಳು, ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ವಿಸಿ ಮೂಲಕ ಭಾಗವಹಿಸಲು ಬೇಕಾದ ಸೂಚನೆ ಇವುಗಳನ್ನು ವಿದ್ಯುನ್ಮಾನ ರೂಪದಲ್ಲಿ ಪಡೆದುಕೊಳ್ಳಲು ಹಾಗೂ ಲಾಭಾಂಶವನ್ನು ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ಅನುವು ಮಾಡಿಕೊಡುತ್ತದೆ. ತಮ್ಮ ಲಾಭಾಂಶವನ್ನು ಪಡೆಯಲು ಬ್ಯಾಂಕ್ ಆದೇಶಗಳನ್ನು ನೋಂದಾಯಿಸಲು ಬಯಸುವ ಸದಸ್ಯರು ನೋಟಿಸ್‌ನಲ್ಲಿ ವಿವರಿಸಲಾಗಿದೆ.
   xi. ಸದೂರ ವಿದ್ಯುನ್ಮಾನ ಮತದಾನ ಕುರಿತಾಗಿ ಸಂದೇಹಗಳಿದ್ದಲ್ಲಿ, ಷೇರುದಾರರು, ಷೇರುದಾರರ ಸಾಮಾನ್ಯ ಸಂದೇಹಗಳ ವಿಭಾಗವನ್ನು ಮತ್ತು ವಿ–ಮತದಾನ ಬಳಕೆದಾರ ಕೈಪಿಡಿಯನ್ನು https://evoting.nsdl.com ದಲ್ಲಿನ ಡೌನ್‌ಲೋಡ್ ವಿಭಾಗದಿಂದ ಇಳಿಸಿಕೊಂಡು ನೋಡಬಹುದು ಅಥವಾ ಉಚಿತ ಕರೆಸಂಖ್ಯೆ 022-4886 7000 ಮತ್ತು 022-2499 7000ಕ್ಕೆ ಕರೆಮಾಡಬಹುದು ಅಥವಾ ಅಮಿತ್ ವಿಶಾಲ್, ಸಹಾಯಕ ಉಪಾಧ್ಯಕ್ಷ–NSDL ವಿ–ಅಂಚೆ amitv@nsdl.co.in ಅಥವಾ ಪಲ್ಲವಿ ಮ್ಹಾತ್ರೆ, ಹಿರಿಯ ವ್ಯವಸ್ಥಾಪಕಿ – pallavid@nsdl.co.in ನಲ್ಲಿ; ವಿಳಾಸ– 4ನೇ ಮಹಡಿ, ಎ ವಿಂಗ್, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ 400013, ಅಥವಾ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಘಟಕ ಇನ್‌ಫೋಸಿಸ್ ಲಿಮಿಟೆಡ್ ಸೆಲಿನಿಯಮ್ ಟವರ್ ಬಿ, ಪ್ಲಾಟ್ 31-32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಮ್‌ಪಲ್ಲಿ ಮಂಡಲ್, ಹೈದರಾಬಾದ್–500 032, ವಿ–ಅಂಚೆ einward.ris@kfintech.com. ಅಥವಾ ಶುಲ್ಕ ರಹಿತ ಸಂಖ್ಯೆ 1800 309 4001ಅನ್ನು ಸಂಪರ್ಕಿಸಬಹುದು.
   xii. ವಿಡಿಯೋ ಕಾನ್ಫರೆನ್ಸ್ ಸೌಲಭ್ಯವನ್ನು ಬಳಸಿಕೊಂಡು ಸಭೆಯಲ್ಲಿ ಭಾಗವಹಿಸುವ ಕುರಿತಾಗಿ ತಾಂತ್ರಿಕ ಸಹಾಯ ಬೇಕಾದ ಸದಸ್ಯರು +91 80 4156 5555 / +91 80 4156 5777 ಮೂಲಕ ಸಹಾಯವಾಣಿಯನ್ನು ಸಂಪರ್ಕಿಸಿ ಸಹಾಯವನ್ನು ಪಡೆದುಕೊಳ್ಳಬಹುದು.
   xiii. ಸೂಚನೆಯೊಂದಿಗೆ ಸಂಯೋಜಿತ ವಾರ್ಷಿಕ ವರದಿಯು ಜಾಲತಾಣ https://www.infosys.com/investors/reports-filings/annual-report/annual-reports.html ನಲ್ಲಿ ಲಭ್ಯವಿದೆ
5. ಹಣಕಾಸು ವರ್ಷ 2023ರ ಅಂತಿಮ ಲಾಭಾಂಶವನ್ನು ಪಡೆಯುವ ಷೇರುದಾರರನ್ನು ಗುರುತಿಸುವ ದಿನಾಂಕವು ಜೂನ್ 2, 2023 ಆಗಿದೆ. ಷೇರುದಾರರಿಗೆ ಲಾಭಾಂಶವನ್ನು ದಿನಾಂಕ ಜುಲೈ 3, 2023ರಂದು 42ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಷೇರುದಾರರ ಒಪ್ಪಿಗೆಗೆ ಒಳಪಟ್ಟಂತೆ ಪಾವತಿಸಲಾಗುವುದು.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಬೆಂಗಳೂರು, ಭಾರತ
ಜೂನ್ 5, 2023

ಡಬ್ಲ್ಯುಎಫ್‌ಐ ಅಧ್ಯಕ್ಷನ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ಇಂಡಿಯನ್ ಕ್ರಿಶ್ಚಿಯನ್ ಯೂನಿಟಿ ಫೋರಂ ಹಾಗೂ ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಡಿ ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಅವರನ್ನು ಬಂಧಿಸಬೇಕು' ಎಂದು ಒತ್ತಾಯಿಸಿ ಇಂಡಿಯನ್ ಕ್ರಿಶ್ಚಿಯನ್ ಯೂನಿಟಿ ಫೋರಂ ಹಾಗೂ ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆ ಪದಾಧಿಕಾರಿಗಳು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, 'ಬ್ರಿಜ್‌ಭೂಷಣ್ ಸಿಂಗ್ ಅವರನ್ನು ಕೂಡಲೇ ಬಂಧಿಸಿ' ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಪ್ರತಿಭಟನೆಯಲ್ಲಿ ಇಂಡಿಯನ್ ಕ್ರಿಶ್ಚಿಯನ್ ಯೂನಿಟಿ ಫೋರಂ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ನವದೆಹಲಿಯಲ್ಲಿ ನಡೆಯುತ್ತಿರುವ ಮಹಿಳಾ ಕುಸ್ತಿಪಟುಗಳ ಹೋರಾಟಕ್ಕೆ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಸಂಘಟನೆ ಬೆಂಬಲ ವ್ಯಕ್ತಪಡಿಸಿದೆ. ಜೊತೆಗೆ, ದೇಶದಾದ್ಯಂತ ಮಂಗಳವಾರ ಸಾಂಕೇತಿಕ ಪ್ರತಿಭಟನೆ ನಡೆಸುವಂತೆ ಸಂಘಟನೆ ಕರೆ ನೀಡಿತ್ತು. ಇದರ ಭಾಗವಾಗಿ, ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಯಿತು.

'ಮಹಿಳಾ ಕುಸ್ತಿಪಟುಗಳು ದೇಶಕ್ಕೆ ಕೀರ್ತಿ ತಂದಿದ್ದಾರೆ. ಅವರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಖಂಡನೀಯ. ಆರೋಪಿಗಳನ್ನು ರಕ್ಷಿಸುವ ಕೆಲಸ ನಡೆಯುತ್ತಿದ್ದು, ಇದು ನಾಚಿಕೆಗೇಡಿನ ಸಂಗತಿ' ಎಂದು ಪ್ರತಿಭಟನಕಾರರು ಕಿಡಿಕಾರಿದರು.

'ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಈಗಾಗಲೇ ಎಫ್‌ಐಆರ್ ದಾಖಲಾಗಿದ್ದು, ಅವರನ್ನು ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಸುದ್ದಿ 2 ನಿಮಿಷ

'ಜಾನುವಾರು ಹತ್ಯೆ ನಿಷೇಧ: ನಿಯಮ ಸಡಿಲಿಸಲು ಕ್ರಮ'

ಬೆಂಗಳೂರು: 'ಜಾನುವಾರು ಹತ್ಯೆ ಪ್ರತಿಬಂಧಕ (ನಿಷೇಧ) ಕಾಯ್ದೆಯನ್ನು ಸಂಪೂರ್ಣ ರದ್ದು ಮಾಡುವುದಿಲ್ಲ. ಕಾಯ್ದೆಯಲ್ಲಿನ ಕೆಲವು ನಿಯಮಗಳನ್ನು ಸಡಿಲಗೊಳಿಸಲಿದ್ದೇವೆ' ಎಂದು ಶಿವಾಜಿನಗರದ ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರೈತರ ಅನುಕೂಲಕ್ಕಾಗಿ ನಿಯಮಗಳ ಸಡಿಲಿಕೆ ಅಗತ್ಯವಿದೆ. ಅದನ್ನು ಮಾಡುತ್ತೇವೆ' ಎಂದು ಹೇಳಿದರು.

ಬಿಜೆಪಿಯವರು ರೈತರಿಗೆ ಅನನುಕೂಲ ಆಗುವ ರೀತಿಯಲ್ಲಿ ಕಾಯ್ದೆ ರೂಪಿಸಿದ್ದರು. ಇದರಿಂದ ಬಿಜೆಪಿಯವರು ಮತ್ತು ಅವರ ಪರಿವಾರದ ಸಂಘಟನೆಗಳು ವಸೂಲಿಗೆ ಇಳಿದಿದ್ದರು ಎಂದು ರಿಜ್ವಾನ್ ದೂರಿದರು.

ಈ ಕುರಿತು ಮಾತನಾಡಿರುವ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ಪ್ರಾಣಿಗಳನ್ನು ಕೊಲ್ಲಬಾರದು. ನಾನು ಕೂಡಾ ಪ್ರಾಣಿ ಹತ್ಯೆ ನಿಷೇಧದ ಪರ ಇದ್ದೇನೆ. ಆದರೆ, ಸಂಪುಟದಲ್ಲಿ ಈ ಬಗ್ಗೆ ಮಾತನಾಡುವುದಿಲ್ಲ' ಎಂದು ತಿಳಿಸಿದರು.

'ಗೋವು ಮಾತ್ರವಲ್ಲ 84 ಲಕ್ಷ ಜೀವ ರಾಶಿಯನ್ನು ಹತ್ಯೆ ಮಾಡಬಾರದು ಎಂಬುದು ನನ್ನ ನಿಲುವು. ಅವುಗಳಿಗೆಲ್ಲ ಜೀವಿಸುವ ಹಕ್ಕು ಇದೆ. ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಅವರು ಯಾವ ಅರ್ಥದಲ್ಲಿ ಹಸು ಕಡಿಯುವ ವಿಚಾರದ ಬಗ್ಗೆ ಮಾತನಾಡಿದ್ದಾರೋ ಗೊತ್ತಿಲ್ಲ' ಎಂದರು.

ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಗೋಹತ್ಯೆ ನಿಷೇಧ ಆಗಬೇಕು ಎಂಬುದು ಜನರ ಆಶಯ. ಅದಕ್ಕೆ ಪೂರಕವಾಗಿ ನಮ್ಮ ಸರ್ಕಾರ ಕಾಯ್ದೆ ತಂದಿತ್ತು. ಕಾಂಗ್ರೆಸ್ ಸರ್ಕಾರ ಕಾಯ್ದೆಯನ್ನು ಹಿಂಪಡೆಯಲು ಹೊರಟಿರುವುದು ಖಂಡನೀಯ' ಎಂದರು.

ಸಾರಿಗೆ ನಿಗಮಗಳ ನಿವೃತ್ತ ನೌಕರರಿಗೆ ಉಚಿತ ಪಾಸ್ ಸೌಲಭ್ಯಕ್ಕೆ ಆಗ್ರಹ

ಬೆಂಗಳೂರು: ಸಾರಿಗೆ ನಿಗಮಗಳ ನಿವೃತ್ತ ನೌಕರರಿಗೆ ಬಸ್‌ಗಳಲ್ಲಿ ಓಡಾಟಕ್ಕೆ ಉಚಿತ ಪಾಸ್ ನೀಡಲು ಆಗ್ರಹಿಸಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಪ್ರಸ್ತುತ ಪ್ರತಿಯೊಬ್ಬ ನಿವೃತ್ತ ನೌಕರ ವರ್ಷಕ್ಕೆ ₹500 ಪಾವತಿಸಬೇಕಿದೆ. ಈಗಾಗಲೇ ಮಹಿಳೆಯರಿಗೆ ನಿಗಮದ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಆದೇಶ ನೀಡಲಾಗಿದೆ. ನಿವೃತ್ತರಾಗಿರುವ ಪುರುಷ ನೌಕರರಿಗೆ ಉಚಿತ ಪಾಸ್ ಕೊಡುವುದರಿಂದ ಸಾರಿಗೆ ನಿಗಮಕ್ಕೆ ಹೆಚ್ಚಿನ ಹೊರ ಬೀಳುವುದಿಲ್ಲ. ಸರ್ಕಾರವು ನಮ್ಮ ಮನವಿ ಪರಿಗಣಿಸಬೇಕು ಎಂದು ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯ್ ಭಾಸ್ಕರ್ ಮನವಿ ಮಾಡಿದ್ದಾರೆ.

ಚಿಕ್ಕಮ್ಮನ ಮಗನ ಜೊತೆ ಸಲುಗೆ ● ಬಿದ್ದು ಮೃತಪಟ್ಟಿದ್ದಾಳೆ ಎಂದು ನಂಬಿಸಲು ಯತ್ನ

ಗುಪ್ತಾಂಗಕ್ಕೆ ಇರಿದು ಪತ್ನಿಯ ಕೊಲೆ

ಪ್ರಜಾವಾಣಿ ವಾರ್ತೆ

ನಾಗರತ್ನಾ

ಅಯ್ಯಪ್ಪ

ಬೆಂಗಳೂರು: ಬಸವೇಶ್ವರನಗರ ಠಾಣೆ ವ್ಯಾಪ್ತಿಯ ಮಂಜುನಾಥನಗರದ ಮನೆಯೊಂದರಲ್ಲಿ ನಾಗರತ್ನಾ (32) ಎಂಬುವವರನ್ನು ಹತ್ಯೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪತಿ ಅಯ್ಯಪ್ಪನನ್ನು (35) ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ನಾಗರತ್ನಾ, ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಇವರನ್ನು ಭಾನುವಾರ ರಾತ್ರಿ ಕೊಲೆ ಮಾಡಲಾಗಿದ್ದು, ಆರೋಪಿ ಅಯ್ಯಪ್ಪನನ್ನು ಬಂಧಿಸಲಾಗಿದೆ. ಸಂಬಂಧಿ ನೀಡಿರುವ ದೂರು ಆಧರಿಸಿ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಯ್ಯಪ್ಪ, ಕೆ.ಆರ್. ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ. ಅನಾಥಾಶ್ರಮದಲ್ಲಿ ಬೆಳೆದಿದ್ದ ನಾಗರತ್ನಾ ಅವರನ್ನು 10 ವರ್ಷಗಳ ಹಿಂದೆ ಮದುವೆಯಾಗಿದ್ದ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಮಂಜುನಾಥ ನಗರದ ಬಾಡಿಗೆ ಮನೆಯಲ್ಲಿ ದಂಪತಿ ವಾಸವಿದ್ದರು. ಮಕ್ಕಳು, ಅಯ್ಯಪ್ಪನ ಸಂಬಂಧಿಕರ ಮನೆಯಲ್ಲಿದ್ದರು. ನಾಗರತ್ನಾ ಅವರ ಸಂಬಂಧಿಕರು ಮೈಸೂರಿನಲ್ಲಿ ಪ್ರತ್ಯೇಕವಾಗಿ ನೆಲೆಸಿದ್ದಾರೆ' ಎಂದು ತಿಳಿಸಿದರು.

ಪರ ವ್ಯಕ್ತಿ ಜೊತೆ ಸಂಬಂಧ: 'ಆರೋಪಿ ಅಯ್ಯಪ್ಪ ಕೆಲಸಕ್ಕೆ ಹೋದರೆ ಎರಡು–ಮೂರು ದಿನ ಬಿಟ್ಟು ಮನೆಗೆ ವಾಪಸು ಬರುತ್ತಿದ್ದ. ನಾಗರತ್ನಾ ಕೆಲಸಕ್ಕೆ ಹೋಗಿ ಬರುವ ಸಂದರ್ಭದಲ್ಲಿ ವ್ಯಕ್ತಿಯೊಬ್ಬರ ಪರಿಚಯವಾಗಿ, ಅಕ್ರಮ ಸಂಬಂಧ ಏರ್ಪಟ್ಟಿತ್ತು. ಈ ಸಂಗತಿ ಪತಿ ಅಯ್ಯಪ್ಪಗೆ ಗೊತ್ತಾಗಿ ಗಲಾಟೆ ಆಗಿತ್ತು ಎಂಬ ಮಾಹಿತಿ ದೂರಿನಲ್ಲಿದೆ' ಎಂದು ಪೊಲೀಸರು ಹೇಳಿದರು.

ಚಿಕ್ಕಮ್ಮನ ಮಗನ ಜೊತೆ ಸಿಕ್ಕಿಬಿದ್ದಿದ್ದ ನಾಗರತ್ನಾ: 'ಪರ ವ್ಯಕ್ತಿಯಿಂದ ದೂರ ಉಳಿದಿದ್ದ ನಾಗರತ್ನಾ, ಮೈಸೂರಿನಲ್ಲಿದ್ದ ತಮ್ಮ ಚಿಕ್ಕಮ್ಮನ ಮಗನ ಜೊತೆ ಸಲುಗೆ ಬೆಳೆಸಿದ್ದರು. ಅವರಿಬ್ಬರ ಅಕ್ರಮ ಸಂಬಂಧ ವಿಷಯ ಸಂಬಂಧಿಕರಿಗೆ ಗೊತ್ತಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ಜೂನ್ 3ರಂದು ಮಂಜುನಾಥ್‌ನಗರದ ಮನೆಗೆ ಬಂದಿದ್ದ ಚಿಕ್ಕಮ್ಮನ ಮಗ, ನಾಗರತ್ನಾ ಜೊತೆ ಖಾಸಗಿ ಕ್ಷಣ ಕಳೆಯುತ್ತಿದ್ದ. ದಿಢೀರ್ ಮನೆಗೆ ಬಂದಿದ್ದ ಅಯ್ಯಪ್ಪ, ಬೆತ್ತಲೆಯಾಗಿದ್ದ ಇಬ್ಬರನ್ನೂ ನೋಡಿದ್ದ. ಮನೆಯ ಬಾಗಿಲನ್ನು ಹೊರಗಿನಿಂದ ಲಾಕ್ ಮಾಡಿ, ಸಂಬಂಧಿಕರನ್ನು ಸ್ಥಳಕ್ಕೆ ಕರೆಸಿದ್ದ. ಇಬ್ಬರಿಗೂ ಹಿರಿಯರು ಎಚ್ಚರಿಕೆ ನೀಡಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದು ಹೇಳಿದರು.

ಗುಪ್ತಾಂಗಕ್ಕೆ ಚಾಕುವಿನಿಂದ ಇರಿದು ಕೊಂದ: 'ಅಯ್ಯಪ್ಪ ಹಾಗೂ ನಾಗರತ್ನಾ ಇಬ್ಬರೂ ಭಾನುವಾರ ಮನೆಯಲ್ಲಿದ್ದರು. ದೈಹಿಕ ಸಂಪರ್ಕಕ್ಕಾಗಿ ಅಯ್ಯಪ್ಪ ಒತ್ತಾಯಿಸಿದ್ದ. ಅದಕ್ಕೆ ನಾಗರತ್ನಾ ಒಪ್ಪಿರಲಿಲ್ಲ. ಊಟ ಮಾಡಿದ ನಂತರ, ನಾಗರತ್ನಾ ಪ್ರತ್ಯೇಕವಾಗಿ ಮಲಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಮಲಗಿದ್ದ ಪತ್ನಿ ಮೇಲೆ ಹಲ್ಲೆ ಮಾಡಿದ್ದ ಅಯ್ಯಪ್ಪ, ಅವರ ಗುಪ್ತಾಂಗಕ್ಕೆ ಹೊಡೆದಿದ್ದ. ನಂತರ, ಗುಪ್ತಾಂಗಕ್ಕೆ ಚಾಕುವಿನಿಂದ ಐದಾರು ಬಾರಿ ಇರಿದಿದ್ದ. ತೀವ್ರ ರಕ್ತಸ್ರಾವದಿಂದಾಗಿ ನಾಗರತ್ನಾ ಮೃತಪಟ್ಟಿದ್ದರು. ಮೃತದೇಹದ ಮೇಲಿನ ಬಟ್ಟೆ ಬಿಚ್ಚಿಟ್ಟಿದ್ದ ಅಯ್ಯಪ್ಪ, ಮನೆಯಿಂದ ಹೊರಗಡೆ ಹೋಗಿದ್ದ' ಎಂದು ಹೇಳಿದರು.

'ಗಲಾಟೆ ಬಗ್ಗೆ ಸ್ಥಳೀಯರೊಬ್ಬರು ಮೈಸೂರಿನಲ್ಲಿರುವ ಸಂಬಂಧಿಕರಿಗೆ ಮಾಹಿತಿ ನೀಡಿದ್ದರು. ಅವರು ನಗರದಲ್ಲಿದ್ದ ಸಂಬಂಧಿಕರಿಬ್ಬರಿಗೆ ವಿಷಯ ತಿಳಿಸಿದ್ದರು. ಇಬ್ಬರು ಸಂಬಂಧಿಕರು ಮನೆಯತ್ತ ಹೊರಟಿದ್ದರು. ಮಾರ್ಗಮಧ್ಯೆ ಅಯ್ಯಪ್ಪ ಸಿಕ್ಕಿದ್ದ. ಆತನನ್ನೂ ಕರೆದುಕೊಂಡು ಮನೆಗೆ ಹೋದಾಗ, ಬೆತ್ತಲೆ ಸ್ಥಿತಿಯಲ್ಲಿ ನಾಗರತ್ನಾ ಬಿದ್ದಿದ್ದರು. 'ಸ್ನಾನ ಮಾಡಿ ಕೊಠಡಿಯಿಂದ ಹೊರಗೆ ಬಂದಿದ್ದ ಪತ್ನಿ ತಲೆ ತಿರುಗಿ ಬಿದ್ದಿದ್ದಾಳೆ' ಎಂದು ಅಯ್ಯಪ್ಪ ಸುಳ್ಳು ಹೇಳಿದ್ದ. ಮೃತದೇಹಕ್ಕೆ ಚೂಡಿದಾರ ತೊಡಿಸಿ, ಎತ್ತಿಕೊಂಡು ಮನೆ ಎದುರಿನ ನೀರಿನ ಸಂಪಿನ ಬಳಿ ಮಲಗಿಸಿದ್ದ. ಅಯ್ಯಪ್ಪನ ಮಾತು ನಂಬಿದ್ದ ಸಂಬಂಧಿಕರು, ಆಂಬುಲೆನ್ಸ್‌ಗೆ ಕರೆ ಮಾಡಿದ್ದರು. ಸ್ಥಳಕ್ಕೆ ಬಂದಿದ್ದ ಆಂಬುಲೆನ್ಸ್ ಸಿಬ್ಬಂದಿ, ತಪಾಸಣೆ ನಡೆಸಿ ನಾಗರತ್ನಾ ಮೃತಪಟ್ಟಿರುವುದಾಗಿ ಹೇಳಿದ್ದರು'

'ತಪಾಸಣೆ ಸಂದರ್ಭದಲ್ಲಿ ಸ್ಥಳದಲ್ಲಿ ರಕ್ತ ಚೆಲ್ಲಿದ್ದನ್ನು ನೋಡಿ ಸಂಬಂಧಿಕರಿಗೆ ಅನುಮಾನ ಬಂದಿತ್ತು. ಅವರೇ ಠಾಣೆಗೆ ವಿಷಯ ತಿಳಿಸಿದ್ದರು. ಅಯ್ಯಪ್ಪನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ' ಎಂದು ಪೊಲೀಸರು ತಿಳಿಸಿದರು.

ಗಾಂಜಾ: ಮೂವರು ಮಹಿಳೆಯರ ಬಂಧನ

ಬೆಂಗಳೂರು: ನಗರದಲ್ಲಿ ಗಾಂಜಾ ಮಾರುತ್ತಿದ್ದ ಆರೋಪದಡಿ ಮೂವರು ಮಹಿಳೆಯರನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜೀವನಹಳ್ಳಿಯ ಐಟಿಸಿ ಕಾಲೊನಿ ನಿವಾಸಿಗಳಾದ ಪ್ರೇಮಾ (25), ಸುನೀತಾ (35) ಹಾಗೂ ಕೊಂಡಪ್ಪ ಗಾರ್ಡನ್ ನಿವಾಸಿ ಮುತ್ತ್ಯಾಲಮ್ಮ (45) ಬಂಧಿತರು. ಇವರಿಂದ 7 ಕೆ.ಜಿ 900 ಗ್ರಾಂ ತೂಕದ ಗಾಂಜಾ ಹಾಗೂ ₹ 4 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಜಾರ್ಖಂಡ್‌ನ ಪ್ರೇಮಾ ಹಾಗೂ ಸುನೀತಾ, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಆಗಾಗ ತಮ್ಮೂರಿಗೆ ಹೋಗುತ್ತಿದ್ದ ಇಬ್ಬರು, ಗಾಂಜಾ ಪೊಟ್ಟಣಗಳನ್ನು ಸಿದ್ಧಪಡಿಸಿ ತರುತ್ತಿದ್ದರು.'

'ಮನೆ ಮಾಲೀಕರಾದ ಮುತ್ತ್ಯಾಲಮ್ಮ ಹಾಗೂ ಅವರ ಮಗ ದರ್ಶನ್, ಗಾಂಜಾ ಮಾರಾಟಕ್ಕೆ ಸಹಕರಿಸುತ್ತಿದ್ದರು'. ಪ್ರೇಮಾ ಹಾಗೂ ಸುನೀತಾ ಅವರಿಂದ ಮುತ್ತ್ಯಾಲಮ್ಮ ಗಾಂಜಾವನ್ನೇ ಬಾಡಿಗೆ ರೂಪದಲ್ಲಿ ಪಡೆಯುತ್ತಿದ್ದರು. ಅದನ್ನೇ ಪರಿಚಯಸ್ಥರಿಗೆ ಮಾರಿ, ಹೆಚ್ಚು ಹಣ ಸಂಪಾದಿಸುತ್ತಿದ್ದರು. ಆರೋಪಿ ದರ್ಶನ್ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

₹ 10 ಲಕ್ಷ ವಂಚನೆ: ಇಬ್ಬರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವೇತನ ಮಂಜೂರು ಸಂದರ್ಭದಲ್ಲಿ ನಕಲಿ ದಾಖಲೆ ಸೃಷ್ಟಿಸಿ ₹10 ಲಕ್ಷವನ್ನು ಸ್ವಂತ ಖಾತೆಗೆ ವರ್ಗಾಯಿಸಿಕೊಂಡು ವಂಚಿಸಿರುವ ಆರೋಪದಡಿ ಬಿಬಿಎಂಪಿಯ ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಎಂ. ಸುರೇಶ್ ಹಾಗೂ ಕಂಪ್ಯೂಟರ್ ಆಪರೇಟರ್ ಚಂದ್ರಶೇಖರ್ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'2007ರ ಫೆಬ್ರುವರಿ ಲೆಕ್ಕದಲ್ಲಿ ನಡೆದಿರುವ ವಂಚನೆ ಸಂಬಂಧ ಬಿಬಿಎಂಪಿ ಹಣಕಾಸು ಕಚೇರಿಯ ಸಹಾಯಕ ನಿಯಂತ್ರಕ ಲಕ್ಷ್ಮಯ್ಯ ಅವರು ದೂರು ನೀಡಿದ್ದಾರೆ. ಎಂ. ಸುರೇಶ್ ಹಾಗೂ ಚಂದ್ರಶೇಖರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಅವರಿಬ್ಬರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ಹೇಳಿದರು.

'ಪ್ರಕರಣ ಸಂಬಂಧ ಬಿಬಿಎಂಪಿ ಅಧಿಕಾರಿಗಳು, ಆರೋಪಿಗಳಿಗೆ ನೋಟಿಸ್ ನೀಡಿ ತನಿಖೆ ನಡೆಸಿದ್ದರು. ವಂಚನೆ ಹಣವನ್ನು ಮರುಪಾವತಿ ಮಾಡುವಂತೆ ಸೂಚನೆ ನೀಡಿದ್ದರು. ಆದರೆ, ಆರೋಪಿಗಳು ಇದುವರೆಗೂ ಹಣ ವಾಪಸು ಪಾವತಿ ಮಾಡಿಲ್ಲ. ಹೀಗಾಗಿ, ಅಧಿಕಾರಿಗಳು ನ್ಯಾಯಾಲಯದ ನಿರ್ದೇಶನದಂತೆ ಠಾಣೆಗೆ ದೂರು ನೀಡಿದ್ದಾರೆ' ಎಂದು ತಿಳಿಸಿದರು.

'ಬಿಬಿಎಂಪಿ ಆರೋಗ್ಯ ವಿಭಾಗದ ಸಿಬ್ಬಂದಿಗೆ 2007ರ ಫೆಬ್ರುವರಿಯಲ್ಲಿ ₹35.07 ಲಕ್ಷ ವೇತನ ಪಾವತಿ ಮಾಡಲಾಗಿತ್ತು. ಲೆಕ್ಕ ತಪಾಸಣೆ ಸಂದರ್ಭದಲ್ಲಿ, ವೇತನ ದಾಖಲೆಗಳನ್ನು ಪರಿಶೀಲಿಸಲಾಗಿತ್ತು. ₹ 10 ಲಕ್ಷ ವ್ಯತ್ಯಾಸ ಕಂಡುಬಂದಿತ್ತು. ಹೆಚ್ಚು ಪರಿಶೀಲಿಸಿದಾಗ, ನಕಲಿ ದಾಖಲೆ ಸೃಷ್ಟಿಸಿದ್ದ ಸಂಗತಿ ಗೊತ್ತಾಗಿದೆ' ಎಂದರು.

'ಆರೋಗ್ಯ ವಿಭಾಗದ ಸಿಬ್ಬಂದಿಗೆ ₹ 25.07 ಲಕ್ಷ ಮಾತ್ರ ವೇತನ ಪಾವತಿಸಬೇಕಿತ್ತು. ಆರೋಪಿಗಳು, ₹ 10 ಲಕ್ಷ ಹೆಚ್ಚುವರಿ ವೇತನಕ್ಕೆ ನಕಲಿ ದಾಖಲೆ ಸೃಷ್ಟಿಸಿದ್ದರು. ನಂತರ, ಹೆಚ್ಚುವರಿ ವೇತನದ ಹಣವನ್ನು ತಮ್ಮ ಸ್ವಂತ ಖಾತೆಗೆ ವರ್ಗಾಯಿಸಿಕೊಂಡಿದ್ದರು' ಎಂದರು.

ನೂರು ವರ್ಷದ ಆಲದ ಮರ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಕಾರವಾರ: ತಾಲ್ಲೂಕಿನ ಅರಗಾದಲ್ಲಿರುವ ನೌಕಾನೆಲೆಯ ಐ.ಎನ್.ಎಸ್. ಪತಂಜಲಿ ಆಸ್ಪತ್ರೆ ಆವರಣದಲ್ಲಿದ್ದ ನೂರು ವರ್ಷ ಹಳೆಯದಾದ ಆಲದ ಮರವನ್ನು ಬುಡ ಸಮೇತ ಇತ್ತೀಚೆಗೆ ಸ್ಥಳಾಂತರಿಸಲಾಯಿತು.

ನೌಕಾನೆಲೆಯ ಎರಡನೇ ಹಂತದ ವಿಸ್ತರಣೆಯ ಭಾಗವಾಗಿ ಐ.ಎನ್.ಎಸ್. ಪತಂಜಲಿ ಆಸ್ಪತ್ರೆಯೂ ವಿಸ್ತರಣೆಗೊಳ್ಳುತ್ತಿದೆ. ಇದರಿಂದ ಆಸ್ಪತ್ರೆ ಆವರಣದಲ್ಲಿದ್ದ ಆಲದ ಮರವನ್ನು ತೆರವು ಮಾಡುವ ಅನಿವಾರ್ಯ ಎದುರಾಗಿತ್ತು.

ಆದರೆ, ಬೃಹತ್ ಗಾತ್ರದ ಮರವನ್ನು ಕಡಿದು ಹಾಕುವ ಬದಲು ಬುಡ ಸಮೇತ ಪಕ್ಕದಲ್ಲಿರುವ ಖಾಲಿ ಜಾಗಕ್ಕೆ ಸ್ಥಳಾಂತರಿಸಲು ನೌಕಾನೆಲೆಯ ಅಧಿಕಾರಿಗಳು ಯೋಚಿಸಿದರು. ಕೆಲವು ದಿನಗಳ ಕಾರ್ಯಾಚರಣೆ ನಡೆಸಿ ಮರದ ಬುಡವನ್ನು ಜೆಸಿಬಿಗಳ ಮೂಲಕ ಮರವನ್ನು ಬಿಡಿಸಲಾಗಿತ್ತು. ಬಳಿಕ ಎರಡು ಮೇಲಕ್ಕೆತ್ತಿ, ಈಗಿದ್ದ ಸ್ಥಳಕ್ಕಿಂತ ಸ್ವಲ್ಪ ದೂರದಲ್ಲಿ ನೆಡಲಾಯಿತು.

ಕಾರವಾರದ ನೌಕಾನೆಲೆಯಲ್ಲಿರುವ ಐ.ಎನ್.ಎಸ್.ಪತಂಜಲಿ ಆಸ್ಪತ್ರೆ ಆವರಣ ದಲ್ಲಿದ್ದ ಆಲದ ಮರವನ್ನು ಸ್ಥಳಾಂತರಿಸಲು ಬುಡ ಸಮೇತ ಕೀಳಲಾಯಿತು (ಎಡಚಿತ್ರ) ಬಳಿಕ ಮರವನ್ನು ಸ್ಥಳಾಂತರಿಸಿ ನೆಟ್ಟಿರುವುದು

'ನೂರು ವರ್ಷದಷ್ಟು ಹಳೆಯದಾಗಿದ್ದ ಆಲದ ಮರದ ಕೊಂಬೆಗಳು 80 ಚದರ ಅಡಿಯಷ್ಟು ವಿಸ್ತಾರದಲ್ಲಿ ಚಾಚಿಕೊಂಡಿದ್ದವು. ಅರಣ್ಯ ಇಲಾಖೆ ಅಧಿಕಾರಿಗಳ ಸಲಹೆ ಪಡೆದು ಕೊಂಬೆಗಳನ್ನು ಕತ್ತರಿಸಿ ಮರವನ್ನು ಸ್ಥಳಾಂತರಿಸಿದ್ದೇವೆ' ಎಂದು ನೌಕಾದಳ ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದೆ.

'ಕಟ್ಟಡ ನಿರ್ಮಾಣಕ್ಕೆ ಅಡ್ಡಿಯಾಗಿದ್ದ ಮರವನ್ನು ಕತ್ತರಿಸದೆ ಸ್ಥಳಾಂತರಿಸುವ ಮಾದರಿ ಕೆಲಸವನ್ನು ನೌಕಾದಳ ಮಾಡಿದೆ. ಪರಿಸರ ದಿನಾಚರಣೆಯ ಹೊಸ್ತಿಲಲ್ಲಿ ಇಂತಹ ಕೆಲಸ ಮಾಡಿದ್ದು ಉತ್ತಮ ಸಂದೇಶ ನೀಡಿದಂತಾಗಿದೆ' ಎಂದು ನೌಕಾನೆಲೆ ಪ್ರದೇಶದ ಆರ್.ಎಫ್.ಒ. ಭವ್ಯಾ ನಾಯ್ಕ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

ಪೊಲೀಸರ ವಿರುದ್ಧ ಠಾಣೆ ಎದುರು ಬಜರಂಗದಳ ಕಾರ್ಯಕರ್ತರ ಧರಣಿ

ಜಾನುವಾರು ಸಾಗಣೆ ತಡೆದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ತುರುವೇಕೆರೆ: ತಾಲ್ಲೂಕಿನ ಜೋಡುಗಟ್ಟೆ ಗ್ರಾಮದಲ್ಲಿ ಸೋಮವಾರ ದನಗಳ ಸಂತೆಯಲ್ಲಿ ರೈತರು ಖರೀದಿಸಿದ್ದ ಜಾನುವಾರು ಸಾಗಿಸುತ್ತಿದ್ದ ವಾಹನ ತಡೆದ ಬಜರಂಗದಳ ಕಾರ್ಯಕರ್ತರು, ವಾಹನ ಮತ್ತು ರೈತರನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

ಇದನ್ನು ವಿರೋಧಿಸಿ ಶಾಸಕ ಎಂ.ಟಿ. ಕೃಷ್ಣಪ್ಪ ಅವರು ಪೊಲೀಸ್ ಠಾಣೆ ಎದುರು ರೈತರೊಂದಿಗೆ ಪ್ರತಿಭಟನೆ ನಡೆಸಿದರು. ರೈತರ ಮೇಲೆ ದೌರ್ಜನ್ಯ ನಡೆಸಿದ ಪಿಎಸ್‌ಐ ಹೊನ್ನೇಗೌಡ ವರ್ಗಾವಣೆಗೆ ಪಟ್ಟು ಹಿಡಿದರು.

ಘಟನೆ ಹಿನ್ನೆಲೆ: ಸಂತೆಯಲ್ಲಿ ಖರೀದಿಸಿದ 15 ಎತ್ತು ಮತ್ತು ಹಸುಗಳನ್ನು ರೈತರು ಬಾಡಿಗೆ ವಾಹನದಲ್ಲಿ ಗ್ರಾಮಗಳಿಗೆ ಸಾಗಿಸುತ್ತಿದ್ದರು. ಮಾಯಸಂದ್ರ ಬಳಿ ವಾಹನ ಅಡ್ಡಗಟ್ಟಿದ ಬಜರಂಗದಳದ ಕಾರ್ಯಕರ್ತರು ಎಂದು ಹೇಳಿಕೊಂಡ 10–12 ಜನರ ಗುಂಪು ಜಾನುವಾರುಗಳನ್ನು ಕಸಾಯಿಖಾನೆಗೆ ಸಾಗಿಸಲಾಗುತ್ತಿದೆ ಎಂದು ಆಕ್ಷೇಪ ಎತ್ತಿದರು.

ಪೊಲೀಸ್ ಠಾಣೆ ಎದುರು ಶಾಸಕ ಎಂ.ಟಿ.ಕೃಷ್ಣಪ್ಪ ಹಾಗೂ ರೈತರು ಪ್ರತಿಭಟನೆ ನಡೆಸಿದರು

ಫೋನ್ ಮಾಡಿ ಪೊಲೀಸರನ್ನು ಸ್ಥಳಕ್ಕೆ ಕರೆಸಿಕೊಂಡ ಬಜರಂಗದಳದ ಕಾರ್ಯಕರ್ತರು ಹಸುಗಳನ್ನು ಕಸಾಯಿಖಾನೆಗೆ ಸಾಗಿಸಲಾಗುತ್ತಿದೆ ಎಂದು ದೂರಿದರು. ವಾಹನವನ್ನು ತುರುವೇಕೆರೆ ಪಟ್ಟಣದ ಪೊಲೀಸ್ ಠಾಣೆಗೆ ಕರೆದೊಯ್ದು, ರೈತರ ವಿರುದ್ಧ ದೂರು ಸಲ್ಲಿಸಿದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ರೈತರನ್ನು ವಶಕ್ಕೆ ಪಡೆದರು.

ವಿಷಯ ತಿಳಿದು ಠಾಣೆಗೆ ಆಗಮಿಸಿದ ಶಾಸಕ ಎಂ.ಟಿ.ಕೃಷ್ಣಪ್ಪ, ರೈತರು ಮತ್ತು ಜಾನುವಾರುಗಳನ್ನು ಬಿಡುವಂತೆ ಒತ್ತಾಯಿಸಿ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಬಜರಂಗದಳದ ಕಾರ್ಯಕರ್ತರ ಮಾತು ಕೇಳಿ ರೈತರ ಮೇಲೆ ದೌರ್ಜನ್ಯ ನಡೆಸಿದ ಪಿಎಸ್‌ಐ ಹೊನ್ನೇಗೌಡ ಮತ್ತು ಸಿಬ್ಬಂದಿಯನ್ನು ವರ್ಗಾವಣೆ ಮಾಡುವಂತೆ ಪಟ್ಟು ಹಿಡಿದರು.

ಹಿರಿಯ ಪೊಲೀಸ್ ಅಧಿಕಾರಿಗಳ ಸೂಚನೆ ನಂತರ ರೈತರು ಮತ್ತು ಜಾನುವಾರುಗಳನ್ನು ಬಿಟ್ಟು ಕಳಿಸಲಾಯಿತು.

ಖಾಸಗಿ ಶಾಲಾ ಸಮಸ್ಯೆ ಇತ್ಯರ್ಥಕ್ಕೆ 'ಕ್ಯಾಮ್ಸ್' ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಹಾಗೂ ಸರ್ಕಾರಿ ಶಾಲೆಗಳ ಪಠ್ಯ ಬೋಧನೆಯಲ್ಲಿನ ತಾರತಮ್ಯ ಹೋಗಲಾಡಿಸುವುದೂ ಸೇರಿದಂತೆ ಹಲವು ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಕೋರಿ ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿ (ಕೆಎಎಂಎಸ್) ಮುಖಂಡರು ಸೋಮವಾರ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಮನವಿಯನ್ನು ಸಲ್ಲಿಸಿದರು.

ಶಿಕ್ಷಣ ಇಲಾಖೆ ರೂಪಿಸಿದ ಹೊಸ ನಿಯಮಗಳನ್ನು ಹಳೆಯ ಶಿಕ್ಷಣ ಸಂಸ್ಥೆಗಳ ಮೇಲೆ ಬಲವಂತವಾಗಿ ಹೇರಲಾಗುತ್ತಿದೆ. ಅಗ್ನಿ, ಕಟ್ಟಡ ಸುರಕ್ಷತೆ ಪ್ರಮಾಣಪತ್ರದ ನೆಪದಲ್ಲಿ ತೊಂದರೆ ಕೊಡಲಾಗುತ್ತಿದೆ. 2018ಕ್ಕಿಂತ ಮೊದಲಿನ ಸಂಸ್ಥೆಗಳಿಗೆ ನಿರಾಕ್ಷೇಪಣೆ ಪತ್ರ ಕಡ್ಡಾಯಗೊಳಿಸಬಾರದು. ಶಿಕ್ಷಣ ಇಲಾಖೆಯ ಆದೇಶವನ್ನು ರದ್ದುಗೊಳಿಸಿದ ನ್ಯಾಯಾಲಯದ ತೀರ್ಪು ಪರಿಗಣಿಸಬೇಕು. ಶಾಲಾ ಕಟ್ಟಡ ಪರವಾನಗಿ ಸರಳಗೊಳಿಸಬೇಕು. ಹೆಚ್ಚುವರಿ ತರಗತಿ ಆರಂಭಿಸಿದ್ದಕ್ಕೆ ಅನಧಿಕೃತ ಎಂದು ಘೋಷಿಸಿರುವ 620 ಶಾಲೆಗಳನ್ನು ಸಕ್ರಮಗೊಳಿಸಬೇಕು ಎಂದು ಕೋರಿದರು.

ರಾಜ್ಯ ಹಾಗೂ ಎನ್‌ಸಿಇಆರ್‌ಟಿ ಮಾರ್ಗದರ್ಶನದಂತೆ ಪಠ್ಯ ಪರಿಷ್ಕರಿಸಬೇಕು. ರಾಜ್ಯ ಪಠ್ಯಕ್ರಮದಲ್ಲಿ ಬೋಧಿಸುವ ಅನುಮತಿ ಪಡೆದು, ಸಿಬಿಎಸ್‌ಇ ಐಸಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯಕ್ರಮ ಬೋಧಿಸುತ್ತಿರುವ ಶಾಲಾ ಆಡಳಿತ ಮಂಡಳಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.

ಅನುಮತಿ ಪಡೆಯದೇ ನಡೆಸುತ್ತಿರುವ ಶಾಲೆಗಳ ಪಟ್ಟಿ ಮಾಡಬೇಕು ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಮತ್ತಿತರರು ಮನವಿ ಮಾಡಿದರು.

ಚಿತ್ರಾವಳಿ

ನಮ್ಮ ನೆರವು ಸೇವಾ ಟ್ರಸ್ ಆಯೋಜಿಸಿದ್ದ 'ನಮ್ಮ ನೆರವು ಸಂಭ್ರಮ2023'ದಲ್ಲಿ ಸಿಡೇದಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್ ವಿತರಿಸಲಾಯಿತು. ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ್ ಜಿ ಶಿಗೂರ್‌ಕರ್, ಬೆನೆಡಿಕ್ ಮಚಾಡೊ, ಎಎಂಎಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪಿ.ರಾಮದಾಸ್, ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಮಂಜುನಾಥ್ ಎಚ್ ಇದ್ದರು

ಬೆಂಗಳೂರಿನ ನ್ಯೂ ಹಾರಿಜನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ವಿಮೊವ್ ಫೌಂಡೇಷನ್ ಸೋಮವಾರ ಆಯೋಜಿಸಿದ್ದ 'ಆಲ್ಟರ್‌ನೆಟಿವ್ 23'– ಪರಿಸರ ಸಂರಕ್ಷಣೆ ಜಾಗೃತಿ ಕಾರ್ಯಕ್ರಮದಲ್ಲಿ ಜಾನಪದ ಗಾಯಕ ರಾಮಕುಮಾರ್ ಶಿಂಧೆ, ಝೋಪ್‌ನೋಟ್ ಸಿಇಒ ರಾಜೇಶ್ ಬಡಗೇರಿ, ವಿಮೊವ್ ಫೌಂಡೇಷನ್ ಸಂಸ್ಥಾಪಕ ವಿನಯ್ ಶಿಂಧೆ, ಪರಿಸರವಾದಿ ಕಿರಣ್ ರೆಡ್ಡಿ, ಮಹದೇವಪುರ ಕಾರ್ಯಪಡೆ ಮುಖ್ಯಸ್ಥ ಸಿ. ಜಯಕುಮಾರ್, ವಿಜ್ಞಾನಿ ವಿಶ್ವನಾಥನ್ ಇದ್ದರು.

– ಪ್ರಜಾವಾಣಿ ಚಿತ್ರ

ಅನಧಿಕೃತ ಶೆಡ್ ತೆರವಿಗೆ ಆಗ್ರಹ

ಕೆ.ಆರ್.ಪುರ: ಮಹದೇವಪುರ ವಲಯ ಹೊರಮಾವು ಉಪ ವಿಭಾಗ ವ್ಯಾಪ್ತಿಯ ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷದಿಂದ ಖಾಸಗಿ ವ್ಯಕ್ತಿಗಳು ರಸ್ತೆಗೆ ಅನಧಿಕೃತವಾಗಿ ಶೆಡ್ ಗಳನ್ನು ನಿರ್ಮಿಸಿದ್ದಾರೆ ಎಂದು ಆರೋಪಿಸಿ ಕಲ್ಕೆರೆ ಗ್ರಾಮದ ಸ್ಥಳೀಯ ನಿವಾಸಿಗಳು ಲೇಔಟ್ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಕೆ.ಆರ್.ಪುರ ಹೋಬಳಿ, ಕಲ್ಕೆರೆ ಗ್ರಾಮದ ಸರ್ವೆ ನಂಬರ್ 520 ಮತ್ತು 521 ರಲ್ಲಿ ಜಮೀನು ಭೂ ಪರಿವರ್ತನೆಗೊಂಡು ನಿರ್ಮಾಣಗೊಂಡಿರುವ ಟ್ರೀನಿಟಿ ಎನ್‌ಕ್ಲೇವ್ ಲೇಔಟ್‌ನಲ್ಲಿ ಅನಧಿಕೃತವಾಗಿ ಎರಡು ಶೆಡ್‌ಗಳನ್ನು ನಿರ್ಮಿಸಲಾಗಿದೆ. ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಲೇಜು ಆಡಳಿತ ಮಂಡಳಿ, ಹಿರಿಯ ವೈದ್ಯರ ಕಿರುಕುಳ ಆರೋಪ

ಹೊಸಕೋಟೆ: ವೈದ್ಯಕೀಯ ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಳ್ಳಾರಿಯ ಕೌಲ್ ಬಜಾರ್‌ನ ನಿವಾಸಿ
- ಹೊಸಕೋಟೆ ಎಂವಿಜೆ ವೈದ್ಯಕೀಯ ಕಾಲೇಜಿನಲ್ಲಿ ಎಂ.ಡಿ
- ಆತ್ಮಹತ್ಯೆಗೆ ಮುನ್ನ ಸ್ನೇಹಿತನಿಗೆ ಕರೆ

ಕೋಲಾರ: ಹೊಸಕೋಟೆಯ ಎಂವಿಜೆ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ವೈದ್ಯಕೀಯ ಪದವಿ ಮೊದಲ ವರ್ಷದ ವಿದ್ಯಾರ್ಥಿನಿ ಭಾನುವಾರ ಕೋಲಾರ ತಾಲ್ಲೂಕಿನ ಕೆಂದಟ್ಟಿ ಬಳಿಯ ಕಲ್ಲುಗಣಿಯಲ್ಲಿ ನಿಂತಿದ್ದ ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿಯನ್ನು ಬಳ್ಳಾರಿಯ ಕೌಲ್ ಬಜಾರ್ ನಿವಾಸಿ ಪಿ.ದರ್ಶಿನಿ (24) ಎಂದು ಗುರುತಿಸಲಾಗಿದೆ.

ಕೊಪ್ಪಳದಲ್ಲಿ ಎಂಬಿಬಿಎಸ್ ಮುಗಿಸಿದ್ದ ದರ್ಶಿನಿ ಏಳು ತಿಂಗಳ ಹಿಂದೆ ಹೊಸಕೋಟೆಯ ಎಂವಿಜೆ ಕಾಲೇಜಿನಲ್ಲಿ ಎಂ.ಡಿ (ಮಕ್ಕಳರೋಗ ಶಾಸ್ತ್ರ) ಕೋರ್ಸ್‌ಗೆ ಪ್ರವೇಶ ಪಡೆದಿದ್ದರು.

ತಂದೆಯನ್ನು ಕಳೆದುಕೊಂಡಿದ್ದ ಅವರು ಕೆಲಸದ ಒತ್ತಡದ ಜೊತೆಗೆ ಹಿರಿಯ ವೈದ್ಯರ ಕಿರುಕುಳದಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು. ಬಾಲ್ಯ ಸ್ನೇಹಿತ ಶಿವಮಣಿ ಎಂಬುವರ ಬಳಿ ಆತ್ಮಹತ್ಯೆ ವಿಚಾರ ಹಂಚಿಕೊಂಡಿದ್ದರು ಎಂದು ತಿಳಿದು ಬಂದಿದೆ.

'ಆತ್ಮಹತ್ಯೆಗೆ ಕಾಲೇಜು ಆಡಳಿತ ಮಂಡಳಿ ಹಾಗೂ ಹಿರಿಯ ವೈದ್ಯರ ಕಿರುಕುಳ ಕಾರಣ' ಎಂದು ಮೃತ ವಿದ್ಯಾರ್ಥಿನಿಯ ತಮ್ಮ ಪಿ.ಪ್ರಜ್ವಲ್, ಆಡಳಿತ ಮಂಡಳಿ ಹಾಗೂ ಹಿರಿಯ ವೈದ್ಯರ ವಿರುದ್ಧ ಕೋಲಾರ ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ದಿನವಿಡಿ ವಿಶ್ರಾಂತಿ ಇಲ್ಲದೆ ಕೆಲಸ ಮಾಡಬೇಕಾಗಿತ್ತು. ಊಟಕ್ಕೂ ಬಿಡುತ್ತಿರಲಿಲ್ಲ. ಹಿರಿಯ ವೈದ್ಯರ ಕಿರುಕುಳದ ಬಗ್ಗೆ ತಾಯಿಯ ಬಳಿಯೂ ಹೇಳಿಕೊಂಡಿದ್ದಳು. ಹಿರಿಯ ವೈದ್ಯ ಡಾ.ಮಹೇಶ್ ಎಂಬುವರ ಕಿರುಕುಳ ಹೆಚ್ಚಾಗಿತ್ತು ಮತ್ತು ಅವರು ಅಸಭ್ಯವಾಗಿ ವರ್ತಿಸುತ್ತಿದ್ದರು. ಈ ಬಗ್ಗೆ ತಾಯಿ ಹಾಗೂ ಸ್ನೇಹಿತೆ ಜೊತೆ ನನ್ನ ಅಕ್ಕ ಅಳಲು ತೋಡಿಕೊಂಡಿದ್ದಳು' ಎಂದು ಅವರು ತಿಳಿಸಿದ್ದಾರೆ.

'ಅಕ್ಕ ಉಳಿದುಕೊಂಡಿದ್ದ ಹಾಸ್ಟೆಲ್‌ಗೆ ₹2 ಲಕ್ಷ ಶುಲ್ಕ ಪಾವತಿಸಲಾಗಿತ್ತು. ಆದರೆ, ಅಲ್ಲಿ ಸರಿಯಾದ ಊಟ ಕೊಡುತ್ತಿರಲಿಲ್ಲ. ಹಾಗಾಗಿ ಅಕ್ಕ ಅರ್ಧಕ್ಕೆ ವ್ಯಾಸಂಗ ನಿಲ್ಲಿಸಲು ಮುಂದಾದಾಗ ಆಡಳಿತ ಮಂಡಳಿಯವರು ₹50 ಲಕ್ಷ ಪಾವತಿಸುವಂತೆ ಷರತ್ತು ವಿಧಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಕಾಲೇಜಿನಿಂದ 35 ಕಿ.ಮೀ ದೂರದ ಕೆಂದಟ್ಟಿ ಎಂಬಲ್ಲಿಗೆ ಹೋಗಿ ನನ್ನ ಅಕ್ಕ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವಿಲ್ಲ' ಎಂದು ಅವರು ಅನುಮಾನ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿನಿಯ ಶವವನ್ನು ಅಗ್ನಿಶಾಮಕ ದಳದ ಸಿಬ್ಬಂದಿ ನೀರಿನಿಂದ ಹೊರ ತೆಗೆದಿದ್ದಾರೆ.

ಸಸಿ ನೆಟ್ಟು ಪರಿಸರ ದಿನ ಆಚರಣೆ

ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಸಿಬ್ಬಂದಿ 12 ಶಾಖೆಗಳ ವ್ಯಾಪ್ತಿಯಲ್ಲಿ ಹೊಂಗೆ ಮತ್ತು ಬೇವಿನ ಸುಮಾರು 100 ಸಸಿಗಳನ್ನು ನೆಟ್ಟರು. ಈ ಕಾರ್ಯಕ್ರಮಕ್ಕೆ ಶಾಸಕ ರವಿ ಸುಬ್ರಮಣ್ಯ ಸೋಮವಾರ ಚಾಲನೆ ನೀಡಿದರು. ಬ್ಯಾಂಕಿನ ಅಧ್ಯಕ್ಷ ಡಾ. ಎಂ. ಆರ್. ವೆಂಕಟೇಶ್, ಉಪಾಧ್ಯಕ್ಷ ಶ್ರೀ ರಾಮೇಗೌಡ, ಬಿಬಿಎಂಪಿ ಮಾಜಿ ಸದಸ್ಯ ಕುಮಾರ್ ಇದ್ದರು.

ಸ್ವಯಂ ಜಾಗೃತಿ ತಂಡ ಹಾಗೂ ಲೊಯೋಲ ಪದವಿ ಕಾಲೇಜಿನ ವತಿಯಿಂದ ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾಲೇಜಿನ ಆವರಣದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳೊಂದಿಗೆ ಸಸಿ ನೆಡಲಾಯಿತು

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ವತಿಯಿಂದ ಜ್ಞಾನಭಾರತಿ ಆವರಣದಲ್ಲಿ ಸಸಿ ನೆಡಲಾಯಿತು. ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ. ಎಚ್‌ಆರ್ ರವೀಶ್, ಮೌಲ್ಯಮಾಪನ ಕುಲಸಚಿವ ಪ್ರೊ. ಶ್ರೀನಿವಾಸ್, ಪ್ರೊ. ಎಲ್ ರಾಜಣ್ಣ, ಪ್ರೊ. ಜಿ.ಟಿ. ದೇವರಾಜ್, ಪ್ರೊ. ಪ್ರಕಾಶ್ ಇದ್ದರು

ಪೀಣ್ಯ ದಾಸರಹಳ್ಳಿ ಸಮೀಪದ ಮಲ್ಲಸಂದ್ರದ ಕೆಂಪೇಗೌಡ ಉದ್ಯಾನದಲ್ಲಿ ಶಾಸಕ ಎಸ್ ಮುನಿರಾಜು 50ಕ್ಕೂ ಹೆಚ್ಚು ವಿವಿಧ ಬಗೆಯ ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪಾಲಿಕೆ ಜಂಟಿ ಆಯುಕ್ತ ಕೆ.ಎಚ್ ಜಗದೀಶ್, ಅರಣ್ಯ ಅಧಿಕಾರಿ ರಾಚಪ್ಪ, ತೋಟಗಾರಿಕೆ ಅಧಿಕಾರಿ ಚನ್ನೆಗೌಡ, ದಾಸರಹಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಮುಖಂಡರಾದ ಟಿ. ಶಿವಕುಮಾರ್, ಪಾಂಡುರಂಗ ರಾವ್, ಗಂಗರಾಜು, ಎಂ. ಆರ್ ಶ್ರೀನಿವಾಸ್, ಗಂಗಾಧರ್, ಹುಚ್ಚರಂಗಯ್ಯ ಇದ್ದರು.

ಉಚಿತ ಎನ್ನುವ ಕಾರಣಕ್ಕೆ ವಿದ್ಯುತ್ ವ್ಯರ್ಥ ಸಲ್ಲದು: ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ

‘ವಿದ್ಯುತ್ ದುರ್ಬಳಕೆಗೆ ಬಿಜೆಪಿ ಕುಮ್ಮಕ್ಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ದುರ್ಬಳಕೆ ಮಾಡುವಂತೆ ಬಿಜೆಪಿ ರಾಜ್ಯದ ಜನರಿಗೆ ಕುಮ್ಮಕ್ಕು ನೀಡುತ್ತಿದೆ. ಸರ್ಕಾರ ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೋಮವಾರ ಆಯೋಜಿಸಿದ್ದ ‘ವಿಶ್ವ ಪರಿಸರ ದಿನಾಚರಣೆ ಹಾಗೂ ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ’ ಸಮಾರಂಭದಲ್ಲಿ ಮಾತನಾಡಿದರು.

ಪ್ರತಿಯೊಬ್ಬರೂ ಇದುವರೆಗೆ ಬಳಸುತ್ತಿದ್ದ ವಾರ್ಷಿಕ ಸರಾಸರಿ ವಿದ್ಯುತ್‌ಗಿಂತ ಶೇ 10ರಷ್ಟು ಹೆಚ್ಚು ಬಳಸಲು ಸರ್ಕಾರ ಅವಕಾಶ ನೀಡಿದೆ. ಸರಾಸರಿ ಬಳಕೆ ಪ್ರಮಾಣ ಗರಿಷ್ಠ 200 ಯೂನಿಟ್‌ವರೆಗೆ ಅವಕಾಶವಿರುತ್ತದೆ. ಇದುವರೆಗೂ ಜನರು ಬಳಕೆ ಮಾಡುತ್ತಿದ್ದಷ್ಟೇ ಬಳಸಬೇಕು. ಉಚಿತ ಎನ್ನುವ ಕಾರಣಕ್ಕೆ ವಿದ್ಯುತ್ ವ್ಯರ್ಥ ಮಾಡಬಾರದು ಎನ್ನುವುದು ಸರ್ಕಾರದ ಆಶಯ. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಬಿಜೆಪಿ ರಾಜಕೀಯ ಲಾಭಕ್ಕೆ ಜನರನ್ನು ಪ್ರಚೋದಿಸುತ್ತಿದೆ ಎಂದು ಹರಿಹಾಯ್ದರು.

ಪರಿಸರ ಸಂರಕ್ಷಣೆಯ ಪ್ರಜ್ಞೆ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕು. ಕಾನೂನುಗಳಿಂದ ಪರಿಸರ ಉಳಿಸುವುದು ಸಾಧ್ಯವಿಲ್ಲ. ಈ ಕುರಿತು ನಿರಂತರ ಜಾಗೃತಿ ಮೂಡಿಸಬೇಕು. ಮಕ್ಕಳಲ್ಲಿ ಪ್ರಕೃತಿ ಪ್ರೀತಿ ಬೆಳೆಸಬೇಕು. ಹಿರಿಯರು ಒಳ್ಳೆಯದನ್ನು ಅನುಸರಿಸಿ ಜೀವನ ನಡೆಸಿದರೆ ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ಕೈಗಾರಿಕಾ ತ್ಯಾಜ್ಯ, ಪ್ಲಾಸ್ಟಿಕ್ ಬಳಕೆ, ಕಾಡು ಕಡಿಯುವುದು, ನೀರಿನ ದುರ್ಬಳಕೆ ಪರಿಣಾಮಗಳ ಕುರಿತು ಜನರಲ್ಲಿ ತಿಳಿವಳಿಕೆ ಮೂಡಿಸಬೇಕು. 2016ರಲ್ಲಿ ನಮ್ಮ ಸರ್ಕಾರ ಪ್ಲಾಸ್ಟಿಕ್ ಬಳಕೆ ನಿಷೇಧಿಸಿತ್ತು. ಇದರಿಂದ ಬಳಕೆಯ ಪ್ರಮಾಣ ತಕ್ಕಮಟ್ಟಿಗೆ ಕಡಿಮೆಯಾಗಿದೆ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಈಶ್ವರ ಖಂಡ್ರೆ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್ ಇದ್ದರು.

ನಗರದಲ್ಲಿ ಆಯೋಜಿಸಿದ್ದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆಗೆ ಕೊಡುಗೆ ನೀಡಿದ ಎಚ್.ಎಂ.ಮಂಜುನಾಥ್, ಡಾ.ಎಂ.ಡಿ.ಸುಭಾಷ್ ಚಂದ್ರನ್, ಡಾ.ಎಂ.ಆರ್.ದೇಸಾಯಿ (ವೈಯಕ್ತಿಕ), ಕಿದ್ವಾಯಿ ಸಂಸ್ಥೆಯ ನಿರ್ದೇಶಕ ಡಾ.ವಿ.ಲೋಕೇಶ್, ವನಸಿರಿ ಪ್ರತಿಷ್ಠಾನದ ಅಮರೇಗೌಡ, ದೇವಮ್ಮ ವನಸಿರಿ ಟ್ರಸ್ಟ್‌ನ ನಾಗಲಕ್ಷ್ಮಿ (ಸಾಂಸ್ಥಿಕ) ಅವರಿಗೆ ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಚಿವರಾದ ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಈಶ್ವರ ಖಂಡ್ರೆ ಇದ್ದಾರೆ – ಪ್ರಜಾವಾಣಿ ಚಿತ್ರ.

ಗಮನ ಸೆಳೆದ ಕೀಟಗಳ ಪ್ರಾತ್ಯಕ್ಷಿಕೆ

ಪರಿಸರ ಸಮತೋಲನ, ಆಹಾರ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುವ ಕೀಟಗಳು, ಜೇನು, ಮಿಂಚುಹುಳುಗಳ ಜೀವನಕ್ರಮ ಪ್ರಾತ್ಯಕ್ಷಿಕೆಯನ್ನು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಹಮ್ಮಿಕೊಂಡಿತ್ತು.

ಆಹಾರ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುವ ಕೀಟಗಳ ಸಂತತಿ ಕ್ಷೀಣಿಸುತ್ತಿದ್ದು, ಅವುಗಳನ್ನು ಉಳಿಸಿಕೊಳ್ಳದೇ ಹೋದರೆ ಭವಿಷ್ಯದ ಆಹಾರ ಉತ್ಪಾದನೆಯ ಮೇಲೆ ಗಂಭೀರ ಪರಿಣಾಮ ಬೀರಬಹುದು ಎಂಬ ಮಾಹಿತಿ ಜನರಿಗೆ ತಿಳಿಸಲಾಯಿತು.

ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮ, ಮರುಬಳಕೆ, ತ್ಯಾಜ್ಯಸಂಸ್ಕರಣೆ, ನೀರಿನ ಮಿತ ಬಳಕೆ, ನೈಸರ್ಗಿಕ ಇಂಧನಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು.

ಜೈಲಿನಲ್ಲಿ ಪರಿಸರ ದಿನ: ಸಸಿ ನೆಟ್ಟು ನೀರುಣಿಸಿದ ಮುಖ್ಯ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಶ್ವ ಪರಿಸರ ದಿನವನ್ನು ಸೋಮವಾರ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ವರಾಳೆ ಹಾಗೂ ನ್ಯಾಯಮೂರ್ತಿ ಕೆ. ಸೋಮಶೇಖರ್, ಕಾರಾಗೃಹದ ಆವರಣದಲ್ಲಿ ಸಸಿ ನೆಟ್ಟು ನೀರುಣಿಸಿದರು.

ನಂತರ, ಕಾರಾಗೃಹದಲ್ಲಿರುವ ಬೇಕರಿ ಹಾಗೂ ಅಡುಗೆ ಕೊಠಡಿಗೆ ಭೇಟಿ ನೀಡಿ ಪರಿಶೀಲಿಸಿದರು. ಕೈದಿಗಳಿಗೆ ಉದ್ಯೋಗ ತರಬೇತಿ ನೀಡುವ ಉದ್ದೇಶದಿಂದ ಜೈಲಿನಲ್ಲಿ ಆರಂಭಿಸಿರುವ ಅಡಿಕೆ ತಟ್ಟೆ ತಯಾರಿಕೆ ಘಟಕವನ್ನು ಉದ್ಘಾಟಿಸಿದರು.

ಮುಖ್ಯ ನ್ಯಾಯಮೂರ್ತಿ ಪ್ರಸನ್ನ ವರಾಳೆ ಮಾತನಾಡಿ, ‘ಪರಿಸರವನ್ನು ನಾವು ಹಸಿರಾಗಿಡಬೇಕು. ಇಂದು ಸಸಿ ನೆಟ್ಟರೆ, ಭವಿಷ್ಯದಲ್ಲಿ ಉಪಯೋಗವಾಗುತ್ತದೆ’ ಎಂದರು.

‘ಮರಗಳನ್ನು ಕತ್ತರಿಸಿ ತಯಾರಿಸುವ ಕಾಗದ ಹಾಗೂ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿದೆ. ನಿತ್ಯವೂ 400 ಟನ್‌ನಷ್ಟು ಪ್ಲಾಸ್ಟಿಕ್ ನಮ್ಮ ಪರಿಸರ ಸೇರುತ್ತಿದೆ. ಕಾಗದ ಮತ್ತು ಪ್ಲಾಸ್ಟಿಕ್‌ನಿಂದ ತಯಾರಿಸುವ ವಸ್ತುಗಳ ಬಳಕೆಯನ್ನು ಕಡಿಮೆ ಮಾಡಬೇಕು’ ಎಂದು ಹೇಳಿದರು.

‘ಜೈಲಿನ ಕೈದಿಗಳು, ಉದ್ಯೋಗದ ಕೌಶಲ ಬೆಳೆಸಿಕೊಳ್ಳಬೇಕು. ಜೈಲಿನ ಬೇಕರಿ ಉತ್ಪನ್ನಗಳು ಹಾಗೂ ಬಟ್ಟೆಗಳ ಗುಣಮಟ್ಟ ಚೆನ್ನಾಗಿದೆ. ಇವುಗಳಿಗೆ ಕರ್ನಾಟಕ ಪ್ರಿಸನ್ಸ್ (ಕೆ.ಪಿ) ಬ್ರ್ಯಾಂಡ್ ಹೆಸರಿಡಲಾಗಿದೆ. ಇಲ್ಲಿಂದಲೇ, ಶಾಲಾ ಮಕ್ಕಳಿಗೆ ಬಿಳಿ ಅಂಗಿ ಹಾಗೂ ಇತರೆ ಬಟ್ಟೆಗಳನ್ನು ಪೂರೈಸುವ ಕೆಲಸವಾದರೆ ಖುಷಿಯಾಗುತ್ತದೆ’ ಎಂದರು.

ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಕೆ.ಎಸ್. ಭರತ್‌ಕುಮಾರ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಕಾರಾಗೃಹ ಮತ್ತು ಸುಧಾರಣೆ ಇಲಾಖೆ ಎಡಿಜಿಪಿ ಮನೀಶ್ ಕರ್ಬಿಕರ್, ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್. ರಮೇಶ್, ಅಧೀಕ್ಷಕ ಮಲ್ಲಿಕಾರ್ಜುನ್ ಸ್ವಾಮಿ ಇದ್ದರು.

ಪ್ಲಾಸ್ಟಿಕ್ ತ್ಯಾಜ್ಯದಿಂದ ಕೊಠಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾಸ್ಟಿಕ್ ತ್ಯಾಜ್ಯದಿಂದ ಬೋರ್ಡ್ ತಯಾರಿಸಿ, ಅವುಗಳಿಂದ ಟೇಬಲ್, ಬೆಂಚ್‌ಗಳನ್ನು ತಯಾರಿಸಲಾಗುತ್ತಿದೆ. ಮೆಂಡಲೀಜ್ ಇಂಟರ್‌ನ್ಯಾಷನಲ್‌ನ ‘ಡಬ್ಲ್ಯುಒಡಬ್ಲ್ಯು (ವೇಸ್ಟ್ ಔಟ್ ಆಫ್ ವೇಸ್ಟ್) ಬೋರ್ಡ್’ಗಳು ಪರಿಸರದ ಮೇಲಿನ ಹಾನಿಯನ್ನು ಕಡಿತಮಾಡುತ್ತಿವೆ.

‘ಬಹು-ಪದರಗಳ ‘ಡಬ್ಲ್ಯುಒಡಬ್ಲ್ಯು ಬೋರ್ಡ್’ಗಳು ಸಾಂಪ್ರದಾಯಿಕ ಪ್ಲೇವುಡ್‌ಗೆ ಪರ್ಯಾಯವಾಗಿದ್ದು, ಸುಸ್ಥಿರ ಮತ್ತು ದೀರ್ಘ ಬಾಳಿಕೆ ಬರಲಿವೆ. ಹಸಿರು ದಳ ಮತ್ತು ಟ್ರಾಶ್‌ಕಾನ್ ಸಹಯೋಗ ಹಾಗೂ ಪರಿಣತಿಯೊಂದಿಗೆ ಇವುಗಳನ್ನು ತಯಾರಿಸಲಾಗುತ್ತಿದೆ. ಶಾಲೆಗಳಲ್ಲಿ ಅಳವಡಿಸಲಾಗುತ್ತಿದೆ’ ಎಂದು ಮೆಂಡಲೀಜ್ ಇಂಟರ್‌ನ್ಯಾಷನಲ್‌ನ ಭಾರತದ ಹಿರಿಯ ನಿರ್ದೇಶಕ ಒಫಿರಾ ಭಾಟಿಯಾ ಹೇಳಿದರು.

‘ಮೆಂಡಲೀಜ್ ವತಿಯಿಂದ ಈಗಾಗಲೇ 600 ಎಂಎಲ್‌ಟಿ ಟನ್ ಪ್ಲಾಸ್ಟಿಕ್ ತ್ಯಾಜ್ಯವನ್ನು ಬೋರ್ಡ್‌ಗಳಾಗಿ ಪರಿವರ್ತಿಸಲಾಗಿದೆ. ಸಿದ್ಧಾರ್ಥನಗರ, ಎಂ.ಎಸ್. ಪಾಳ್ಯದ ಸರ್ಕಾರಿ ಶಾಲೆ, ಆರ್.ಕೆ. ಸ್ಕೂಲ್, ಜೊಲಿ ಮೊಹಲ್ಲಾ ಮತ್ತು ಸಾರಕ್ಕಿಯಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಟೇಬಲ್, ಕುರ್ಚಿಗಳನ್ನು ‘ಡಬ್ಲ್ಯುಒಡಬ್ಲ್ಯು ಬೋರ್ಡ್’ಗಳಲ್ಲಿ ತಯಾರಿಸಿ ನೀಡಲಾಗಿದೆ. ಸ್ವಚ್ಛ ಕಲಿಕಾ ಕೇಂದ್ರದಲ್ಲಿ ಇದೇ ಬೋರ್ಡ್‌ಗಳಿಂದ ಚಾವಣಿಯನ್ನೂ ನಿರ್ಮಿಸಲಾಗಿದೆ. ಆಡುಗೋಡಿಯಲ್ಲಿರುವ ನಗರ ಮೀಸಲು ಶಸ್ತ್ರಾಸ್ತ್ರ ಕೇಂದ್ರದ ಆವರಣದಲ್ಲಿ ಕಾರ್ಮಿಕರಿಗೆ ಕೊಠಡಿಯನ್ನೂ ನಿರ್ಮಿಸಿಕೊಡಲಾಗಿದೆ’ ಎಂದರು.

‘ ‘ಡಬ್ಲ್ಯುಒಡಬ್ಲ್ಯು ಬೋರ್ಡ್’ಗಳ ಮೂಲಕ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಪರಿವರ್ತಿಸಿ, ಸುಸ್ಥಿರ ಅಭಿವೃದ್ಧಿಯ ಸವಾಲುಗಳನ್ನು ನಿರ್ವಹಿಸಲಾಗುತ್ತಿದೆ’ ಎಂದು ಹೇಳಿದ್ದಾರೆ.

ಆಡುಗೋಡಿಯಲ್ಲಿರುವ ನಗರ ಶಸ್ತ್ರಾಸ್ತ್ರ ಮೀಸಲು ಪಡೆ ಆವರಣದಲ್ಲಿ ಡಬ್ಲ್ಯುಒಡಬ್ಲ್ಯು ಬೋರ್ಡ್‌ಗಳಿಂದ ನಿರ್ಮಿಸಿರುವ ಕೊಠಡಿ

ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಬೆಂಗಳೂರು ಯಲಹಂಕದಲ್ಲಿರುವ ರೈಲ್ ಫ್ಯಾಕ್ಟರಿಯಲ್ಲಿ ಸೋಮವಾರ ಆರ್‌ಡಬ್ಲ್ಯುಎಫ್ ಪ್ರಧಾನ ವ್ಯವಸ್ಥಾಪಕ ಎಂ. ಅಮರೇಂದ್ರ ಗಿಡ ನೆಟ್ಟರು

‘ಪಿವಿಸಿ ಬಳಕೆಯಿಂದ ದುಷ್ಪರಿಣಾಮ’

ಬೆಂಗಳೂರು: ಭಾರತೀಯ ರೈಲ್ವೆಯ ರೈಲ್ ಫ್ಯಾಕ್ಟರಿಯಲ್ಲಿ ಸೋಮವಾರ ವಿಶ್ವ ಪರಿಸರ ದಿನ ಆಚರಿಸಲಾಯಿತು.

ನಿವೃತ್ತ ಐಎಫ್‌ಎಸ್ ಅಧಿಕಾರಿ ಎ.ಎನ್. ಯಲ್ಲಪ್ಪ ರೆಡ್ಡಿ ಮಾತನಾಡಿ, ‘ಪಿವಿಸಿ ಬಳಕೆಯ ದುಷ್ಪರಿಣಾಮಗಳು ಮನುಷ್ಯರ ಮೇಲೆ ಮಾತ್ರವಲ್ಲ, ಪ್ರಾಣಿ, ಪಕ್ಷಿಗಳ ಮೇಲೂ ಆಗುತ್ತಿದೆ’ ಎಂದು ಹೇಳಿದರು.

ಆರ್‌ಡಬ್ಲ್ಯುಎಫ್ ಪ್ರಧಾನ ವ್ಯವಸ್ಥಾಪಕ ಎಂ. ಅಮರೇಂದ್ರ ಅಧ್ಯಕ್ಷತೆ ವಹಿಸಿ ಮಾತನಾಡಿ, ‘ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು. ಅದರ ಬದಲಿಯಾಗಿ ಪರಿಸರಕ್ಕೆ ಪೂರಕವಾದ ವಸ್ತುಗಳನ್ನು ಬಳಸಬೇಕು’ ಎಂದು ಸಲಹೆ ನೀಡಿದರು. ರೈಲ್‌ವೀಲ್ ಫ್ಯಾಕ್ಟರಿಯ ಮುಖ್ಯ ಪರಿಸರ ಅಧಿಕಾರಿ ಎನ್.ಕೆ. ಬರ್ನವಾಲ್, ಕೇರಳದ ತೆಂಗಿನಕಾಯಿ ಅಭಿವೃದ್ಧಿ ಮಂಡಳಿಯ ನಿರ್ದೇಶಕ ಷಣ್ಮುಗಸುಂದರಂ ಇದ್ದರು.

‘ಸಸಿ ಪೋಷಣೆ: ಮಕ್ಕಳಿಗೆ ಬಹುಮಾನ ನೀಡಿ’

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ರಸ್ತೆ ಬದಿಯಲ್ಲಿ ಗಿಡ ನೆಟ್ಟು, ಅದನ್ನು ಬೆಳೆಸುವ ಜವಾಬ್ದಾರಿಯನ್ನು ಶಾಲಾ ಮಕ್ಕಳಿಗೆ ನೀಡಬೇಕು. ಅದಕ್ಕೆ ಬೇಕಾದ ರಕ್ಷಾ ಕವಚವನ್ನು ಬಿಬಿಎಂಪಿ ನೀಡಬೇಕು. ಗಿಡಕ್ಕೆ ಮಕ್ಕಳು ಹೆಸರಿಟ್ಟುಕೊಳ್ಳುವ ಅವಕಾಶ ನೀಡಬೇಕು. ಉತ್ತಮವಾಗಿ ಪೋಷಿಸಿದವರಿಗೆ ಬಹುಮಾನ ನೀಡಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ರಾಚೇನಹಳ್ಳಿಯ ಪರಿಸರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ನಗರದಲ್ಲಿ ಎಷ್ಟು ರಸ್ತೆ ಬದಿಗಳಲ್ಲಿ ಮರಗಳಿಲ್ಲ ಎಂಬ ಬಗ್ಗೆ ಬಿಬಿಎಂಪಿ ತಕ್ಷಣ ವರದಿ ಸಿದ್ಧಪಡಿಸಬೇಕು. ಆ ರಸ್ತೆ ಬದಿಗಳಲ್ಲಿ ಮಕ್ಕಳಿಗೆ ಗಿಡ ಬೆಳಸಲು ಅವಕಾಶ ನೀಡಬೇಕು. ಈ ವಿಚಾರದಲ್ಲಿ ಮಕ್ಕಳಲ್ಲಿ ಸ್ಪರ್ಧೆ ಏರ್ಪಡಿಸಬೇಕು. ಆಗ ಮಕ್ಕಳು ಕಾಳಜಿಯಿಂದ ಗಿಡಗಳನ್ನು ಪೋಷಿಸುತ್ತಾರೆ. ನಾವು ಮಕ್ಕಳನ್ನು ಸಾಕುವಂತೆ ಮರ ಗಿಡಗಳನ್ನು ಸಲಹಬೇಕು. ಆಗ ಪರಿಸರ ದಿನಕ್ಕೆ ಅರ್ಥ ಬರುತ್ತದೆ. ಮುಂದಿನ ಒಂದು ತಿಂಗಳಲ್ಲಿ ಈ ಬಗ್ಗೆ ಒಂದು ಪರಿಪೂರ್ಣ ಯೋಜನೆ ರೂಪಿಸಬೇಕು’ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

‘ಬೆಂಗಳೂರು ನಗರ ಅಭಿವೃದ್ಧಿ ಖಾತೆಯನ್ನೂ ಹೊಂದಿರುವ ನಾನು ಬಿಬಿಎಂಪಿ ಅಧಿಕಾರಿಗಳಿಗೆ ನೀಡುತ್ತಿರುವ ಮೊದಲನೆಯ ಟಾಸ್ಕ್ ಇದು. ಇದನ್ನು ಕೂಡಲೇ ಅನುಷ್ಠಾನಗೊಳಿಸಬೇಕು’ ಎಂದು ತಾಕೀತು ಮಾಡಿದರು.

‘ವಿಶ್ವ ಪರಿಸರ ದಿನ ಕೇವಲ ಸಾಂಕೇತಿಕ ಮಾತ್ರ. ನಾವು ಪ್ರತಿನಿತ್ಯ ಪರಿಸರ ಸಂರಕ್ಷಣೆ ಮಾಡಬೇಕು. ಆಗ ಮಾತ್ರ ಪರಿಸರಕ್ಕೆ ಶಕ್ತಿ ತುಂಬಲು ಸಾಧ್ಯ. ಹೀಗಾಗಿ ಪರಿಸರ ಸಂರಕ್ಷಣೆ ವಿಚಾರದಲ್ಲಿ ಅರಣ್ಯ ಇಲಾಖೆ, ಪಾಲಿಕೆ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಶಾಶ್ವತವಾದ ಯೋಜನೆಗಳ ಬಗ್ಗೆ ಗಮನ ಹರಿಸಬೇಕು. ಪ್ರತಿನಿತ್ಯ ಪರಿಸರ ಸಂರಕ್ಷಣೆ ಬಗ್ಗೆ ಗಮನಹರಿಸುವಂತೆ ಯೋಜನೆ ರೂಪಿಸಬೇಕು. ಇದು ಒಂದು ದಿನದ ಕೆಲಸವಲ್ಲ’ ಎಂದರು.

‘ಪರಿಸರ ಹೇಗೆ ಬಳಸಿಕೊಳ್ಳಬೇಕು, ಹೇಗೆ ಸಂರಕ್ಷಿಸಿಕೊಳ್ಳಬೇಕು ಎಂದು ಮಕ್ಕಳಿಗೆ ತರಬೇತಿ, ಮಾರ್ಗದರ್ಶನ ನೀಡಬೇಕು. ಉದ್ಯಾನಗಳಲ್ಲಿ ಮರಗಳನ್ನು ಬೆಳೆಸುವುದರಲ್ಲಿ ಅರ್ಥವಿಲ್ಲ. ಉದ್ಯಾನಗಳಲ್ಲಿ ಅರಣ್ಯ ನಿರ್ಮಿಸುವುದು ಬೇಡ. ಎಲ್ಲಿ ಮರಗಳು ಇಲ್ಲವೋ ಅಲ್ಲಿ ಗಿಡ ನೆಡಬೇಕು’ ಎಂದು ಸೂಚಿಸಿದರು.

‘ನಗರವು ತನ್ನ ಹಸಿರು ಪರಿಸರದಿಂದ ಹೆಸರು ಮಾಡಿದೆ. ಹೀಗಾಗಿ ನಗರದಲ್ಲಿ ಹಸಿರಿನ ಪ್ರಮಾಣ ಹೆಚ್ಚಿಸಲು ಸೂಕ್ತ ಯೋಜನೆ ರೂಪಿಸಬೇಕು. ಖಾಸಗಿ ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಈ ಪರಿಸರ ಸಂರಕ್ಷಣೆ ಕೆಲಸ ಮಾಡಬೇಕು’ ಎಂದರು.

ಪೀಣ್ಯ ದಾಸರಹಳ್ಳಿ ಸಮೀಪದ ಸುಂಕದಕಟ್ಟೆಯ ವಿದ್ಯಾನಿಕೇತನ್ ಪಬ್ಲಿಕ್ ಶಾಲೆಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಜಾಥಾ ನಡೆಯಿತು

ಯಲಹಂಕ ಕ್ಷೇತ್ರದ ಗಂಟಿಗಾನಹಳ್ಳಿ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಯಕರ್ನಾಟಕ ಜನಪರ ವೇದಿಕೆಯಿಂದ ಗಿಡ ನೆಡಲಾಯಿತು. ಆಯುಷ್ ಇಲಾಖೆಯ ಆಯುಕ್ತ ಜೆ.ಮಂಜುನಾಥ್, ವೇದಿಕೆ ಯುವ ಸಂಸ್ಥಾಪಕ ಅಧ್ಯಕ್ಷ ಬಿ.ಗುಣರಂಜನ್ ಶೆಟ್ಟಿ, ಬೆಂಗಳೂರು ಜಿಲ್ಲಾ ಅಧ್ಯಕ್ಷ ಜೆ.ಶ್ರೀನಿವಾಸ್, ಡಿಆರ್‌ಎಫ್ ಶಿವರಾಜ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪೂಣಚ್ಚ, ಉಪಾಧ್ಯಕ್ಷ ಲಕ್ಷ್ಮೀಪತಿ ಇದ್ದರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಚೇರಿಯ ಆವರಣದಲ್ಲಿ ಸೋಮವಾರ ಗಿಡ ನೆಟ್ಟು ವಿಶ್ವ ಪರಿಸರ ದಿನ ಆಚರಿಸಲಾಯಿತು

‘ಉಗುಳಿದವರಿಂದ ₹7.25 ಲಕ್ಷ ದಂಡ ವಸೂಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಚೇರಿಯ ಆವರಣದಲ್ಲಿ ಸೋಮವಾರ ಗಿಡ ನೆಟ್ಟು ವಿಶ್ವ ಪರಿಸರ ದಿನ ಆಚರಿಸಲಾಯಿತು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಮಾತನಾಡಿ, ‘ಬಸ್ ನಿಲ್ದಾಣ, ಘಟಕ, ವಿಭಾಗೀಯ ಕಚೇರಿ, ಕಾರ್ಯಾಗಾರಗಳಲ್ಲಿ ಧೂಮಪಾನ ನಿಷೇಧಿಸಲಾಗಿದೆ. ನಿಯಮ ಉಲ್ಲಂಘಿಸಿದವರಿಗೆ ತಲಾ ₹ 200ರಂತೆ ದಂಡ ವಿಧಿಸಲಾಗಿದೆ. 2022–23ರಲ್ಲಿ ₹ 29.51 ಲಕ್ಷ ದಂಡ ಸಂಗ್ರಹವಾಗಿದೆ. ಬಯಲು ಮೂತ್ರ ವಿಸರ್ಜನೆ ಮಾಡಿದವರಿಗೆ ತಲಾ ₹ 100 ದಂಡ ವಿಧಿಸಲಾಗಿದೆ. ಒಂದು ವರ್ಷದಲ್ಲಿ ₹ 17.12 ಲಕ್ಷ ದಂಡ ಸಂಗ್ರಹವಾಗಿದೆ. ಸಾರ್ವಜನಿಕವಾಗಿ ಉಗುಳಿದವರಿಂದ ₹ 7.25 ಲಕ್ಷ ದಂಡ ಸಂಗ್ರಹಿಸಲಾಗಿದೆ’ ಎಂದು ವಿವರಿಸಿದರು.

ನಿರ್ದೇಶಕ ಪ್ರಶಾಂತ್ ಕುಮಾರ್ ಮತ್ತು ಸಿಬ್ಬಂದಿ ಇದ್ದರು.

ಪರಿಸರ ಸಂರಕ್ಷಣೆಗಾಗಿ 1,118 ಬಸ್‌ಗಳ ನಿಷ್ಕ್ರಿಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಈ ವರ್ಷ ಬಿಎಂಟಿಸಿಯ 1,118 ಹಳೇ ಬಸ್‌ಗಳನ್ನು ನಿಷ್ಕ್ರಿಯ ಗೊಳಿಸಲಾಗುವುದು. ಅದರಲ್ಲಿ 146 ಬಸ್‌ಗಳನ್ನು ಈಗಾಗಲೇ ನಿಷ್ಕ್ರಿಯಗೊಳಿಸಲಾಗಿದೆ’ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಜಿ. ಅವರು ತಿಳಿಸಿದರು.

ವಿಶ್ವ ಪರಿಸರ ದಿನದ ಪ್ರಯುಕ್ತ ಬಿಎಂಟಿಸಿ ಕೇಂದ್ರ ಕಚೇರಿ ಆವರಣದಲ್ಲಿ ಸೋಮವಾರ ಗಿಡ ನೆಟ್ಟು ನೀರುಣಿಸಿ ಅವರು ಮಾತನಾಡಿದರು.

ಕಳೆದ ವರ್ಷ 485 ಬಸ್‌ಗಳನ್ನು ನಿಷ್ಕ್ರಿಯ ಗೊಳಿಸಲಾಗಿತ್ತು. ಈ ವರ್ಷ ಕಡಿಮೆ ಹೊಗೆ ಸೂಸುವ 1643 ಬಸ್‌ಗಳನ್ನು ಖರೀದಿಸಲಾಗುವುದು. ಗುತ್ತಿಗೆ ಆಧಾರದಲ್ಲಿ 323 ಎಲೆಕ್ಟ್ರಿಕಲ್ ಬಸ್‌ಗಳು ಓಡುತ್ತಿವೆ. ಈ ವರ್ಷ 1,050 ಎಲೆಕ್ಟ್ರಿಕ್ ಬಸ್‌ಗಳನ್ನು ಓಡಿಸಲಾಗುವುದು ಎಂದು ಅವರು ಹೇಳಿದರು.

ವಿಶ್ವ ಪರಿಸರ ದಿನದ ಪ್ರಯುಕ್ತ ಬಿಎಂಟಿಸಿ ಕೇಂದ್ರ ಕಚೇರಿ ಆವರಣದಲ್ಲಿ ಸೋಮವಾರ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಜಿ. ಗಿಡ ನೆಟ್ಟು ನೀರುಣಿಸಿದರು

ಸುಭಾಷಿತ

ಬುದ್ಧಿವಂತಿಕೆಯಿಂದ ಬದುಕುವವನು ಸಾವಿಗೂ ಅಂಜುವುದಿಲ್ಲ.

–ಗೌತಮ ಬುದ್ಧ

ಬಾಲೇಶ್ವರ ರೈಲು ದುರಂತ ಪ್ರಯಾಣಿಕರ ಸುರಕ್ಷತೆ ಆದ್ಯತೆಯಾಗಲಿ

ಒಡಿಶಾದ ಬಾಲೇಶ್ವರ ಜಿಲ್ಲೆಯಲ್ಲಿ ಎರಡು ಸೂಪರ್ ಫಾಸ್ಟ್ ರೈಲುಗಳು ಹಾಗೂ ಒಂದು ಸರಕು ಸಾಗಣೆ ರೈಲಿನ ನಡುವೆ ಸಂಭವಿಸಿದ ಅಪಘಾತವು 275ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿದೆ. ಒಂದು ಸಾವಿರಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ. ಈ ದುರಂತವು ದೇಶವನ್ನು ಆಘಾತದ ಸ್ಥಿತಿಗೆ ತಳ್ಳಿದೆ. ಅಲ್ಲದೆ, ರೈಲು ಪ್ರಯಾಣದ ಸುರಕ್ಷತೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮತ್ತೆ ಮುನ್ನೆಲೆಗೆ ತಂದಿದೆ. ಅಪಘಾತಕ್ಕೆ ಕಾರಣ ಏನು ಎಂಬ ವಿಚಾರವಾಗಿ ಹಲವು ಅಭಿಪ್ರಾಯಗಳು ಬಂದಿವೆ. ಚೆನ್ನೈಗೆ ತೆರಳುತ್ತಿದ್ದ ಕೋರೊಮಂಡಲ್-ಶಾಲಿಮಾರ್ ಎಕ್ಸ್‌ಪ್ರೆಸ್ ರೈಲು ಸರಕು ಸಾಗಣೆ ರೈಲಿಗೆ ಮೊದಲು ಡಿಕ್ಕಿ ಹೊಡೆದಿದೆ. ಅದರ ಬೋಗಿಗಳು ಉರುಳಿ ಪಕ್ಕದ ಹಳಿಯ ಮೇಲೆ ಬಿದ್ದಿವೆ. ಕೆಲವೇ ನಿಮಿಷಗಳ ನಂತರದಲ್ಲಿ, ಆ ಹಳಿಯಲ್ಲಿ ಬಂದ ಬೆಂಗಳೂರು-ಹೌರಾ ಎಕ್ಸ್‌ಪ್ರೆಸ್ ರೈಲು ಉರುಳಿಬಿದ್ದಿದ್ದ ಬೋಗಿಗಳಿಗೆ ಅಪ್ಪಳಿಸಿದೆ. ಇವೆಲ್ಲವೂ ಕೆಲವೇ ನಿಮಿಷಗಳ ಅಂತರದಲ್ಲಿ ನಡೆದುಹೋಗಿವೆ. ಮೂರು ರೈಲುಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ನೂರಾರು ಜೀವಗಳು ಇನ್ನಿಲ್ಲವಾಗಿವೆ. ಹಲವು ಕುಟುಂಬಗಳು ಅನಾಥವಾಗಿವೆ. ಅಪಘಾತದಲ್ಲಿ ಬದುಕಿ ಉಳಿದವರು ಆಘಾತದಿಂದ ಹೊರಬರಲು ವರ್ಷಗಳೇ ಬೇಕಾಗಬಹುದು. ಬಾಲೇಶ್ವರದಲ್ಲಿ ಆಗಿರುವ ದುರ್ಘಟನೆಯು ಮೂರು ದಶಕಗಳಲ್ಲಿ ದೇಶ ಕಂಡ ಅತ್ಯಂತ ಭೀಕರ ರೈಲು ಅಪಘಾತ ಎಂದು ಹೇಳಲಾಗುತ್ತಿದೆ. ಕೋಟ್ಯಂತರ ಜನರಿಗೆ ಸುರಕ್ಷಿತ ಪ್ರಯಾಣದ ಖಾತರಿ ಕೊಡಬೇಕಿರುವ ರೈಲ್ವೆ ಇಲಾಖೆಯ ವಿಶ್ವಾಸಾರ್ಹತೆಗೆ ಇದು ಗಂಭೀರ ಏಟು ಕೊಟ್ಟಿದೆ.

ಕಾಕೋಡ್ಕರ್ ಸಮಿತಿಯ ಶಿಫಾರಸು ಮತ್ತು ರೈಲ್ವೆ ಸುರಕ್ಷತೆಗಾಗಿ ಸ್ವತಂತ್ರ ಏಜೆನ್ಸಿಯೊಂದನ್ನು ಆರಂಭಿಸುವ ಪ್ರಸ್ತಾವ ಶೀಘ್ರ ಅನುಷ್ಠಾನಕ್ಕೆ ಬರಲಿ

ಅಪಘಾತ ನಡೆಯಲು ಕಾರಣ ಏನು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆಯು ಪೂರ್ಣಗೊಳ್ಳುವುದಕ್ಕೆ ಒಂದಿಷ್ಟು ಕಾಲ ಬೇಕೇಬೇಕು. ಆದರೆ ಸಿಗ್ನಲಿಂಗ್ ವ್ಯವಸ್ಥೆಯಲ್ಲಿನ ಲೋಪವು ಅಪಘಾತಕ್ಕೆ ಕಾರಣ ಎಂದು ಭಾವಿಸಲಾಗಿದೆ. ಈ ಲೋಪವು ಮನುಷ್ಯಕೃತವೇ? ಅಥವಾ ಇದು ಮನುಷ್ಯನ ನಿಲುಕಿಗೆ ಸಿಗದೆ ಆಗಿರುವಂಥದ್ದೇ? ವಿಧ್ವಂಸಕ ಕೃತ್ಯದಿಂದಾಗಿ ದುರಂತ ಸಂಭವಿಸಿರುವ ಸಾಧ್ಯತೆ ಇದೆ ಎಂದು ರೈಲ್ವೆ ಇಲಾಖೆ ಹೇಳಿದೆ. ಅದಾಗಲೇ ಒಂದು ರೈಲು ಇದ್ದ ಹಳಿಯಲ್ಲಿ ಸೂಪರ್‌ಫಾಸ್ಟ್ ರೈಲೊಂದು ಸಂಚರಿಸಿದ್ದು ವಿಚಿತ್ರ. ಅದಕ್ಕಿಂತ ಹೆಚ್ಚು ವಿಚಿತ್ರ ವಾಗಿರುವುದು, ಆ ಕಡೆ ಬರುತ್ತಿದ್ದ ಇನ್ನೂ ಒಂದು ರೈಲಿಗೆ ಅಪಾಯದ ಯಾವ ಮುನ್ಸೂಚನೆಯೂ ಸಿಗದೆ ಇದ್ದುದು. ಬೇಸರದ ಸಂಗತಿಯೆಂದರೆ, ಸುರಕ್ಷತಾ ವ್ಯವಸ್ಥೆಯಲ್ಲಿನ ಲೋಪಗಳು ಅಥವಾ ಆ ವ್ಯವಸ್ಥೆಯ ವೈಫಲ್ಯವು ಕಣ್ಣಿಗೆ ರಾಚುವುದು ಒಂದು ದುರ್ಘಟನೆ ಸಂಭವಿಸಿದಾಗ ಮಾತ್ರ. ನಂತರ, ಮತ್ತೊಂದು ದುರ್ಘಟನೆ ನಡೆಯುವವರೆಗೆ ಆ ಲೋಪಗಳು ಮರೆತುಹೋಗಿರುತ್ತವೆ. ವ್ಯಾಪಕ ಪ್ರಚಾರ ಪಡೆದಿರುವ ಹಾಗೂ ಸ್ವದೇಶಿ ನಿರ್ಮಿತ ಎಂಬ ಹೆಗ್ಗಳಿಕೆ ಹೊಂದಿರುವ ಕವಚ್ ವ್ಯವಸ್ಥೆಯನ್ನು 1,500 ಕಿ.ಮೀ. ರೈಲು ಮಾರ್ಗದಲ್ಲಿ ಮಾತ್ರ ಅಳವಡಿಸಲಾಗಿದೆ. ಕವಚ್ ವ್ಯವಸ್ಥೆಯು ರೈಲುಗಳು ಪರಸ್ಪರ ಡಿಕ್ಕಿ ಆಗುವುದನ್ನು ತಡೆಯುತ್ತದೆ. ದೇಶದಲ್ಲಿ ಇರುವ ರೈಲು ಮಾರ್ಗದ ಉದ್ದವು 70 ಸಾವಿರ ಕಿ.ಮೀ. ಆಗಿದೆ. ರೈಲ್ವೆ ಇಲಾಖೆಯಲ್ಲಿ ಹಲವು ಮೂಲಸೌಕರ್ಯಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಆದರೆ ಇನ್ನೊಂದೆಡೆ, ಸಮಯಮಿತಿಯಲ್ಲಿ ಪೂರ್ಣಗೊಳಿಸುವುದಾಗಿ ಹೇಳಿದ್ದ ಹಲವು ಯೋಜನೆಗಳು ಇನ್ನೂ ಪೂರ್ಣಗೊಂಡಿಲ್ಲ.

2021-22ರಲ್ಲಿ ರೈಲ್ವೆ ಸುರಕ್ಷತೆಗೆ ತೆಗೆದು ಇರಿಸಿದ್ದ ₹ 2.15 ಲಕ್ಷ ಕೋಟಿ ಮೊತ್ತದಲ್ಲಿ ₹ 1.9 ಲಕ್ಷ ಕೋಟಿ ಮೊತ್ತವನ್ನು ಮಾತ್ರ ವಿನಿಯೋಗಿಸಲಾಗಿದೆ ಎಂದು ವರದಿಯಾಗಿದೆ. ಅತ್ಯುತ್ತಮ ತಂತ್ರಜ್ಞಾನದ ಬಳಕೆ ಆಗಿಲ್ಲ ಹಾಗೂ ರೈಲ್ವೆ ಇಲಾಖೆಯ ಎಲ್ಲ ಹಂತಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಕೌಶಲ ಅಭಿವೃದ್ಧಿ ಕಾರ್ಯವನ್ನು ಬಹುಪಾಲು ನಿರ್ಲಕ್ಷಿಸಲಾಗಿದೆ. 2012ರ ಕಾಕೋಡ್ಕರ್ ಸಮಿತಿ ಶಿಫಾರಸು ಗಳನ್ನು ಮತ್ತು ರೈಲ್ವೆ ಸುರಕ್ಷತೆಗಾಗಿ ಸ್ವತಂತ್ರ ಏಜೆನ್ಸಿಯೊಂದನ್ನು ಆರಂಭಿಸುವ ಪ್ರಸ್ತಾವವನ್ನು ಇನ್ನೂ ಅನುಷ್ಠಾನಕ್ಕೆ ತಂದಿಲ್ಲ. ವಿಶ್ವದಲ್ಲಿ ನಾಲ್ಕನೆಯ ಅತಿದೊಡ್ಡ ರೈಲ್ವೆ ಜಾಲ ಇರುವುದು ಭಾರತದಲ್ಲಿ. ಆದರೆ ಅಪಘಾತಗಳ ಸಂಖ್ಯೆ ಮತ್ತು ಅದರಲ್ಲಿ ಪ್ರಾಣ ಕಳೆದುಕೊಳ್ಳುವವರ ಸಂಖ್ಯೆಯ ವಿಚಾರದಲ್ಲಿ ಭಾರತ ಮೊದಲಿಗೆ ನಿಲ್ಲುತ್ತದೆ. ರೈಲ್ವೆ ಇಲಾಖೆಯು ಪ್ರಚಾರ ಗಿಟ್ಟಿಸುವ ಕೆಲಸದಲ್ಲಿ ಬಹಳ ಮುಂದಿದೆ. ಆದರೆ ಸಾಧನೆಯ ದೃಷ್ಟಿಯಿಂದ ಹಿಂದೆ ಬಿದ್ದಿದೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಇನ್ನೂ ಕೆಲವು ಪ್ರಮುಖ ಖಾತೆಗಳನ್ನು ವಹಿಸಲಾಗಿದೆ. ಇದು ರೈಲ್ವೆ ಇಲಾಖೆಗೆ ಸಿಕ್ಕಿರುವ ಮಹತ್ವ ಎಷ್ಟು ಎಂಬುದನ್ನು ತೋರಿಸುತ್ತಿದೆ. ವಂದೇ ಭಾರತ್ ರೈಲಿಗೆ ಪ್ರಶಂಸೆ ಪಡೆದುಕೊಳ್ಳುವುದು ಸರಿ. ಆದರೆ ರೈಲ್ವೆ ಇಲಾಖೆಯ ಮೊದಲ ಜವಾಬ್ದಾರಿ ಇರುವುದು ಪ್ರತಿ ರೈಲು ಸಂಚಾರ ಕೂಡ ಸುರಕ್ಷಿತವಾಗಿ ಇರುವಂತೆ ನೋಡಿಕೊಳ್ಳುವಲ್ಲಿ.

ದಿನದ ಟ್ವೀಟ್

ಕಾಗದ ಪೋಲಾಗುತ್ತಿದೆ...

ಶಾಲೆಗಳು ಪುಸ್ತಕಗಳಿಗೆ ಕಂದು ಬಣ್ಣದ ರ್‍ಯಾಪರ್ ಹಾಕಿಸುವ ಅನಗತ್ಯ ಕೆಲಸವನ್ನು ಕೈಬಿಡಬೇಕು. ಪೋಷಕರೆಲ್ಲರಿಗೂ ಇದೊಂದು ಹೊರೆಯ ಕಾರ್ಯವೇ ಆಗಿದೆ. ಜೊತೆಗೆ ಕಾಗದ ಪೋಲಾಗುತ್ತಿದೆ. ಈ ಪದ್ಧತಿ ಮೇಲೆ ನಿಷೇಧ ಹೇರುವುದು ಸೂಕ್ತ.
#WorldEnvironmentDay

ಸಂಜಯ್ ಪಿಂಟೊ, ವಕೀಲ, ಮದ್ರಾಸ್ ಹೈಕೋರ್ಟ್

ಕಿಡಿನುಡಿ

ಸರ್ಕಾರವು ಬೇಟಿ ಬಚಾವೊ ಬೇಟಿ ಪಢಾವೊ ಆರಂಭಿಸಿತು. ಅದೊಂದು ಮೆಚ್ಚತಕ್ಕ ಉದ್ದೇಶವನ್ನೇ ಹೊಂದಿತ್ತು. ಆದರೆ ಅದು ಹಾದಿ ತಪ್ಪಿದ್ದು ಎಲ್ಲಿ? ಅಸಭ್ಯವಾಗಿ ಮೈಮುಟ್ಟುವ, ಮೈದಡವುವಂತಹ ಪ್ರಕರಣಗಳ ಬಗ್ಗೆ ಮಹಿಳೆಯರು ಪುರಾವೆ ಕೊಡುವುದಾದರೂ ಹೇಗೆ? ನಾವೇನು ಬಾಡಿ ಕ್ಯಾಮೆರಾ ಹಾಕಿಕೊಂಡಿರುತ್ತೇವೆಯೇ?

ರೇವತಿ ಅಶೋಕ್, ಹೂಡಿಕೆದಾರರು

25 ವರ್ಷಗಳ ಹಿಂದೆ

ಶನಿವಾರ, 6-6-1998

- **ಉಪಚುನಾವಣೆ: ಜನತಾದಳಕ್ಕೆ 3, ಕಾಂಗ್ರೆಸ್, ಬಿಜೆಪಿಗೆ ತಲಾ ಎರಡು ಸ್ಥಾನ**

ಬೆಂಗಳೂರು, ಜೂನ್ 5– ರಾಜ್ಯದಲ್ಲಿ ನಡೆದ ಏಳು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಗೆದ್ದ ಆಡಳಿತಾರೂಢ ಜನತಾದಳ ಮತ್ತು ಎರಡು ಸ್ಥಾನಗಳಿಗೇ ತೃಪ್ತಿಪಟ್ಟುಕೊಂಡ ಕಾಂಗ್ರೆಸ್ ನೈತಿಕ ಸ್ಥೈರ್ಯ ಹೆಚ್ಚಿಸಿಕೊಂಡರೆ, ಮೂರರಲ್ಲಿ ಒಂದನ್ನು ಕಳೆದುಕೊಂಡು ಇದ್ದ ಶಕ್ತಿಯನ್ನು ಕುಂದಿಸಿಕೊಂಡ ಬಿಜೆಪಿ ಮತ್ತು ಎಲ್ಲಾ ಕಡೆ ಸೋತ ಲೋಕಶಕ್ತಿ ಪಕ್ಷ ಭಾರಿ ಮುಖಭಂಗವನ್ನು ಅನುಭವಿಸಿವೆ.

ಈ ಫಲಿತಾಂಶದಿಂದ ಏಳು ಕ್ಷೇತ್ರಗಳ ಪೈಕಿ ಜನತಾದಳವು ಮಂಡ್ಯ ಸ್ಥಾನವನ್ನು ಉಳಿಸಿಕೊಂಡು, ಬಳ್ಳೊಳ್ಳಿ (ಮೀಸಲು) ಹಾಗೂ ಹುಣಸೂರು ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಅವುಗಳನ್ನು ತನ್ನ ತೆಕ್ಕೆಗೆ ಸೇರ್ಪಡೆ ಮಾಡಿಕೊಂಡು, ತನ್ನ ಶಕ್ತಿ ಅಡಗಿಲ್ಲ ಎಂದು ತೋರಿಸಿಕೊಂಡಿದೆ.

ಇದೇ ಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷ ದಾವಣಗೆರೆ ಮತ್ತು ಬೈಂದೂರು ಕ್ಷೇತ್ರಗಳಲ್ಲಿ ಗೆಲುವನ್ನು ಸಾಧಿಸಿದೆ. ಆದರೆ ಬಿಜೆಪಿ ಮೊದಲಿದ್ದ ಮೂರು ಸ್ಥಾನಗಳಲ್ಲಿ ಒಂದನ್ನು ಕಾಂಗ್ರೆಸ್ ಪಕ್ಷಕ್ಕೆ ಬಿಟ್ಟುಕೊಡುವುದರೊಂದಿಗೆ ಉತ್ತರಹಳ್ಳಿ ಮತ್ತು ಬಾಗಲಕೋಟೆ ಕ್ಷೇತ್ರ ಗಳಲ್ಲಿ ಗೆಲುವನ್ನು ಸಾಧಿಸಿದೆ.

- **ವೀರಪ್ಪನ್ ಬಳಿ ಒತ್ತೆಯಾಗಿದ್ದ ಮೂವರ ರಕ್ಷಣೆ**

ಚೆನ್ನೈ, ಜೂನ್ 5 (ಪಿಟಿಐ, ಯುಎನ್ಐ)– ಕಾಡುಗಳ್ಳ ವೀರಪ್ಪನ್ ವಶದಲ್ಲಿದ್ದ ಮೂವರು ಒತ್ತೆಯಾಳುಗಳನ್ನು ಕರ್ನಾಟಕ ಮತ್ತು ತಮಿಳುನಾಡು ಜಂಟಿ ಕಾರ್ಯಪಡೆ ಇಂದು ಮಧ್ಯಾಹ್ನ ರಕ್ಷಿಸಿತು.

ಕಳೆದ ಮೇ 27ರಂದು ಪ್ರೊ. ಕೃಷ್ಣಸ್ವಾಮಿ, ನೆಟ್ರಕಣ್ ಪತ್ರಿಕೆ ವರದಿಗಾರ ಪಾಯುಂಪುಲಿ ಹಾಗೂ ಛಾಯಾಗ್ರಾಹಕ ಮೋಹನ್ ರಿಚರ್ಡ್ ಅವರನ್ನು ವೀರಪ್ಪನ್ ಒತ್ತೆಯಾಳುಗಳನ್ನಾಗಿ ಇರಿಸಿಕೊಂಡಿದ್ದ.

50 ವರ್ಷಗಳ ಹಿಂದೆ

ಬುಧವಾರ, 6-6-1973

- **ಅಧಿಕಾರ ಗ್ರಹಣಕ್ಕಾಗಿ ಆಂಧ್ರ, ತೆಲಂಗಾಣಗಳ ತೀವ್ರ ಪೈಪೋಟಿ**

ಹೈದರಾಬಾದ್, ಜೂನ್ 5– ಆಂಧ್ರಪ್ರದೇಶ ದಲ್ಲಿ ಜುಲೈ 18ರಂದು ರಾಷ್ಟ್ರಪತಿ ಆಡಳಿತವನ್ನು ಅಂತ್ಯಗೊಳಿಸುವ ಅಥವಾ ಇನ್ನಷ್ಟು ಕಾಲ ಮುಂದುವರಿಸುವ ಸಂಭವಗಳು ಸಮಸಮವಾಗಿದ್ದು, ಅಲ್ಲಿ ಈಗ ಅಧಿಕಾರ ಹಸ್ತಗತ ಮಾಡಿಕೊಳ್ಳುವ ಸ್ಪರ್ಧೆಯ ಕಾವು ಎರಡೂ ವಿಭಾಗದ ಕಾಂಗ್ರೆಸ್ ಬಣಗಳಲ್ಲಿ ಅಧಿಕಗೊಂಡಿದೆ.

ಆಂಧ್ರ ಮತ್ತು ತೆಲಂಗಾಣ ಪ್ರತ್ಯೇಕತಾ ವಾದಿಗಳಿಬ್ಬರೂ ತಮ್ಮ ಶಸ್ತ್ರಾಸ್ತ್ರಗಳನ್ನು ತ್ಯಜಿಸಿ, ರಾಜ್ಯದಲ್ಲಿ ಪೂರ್ಣ ಶಾಂತ ಪರಿಸ್ಥಿತಿ ತಲೆ ದೋರಿರುವುದರಿಂದ ಪ್ರತ್ಯೇಕತಾವಾದಿಗಳು ಮತ್ತೆ ಅಧಿಕಾರವನ್ನು ದಕ್ಕಿಸಿಕೊಳ್ಳಲು ತವಕಪಡುತ್ತಿದ್ದಾರೆ.

- **ಆರ್.ಎಸ್.ಎಸ್. ಮುಖ್ಯಸ್ಥರಾದ ಗೊಲ್ವಾಲ್ಕರ್ ನಿಧನ**

ನಾಗಪುರ, ಜೂನ್ 5– ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥರಾದ ಶ್ರೀ ಎಂ.ಎಸ್. ಗೊಲ್ವಾಲ್ಕರ್ ಅವರು ಈ ರಾತ್ರಿ ಇಲ್ಲಿ ನಿಧನರಾದರು.

ಗೊಲ್ವಾಲ್ಕರ್ (ಗುರೂಜಿ) ಅವರಿಗೆ 67 ವರ್ಷ ವಯಸ್ಸಾಗಿತ್ತು. ಅವರು ರಾತ್ರಿ 9.05 ಗಂಟೆಯಲ್ಲಿ ನಿಧನರಾದರು. ಗೊಲ್ವಾಲ್ಕರ್ ಅವರು ಕಳೆದ ಮೂರು ವರ್ಷಗಳಿಂದ ಕ್ಯಾನ್ಸರ್ ರೋಗದಿಂದ ನರಳುತ್ತಿದ್ದರು ಹಾಗೂ ಕಳೆದ ಒಂದು ವಾರದಿಂದ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದರು.

ಜನರಿಗೆ ನೀಡುವ ಸವಲತ್ತಿನ ವಿಷಯದಲ್ಲಿ ‘ಉಚಿತ’ ಎಂಬ ಪದ ಪ್ರಯೋಗವೇ ತಪ್ಪು

‘ಉಚಿತ’ ಸವಲತ್ತುಗಳ ರಾಜಕೀಯ

ವಿಶ್ಲೇಷಣೆ

ಎಂ.ಚಂದ್ರ ಪೂಜಾರಿ

ರಾಜ್ಯ ಸರ್ಕಾರ ನೀಡಲು ಇಚ್ಛಿಸಿರುವ ‘ಉಚಿತ’ ಅಕ್ಕಿ, ವಿದ್ಯುತ್, ನಿರುದ್ಯೋಗ ಭತ್ಯೆ, ಗೃಹಲಕ್ಷ್ಮಿ ಯೋಜನೆ ಮತ್ತು ಮಹಿಳೆಯರಿಗೆ ಬಸ್ ಪ್ರಯಾಣವು ಚುನಾವಣಾ ರಾಜಕೀಯವನ್ನು ಕೋಮು ಧ್ರುವೀಕರಣದಿಂದ ಜನರ ಅವಶ್ಯಕತೆಗಳ ಕಡೆಗೆ ತಿರುಗಿಸುವಲ್ಲಿ ಸಫಲವಾಗಿವೆ. ಆದಾಗ್ಯೂ ಇವುಗಳ ವಿರುದ್ಧ ಬಹಳಷ್ಟು ಟೀಕೆಗಳಿವೆ. ಸವಲತ್ತುಗಳನ್ನು ‘ಉಚಿತ’ವಾಗಿ ನೀಡುವುದು ಸರಿಯೇ? ಇವನ್ನು ಜಾರಿಗೊಳಿಸುವುದರಿಂದ ರಾಜ್ಯದ ಆರ್ಥಿಕ ಸ್ಥಿತಿ ಬಿಗಡಾಯಿಸುವುದಿಲ್ಲವೇ? ಇವೆಲ್ಲ ಅನುತ್ಪಾದಕವಲ್ಲವೇ ಎಂಬಂಥವು ಪ್ರಮುಖ ಪ್ರಶ್ನೆಗಳು.

ಸವಲತ್ತುಗಳನ್ನು ‘ಉಚಿತ’ವಾಗಿ ನೀಡುವುದು ಸರಿಯೇ ಎಂಬುದು ಮೊದಲ ಪ್ರಶ್ನೆ. ಇಲ್ಲಿ, ಉಚಿತ ಎನ್ನುವ ಪದ ಪ್ರಯೋಗವೇ ತಪ್ಪು. ಏಕೆಂದರೆ ಸವಲತ್ತು ಗಳನ್ನು ಏನೇನೂ ಪ್ರತಿಫಲ ಇಲ್ಲದೇ ನೀಡುವುದು ಉಚಿತ. ಇಲ್ಲಿ ಈ ಸವಲತ್ತುಗಳನ್ನು ಪಡೆಯುವ ಜನರು ನೇರವಾಗಿ ಮತ್ತು ಪರೋಕ್ಷವಾಗಿ ಕೋಟಿಗಟ್ಟಲೆ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಗ್ರಹ ಮಾಡುವ ಪ್ರತಿ ನೂರು ರೂಪಾಯಿ ತೆರಿಗೆಯಲ್ಲಿ ಮೂರನೇ ಎರಡರಷ್ಟು ಮೊತ್ತವು ಪರೋಕ್ಷ ತೆರಿಗೆಯಿಂದಲೇ ಅಂದರೆ ಅನನುಕೂಲಸ್ಥರಿಂದಲೇ ಬರುವುದು. ಕೆಲವು ನೂರು ಗಳಿಸುವವರು ಕೂಡ ಕನಿಷ್ಠ ಇಪ್ಪತ್ತೈದರಿಂದ ಮೂವತ್ತು ರೂಪಾಯಿ ತೆರಿಗೆ ಸಂದಾಯ ಮಾಡುತ್ತಾರೆ. ಇದರಿಂದಾಗಿಯೇ ರಾಜ್ಯದ ವರಮಾನದಲ್ಲಿ ಶೇ 84ರಷ್ಟು ಪಾಲು ಜನಸಾಮಾನ್ಯರು ಕಟ್ಟುವ ತೆರಿಗೆಯಿಂದಲೇ ಬರುವುದು. ಹೀಗೆ ಈ ಸವಲತ್ತುಗಳ ಭಾರವನ್ನು ಇವರೇ ಹೊರುವುದು ವಿನಾ ಅತ್ಯಲ್ಪ ಸಂಖ್ಯೆಯಲ್ಲಿರುವ ಮೇಲ್ಮಧ್ಯಮ ಮತ್ತು ಶ್ರೀಮಂತ ವರ್ಗವಲ್ಲ.

ಮೇಲಿನವುಗಳೊಂದಿಗೆ, ಜನರು ಸಂದಾಯ ಮಾಡುವ, ಮೇಲ್ನೋಟಕ್ಕೆ ಕಾಣದ ಪರೋಕ್ಷ ತೆರಿಗೆಯ ಪಟ್ಟಿ ದೊಡ್ಡದಿದೆ. ಪ್ರತಿಯೊಬ್ಬರೂ ವಾಹನಕ್ಕೆ ಒಂದು ಲೀಟರ್ ಪೆಟ್ರೋಲ್ ಅಥವಾ ಡೀಸೆಲ್ ತುಂಬಿಸುವಾಗ ಕನಿಷ್ಠ ₹ 40 ತೆರಿಗೆ ಸಂದಾಯ ಮಾಡುತ್ತಾರೆ. ಸಾರ್ವಜನಿಕ ಸವಲತ್ತುಗಳ ಮೇಲೆ ಸರ್ಕಾರಗಳು ಅತ್ಯಂತ ಕಡಿಮೆ ವಿನಿಯೋಗಿಸುವುದರಿಂದ ದಿನಗೂಲಿಗಳು ಕೂಡ ತಮ್ಮ ದುಡಿತದ ಶೇ 30-40ರಷ್ಟನ್ನು ಶಿಕ್ಷಣ, ಆರೋಗ್ಯಕ್ಕಾಗಿ ವಿನಿಯೋಗಿಸಬೇಕಾಗಿದೆ.

ಬಜೆಟ್ ಕೊರತೆಯನ್ನು ಸಾಲ ಮಾಡಿ ತುಂಬಿಸುವ ಸರ್ಕಾರದ ಕ್ರಮ ಅನನುಕೂಲಸ್ಥರ ಮೇಲೆ ಹೆಚ್ಚಿನ ತೆರಿಗೆ ಹೊರೆ ಹೊರಿಸಿದರೆ, ಅನುಕೂಲಸ್ಥರಿಗೆ ಬಡ್ಡಿ ಗಳಿಸುವ ಅವಕಾಶ ಸೃಷ್ಟಿಸುತ್ತಿದೆ. ಇದೇ ರೀತಿ ಬ್ಯಾಂಕ್ ಸಾಲದ ಮೇಲಿನ ಬಡ್ಡಿ ದರ ಏರಿಸಿ ಬೆಲೆ ಏರಿಕೆಯನ್ನು ನಿಯಂತ್ರಿಸುವ ಸರ್ಕಾರದ ಕ್ರಮವು ಕುಟುಂಬಗಳು ತಾವು ಬದುಕಿ ಉಳಿಯಲು ಮಾಡಿದ ಸಾಲದ ಬಡ್ಡಿ ಮೊತ್ತವನ್ನು ಏರಿಸಿದೆ. ಏಕೆಂದರೆ ಇಂದು ಉದ್ದಿಮೆಗಳ ಸಾಲ ಬಾಕಿಗಿಂತ (ಶೇ 31) ಕುಟುಂಬಗಳ ಸಾಲ ಬಾಕಿ (ಶೇ 49) ಹೆಚ್ಚಿದೆ. ಹೀಗೆ ಇವರು ಕಟ್ಟುವ ತೆರಿಗೆಯಿಂದಲೇ ಇವರಿಗೆ ನೀಡುವ ಅಲ್ಪಸ್ವಲ್ಪ ಸವಲತ್ತುಗಳನ್ನು ಕೂಡ ಉಚಿತ ಎನ್ನುವುದು ಈ ಜನರಿಗೆ ಮಾಡುವ ಅವಮಾನ.

ಇಂತಹ ಸವಲತ್ತುಗಳನ್ನು ನೀಡುವುದರಿಂದ ಸಂಪನ್ಮೂಲ ಕೊರತೆ ಆಗುವುದಿಲ್ಲವೇ ಎನ್ನುವುದು ಎರಡನೇ ಪ್ರಶ್ನೆ. ಮೇಲಿನ ಸವಲತ್ತುಗಳನ್ನು ನೀಡುವ ಮೊದಲೇ ರಾಜ್ಯಗಳು ಸಂಪನ್ಮೂಲ ಕೊರತೆ ಅನುಭವಿಸುತ್ತಿವೆ. ಇದಕ್ಕೆ ಹಲವು ಕಾರಣಗಳಿವೆ. ಒಂದು, ಅಭಿವೃದ್ಧಿಯ ವಿಷಯದಲ್ಲಿ ಮೂರನೇ ಒಂದು ಭಾಗದಷ್ಟು ಜವಾಬ್ದಾರಿ ಇರುವ ಕೇಂದ್ರವು ಮೂರನೇ ಎರಡು ಭಾಗದಷ್ಟು ತೆರಿಗೆ ಸಂಗ್ರಹ ಮಾಡುವುದು ಮತ್ತು ಹೆಚ್ಚು ಅಭಿವೃದ್ಧಿಯ ಜವಾಬ್ದಾರಿ ಇರುವ ರಾಜ್ಯವು ಅತ್ಯಲ್ಪ ಪ್ರಮಾಣದಲ್ಲಿ ಅಂದರೆ ಮೂರನೇ ಒಂದು ಭಾಗದಷ್ಟು ತೆರಿಗೆ ಸಂಗ್ರಹ ಮಾಡುವುದು.

ಎರಡು, ಕೇಂದ್ರವು ಸಂಗ್ರಹ ಮಾಡುವ ತೆರಿಗೆಯಲ್ಲಿ ರಾಜ್ಯದೊಂದಿಗೆ ಹಂಚಿಕೊಳ್ಳುವ ಮೂಲ ತೆರಿಗೆ ಸಂಗ್ರಹವನ್ನು ಶೇ 80ಕ್ಕೆ ಇಳಿಸಿದ್ದು. ಮೂರು, ಕೇಂದ್ರದ ತೆರಿಗೆ ಸಂಗ್ರಹದಲ್ಲಿ ರಾಜ್ಯಗಳ ಪಾಲನ್ನು ಜನಸಂಖ್ಯೆ ನೆಲೆಯಲ್ಲಿ ನಿರ್ಧರಿಸುವುದು. ಇದರಿಂದಾಗಿ ರಾಜ್ಯದಿಂದ ಕೇಂದ್ರಕ್ಕೆ ಹೋಗುವ ಪ್ರತಿ 1 ರೂಪಾಯಿ ತೆರಿಗೆಗೆ ಉತ್ತರ ಪ್ರದೇಶ ₹ 1.79 ಹಿಂದಕ್ಕೆ ಪಡೆದರೆ, ಕರ್ನಾಟಕ ಬರೀ 47 ಪೈಸೆ ಹಿಂದಕ್ಕೆ ಪಡೆಯುತ್ತಿದೆ. ಹೀಗೆ ಕೇಂದ್ರದ ಸಮೀಪದೃಷ್ಟಿಯ ಹಣಕಾಸು ನಿರ್ವಹಣೆಯಿಂದ ಸಂಪನ್ಮೂಲ ಕೊರತೆಯಾಗುತ್ತಿದೆಯೇ ವಿನಾ ಮೇಲಿನ ಸವಲತ್ತುಗಳನ್ನು ನೀಡುವುದರಿಂದ ಅಲ್ಲ.

2023-24ನೇ ಸಾಲಿಗಾಗಿ ಕರ್ನಾಟಕ ₹ 3.09 ಲಕ್ಷ ಕೋಟಿ ಮೊತ್ತದ ಬಜೆಟ್ ಮಂಡಿಸಿದೆ. ಬಜೆಟ್‌ನ ಸಂಪೂರ್ಣ ಮೊತ್ತ ರಾಜ್ಯದ ಜನರ ಕೊಡುಗೆ. ಈ ಬಜೆಟ್‌ನಲ್ಲಿ ₹ 90,000 ಕೋಟಿಗಳನ್ನು (ಶೇ 8ರಷ್ಟನ್ನು ಸಮಾಜ ಕಲ್ಯಾಣ + ಶೇ 22ರಷ್ಟನ್ನು ಇತರ ಸೇವೆಗಳಿಗೆ) ತೆಗೆದಿರಿಸಿದೆ. ಈ ಯೋಜನೆಗಳನ್ನು ಪರಿಷ್ಕರಿಸಿ ಕೆಲವು ಸಾವಿರ ಕೋಟಿಗಳನ್ನು ಹೊಂದಿಸುವುದು ಕಷ್ಟವಲ್ಲ. ಆಡಳಿತ ಸುಧಾರಣೆ, ಭ್ರಷ್ಟಾಚಾರ ಹತೋಟಿ, ತೆರಿಗೆ ಪರಿಷ್ಕರಣೆಯ ಮೂಲಕ ಸವಲತ್ತುಗಳಿಗೆ ಅವಶ್ಯವಿರುವ ಸಂಪನ್ಮೂಲವನ್ನು ಹೊಂದಿಸಬಹುದು.

ಈ ಸವಲತ್ತುಗಳನ್ನು ನೀಡುವುದು ಅಭಿವೃದ್ಧಿಗೆ ಪೂರಕವಲ್ಲ ಅಥವಾ ಅನುತ್ಪಾದಕ ಎನ್ನುವುದು ಮತ್ತೊಂದು ಆಕ್ಷೇಪ. ಇದೊಂದು ಬಂಡವಾಳ ಕೇಂದ್ರಿತ ಅಭಿವೃದ್ಧಿ ಚಿಂತನೆಯ ಪೂರ್ವಗ್ರಹ. ಅಂದರೆ



ಸರಕು-ಸೇವೆಗಳ ಉತ್ಪಾದನೆಯಲ್ಲಿ ಬಂಡವಾಳದ್ದೇ ಪ್ರಮುಖ ಪಾತ್ರ, ಇತರರ ಅದರಲ್ಲೂ ಮಾನವ ಶ್ರಮದ ಪಾತ್ರವನ್ನು ಸಂಪೂರ್ಣ ಅಲ್ಲಗಳೆಯುವ ಚಿಂತನೆ. ಇದೇ ಕಾರಣದಿಂದ ಉತ್ಪಾದನೆ ಹೆಚ್ಚಿಸಲು ಸರ್ಕಾರ ನೀಡುವ ಎಲ್ಲ ಸವಲತ್ತುಗಳು (ಬ್ಯಾಂಕ್ ಸಾಲ, ಜಮೀನು, ಪ್ರಾಕೃತಿಕ ಸಂಪನ್ಮೂಲದಂತಹವು) ಬಂಡವಾಳ ಹೂಡಿಕೆ ಮೇಲೆ ನಿರ್ಧರಿಸಲ್ಪಡುತ್ತಿವೆ. ಅಂದರೆ ಹೆಚ್ಚು ಬಂಡವಾಳ ವಿನಿಯೋಗಿಸುವವರಿಗೆ ಹೆಚ್ಚು ಸವಲತ್ತು, ಕಡಿಮೆ ವಿನಿಯೋಗಿಸುವವರಿಗೆ ಕಡಿಮೆ ಸವಲತ್ತು. ಇಷ್ಟೆಲ್ಲ ಬೆಂಬಲ ನೀಡಿದರೂ ದೇಶದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ದೊಡ್ಡ ಬಂಡವಾಳಿಗರ ಕೊಡುಗೆ ಶೇ 50-55ರ ಆಸುಪಾಸಿನಲ್ಲಿದೆ. ಸರ್ಕಾರದಿಂದ ವಿಶೇಷ ಬೆಂಬಲ ಪಡೆಯದ ಸಣ್ಣ ಮತ್ತು ಅತಿ ಸಣ್ಣ ಕೃಷಿ, ವ್ಯಾಪಾರ, ಉದ್ದಿಮೆ ಮತ್ತು ಇವುಗಳಲ್ಲಿ ದುಡಿಯುವವರ ಜಿಡಿಪಿ ಕೊಡುಗೆ ಶೇ 40-45ರಷ್ಟಿದೆ. ಇದೊಂದು ರೀತಿ ಹಲವು ಕೆ.ಜಿ. ಹಿಂಡಿ ತಿಂದು 10 ಲೀಟರ್ ಹಾಲು ಕೊಡುವ ಪರದೇಶಿ ದನ ಮತ್ತು ಹಿತ್ತಲ ಹುಲ್ಲು ಮೇದು 4 ಲೀಟರ್ ಹಾಲು ಕೊಡುವ ದೇಶಿ ದನದ ಕತೆ ಇದ್ದಂತೆ.

ಸರ್ಕಾರ ನೀಡಲಿಚ್ಛಿಸುವ ಅಕ್ಕಿ, ವಿದ್ಯುತ್, ನಿರುದ್ಯೋಗ ಭತ್ಯೆ, ಬಸ್ ಟಿಕೆಟ್‌ನಂತಹವೆಲ್ಲ ದೇಶಿ ದನದ ರೀತಿ ದುಡಿಯುವ ನಮ್ಮ ಸಮಾಜದ ಮುಕ್ಕಾಲು ಭಾಗ ಜನರಿಗೆ ತಲುಪುವ ಸವಲತ್ತುಗಳು. ಇವೆಲ್ಲ ಸವಲತ್ತುಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಂಡರೆ ಪ್ರತಿ ಕುಟುಂಬಕ್ಕೂ ಒಂದೆರಡು ಸಾವಿರ ರೂಪಾಯಿಗಳ ನೆರವು ಸಿಗಬಹುದು. ಹಲವು ಸಾವಿರ ಅಥವಾ ಲಕ್ಷದಲ್ಲಿ ಗಳಿಸುವವರಿಗೆ ಒಂದೆರಡು ಸಾವಿರ ದೊಡ್ಡ ಮೊತ್ತವಲ್ಲ. ಆದರೆ 10 ಸಾವಿರದಿಂದ 15 ಸಾವಿರ ರೂಪಾಯಿ ಆದಾಯವುಳ್ಳವರಿಗೆ ಇದು ದೊಡ್ಡ ಮೊತ್ತ. ಅದರಲ್ಲೂ ಇತ್ತೀಚಿನ ಕೆಲವು ವರ್ಷಗಳ ಬೆಳವಣಿಗೆಗಳು, ಮುಖ್ಯವಾಗಿ ನೋಟು ರದ್ದತಿ, ಜಿಎಸ್‌ಟಿ, ಕೋವಿಡ್ ಹೊಡೆತ, ಆರ್ಥಿಕ ಕುಸಿತ, ನಿರುದ್ಯೋಗ, ಹಣದುಬ್ಬರ-ದಂತಹವು ಇವರ ಖರೀದಿಸುವ ಶಕ್ತಿಯನ್ನು ಕುಂದಿಸಿವೆ. ಈ ಸವಲತ್ತುಗಳು ಖರೀದಿಸುವ ಇವರ ಶಕ್ತಿಯನ್ನು ಅಲ್ಪಸ್ವಲ್ಪ ಸುಧಾರಿಸಬಹುದು.

ಇವರನ್ನು ದಿವಾಳಿಯಾಗಿಸುವ ನೀತಿಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ ಈ ಅಲ್ಪಸ್ವಲ್ಪ ನೆರವು ಇವರಿಗೆ ಮಾತ್ರ ಆಸರೆಯಲ್ಲ, ದೇಶ, ರಾಜ್ಯದ ಆರ್ಥಿಕ ಆರೋಗ್ಯಕ್ಕೂ ಅವಶ್ಯ. ಬಿಸಿಯೂಟ ಕಾರ್ಯಕ್ರಮದ ಮೂಲಕ ಇಂತಹ ಸವಲತ್ತುಗಳನ್ನು ನೀಡುವ ರಾಜಕೀಯವನ್ನು ತಮಿಳುನಾಡು ಆರಂಭಿಸಿದೆ. ಸವಲತ್ತು ಗಳನ್ನು ನೀಡುವುದರಲ್ಲಿ ಇಂದು ಕೂಡ ತಮಿಳುನಾಡು ಮುಂಚೂಣಿಯಲ್ಲಿದೆ. ನಂತರ ಕೇರಳ, ತೆಲಂಗಾಣ, ಕರ್ನಾಟಕ, ಆಂಧ್ರಪ್ರದೇಶ ರಾಜ್ಯಗಳು ಬರುತ್ತಿವೆ. ಹಾಗೆಂದು ಅಭಿವೃದ್ಧಿಯಲ್ಲಿ ದಕ್ಷಿಣದ ರಾಜ್ಯಗಳು ಹಿಂದೆ ಬಿದ್ದಿಲ್ಲ. ಅಭಿವೃದ್ಧಿಯ ಎಲ್ಲ ಸೂಚ್ಯಂಕಗಳಲ್ಲೂ (ಜಿಡಿಪಿ, ಸಾಕ್ಷರತೆ, ಆರೋಗ್ಯ, ಲಿಂಗ ಸಮಾನತೆ, ತಲಾ ಆದಾಯ-ದಂತಹವುಗಳಲ್ಲಿ) ಸವಲತ್ತುಗಳನ್ನು ನೀಡುವ ದಕ್ಷಿಣದ ರಾಜ್ಯಗಳು ಈ ಬಗೆಯ ಸವಲತ್ತುಗಳನ್ನು ನೀಡದಿರುವ ಉತ್ತರದ ರಾಜ್ಯಗಳಿಗಿಂತ ತುಂಬಾ ಮುಂದಿವೆ.

ಹೀಗೆ ಸಮಾಜದ ಕಾಲು ಭಾಗ ಜನರು ಎಲ್ಲ ಸವಲತ್ತು ಗಳನ್ನು ಅನುಭವಿಸುವುದು ಮತ್ತು ಮುಕ್ಕಾಲು ಭಾಗದಷ್ಟು ಜನ ಪ್ರಾಣಿಗಿಂತ ಕಡೆಯಾಗಿ ಬದುಕುವುದು ಎನ್ನುವ ಗ್ರಹಿಕೆಯುಳ್ಳ ಅಭಿವೃದ್ಧಿ ಹಾಗೂ ಆರ್ಥಿಕ ಚಿಂತಕರಿಗೆ ಈ ಸವಲತ್ತುಗಳು ಅನುತ್ಪಾದಕವಾಗಿ ಕಾಣಬಹುದು.

ಚುರುಮುರಿ



ಮುಳ್ಳು ಮುರಿಯೋರು!

• ಲಿಂಗರಾಜು ಡಿ.ಎಸ್.

‘**ಸಾ**, ಈಗ ಟೈರು ಪಂಕ್ಚರ್ ಹಾಕೋರು ರೋಡಲ್ಲೆಲ್ಲಾ ಮೊಳೆ ಎಸೆದು ಹೋಯ್ತರಂತೆ. ಇದೊಂದು ಮಾಫಿಯಾ ಆಗ್ಯದೆ ಅಂತ ಪೇಪರಿನಗೆ ಬಂದುತ್ತು’ ವಿವರ ಕೊಟ್ಟೆ.

‘ಹ್ಞೂಂ ಕಲಾ, ಎಲ್ಲತ್ಕೂ ಮುಳ್ಳೆಳದು ಪಂಕ್ಚರ್ ಮಾಡೋದೇ ಕೆಲವರಿಗೆ ಕ್ಯಾಮೆ ಆಗಿಬುಟ್ಟದೆ. ಕೈ ಪಕ್ಸ ಗ್ಯಾರಂಟಿ ಕೊಡ್ತೀವಿ ಅಂತ ಮುಳ್ಳೆಳಕಂದಿಲ್ವೇ’ ತುರೇಮಣೆ ಬಾಣ ಬುಟ್ಟರು.

‘ಹಳೇ ಸರ್ಕಾರದೋರೂ ತಮ್ಮ ಸುತ್ತ ಮುಳ್ಳೆಳಕಂಡಿದ್ರು. ಅದ ದಾಟಿ ಬರಕಾಗ್ದೇ ಈಗ ಅಂಡಿಗೆ-ಮುಂಡಿಗೆ ಮುಳ್ಳು ಹೆಟ್ಟಿ ರೋಸಾಗ್ಯದೆ’ ಅಂತ ನಗಾಡಿದೆ.

‘ಏಡೇಡು ಸಾವಿರ ಕಾಸು ಕೊಟ್ಟೇವು ಮನೆ ಗೃಹಲಕ್ಷ್ಮಿಗೆ ಅಂತಂದು ಚೆನ್ನಾಗಿದ್ದ ಅತ್ತೆ-ಸೊಸೆ ಮಧ್ಯೆ ಮುಳ್ಳೆಳೆದವ್ರೆ. ನಮಗೂವೆ ವಯೋನಿಧಿ, ಮಿಳ್ಳೆ ಭಾಗ್ಯ, ಬಿರಿಯಾನಿ ಶಕ್ತಿ ಅಂತ ಗ್ಯಾರಂಟಿ ಕೊಟ್ಟಿದ್ರೆ ನಚ್ಚಗಾಗದಪ್ಪ’ ಯಂಟಪ್ಪಣ್ಣ ಬಾಯಿ ಚಪ್ಪರಿಸಿತು.

‘ಒಡವೆ ಅಂಗಡಿಯೋರು ಪೇಪರಲ್ಲಿ, ಟೀವಿಯಲ್ಲಿ ಒಂದೇ ಸಮ ‘ಹಳೇ ಒಡವೆ ಮಾರಿ ಮಸಾಲೆದೋಸೆ ತಿಂದ್ಕಳಿ’ ಅಂತ ಮುಳ್ಳು ಚುಚ್ಚತರೆ. ಇದು ಸಾಲದು ಅಂತ ಕ್ರಿಕೆಟ್ ಅಣ್ತಮ್ಮಗಳು ‘ಬಲ್ರಿ ಆನ್‌ಲೈನ್ ಕ್ರಿಕೆಟ್ ಆಡಮು, ಕೋಟಿ ಗೆಲ್ಲೂರಿ’ ಅಂತ ಮುಳ್ಳಿಡಕಂದು ನಿಂತಿರತರೆ. ಇದು ಸಾಲದು ಅಂತ ನಮಗೆ ಕರಂಟು ರೇಟು ಮುಳ್ಳು, ಪೆಟ್ರೋಲ್-ಗ್ಯಾಸ್ ಮುಳ್ಳು, ಸ್ಕೂಲ್ ಫೀಜು ಮುಳ್ಳು, ತೆರಿಗೆ ಮುಳ್ಳು ಅಂತ ಸುಮಾರು ಹೆಟ್ಟಿಕ್ಯಂದವೆ’ ಅಂದ ಚಂದ್ರು.

‘ಸರ್ಕಾರ ದುಡಿಯೋರಿಗೆ ಕೆಲಸ ಕೊಡ್ಲಿ. ರೋಡುಗುಂಡಿ ಮುಚ್ಲಿ, ಸೌಕರ್ಯ ಅಭಿವೃದ್ಧಿ ಮಾಡ್ಲಿ. ಕ್ರೀಡಾ ಕ್ಷೇತ್ರದ ಪಟಿಂಗ ಮುಳ್ಳುಗಳು, ರಾಜಕೀಯದ ಜೊಳ್ಳುಗಳು, ಧರ್ಮ ಕುಲಗೆಡಿಸೋ ಮುಳ್ಳುಗಳು, ಭ್ರಷ್ಟ ಅಧಿಕಾರಿ ಮುಳ್ಳುಗಳನ್ನ ಕಿತ್ತಾಕ್ಲಿ. ಜನ ವಿಷದ ಮುಳ್ಳುಗಳ ಭಯ ಇಲ್ಲದೆ ಬದುಕಬೇಕು ಕಯ್ಯಾ!’ ತುರೇಮಣೆ ಮ್ಯಾನಿಫೆಸ್ಟೊ ಕೊಟ್ಟರು. ಇದು, ರಾಜಕಾರಣಿಗಳ ಸ್ವಂತ ಅಭಿವೃದ್ಧಿ ಆಸೆ ನಿಲ್ಲೋಗಂಟ ಆಗದ ಲೆಕ್ಕಾಚಾರ ಅನ್ನಿಸಿತು.

ಸಂಗತ

ಚುನಾವಣಾ ಕಾರ್ಯ: ಆತ್ಮಾವಲೋಕನಕ್ಕೆ ಸಕಾಲ

ಮತಗಟ್ಟೆಗೆ ಆಯ್ದುಕೊಳ್ಳುವ ಕಟ್ಟಡಗಳಿಗಿಂತ ನಿಕೃಷ್ಟವಾಗಿರುವ ಸ್ಥಳಗಳಲ್ಲಿ ಬದುಕುವ ಜನರ ಬವಣೆಗಳನ್ನು ಅರಿಯಲು ಚುನಾವಣಾ ಕೆಲಸದ ಅನುಭವ ನೆರವಾಗುವುದಿಲ್ಲವೇ?

• ಎಚ್.ಕೆ.ಶರತ್

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಪ್ರಿಸೈಡಿಂಗ್ ಆಫೀಸರ್ (ಪಿಆರ್‌ಒ) ಆಗಿ ಕಾರ್ಯ ನಿರ್ವಹಿಸುವ ಅವಕಾಶ ದೊರೆತಿತ್ತು. ಸರ್ಕಾರಿ ಶಾಲಾ ಕಟ್ಟಡದಲ್ಲಿದ್ದ ಮತಗಟ್ಟೆಗೆ ನಮ್ಮನ್ನು ನಿಯೋಜಿಸಲಾಗಿತ್ತು. ಸರ್ಕಾರಿ ಶಾಲಾ ಶಿಕ್ಷಕಿಯರಿಬ್ಬರು ಹಾಗೂ ಪಶುಸಂಗೋಪನಾ ಇಲಾಖೆಯ ನೌಕರರೊಬ್ಬರು ನಮ್ಮ ತಂಡದಲ್ಲಿದ್ದರು.

ಮತದಾನ ಜರುಗುವ ಹಿಂದಿನ ದಿನವೇ ಆಯಾ ಮತಗಟ್ಟೆಗೆ ನಿಯೋಜಿತರಾಗಿರುವ ಸಿಬ್ಬಂದಿ ತೆರಳಿ, ಅಲ್ಲೇ ತಂಗಬೇಕಿರುವುದು ಕಡ್ಡಾಯ. ಹೀಗಾಗಿ ಮತದಾನಕ್ಕೂ ಮುನ್ನಾದಿನ ರಾತ್ರಿ ಹಾಗೂ ಮತದಾನ ನಡೆಯುವ ದಿನ ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟಕ್ಕೆ ಮತಗಟ್ಟೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ನಾವು ತಂಗಿದ್ದ ಶಾಲೆಯ ಮಕ್ಕಳಿಗೆ ಬಿಸಿಯೂಟ ತಯಾರಿಸುವ ಸಿಬ್ಬಂದಿಯೇ ನಮಗೂ ಅಡುಗೆ ಮಾಡಿ ಬಡಿಸಿದರು.

‘ಅಡುಗೆ ಚೆನ್ನಾಗಿತ್ತಾ?’ ಎಂದು ಯಾರಾದರೂ ವಿಚಾರಿಸಿದರೆ, ನಮ್ಮ ತಂಡದಲ್ಲಿದ್ದ ಶಿಕ್ಷಕಿಯರಿಬ್ಬರೂ ‘ಪರವಾಗಿಲ್ಲ’ ಎನ್ನುವ ಪ್ರತಿಕ್ರಿಯೆಯನ್ನೇ ನೀಡುತ್ತಿದ್ದರು. ಮಾತಿನ ವೇಳೆ ಒಬ್ಬರು, ‘ನಾನಂತೂ ಸ್ಕೂಲಲ್ಲಿ ಮಾಡೋ ಬಿಸಿಯೂಟ ತಿನ್ನಲ್ಲ. ಪ್ರತಿದಿನ ಊಟದ ಡಬ್ಬಿ ಕೊಂಡೊಯ್ಯುತ್ತೇನೆ. ನಾನು ಗಮನಿಸಿರುವಂತೆ 90 ಪರ್ಸೆಂಟ್ ಶಿಕ್ಷಕರು ಶಾಲೆಯಲ್ಲಿ ತಯಾರಿಸುವ ಬಿಸಿಯೂಟ ಸೇವಿಸಲ್ಲ. ಎಲ್ಲೋ ಕೆಲವೊಮ್ಮೆ ಅನಿವಾರ್ಯವಾಗಿ ಸೇವಿಸುವ ಸಂದರ್ಭ ಎದುರಾದಾಗ ಮಾತ್ರ ಬಿಸಿಯೂಟ ತಿನ್ನುತ್ತಾರೆ. ಬಿಸಿಯೂಟಕ್ಕೆ ಸಾಮಾನ್ಯವಾಗಿ ದಪ್ಪಕ್ಕಿ ಬಳಸುತ್ತಾರೆ. ದಪ್ಪಕ್ಕಿ ಅನ್ನ ಅಂದ್ರೆ ನನಗೆ ಆಗಿಬರಲ್ಲ. ಸದ್ಯ ಇವತ್ತಾದ್ರೂ ಚೆನ್ನಾಗಿರುವ ಅಕ್ಕಿ ಬಳಸಿದ್ದಾರೆ’ ಎಂದರು.

ಮತದಾನದ ದಿನ ಬೆಳಿಗ್ಗೆ ತಿಂಡಿಗೆ ತರಕಾರಿ ಪಲಾವ್ ಮಾಡಿದ್ದರು. ಮತ್ತೊಬ್ಬರು ಶಿಕ್ಷಕಿ, ‘ನನಗೆ ಪಲಾವು ಅಂದ್ರೆ ಆಗಲ್ಲ. ಪಲಾವು ತಿಂದ್ರೆ ಸಾಕು ಹೊಟ್ಟೆ ಕೆಡುತ್ತೆ’ ಅಂತ ಅಸಮಾಧಾನ ಹೊರಹಾಕಿದರು. ಜೊತೆಯಲ್ಲಿದ್ದ ಶಿಕ್ಷಕಿ, ‘ಏಜೆಂಟ್‌ಗಳಿಗೆ ಹೇಳಿ ಹೋಟ್ಲಿಂದ ಇಡ್ಲಿ ತರಿಸಿಕೊಳ್ಳಿ’ ಎಂದು ಸಲಹೆ ನೀಡಿದರು. ಅವರ ಪ್ರಕಾರ, ಮತಗಟ್ಟೆಗೆ ಬಂದಿದ್ದ ವಿವಿಧ ಪಕ್ಷಗಳ ಚುನಾವಣಾ ಏಜೆಂಟರೇ ಇವರ ತಿಂಡಿಗೆ ವ್ಯವಸ್ಥೆ ಮಾಡಬೇಕಿತ್ತು. ‘ಇವತ್ತು ಒಂದು ದಿನ ಹೇಗೋ ಸಹಿಸಿಕೊಳ್ಳಿ. ಇಲ್ಲಿ ಮಾಡಿರುವ ತಿಂಡಿಯನ್ನೇ ತಿನ್ನಿ’ ಎಂದು ಅವರನ್ನು ಸಂತೈಸಿದೆ. ಕೊನೆಗೂ ಪಲಾವು ತಿನ್ನಲು ಅವರು ಸಮ್ಮತಿಸಿದರು. ಅವರ ಆರೋಗ್ಯದಲ್ಲಿ ಯಾವುದೇ ರೀತಿಯ ಏರುಪೇರಾಗಲಿಲ್ಲ. ಸಂಜೆಯವರೆಗೂ ಆರಾಮಾಗಿಯೇ ಚುನಾವಣಾ ಕರ್ತವ್ಯ ನಿರ್ವಹಿಸಿದರು.

ಮತಗಟ್ಟೆ ಸಿಬ್ಬಂದಿಯಾಗಿ ಚುನಾವಣಾ ಕೆಲಸಕ್ಕೆ ನಿಯೋಜನೆಗೊಳ್ಳುವವರು, ಎರಡು ದಿನಗಳ ಕಾಲ ತಾವು ಅನುಭವಿಸುವ ತೊಂದರೆಗಳ ಕುರಿತು ಮಾತನಾಡಲು ಬಹಳಷ್ಟು ಉತ್ಸಾಹ ತೋರುತ್ತಾರೆ. ತಮ್ಮನ್ನು ನಿಯೋಜಿಸಿದ ಮತಗಟ್ಟೆಗಳಲ್ಲಿ ಮಲಗಲು ಸೂಕ್ತ ಸ್ಥಳಾವಕಾಶ ಮತ್ತು ಶೌಚಾಲಯದಂತಹ ಮೂಲಭೂತ ಅಗತ್ಯಗಳು ಇಲ್ಲದಿರುವ ಬಗ್ಗೆ, ಶುಚಿ-ರುಚಿಯಾದ ಆಹಾರ ಸಕಾಲಕ್ಕೆ ಸಿಗದಿರುವ ಕುರಿತು ಆಕ್ರೋಶ ಹೊರಹಾಕುತ್ತಾರೆ.

ವಿವಿಧ ಆರೋಗ್ಯ ಸಮಸ್ಯೆಗಳಿಂದ ಬಳಲುವವರಿಗೆ ಚುನಾವಣೆ ಕರ್ತವ್ಯ ಎಂಬುದು ತೀರಾ ಸವಾಲಿನ ಹಾಗೂ ಸಂಕಷ್ಟಕರ ಕೆಲಸ ಎಂಬುದರಲ್ಲಿ ಎರಡು ಮಾತಿಲ್ಲ. ಉಳಿದವರ ಪಾಲಿಗೆ ಇದು ಈ ನೆಲದ ವಾಸ್ತವ ಅರಿಯಲು, ಹೆಚ್ಚು ಸಂವೇದನಾಶೀಲರಾಗಿ ತಮ್ಮ ಕೆಲಸದಲ್ಲಿ ತೊಡಗಿಕೊಳ್ಳಲು ಪ್ರೇರೇಪಿಸುವ ಅನುಭವವಾಗಬೇಕಿತ್ತು. ಆದರೆ, ಹಾಗೆ ಭಾವಿಸುವವರ ಸಂಖ್ಯೆ ಅತ್ಯಲ್ಪ.

ಮೂಲ ಸೌಕರ್ಯಗಳಿಲ್ಲದ, ಮಳೆ ಬಂದರೆ ಸೋರುವ ಸರ್ಕಾರಿ ಶಾಲಾ ಕಾಲೇಜುಗಳ ಕಟ್ಟಡಗಳಲ್ಲಿ ಒಂದೂವರೆ ದಿನ ವಾಸ್ತವ್ಯ ಹೂಡುವುದನ್ನೇ ನರಕಯಾತನೆ ಎಂದು ಭಾವಿಸುವವರು, ಇಂತಹ ಶಾಲಾ ಕಾಲೇಜುಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನನುಕೂಲದ ಕುರಿತು ಕೂಡ ಚಿಂತಿಸಬೇಕಲ್ಲವೇ? ಶಾಲೆಗಳಲ್ಲಿ ಬಿಸಿಯೂಟ ತಯಾರಿಸುವವರು ಉತ್ತಮ ಸಾಮಗ್ರಿಗಳನ್ನು ಬಳಸಿ ಮಾಡಿಕೊಡುವ ಆಹಾರದ ಕುರಿತೇ ಅಸಮಾಧಾನ ವ್ಯಕ್ತಪಡಿಸುವವರ ಮನದಲ್ಲಿ, ಪ್ರತಿದಿನ ಬಿಸಿಯೂಟ ಸೇವಿಸುವ ಮಕ್ಕಳ ಕುರಿತು ಸಹ ಸಹಾನುಭೂತಿ ಮೂಡಬೇಕಲ್ಲವೇ?

ಮತಗಟ್ಟೆಗೆ ಆಯ್ದುಕೊಳ್ಳುವ ಕಟ್ಟಡಗಳಿಗಿಂತ ನಿಕೃಷ್ಟವಾಗಿರುವ ಶೆಡ್ಡು, ಟೆಂಟುಗಳಲ್ಲಿ ಬದುಕುವ ಜನರ ಬವಣೆಗಳನ್ನು ಅರಿಯಲು ಚುನಾವಣಾ ಕೆಲಸದ ಅನುಭವ ನೆರವಾಗುವುದಿಲ್ಲವೇ? ವೇತನ ಸೇರಿದಂತೆ ತಮಗೆ ದೊರೆಯುವ ಸೌಲಭ್ಯಗಳ ಹೆಚ್ಚಳಕ್ಕೆ ಸರ್ಕಾರದ ಮೇಲೆ ಒತ್ತಡ ಹೇರಲು ತುದಿಗಾಲಲ್ಲಿ ನಿಲ್ಲುವವರಿಗೆ, ಸರ್ಕಾರದ ಸೌಲಭ್ಯಗಳು ತಲುಪಬೇಕಾದವರನ್ನು ತಲುಪಬೇಕಾದ ರೀತಿಯಲ್ಲಿ ತಲುಪದಿರುವ ಕಾರಣದಿಂದ ಉಂಟಾಗುತ್ತಿರುವ ಸಮಸ್ಯೆಗಳತ್ತ ಕಣ್ಣುಹಾಯಿಸಲು, ಆತ್ಮವಿಮರ್ಶೆಗೆ ತಮ್ಮನ್ನು ಒಡ್ಡಿಕೊಳ್ಳಲು ಚುನಾವಣಾ ಅನುಭವ ಪ್ರೇರೇಪಿಸಬೇಕಲ್ಲವೇ? ಆತ್ಮಾವಲೋಕನಕ್ಕಿಂತ ಆತ್ಮವಂಚಕ ಪ್ರವೃತ್ತಿ ಪ್ರದರ್ಶಿಸುವುದರತ್ತಲೇ ಹೆಚ್ಚು ಉತ್ಸುಕತೆ ತೋರುವುದೇಕೆ?

ಚುನಾವಣಾ ಕೆಲಸ ನಮ್ಮ ಸುತ್ತಮುತ್ತಲಿನ ವಾಸ್ತವಗಳಿಗೆ ಮುಖಾಮುಖಿಯಾಗುವ ಅವಕಾಶ ಕಲ್ಪಿಸುತ್ತದೆ. ಈ ವೇಳೆ ಎದುರಾಗುವ ಸಣ್ಣಪುಟ್ಟ ತೊಡಕುಗಳನ್ನೇ ದೊಡ್ಡದು ಮಾಡಿ, ತಾವೇನೋ ಮಹೋನ್ನತ ಕೆಲಸ ಮಾಡಿದೆವೆಂದು ಬೀಗುವ ಬದಲಿಗೆ, ಸರ್ಕಾರಿ ವ್ಯವಸ್ಥೆಯ ಅಸಮರ್ಪಕ ನಿರ್ವಹಣೆಯಿಂದ ಜನಸಾಮಾನ್ಯರಿಗೆ ಆಗುತ್ತಿರುವ ಅನ್ಯಾಯ, ಅನನುಕೂಲಗಳ ಕುರಿತು ಆತ್ಮಾವಲೋಕನಕ್ಕೆ ಮುಂದಾಗುವುದು ಸೂಕ್ತ. ಒಂದು ವ್ಯವಸ್ಥೆ ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದರೆ, ಅದಕ್ಕೆ ಆ ವ್ಯವಸ್ಥೆಯ ಭಾಗವಾದ ಎಲ್ಲರೂ ಕಾರಣಕರ್ತರಾಗುವುದಿಲ್ಲವೇ?

ವಾಚಕರ ವಾಣಿ

ನಾವು ಹೇಳಬಯಸುವುದೇನೆಂದರೆ...

ಕಾಂಗ್ರೆಸ್ ನೇತೃತ್ವದ ಸರ್ಕಾರ ರಾಜ್ಯದ ಜನತೆಗೆ ನೀಡಿರುವ ಐದು ಗ್ಯಾರಂಟಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಲೇ ನಾವು ಹೇಳಬಯಸುವುದೇನೆಂದರೆ, ನಮಗೆ ಅನ್ವಯವಾಗುವ ‘ಗೃಹಜ್ಯೋತಿ’ ಹಾಗೂ ‘ಗೃಹಲಕ್ಷ್ಮಿ’ ಯೋಜನೆಗಳ ಅಡಿಯಲ್ಲಿ ಸರ್ಕಾರ ನೀಡಲಿರುವ 200 ಯೂನಿಟ್‌ವರೆಗಿನ ಉಚಿತ ವಿದ್ಯುತ್ ಅನ್ನಾಗಲೀ, ಪ್ರತಿ ಮನೆಯ ಯಜಮಾನಿಗೆ ನೀಡುವ ₹ 2000ವನ್ನಾಗಲೀ, ಒಳ್ಳೆಯ ವರಮಾನ ಹೊಂದಿದ್ದು, ನಾವು ಬಳಸುವ ವಿದ್ಯುಚ್ಛಕ್ತಿಯ ಬಿಲ್ಲನ್ನು ಪಾವತಿಸುವ ಸಾಮರ್ಥ್ಯವಿರುವ ನಮ್ಮಂತಹವರು ಸ್ವೀಕರಿಸುವುದು ಉಚಿತವಲ್ಲ-ವೆಂದು ಅವುಗಳನ್ನುಪಡೆದುಕೊಳ್ಳದಿರಲು ನಿರ್ಧರಿಸಿದ್ದೇವೆ. ಬದಲಾಗಿ ಅವು ಅರ್ಹ ಫಲಾನುಭವಿಗಳನ್ನು ತಲುಪಬೇಕೆಂಬುದು ನಮ್ಮ ಆಶಯ.

ಲಕ್ಷ್ಮೀ ಚಂದ್ರಶೇಖರ್, ಪ್ರೊ. ಬಿ.ಕೆ.ಚಂದ್ರಶೇಖರ್, ಬೆಂಗಳೂರು

ಮೈತ್ರಿ ಸಾಧ್ಯತೆ: ಜೆಡಿಎಸ್ ಪರ್ಯಾಲೋಚಿಸಲಿ

ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಳ್ಳಲು ಬಿಜೆಪಿ ಯೋಚಿಸುತ್ತಿದೆ ಎಂಬ ಸುದ್ದಿಯನ್ನು (ಪ್ರ.ವಾ., ಜೂನ್ 5) ಓದಿದಾಗ, ಪ್ರವಾಹದಲ್ಲಿ ಮುಳುಗುವ ವ್ಯಕ್ತಿ ಒಂದು ಹುಲ್ಲುಕಡ್ಡಿಯ ಆಸರೆಗೂ ಕೈ ಚಾಚುವ ರೂಪಕ ನೆನಪಾಯಿತು. ತೀರಾ ಈಚೆಗೆ ಕರ್ನಾಟಕದಲ್ಲಿ ಸ್ವಯಂಕೃತ ತಪ್ಪಿನಿಂದಾಗಿ ಸೋತು ಹೋಗಿರುವ ಬಿಜೆಪಿ ಈಗ ಜೆಡಿಎಸ್ ಜೊತೆ ಮೈತ್ರಿಗೆ ಮುಂದಾಗಿರುವುದು ಬರೀ ತಂತ್ರಗಾರಿಕೆಯಷ್ಟೇ ಅಲ್ಲ, ನಂತರ ಜೆಡಿಎಸ್‌ನಂಥ ಸಣ್ಣ ಪಕ್ಷವನ್ನು ಆಪೋಶನ ತೆಗೆದುಕೊಳ್ಳುವ ಹುನ್ನಾರವೂ ಇದರ ಹಿಂದೆ ಅಡಗಿದೆ.

ಬಿಜೆಪಿಯ ಅಂಥ ಹುನ್ನಾರದ ವಾಸನೆ ಹಿಡಿದ ಬಿಹಾರದ ನಿತೀಶ್ ಕುಮಾರ್, ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಅವರು ಕಂಡುಕೊಂಡ ಎಚ್ಚರ, ಜೆಡಿಎಸ್‌ನ ಕಣ್ತೆರೆಸಬೇಕಿದೆ. ಜೆಡಿಎಸ್‌ಗೆ ಕರ್ನಾಟಕ ಬಿಟ್ಟರೆ ಬೇರೆ ರಾಜ್ಯದಲ್ಲಿ ನೆಲೆಯಿಲ್ಲ. ಈಚೆಗೆ ನೆಲ ಕಚ್ಚಿರುವ ಜೆಡಿಎಸ್, ಜನಪರ ಹೋರಾಟದಲ್ಲಿ ತೊಡಗಿದರೆ ಮತ್ತೆ ಪುಟಿದೇಳುವ ಅವಕಾಶ ಖಂಡಿತವಾಗಿ ಇದ್ದೇ ಇದೆ. ನಮ್ಮ ಸಂವಿಧಾನದ ಜಾತ್ಯತೀತ ಮೌಲ್ಯವನ್ನು ಪಕ್ಷದ ಹೆಸರಿನಲ್ಲೇ ಸ್ಥಾಪಿಸಿ ಕೊಂಡಿರುವ ಜೆಡಿಎಸ್, ಸ್ವತಂತ್ರವಾಗಿ ಉಳಿದು ಬೆಳೆಯಬೇಕೆಂದು ಸಾಮಾಜಿಕ ಸೌಹಾರ್ದ ಬಯಸುವ ಜನ ಆಶಿಸುತ್ತಾರೆ. ಆದ್ದರಿಂದ ಪಕ್ಷವು ಪರ್ಯಾಲೋಚಿಸಲಿ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಜೀವಂತ ಪಠ್ಯಗಳಿಂದ ಮಾತ್ರ ಲವಲವಿಕೆ

ಪಠ್ಯಪುಸ್ತಕಗಳ ಪುನರ್‌ರಚನೆ ಕುರಿತು ಪತ್ರಿಕೆ ನೀಡಿರುವ (ಸಂಪಾದಕೀಯ, ಜೂನ್ 5) ಸಕಾಲಿಕ ಸಲಹೆ, ಮಾರ್ಗದರ್ಶನಕ್ಕೆ ಧನ್ಯವಾದ. ಈ ವರ್ಷದ ತರಗತಿಗಳು ಈಗಾಗಲೇ ಆರಂಭವಾಗಿರುವುದರಿಂದ ವಿವಾದಿತ ಪಠ್ಯಗಳನ್ನು ಈ ಸಲದ ಅಧ್ಯಯನಕ್ಕೆ ಬಳಸಿಕೊಳ್ಳದಿರುವಂತೆ ಸುತ್ತೋಲೆ ಹೊರಡಿಸಿದರೆ ಸಾಕಾಗುತ್ತದೆ. ಕೆಲವು ಪಾಠಗಳನ್ನು ಬಳಸದಿರುವ ಕಾರಣದಿಂದಾಗಿ ಮಿಗುವ ತರಗತಿಯ ಗಂಟೆಗಳನ್ನು ಮಕ್ಕಳ ಭಾಷಾ ಕಲಿಕೆಯ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು.

ಇನ್ನು ಮುಂದೆ ಪಠ್ಯಗಳ ಪರಿಷ್ಕರಣ ಕಾರ್ಯಕ್ಕಾಗಿ ತಾತ್ಕಾಲಿಕ ಸಮಿತಿಗಳನ್ನು ನೇಮಿಸದೆ, ಆಯಾ ಕ್ಷೇತ್ರಗಳಲ್ಲಿ ಉನ್ನತ ಅಧ್ಯಯನ ಮಾಡಿರುವ ಉತ್ತಮ ಶಿಕ್ಷಣ ತಜ್ಞರ ಸಮಿತಿಯೊಂದನ್ನು ನಿರ್ದಿಷ್ಟ ಅವಧಿಗೆ ರೂಪಿಸಬೇಕು. ಈ ಸಮಿತಿಗೆ ಹಾಗೂ ಉಪಸಮಿತಿಗಳಿಗೆ ಪಠ್ಯಪುಸ್ತಕಗಳಿಗೆ ತಕ್ಕ ವಿಷಯಗಳನ್ನು ಆಯ್ಕೆ ಮಾಡಿ, ಚರ್ಚಿಸಿ ಸಿದ್ಧ ಮಾಡುವಷ್ಟು ಕಾಲಾವಕಾಶ ಇರಬೇಕು. ಯಾವುದೇ ಪಠ್ಯಪುಸ್ತಕದಲ್ಲಿ ತಾವು ಗಮನಿಸಿದ ಅಸಂಗತ, ಅಪ್ರಸ್ತುತ ವಿಚಾರಗಳನ್ನು ಜವಾಬ್ದಾರಿಯುಳ್ಳ ಓದುಗರು, ಬೋಧಕ, ಬೋಧಕಿಯರು, ಪೋಷಕರು, ತಜ್ಞರು ಈ ಸಮಿತಿಗೆ ಬರೆದು ತಿಳಿಸುವಂತೆ ಇರಬೇಕು. ಈ ಸಮಿತಿಯು ಪಠ್ಯಪುಸ್ತಕಗಳನ್ನು ಕುರಿತ ಸಕಾರಣವಾದ ಪ್ರಶ್ನೆಗಳನ್ನು, ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ಪರಿಶೀಲಿಸಿ, ಅಗತ್ಯವಿರುವಲ್ಲಿ ಮಾತ್ರ ಸೂಕ್ತ ಕ್ರಮಗಳನ್ನು ಶಿಫಾರಸು ಮಾಡುವಂತೆ ಇರಬೇಕು. ಹಿಂದಿನ ಕೆಲವು ದಶಕಗಳಲ್ಲಿ ಉತ್ತಮ ಸಂವೇದನೆ ರೂಪಿಸಿವೆಯೆಂದು ಸಾಬೀತಾಗಿರುವ ಉತ್ತಮ ಪಠ್ಯಗಳ ಬಗ್ಗೆ ಮಕ್ಕಳಿಂದ, ಶಿಕ್ಷಕ, ಶಿಕ್ಷಕಿಯರಿಂದ ಫೀಡ್‌ಬ್ಯಾಕ್ ಪಡೆದು ಹಳೆಯ ಪಾಠಗಳನ್ನು ಕೂಡ ಮತ್ತೆ ಇಡಬಹುದು. ಜೊತೆಗೆ, ಮಕ್ಕಳ ಮನಸ್ಸನ್ನು ತಿದ್ದುವ, ಉತ್ತಮ ಅಭಿರುಚಿ ಬೆಳೆಸುವ ಈ ಕಾಲದ ಹೊಸ ಹೊಸ ಪಾಠಗಳನ್ನೂ ಸೇರಿಸಲು ಸಮಿತಿ ವ್ಯಾಪಕ ಚರ್ಚೆ ನಡೆಸುವಂತೆ ಇರಬೇಕು. ಮಕ್ಕಳಲ್ಲಿ ಸದಭಿರುಚಿ, ಜಾತ್ಯತೀತ ಮನೋಭಾವ, ವೈಚಾರಿಕತೆ ಹಾಗೂ ಸೃಜನಶೀಲತೆ ಬೆಳೆಸುವ ಜೀವಂತ ಪಠ್ಯಗಳು ಮಾತ್ರ ತರಗತಿಗಳಲ್ಲಿ ಲವಲವಿಕೆ ಸೃಷ್ಟಿಸಬಲ್ಲವು.

ಡಾ. ನಟರಾಜ್ ಹುಳಿಯಾರ್, ಬೆಂಗಳೂರು

ಬೋಳು ಗುಡ್ಡದಲ್ಲಿ ಕೈಗಾರಿಕೆ...!

‘ಗಿಡ ನೆಡಲು ಇರಲಿ ವೈಜ್ಞಾನಿಕ ತಳಹದಿ’ ಎಂಬ ನಾಗರಾಜ ಕೂವೆ ಅವರ ಲೇಖನವನ್ನು (ಸಂಗತ, ಜೂನ್ 5) ಓದಿದಾಗ, ಸುಮಾರು 20 ವರ್ಷಗಳ ಹಿಂದೆ ನಾನು ಸಾಕ್ಷಿಯಾಗಿದ್ದ ಘಟನೆಯೊಂದು ನೆನಪಾಗಿ, ನಗೆ ಚಿಮ್ಮಿತು. ಆಗ ತುಮಕೂರು ಸಮೀಪದ ದೇವರಾಯನದುರ್ಗ ಅರಣ್ಯ ಜಾಗದಲ್ಲಿ ತುಮಕೂರು ವಿಶ್ವವಿದ್ಯಾಲಯ ಸ್ಥಾಪನೆಗೆ ಜಾಗ ನೀಡುವ ವಿಷಯ ವಿವಾದಕ್ಕೆ ಎಡೆಮಾಡಿತ್ತು. ಜಾಗ ನೀಡುವುದರ ಪರ, ವಿರುದ್ಧದ ಹೋರಾಟ ನಡೆದಿತ್ತು. ವಿಶ್ವವಿದ್ಯಾಲಯದ ಹೋರಾಟಗಾರರು ಅಲ್ಲೇ ಆಗಲೆಂದು ಹೇಳುತ್ತಿದ್ದರು. ಪರಿಸರಾಸಕ್ತರು ವಿರೋಧಿಸುತ್ತಿದ್ದರು. ಅದೊಂದು ದಿನ ವಿಶ್ವವಿದ್ಯಾಲಯವು ಅಲ್ಲೇ ಆಗಬೇಕೆಂದು ಗಣ್ಯರ ತಂಡವೊಂದು ಸ್ಥಳಕ್ಕೆ ತೆರಳಿತ್ತು. ಆ ಜಾಗ ನೋಡುತ್ತ ಗಣ್ಯರೊಬ್ಬರು ‘ನೋಡಿ, ಇದೇನು ದಟ್ಟ ಅರಣ್ಯವೇ? ಬರೀ ಹುಲ್ಲುಗಾವಲು ಇದೆ. ಸಣ್ಣಪುಟ್ಟ ಗಿಡಗಳಿವೆ ಅಷ್ಟೇ. ವಿಶ್ವವಿದ್ಯಾಲಯಕ್ಕೆ ಈ ಜಾಗ ಬಳಸಿದರೆ ಏನಾದೀತು?’ ಎಂದು ಉದ್ಗರಿಸಿದ್ದರು! ಅಷ್ಟಕ್ಕೇ ನಿಲ್ಲಲಿಲ್ಲ. ‘ಅಗೋ ಅಲ್ಲಿ ನೋಡಿ. ಈ ಸುತ್ತಲಿನ ಬೆಟ್ಟಗುಡ್ಡಗಳು ಎಷ್ಟೊಂದು ಬೋಳು ಬೋಳಾಗಿವೆ. ಎಷ್ಟೊಂದು ಜಾಗ ವೇಸ್ಟ್ ಆಗುತ್ತಿದೆ. ಇಲ್ಲೆಲ್ಲ ಕೈಗಾರಿಕೆಗಳನ್ನು ಸ್ಥಾಪಿಸಿದರೆ, ತುಮಕೂರು ಅಭಿವೃದ್ಧಿ ಆಗುತ್ತದೆ’ ಎಂದೂ ಮುತ್ತು ಉದುರಿಸಿದ್ದರು!

ಹುಲ್ಲುಗಾವಲು, ಕುರುಚಲು ಗಿಡಗಳು ಸಹಾ ಒಂದು ಬಗೆಯ ಕಾಡು ಎಂಬುದಾಗಲೀ ಬೋಳು ಬೆಟ್ಟಗುಡ್ಡಗಳು ಸಹಾ ಪರಿಸರ ವೈವಿಧ್ಯದಲ್ಲಿ ಸೇರಿವೆ ಎಂಬುದಾಗಲೀ ಅವರಿಗೆ ಅರಿವಿರಲಿಲ್ಲ. ದಟ್ಟವಾದ ಭಾರಿ ಗಿಡಮರಗಳಿದ್ದರೆ ಅದು ಅರಣ್ಯ ಎಂಬುದಷ್ಟೇ ಅವರ ಕಲ್ಪನೆಯಾಗಿತ್ತು. ಅದೇನೇ ಇರಲಿ, ಪರಿಸರಾಸಕ್ತರ ಪ್ರಬಲ ಹೋರಾಟದಿಂದ ಆ ಅರಣ್ಯಭೂಮಿ ಉಳಿಯಿತೆಂಬುದು ಬೇರೆ ವಿಚಾರ.

ಆರ್.ಎಸ್.ಅಯ್ಯರ್, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರೈಲ್ವೆಯಲ್ಲಿ ಸುರಕ್ಷತೆ ಕಡೆಗಣನೆ

ಪ್ರಜಾವಾಣಿ ವಾರ್ತೆ

ರೈಲುಗಳು ಮತ್ತು ರೈಲು ಹಳಿಗಳ ಸುರಕ್ಷತೆಯನ್ನು ರೈಲ್ವೆ ಇಲಾಖೆ ಕಡೆಗಣಿಸಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಸುರಕ್ಷತಾ ಕ್ರಮಗಳನ್ನು ಕಡೆಗಣಿಸುವುದನ್ನು ಬಿಡಬೇಕು ಎಂದು ಸಿಎಜಿ ತನ್ನ ವರದಿಯಲ್ಲಿ ಶಿಫಾರಸು ಮಾಡಿತ್ತು. 2022ರ ಡಿಸೆಂಬರ್‌ನಲ್ಲಿ ಈ ವರದಿ ಸಲ್ಲಿಕೆಯಾಗಿತ್ತು. ಹೀಗೆ ಹೇಳಿದ ಕೆಲವೇ ತಿಂಗಳಲ್ಲಿ ಬಾಲೇಶ್ವರ ರೈಲು ದುರಂತ ನಡೆದಿದೆ. ರೈಲ್ವೆ ಇಲಾಖೆಯು ಸುರಕ್ಷತೆಯನ್ನು ಕಡೆಗಣಿಸುತ್ತಿರುವುದರತ್ತ ಈ ಅವಘಡವು ಬೊಟ್ಟುಮಾಡಿ ತೋರಿಸುತ್ತಿದೆ.

ಕೊನೆಯ ಕ್ಷಣದಲ್ಲಿ ಸಿಗ್ನಲ್ ಬದಲಾವಣೆ ಆಗಿದ್ದರಿಂದ ಬಾಲೇಶ್ವರ ಅವಘಡ ಸಂಭವಿಸಿದೆ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ. ರೈಲ್ವೆ ಸಚಿವರು ಸಹ ಇದನ್ನೇ ಹೇಳಿದ್ದಾರೆ. 2017ರಿಂದ 2021ರ ಮಧ್ಯೆ ದೇಶದಲ್ಲಿ ಒಟ್ಟು 1,800 ರೈಲು ಅವಘಡಗಳು ಸಂಭವಿಸಿವೆ. ಅವುಗಳಲ್ಲಿ ಸಿಗ್ನಲ್ ಸಮಸ್ಯೆಗೆ ಸಂಬಂಧಿಸಿದ ಅವಘಡಗಳ ಸಂಖ್ಯೆ 211.

ಸಿಗ್ನಲ್ ವ್ಯವಸ್ಥೆಯಲ್ಲಿ ಆಗುತ್ತಿರುವ ಲೋಪಗಳನ್ನು ಸರಿಪಡಿಸಲು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ದೇಶದ ಸಂಪನ್ಮೂಲ, ಜನರ ಜೀವಕ್ಕೆ ಹಾನಿಯಾಗುತ್ತದೆ. ಇದನ್ನು ತಪ್ಪಿಸಬೇಕು ಎಂದು ಸಿಎಜಿ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು.

ರೈಲು ಪ್ರಯಾಣವನ್ನು ಸುರಕ್ಷಿತವಾಗಿಸಲು ಹಳಿಗಳ ನವೀಕರಣ ಮತ್ತು ಬದಲಾವಣೆ ಅತ್ಯಂತ ಮುಖ್ಯ. ರಾಷ್ಟ್ರೀಯ ರೈಲು ಸಂರಕ್ಷಣಾ ಕೋಶದ (ಆರ್‌ಆರ್‌ಎಸ್‌ಕೆ) ನಿಯಮಗಳ ಪ್ರಕಾರ, ಪ್ರತಿ ಹಳಿಯನ್ನು ನಾಲ್ಕು ವರ್ಷಗಳಿಗೆ ಒಮ್ಮೆ ನವೀಕರಿಸಬೇಕು. ಆದರೆ, ದೇಶದ ಎಲ್ಲಾ ರೈಲು ವಲಯಗಳಲ್ಲಿ ಈ ಕಾರ್ಯ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಕೆಲವು ವಲಯಗಳಲ್ಲಿ ನವೀಕರಣವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಎಂದು ಸಿಎಜಿ ತನ್ನ ವರದಿಯಲ್ಲಿ ಹೇಳಿತ್ತು.

ಆರ್‌ಆರ್‌ಎಸ್‌ಕೆ ನಿಯಮಾವಳಿಗಳಂತೆ ರೈಲುಹಳಿಗಳ ನವೀಕರಣಕ್ಕೆ ₹1.54 ಲಕ್ಷ ಕೋಟಿ ವೆಚ್ಚವಾಗುತ್ತದೆ. ಇದರಲ್ಲಿ ಆರ್‌ಆರ್‌ಎಸ್‌ಕೆ ನಿಧಿಯಿಂದ ₹1.19 ಲಕ್ಷ ಕೋಟಿ ಭರಿಸಬೇಕು. ಆದರೆ, ಕೇಂದ್ರ ಸರ್ಕಾರವು ಸ್ಥಾಪಿಸಿರುವ ಈ ನಿಧಿಯ ಒಟ್ಟು ಮೊತ್ತವೇ ₹1 ಲಕ್ಷ ಕೋಟಿ. ಹೀಗಿರುವಾಗ ಎಲ್ಲಾ ಹಳಿಗಳ ನವೀಕರಣ ಸಾಧ್ಯವೇ ಇಲ್ಲ. ಹಣಕಾಸಿನ ಕೊರತೆಯ ಕಾರಣದಿಂದಲೇ ಬಿಹಾರದ ವೈಶಾಲಿ ಜಿಲ್ಲೆಯಲ್ಲಿ ರೈಲು ಹಳಿಗಳ ನವೀಕರಣ ನಡೆದಿರಲಿಲ್ಲ. 2018ರ ಅಕ್ಟೋಬರ್‌ನಲ್ಲಿ ಈ ಮಾರ್ಗದ ಹಳಿಗಳ ನವೀಕರಣ ನಡೆಯಬೇಕಿತ್ತು. ಅದೇ ಮಾರ್ಗದಲ್ಲಿ ಚಲಿಸುತ್ತಿದ್ದ ಸೀಮಾಂಚಲ ಎಕ್ಸ್‌ಪ್ರೆಸ್ 2019ರ ಫೆಬ್ರುವರಿಯಲ್ಲಿ ಹಳಿ ತಪ್ಪಿತ್ತು. ಆ ಅವಘಡದಲ್ಲಿ ಆರು ಮಂದಿ ಮೃತಪಟ್ಟಿದ್ದರು. ರೈಲು ಹಳಿ ನವೀಕರಣಕ್ಕೆ ಹಣ ಒದಗಿಸದೇ ಇರುವುದರಿಂದಲೇ ಈ ಅಪಘಾತ ಸಂಭವಿಸಿತ್ತು ಎಂಬುದನ್ನು ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಇದು ರೈಲ್ವೆ ಇಲಾಖೆ ವತಿಯಿಂದ ಆದ ಕರ್ತವ್ಯ ಲೋಪ. ಈ ಲೋಪವನ್ನು ಕೇಂದ್ರ ಸರ್ಕಾರವು ಸರಿಪಡಿಸಬೇಕು ಎಂದು ಸಿಎಜಿ ತನ್ನ ವರದಿಯಲ್ಲಿ ಶಿಫಾರಸು ಮಾಡಿತ್ತು.

ಅನುದಾನದ ಕೊರತೆಯೇ ರೈಲ್ವೆಯಲ್ಲಿ ಸುರಕ್ಷತಾ ಕ್ರಮಗಳನ್ನು ಕಡೆಗಣಿಸಲು ಪ್ರಮುಖ ಕಾರಣ ಎಂದು ಸಿಎಜಿ ತನ್ನ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದೆ.

ಸುರಕ್ಷತಾ ವೆಚ್ಚ ಇಳಿಕೆ

ರಾಷ್ಟ್ರೀಯ ರೈಲು ಸಂರಕ್ಷಣಾ ಕೋಶದ ಅಡಿ ಪ್ರತಿ ಆರ್ಥಿಕ ವರ್ಷದಲ್ಲಿ ಮಾಡುತ್ತಿರುವ ವೆಚ್ಚ ಇಳಿಕೆಯಾಗಿದೆ

2017-18	2018-19	2019-20
₹16,742 ಕೋಟಿ	₹18,980 ಕೋಟಿ	₹15,801 ಕೋಟಿ

ಸುರಕ್ಷಾ ನಿಧಿ ಅನ್ಯ ಉದ್ದೇಶಕ್ಕೆ ಬಳಕೆ

ರಾಷ್ಟ್ರೀಯ ರೈಲು ಸಂರಕ್ಷಣಾ ಕೋಶದ (ಆರ್‌ಆರ್‌ಎಸ್‌ಕೆ) ಅನ್ವಯ ಮೀಸಲಿರಿಸಿದ್ದ ಹಣವನ್ನು 2018–20ರ ವರೆಗೆ ಎಲ್ಲಾ ರೈಲ್ವೆ ವಲಯಗಳು ಅನ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಂಡಿವೆ ಎಂದು ಸಿಎಜಿ ಹೇಳಿದೆ. ರೈಲ್ವೆ ಸುರಕ್ಷತೆಗಾಗಿ ವ್ಯಯಿಸಬೇಕಿದ್ದ ಹಣವನ್ನು ಅನಗತ್ಯವಾಗಿ ಬೇರೆ ಕೆಲಸಗಳಿಗೆ ನಿಯಂತ್ರಣವಿಲ್ಲದೆಯೇ ಖರ್ಚು ಮಾಡಿದೆ ಎಂದೂ ಅದು ಹೇಳಿದೆ. 2018ರಿಂದ 2020ರ ಅವಧಿಯಲ್ಲಿ ಎಲ್ಲಾ ರೈಲ್ವೆ ವಲಯಗಳು ₹45,000 ಕೋಟಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಿವೆ. ಇದರಲ್ಲಿ ₹3,000 ಕೋಟಿಯಷ್ಟು ವೆಚ್ಚವನ್ನು ಲೆಕ್ಕಪರಿಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಈ ವೇಳೆ ₹48.21 ಕೋಟಿ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ. ಎಲ್ಲಾ ವೆಚ್ಚಗಳನ್ನು ಪರಿಶೀಲಿಸಿದರೆ, ಅನ್ಯ ಉದ್ದೇಶಕ್ಕೆ ಬಳಕೆಯಾದ ಮೊತ್ತ ಭಾರಿ ಪ್ರಮಾಣದಲ್ಲಿ ಏರಿಕೆಯಾಗಬಹುದು ಎಂದು ಸಿಎಜಿ ತನ್ನ ವರದಿಯಲ್ಲಿ ಕಳವಳ ವ್ಯಕ್ತಪಡಿಸಿದೆ.

ತಟ್ಟೆ–ಲೋಟ ಕೊಳ್ಳಲು, ಪೀಠೋಪಕರಣಕ್ಕಾಗಿ, ಫುಟ್ ಮಸಾಜರ್ ಖರೀದಿಗೆ ಈ ನಿಧಿಯನ್ನು ವೆಚ್ಚ ಮಾಡಲಾಗಿದೆ. ಅಧಿಕಾರಿಗಳ ವಿಶ್ರಾಂತಿ ಕೊಠಡಿ ಕಾಮಗಾರಿ, ಅಧಿಕಾರಿಗಳ ಓಡಾಟಕ್ಕಾಗಿ ಇರುವ ವಾಹನಗಳನ್ನು ಬಾಡಿಗೆಗೆ ಪಡೆಯುವುದಕ್ಕೆ, ಕಂಪ್ಯೂಟರ್, ಜೆರಾಕ್ಸ್, ಪ್ರಿಂಟಿಂಗ್ ಮಷೀನ್, ಟೋನರ್ ಖರೀದಿಗೂ ಈ ಹಣವನ್ನು ಬಳಸಿಕೊಳ್ಳಲಾಗಿದೆ. ಧ್ವಜಸ್ತಂಭ ನಿರ್ಮಾಣಕ್ಕಾಗಿ ₹64 ಲಕ್ಷ ವ್ಯಯಿಸಲಾಗಿದೆ. ತಟ್ಟೆ–ಲೋಟ ಖರೀದಿಗೆ ₹1.48 ಕೋಟಿ ಖರ್ಚು ಮಾಡಲಾಗಿದೆ. ರೈಲ್ವೆ ಸುರಕ್ಷತೆಗಾಗಿ ಮೀಸಲಿಟ್ಟ ಹಣವನ್ನು ಬೇಕಾಬಿಟ್ಟಿ ಬಳಸಲಾಗಿದೆ. ಈ ನಿಧಿಯ ಬಳಕೆಗೆ ನಿಯಂತ್ರಣವೇ ಇಲ್ಲದಂತಾಗಿದೆ ಎಂದು ಸಿಎಜಿ ತನ್ನ ವರದಿಯಲ್ಲಿ ಹೇಳಿದೆ.

ಹಳಿ ಪರಿಶೀಲನೆ ಕಡೆಗಣನೆ

350 ಎಲ್ಲಾ ರೈಲ್ವೆ ವಲಯಗಳಲ್ಲಿ ಕೈಗೊಳ್ಳಬೇಕಿದ್ದ ಹಳಿ ಪರಿಶೀಲನಾ ಕಾರ್ಯಾಚರಣೆಗಳ ಸಂಖ್ಯೆ

169 ಎಲ್ಲಾ ರೈಲ್ವೆ ವಲಯಗಳಲ್ಲಿ ಕೈಗೊಂಡಿರುವ ಹಳಿ ಪರಿಶೀಲನಾ ಕಾರ್ಯಾಚರಣೆಗಳ ಸಂಖ್ಯೆ

181 ಎಲ್ಲಾ ರೈಲ್ವೆ ವಲಯಗಳಲ್ಲಿ ಇನ್ನಷ್ಟೇ ಕೈಗೊಳ್ಳಬೇಕಿರುವ ಹಳಿ ಪರಿಶೀಲನಾ ಕಾರ್ಯಾಚರಣೆಗಳ ಸಂಖ್ಯೆ

ಎಲ್ಲಾ ರೈಲ್ವೆ ವಲಯಗಳಲ್ಲಿ ಎಲ್ಲಾ ಮಾರ್ಗಗಳ ರೈಲು ಹಳಿಗಳನ್ನು ಕಾಲಕಾಲಕ್ಕೆ ಪರಿಶೀಲನೆ ನಡೆಸಬೇಕು ಎಂದು ನಿಯಮಗಳು ಹೇಳುತ್ತವೆ. ಅತಿ ವೇಗದ ಮಾರ್ಗಗಳನ್ನು ಎರಡು ತಿಂಗಳಿಗೊಮ್ಮೆ, ವೇಗದ ಮಾರ್ಗಗಳನ್ನು ಮೂರು ತಿಂಗಳಿಗೊಮ್ಮೆ, ಸಾಧಾರಣ ವೇಗದ ಮಾರ್ಗಗಳನ್ನು ಆರು ತಿಂಗಳಿಗೊಮ್ಮೆ ಮತ್ತು ಕಡಿಮೆ ವೇಗದ ಮಾರ್ಗಗಳನ್ನು ವರ್ಷಕ್ಕೊಮ್ಮೆ ಪರಿಶೀಲನೆ ನಡೆಸಬೇಕು. ಆದರೆ, ಈ ಕಾರ್ಯ ಸರಿಯಾಗಿ ಆಗುತ್ತಿಲ್ಲ. ಪರಿಶೀಲನಾ ಕಾರ್ಯಾಚರಣೆಗಳ ಸಂಖ್ಯೆ ಶೇ 50ಕ್ಕಿಂತಲೂ ಕಡಿಮೆ ಇದೆ. ಇದು ರೈಲ್ವೆ ಸುರಕ್ಷತೆಯ ಕಡೆಗಣನೆ ಎಂದು ಸಿಎಜಿ ತನ್ನ ವರದಿಯಲ್ಲಿ ಹೇಳಿತ್ತು.

ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್

ಇಂಟರ್‌ಲಾಕಿಂಗ್

ಈ ಅಪಘಾತಕ್ಕೆ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್‌ನಲ್ಲಿನ ಬದಲಾವಣೆಯೇ ಕಾರಣ ಎಂದು ರೈಲ್ವೆ ಇಲಾಖೆ ಹೇಳಿದೆ. ರೈಲು ಚಲಿಸುತ್ತಿರುವ ಹಳಿ ಮಾರ್ಗವನ್ನು ಬದಲಿಸುವ ವ್ಯವಸ್ಥೆಗೆ ಇಂಟರ್‌ಲಾಕಿಂಗ್ ಎಂದು ಕರೆಯಲಾಗುತ್ತದೆ. ಮೊದಲು ಇಂಟರ್‌ಲಾಕಿಂಗ್ ಅನ್ನು ಸಿಬ್ಬಂದಿಯೇ 'ಮ್ಯಾನುಯಲ್' ಆಗಿ ಬದಲಿಸಬೇಕಿತ್ತು. ಇದಕ್ಕಾಗಿ ಒಂದು ಲಿವರ್ ನೀಡಲಾಗಿರುತ್ತಿತ್ತು. ಸ್ಟೇಷನ್‌ನಿಂದ ದೊರೆತ ಸಿಗ್ನಲ್‌ನ ಅನ್ವಯ ಸಿಬ್ಬಂದಿ 'ಮ್ಯಾನುಯಲ್' ಆಗಿ ಇಂಟರ್‌ಲಾಕಿಂಗ್ ಅನ್ನು ಬದಲಿಸುತ್ತಿದ್ದರು. ಆಗ ರೈಲು ಒಂದು ಹಳಿ ಮಾರ್ಗದಿಂದ ಮತ್ತೊಂದು ಹಳಿ ಮಾರ್ಗಕ್ಕೆ ಚಲಿಸುತ್ತಿತ್ತು. ಈಗ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ವಿದ್ಯುನ್ಮಾನಗೊಳಿಸಲಾಗಿದೆ. ಸ್ಟೇಷನ್‌ನಲ್ಲಿರುವ ಸಿಬ್ಬಂದಿ ಒಂದು ಗುಂಡಿ ಒತ್ತಿದರೆ ಸಾಕು, ಇಂಟರ್‌ಲಾಕಿಂಗ್ ಬದಲಾಗುತ್ತದೆ. ಈ ಹೊಸ ವ್ಯವಸ್ಥೆಯನ್ನು 'ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್' ಎಂದು ಕರೆಯಲಾಗುತ್ತದೆ. ಬಾಲೇಶ್ವರ ಬಹನಾಗಾ ಬಜಾರ್ ರೈಲು ನಿಲ್ದಾಣದಲ್ಲಿ ಕೋರೊಮಂಡಲ್ ಎಕ್ಸ್‌ಪ್ರೆಸ್‌ಗೆ ಮೊದಲು ಮುಖ್ಯ ಲೇನ್‌ನಲ್ಲೇ ಚಲಿಸಲು ಸಿಗ್ನಲ್ ನೀಡಲಾಗಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಮುಖ್ಯಲೇನ್‌ನ ಇಂಟರ್‌ಲಾಕಿಂಗ್ ಲೂಪ್‌ಲೇನ್‌ಗೆ ಬದಲಾಗಿದೆ. ಈ ಕಾರಣದಿಂದ ಕೋರೊಮಂಡಲ್ ಎಕ್ಸ್‌ಪ್ರೆಸ್ ಲೂಪ್‌ಲೇನ್‌ಗೆ ಚಲಿಸಿದೆ. ಕೊನೆಯ ಕ್ಷಣದಲ್ಲಿ ಇಂಟರ್‌ಲಾಕಿಂಗ್ ಅನ್ನು ಬದಲಿಸಿದವರು ಯಾರು? ಇಂಟರ್‌ಲಾಕಿಂಗ್ ಬದಲಿಸಿದ್ದು ಏಕೆ ಎಂಬುದನ್ನು ಪತ್ತೆ ಮಾಡುವತ್ತ ತನಿಖೆ ಕೇಂದ್ರೀಕರಿಸಲಾಗಿದೆ.

ಹಳಿಗಳ ನಿರ್ವಹಣೆ ಮಾಡದ್ದರಿಂದಲೇ ಹೆಚ್ಚು ಅಪಘಾತ

ರೈಲು ಅಪಘಾತಗಳಲ್ಲಿ ಹಳಿ ತಪ್ಪುವ ಅವಘಡಗಳ ಪ್ರಮಾಣ ಹೆಚ್ಚು ಎಂಬುದನ್ನು ಇಲಾಖೆಯ ದತ್ತಾಂಶಗಳು ಹೇಳುತ್ತವೆ. ರೈಲುಗಳು ಹಳಿ ತಪ್ಪಲು ಹಲವು ಕಾರಣಗಳಿದ್ದರೂ, ಹಳಿಗಳ ನಿರ್ವಹಣೆ ಮಾಡದೇ ಇರುವುದು ಮತ್ತು ನವೀಕರಣ ಮಾಡದಿರುವುದು ಪ್ರಮುಖ ಕಾರಣ ಎಂಬುದನ್ನೂ ಈ ದತ್ತಾಂಶಗಳು ಹೇಳುತ್ತವೆ. ಸರ್ಕಾರವು ಈ ವಿಚಾರದಲ್ಲಿ ಸುರಕ್ಷತೆಯನ್ನು ಸಂಪೂರ್ಣವಾಗಿ ಕಡೆಗಣಿಸಿದೆ ಎಂದು ಸಿಎಜಿ ತನ್ನ ವರದಿಯಲ್ಲಿ ಹೇಳಿತ್ತು



167 ಹಳಿಗಳ ನಿರ್ವಹಣೆ ಕೊರತೆಯಿಂದ ಸಂಭವಿಸಿದ ಅವಘಡಗಳು

149 ಸರಿಯಾದ ಗ್ರೇಡ್ ಹಳಿಗಳನ್ನು ಬಳಸದೇ ಇದ್ದುದ್ದರಿಂದ ಸಂಭವಿಸಿದ ಅವಘಡಗಳು

14 ಹೊಸ ನಿರ್ಮಾಣಗಳಲ್ಲಿನ ದೋಷಗಳ ಕಾರಣದಿಂದ ಸಂಭವಿಸಿದ ಅವಘಡಗಳು

16 ತಾಂತ್ರಿಕ ಸಮಸ್ಯೆಗಳಿಂದ ಸಂಭವಿಸಿದ ಅವಘಡಗಳು

17 ಕಡಿದಾದ ತಿರುವಿನ ಕಾರಣದಿಂದ ಸಂಭವಿಸಿದ ಅವಘಡಗಳು

17 ಮಾರ್ಗದ ವಿನ್ಯಾಸದಲ್ಲಿನ ದೋಷದ ಕಾರಣದಿಂದ ಸಂಭವಿಸಿದ ಅವಘಡಗಳು

10 ಜಲಾವೃತವಾಗಿದ್ದರಿಂದ ಸಂಭವಿಸಿದ ಅವಘಡಗಳು

18 ಅಧಿಕ ಭಾರ ಹೇರಿದ್ದರಿಂದ ಸಂಭವಿಸಿದ ಅವಘಡಗಳು

408 2017–18ರಿಂದ 2020–21ರ ಮಧ್ಯೆ ದೇಶದಲ್ಲಿ ಸಂಭವಿಸಿದ ರೈಲು ಹಳಿ ತಪ್ಪಿದ ಅವಘಡಗಳ ಸಂಖ್ಯೆ

ಆಧಾರ: ರೈಲ್ವೆ ಇಲಾಖೆಗೆ ಸಂಬಂಧಿಸಿದ ಸಿಎಜಿ ವರದಿಗಳು, ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ಕೈಪಿಡಿ, ಬಾಲೇಶ್ವರ ರೈಲು ದುರಂತಕ್ಕೆ ಸಂಬಂಧಿಸಿದ ರೈಲ್ವೆ ಇಲಾಖೆಯ ಪ್ರಾಥಮಿಕ ವರದಿ, ಪಿಟಿಐ

ಬಾಲೇಶ್ವರ: ಅವಘಡ ಸಂಭವಿಸಿದ್ದು ಹೀಗೆ

ಒಡಿಶಾದ ಬಾಲೇಶ್ವರ ಕೇಂದ್ರ ರೈಲು ನಿಲ್ದಾಣದಿಂದ ದಕ್ಷಿಣಕ್ಕಿರುವ ಬಹನಾಗಾ ಬಜಾರ್ ರೈಲು ನಿಲ್ದಾಣದಲ್ಲಿ ಕೋರೊಮಂಡಲ್ ಎಕ್ಸ್‌ಪ್ರೆಸ್ ಮತ್ತು ಹೌರಾ-ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಅಪಘಾತ ನಡೆದಿತ್ತು. ಸಣ್ಣ ನಿಲ್ದಾಣವಾದ ಬಹನಾಗಾ ಬಜಾರ್‌ನಲ್ಲಿ ಕ್ರಾಸಿಂಗ್‌ಗಾಗಿ ಎರಡು ಲೂಪ್ ಲೇನ್‌ಗಳನ್ನು ನಿರ್ಮಿಸಲಾಗಿದೆ. ಇದರ ಹೊರತಾಗಿ ಎರಡು ಮುಖ್ಯ ಲೇನ್‌ಗಳು ಇವೆ.

ಲೂಪ್ ಲೇನ್: ಪ್ರತಿ ರೈಲು ನಿಲ್ದಾಣದಲ್ಲಿಯೂ ಇಂತಹ ಹಳಿಗಳನ್ನು ನಿರ್ಮಿಸಲಾಗಿರುತ್ತದೆ. ಸಾಮಾನ್ಯ ಪ್ರಯಾಣಿಕ ರೈಲುಗಳು, ಗೂಡ್ಸ್ ರೈಲುಗಳಿಗಿಂತ ವೇಗವಾಗಿ ಚಲಿಸುವ ಎಕ್ಸ್‌ಪ್ರೆಸ್ ರೈಲುಗಳಿಗೆ ಜಾಗ ಮಾಡಿಕೊಡಲು ಲೂಪ್ ಹಳಿಗಳನ್ನು ಬಳಸಲಾಗುತ್ತದೆ. ಇಂತಹ ಲೂಪ್ ಹಳಿಗಳ ಉದ್ದ ಸಾಮಾನ್ಯವಾಗಿ 750 ಮೀಟರ್ ಇರುತ್ತದೆ. ಕೆಲವು ದೊಡ್ಡ ಜಂಕ್ಷನ್‌ಗಳಲ್ಲಿ 1 ಕಿ.ಮೀ.ನಷ್ಟು ಉದ್ದದ ಲೂಪ್ ಲೇನ್‌ಗಳೂ ಇವೆ.

ಮುಖ್ಯ ಲೇನ್‌ನಲ್ಲಿ ಚಲಿಸುವ ಸರಕು ಸಾಗಣೆ ರೈಲುಗಳು ಮತ್ತು ಪ್ರಯಾಣಿಕ ರೈಲುಗಳನ್ನು ಲೂಪ್ ಲೇನ್‌ಗೆ ತಂದು ನಿಲ್ಲಿಸಲಾಗುತ್ತದೆ. ಆಗ ಎಕ್ಸ್‌ಪ್ರೆಸ್ ರೈಲುಗಳಿಗೆ ಮುಖ್ಯ ಲೇನ್ ತೆರವಾಗುತ್ತದೆ. ಎಕ್ಸ್‌ಪ್ರೆಸ್ ರೈಲುಗಳು ವೇಗ ಕಡಿಮೆ ಮಾಡದೆಯೇ ನಿಲ್ದಾಣವನ್ನು ದಾಟುತ್ತವೆ. ಆನಂತರ ಲೂಪ್ ಲೇನ್‌ನಲ್ಲಿರುವ ರೈಲುಗಳು ಮುಖ್ಯ ಲೇನ್‌ಗೆ ಮರಳುತ್ತವೆ.



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವ್ಯಕ್ತಿಯೊಬ್ಬರು ಮಹಿಳೆಯೊಬ್ಬರನ್ನು ಕಟ್ಟಿಹಾಕಿಕೊಂಡು ಬೈಕ್ ಸವಾರಿ ಮಾಡುತ್ತಿರುವ ದೃಶ್ಯವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಅರ್ಪಿತಾ ಶೈವ್ಯಾ (@arpispeaks) ಎಂಬುವವರು 'ಅವಳ ಅಬ್ದುಲ್ಲಾ ಎಲ್ಲರಿಗಿಂತ ಭಿನ್ನ' ಎನ್ನುವ ಶೀರ್ಷಿಕೆ ಅಡಿ ಜೂನ್ 1ರಂದು ಈ ಚಿತ್ರವನ್ನು ಹಂಚಿಕೊಂಡಿದ್ದರು. ಆನಂತರ ನೂರಾರು ಮಂದಿ ಈ ಚಿತ್ರವನ್ನು ಹಂಚಿಕೊಂಡಿದ್ದರು. ಆದರೆ, ಇದು ಸುಳ್ಳು ಸುದ್ದಿ.

ಇದು ಈಜಿಪ್ಟ್‌ನ ಕೈರೊ ನಗರದಲ್ಲಿ ನಡೆದ ಘಟನೆ. ಸಿದ್ಧ ಉಡುಪು ವ್ಯಾಪಾರಿಯೊಬ್ಬರು ಗೊಂಬೆಯೊಂದನ್ನು ಒಂದು ಅಂಗಡಿಯಿಂದ ಇನ್ನೊಂದು ಅಂಗಡಿಗೆ ಸಾಗಿಸುತ್ತಿರುವ ದೃಶ್ಯ ಇದಾಗಿದೆ. ಇದನ್ನು ಅಲ್ಲಿನ ಕೈರೊ24 ಎನ್ನುವ ಸುದ್ದಿ ಸಂಸ್ಥೆ ವರದಿ ಮಾಡಿದೆ. ಇದು ಬಿಜಿ ಕಲೆಕ್ಷನ್ ಎನ್ನುವ ಕಂಪನಿಗೆ ಸೇರಿದ ಗೊಂಬೆಯಾಗಿದೆ. ಇದರ ಬಗ್ಗೆ ಆಲ್ಟ್ ನ್ಯೂಸ್ ವರದಿ ಮಾಡಿದೆ. ಬಿಜಿ ಕಲೆಕ್ಷನ್ ಕಂಪನಿಯನ್ನು ಆಲ್ಟ್ ನ್ಯೂಸ್ ಸಂಪರ್ಕ ಮಾಡಿ, ಇದನ್ನು ಖಚಿತಪಡಿಸಿಕೊಂಡಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜೂನ್ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ತೃತೀಯಾ ಗಂ. 24-51, ನಕ್ಷತ್ರ: ಪೂರ್ವಾಷಾಢ ಗಂ. 23-13 ಯೋಗ: ಶುಭ ಗಂ. 05-25 ನಂತರ ಶುಕ್ಲ (ಶುಕ್ರ) ಗಂ. 25-54, ಕರಣ: ವಣಿಜ ಗಂ. 14-21, ವೃಷಭ ಮಾಸದ 22 ನೇ ದಿನ, ಮಳೆನಕ್ಷತ್ರ: ರೋಹಿಣಿ 4. ರಾಹುಕಾಲ : ಮಧ್ಯಾಹ್ನ 03-00 – 04-30, **ಸೂರ್ಯೋದಯ :** 06-06 ಸೂರ್ಯಾಸ್ತ : 06-52, ಮುಸ್ಲಿಂ ದಿನಾಂಕ : 17 ಜುಲ್ಹಾಯದ್, ಅದೃಷ್ಟ ಸಂಖ್ಯೆ : 6, 7

ಮೇಷ: ಬಹಳ ದಿನಗಳಿಂದ ನಿಮ್ಮ ಮೇಲಧಿಕಾರಿಗಳು ಬಯಸಿದ ಜವಾಬ್ದಾರಿ ಉತ್ತಮವಾಗಿ ನಿಭಾಯಿಸಿದ ಕಾರಣ ಮೆಚ್ಚುವರು. ಮಹತ್ವಾಕಾಂಕ್ಷೆ ಈಡೇರಿಸಿಕೊಳ್ಳುವ ಪ್ರಯತ್ನದಲ್ಲಿ ಸಕಾರಾತ್ಮಕ ದೃಷ್ಟಿಕೋನವಿರಲಿ.

ವೃಷಭ: ಎಲ್ಲಾ ನಿಸ್ವಾರ್ಥ ಪ್ರಯತ್ನಗಳು ಯಶಸ್ಸು ಕಾಣುವ ಹಾದಿಯಲ್ಲಿರುವುದು. ಇಂದು ಕೆಲಸಗಳು ನಿಧಾನ ಗತಿಯಲ್ಲಿ ಸಾಗುವುದಕ್ಕೆ ಬೇಸರ ಉಂಟಾಗುವುದು. ಚಿನ್ನಾಭರಣ ಮಾರಾಟಗಾರರಿಗೆ ಆದಾಯ ಹೆಚ್ಚುವುದು.

ಮಿಥುನ: ಹಣಕಾಸಿನ ವ್ಯವಹಾರ ನಡೆಸುವವರು ನೂತನ ಯೋಜನೆ ಕೆಲವು ಕಡೆಯಲ್ಲಿ ವಿಸ್ತರಿಸಬಹುದು. ನಿಮ್ಮಲ್ಲಿ ಇದ್ದ ಪ್ರತಿಭೆಯನ್ನು ಇತರರು ಗಮನಿಸುವರು. ಆಸ್ತಿ ಕೊಳ್ಳುವ ನಿರ್ಧಾರವನ್ನು ಮಾಡುವಿರಿ.

ಕರ್ಕಾಟಕ: ಕೋರ್ಟಿನ ವ್ಯವಹಾರಗಳನ್ನು ಬಹಳಷ್ಟು ಲಾಭದಾಯಕವಾಗಿ ಮುಗಿಸಿಕೊಳ್ಳುವಿರಿ. ಸಹೋದರನಲ್ಲಿ ಮತ್ತು ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ವರ್ತಿಸುವುದರಿಂದ ಸಂಬಂಧಗಳು ಉತ್ತಮಗೊಳ್ಳುವುದು.

ಸಿಂಹ: ಅಧಿಕಾರಿಗಳ ಧಿಡೀರ್ ಭೇಟಿಯಿಂದ ಕೆಲಸ ಕಾರ್ಯಗಳು ಏರು-ಪೇರಾಗುವುದು. ರಾಜಕೀಯ ವಿದ್ಯಮಾನ ಗಳಿಂದಾಗಿ ಓಡಾಟ ಅಧಿಕಗೊಳ್ಳುವುದು. ಚಿಲ್ಲರೆ ವ್ಯಾಪಾರಿಗಳಿಗೆ ಹಾಗೂ ಪಾನೀಯ ಮಾರಾಟಗಾರರಿಗೆ ಲಾಭ.

ಕನ್ಯಾ: ವಿದ್ಯಾರ್ಥಿಗಳಿಗೆ ಓದು ಅಥವಾ ಉದ್ಯೋಗದ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ. ಅವಿವಾಹಿತ ಹೆಣ್ಣುಮಕ್ಕಳಿಗೆ ಅನಿರೀಕ್ಷಿತವಾಗಿ ಕಂಕಣಬಲ ಕೂಡಿಬರುವುದು. ವಾಹನ ಖರೀದಿಸಬಹುದು.

ತುಲಾ: ವಿಮಾ ಕ್ಷೇತ್ರದಿಂದ ನಿಮಗೆ ಆಗಬೇಕಾದ ಸಹಕಾರದಲ್ಲಿ ಗೊಂದಲಗಳು ಉದ್ಭವಿಸಬಹುದು. ವೃತ್ತಿ ಮಾಡುವ ಸ್ಥಳದಲ್ಲಿ ಯಾವುದೇ ವಾದ ವಿವಾದಗಳು ನಡೆಸಬೇಡಿ, ಕಾರ್ಯ ಸಾಧನೆಗೆ ಅಡ್ಡಿಯಾಗುವುದು.

ವೃಶ್ಚಿಕ: ಆಸ್ತಿಯ ವಿಷಯದಲ್ಲಿ ಅನುಭವಸ್ಥ ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ. ವಿದೇಶಿ ವಸ್ತು ಖರೀದಿ ಅಧಿಕ ಮಟ್ಟದಲ್ಲಿ ಧನ ವ್ಯಯ ಮಾಡುವಿರಿ. ಗೆಳೆಯರೊಂದಿಗೆ ಪ್ರವಾಸ ಹೋಗಲು ದಿನ ನಿಶ್ಚಿತ.

ಧನು: ಕೀಳರಿಮೆ, ಹಿಂಜರಿಕೆಯ ಸ್ವಭಾವ ಅಥವಾ ಅಹಂಕಾರದ ನಡವಳಿಕೆಯನ್ನು ಬಿಟ್ಟು ಕಾರ್ಯ ಕೈಗೊಳ್ಳಲು ಮುಂದಾಗಿ, ಗೆಲುವು ನಿಮ್ಮದಾಗುತ್ತದೆ. ಮನೆಯಲ್ಲಿ ದುರ್ಗಾ ಸ್ತೋತ್ರ ಪಠಿಸಿದರೆ ಯಶಸ್ಸು ನಿಶ್ಚಿತ ದೊರೆಯುವುದು.

ಮಕರ: ವಾಹನದ ವಹಿವಾಟು ಮಾಡುವವರು ಲಾಭ ಪಡೆಯಬಹುದು. ವ್ಯಾಪಾರ-ವ್ಯವಹಾರದಲ್ಲಿ ಲಾಭ ಕಡಿಮೆಯಾದರೂ ಮೂಲಧನಕ್ಕೆ ಮೋಸವಾಗುವುದಿಲ್ಲ. ಆಶೀರ್ವಾದದಿಂದ ಕಾರ್ಯಗಳಲ್ಲಿ ಜಯ ಹೊಂದುವಿರಿ.

ಕುಂಭ: ಅವಶ್ಯಕತೆ ಇರುವ ಜಾಗದಲ್ಲಿ ಅತ್ಯಂತ ಜಿಪುಣತನವನ್ನು ತೋರಿಸಿ ಸಮಾಜದಲ್ಲಿ ಗೌರವ ಕಳೆದುಕೊಳ್ಳುವಂತಾಗಬಹುದು ಎಚ್ಚರಿಕೆ. ವೈಯಕ್ತಿಕ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವತ್ತ ಸಾಗುವುದು.

ಮೀನ: ವಿದ್ಯಾರ್ಥಿಗಳಿಗೆ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಹೊಂದಲು ಅವಕಾಶಗಳು ಸಿಗಲಿದೆ. ನಿಮ್ಮ ಹಾಸ್ಯ ಪ್ರಜ್ಞೆ ಹೆಚ್ಚಾಗುವುದು ಆದರೆ ಹಾಸ್ಯದಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ನಾಮರೂಪರಹಿತ ವಸ್ತು

ಜಗದೀ ಜಗತ್ವವನು, ಮಾಯಾವಿಚಿತ್ರವನು |
ಜಗೆದಾಚೆ ಬಿಸುಡೆಲ್ಲ ಕರಣವೇದ್ಯವನು ||
ಮಿಗುವುದೇಂ ? ರೂಪಾಖ್ಯೆಯೊಂದುಮಿಲ್ಲದ ವಸ್ತು |
ಹೊಗಿಸಾ ಕಡೆಗೆ ಮತಿಯ – ಮಂಕುತಿಮ್ಮ || 899

ಪದ-ಅರ್ಥ: ಜಗದೀ = ಜಗದ + ಈ, ಜಗತ್ವವನು = ಜಗತ್ತಿನ ಸ್ವಭಾವವನ್ನು, ಜಗೆದಾಚೆ = ಒಗೆದು + ಆಚೆ, ಬಿಸುಡೆಲ್ಲ = ಬಿಸುಡು + ಎಲ್ಲ, ಕರಣವೇದ್ಯ = ಇಂದ್ರಿಯಗಳಿಗೆ ಗೋಚರವಾದ, ಮಿಗುವುದೇಂ = ಉಳಿಯುವುದೇನು? ರೂಪಾಖ್ಯೆಯೊಂದುಮಿಲ್ಲದ = ರೂಪ + ಆಖ್ಯೆ(ನಾಮ) + ಒಂದು + ಇಲ್ಲ, ಹೊಗಿಸಾ = ಹೊಗಿಸು + ಆ, ಮತಿಯ = ಬುದ್ಧಿಯನ್ನು

ವಾಚ್ಯಾರ್ಥ: ಜಗತ್ತಿನ ಸ್ವಭಾವವಾದ ವಿಚಿತ್ರ ಮಾಯೆನ್ನು ಆಚೆ ಕಡೆಗೆ ಒಗೆದು ಬಿಡು, ಇಂದ್ರಿಯಗಳಿಗೆ ಗೋಚರವಾಗುವ ಎಲ್ಲವನ್ನು ಬಿಸಾಡಿ ಬಿಡು. ಉಳಿದದ್ದು ಏನು? ಅದು ರೂಪ, ನಾಮಗಳಿಲ್ಲದ ಬ್ರಹ್ಮವಸ್ತು. ನಿನ್ನ ಬುದ್ಧಿಯನ್ನು ಆ ಕಡೆಗೆ ತಿರುಗಿಸು.

ವಿವರಣೆ: ಪ್ರತಿಯೊಬ್ಬ ವ್ಯಕ್ತಿಗೆ ಒಂದು ವ್ಯಕ್ತಿತ್ವವಿದೆ. ಯಾವ ವಿಶೇಷಗುಣದಿಂದ ಆ ವ್ಯಕ್ತಿಯನ್ನು ಗುರುತಿಸಬಹುದೋ, ಅದು ಅವನ ವ್ಯಕ್ತಿತ್ವ. ಹರಿಶ್ಚಂದ್ರ ಎಂದೊಡನೆ ಸತ್ಯ ಎಂಬ ಗುಣ ಹೊಳೆಯುತ್ತದೆ. ಹಿಟ್ಲರ್ ಎಂದಾಗ ಕ್ರೌರ್ಯ, ಬುದ್ಧ ಎಂದಾಗ ಶಾಂತಿ, ಅಹಿಂಸೆ, ಮಹಾವೀರ ಎಂದಾಗ ಅಪರಿಗ್ರಹ, ಹೀಗೆ ಒಂದು ವಿಶೇಷಗುಣದಿಂದ ವ್ಯಕ್ತಿಯನ್ನು ಗುರುತಿಸಲಾಗುತ್ತದೆ. ಅದರಂತೆಯೇ, ಈ ಜಗತ್ತಿಗೂ ಅದರದೇ ಆದ ಒಂದು ವ್ಯಕ್ತಿತ್ವವಿದೆ. ಯಾವ ಗುಣ ಜಗತ್ತನ್ನು ಜಗತ್ತಾಗಿಸಿದೆಯೋ ಅದೇ ಅದರ ಸ್ವಭಾವ. ಅದು ಅದರ ಮೆರಗು, ವೈಭವ. ಅದು ಯಾರನ್ನಾದರೂ ಮರುಳುಮಾಡುವಂಥದ್ದು. ಆದರೆ ಅದು ಒಂದು ಮಾಯೆ. ಇದ್ದಂತೆ ತೋರಿದರೂ ಶಾಶ್ವತವಾದದ್ದಲ್ಲ. ಅದೇ ಅದರ ವಿಚಿತ್ರ. ಕಗ್ಗ ಹೇಳುತ್ತದೆ, ಜಗತ್ತಿನ ವಿಶೇಷವಾದ ಮೆರುಗನ್ನು, ವೈಭವವನ್ನು ಮತ್ತು ಅದರ ಮಾಯೆಯೆಂಬ ವಿಚಿತ್ರವನ್ನು ತೆಗೆದು ಹಾಕು. ನಮಗೆ ಪ್ರಪಂಚದ ಚಮತ್ಕಾರ ತಿಳಿಯುವುದೇ ನಮ್ಮ ಇಂದ್ರಿಯಗಳಿಂದ. ಈ ಇಂದ್ರಿಯಗಳಿಂದ ದೊರಕುವ ಎಲ್ಲ ವಿಷಯಗಳನ್ನು ತೆಗೆದು ಹಾಕಿದರೆ ಏನು ಉಳಿಯುತ್ತದೆ? ಕಗ್ಗ ತಿಳಿಸುತ್ತದೆ, ಇಂದ್ರಿಯಾನುಭವಗಳಿಂದ ಹೊರಗಾದಾಗ ಉಳಿಯುವುದು ಒಂದೇ ವಸ್ತು. ಅದಕ್ಕೆ ಆಕಾರವಿಲ್ಲ, ಹೆಸರಿಲ್ಲ. ಅದು ಎಲ್ಲ ಅನುಭವಗಳಿಗೆ ಅತೀತವಾದದ್ದು. ಅದು ಬ್ರಹ್ಮವಸ್ತು, ಪರತತ್ವ. ಆ ಪರಸತ್ವದ ಕಡೆಗೆ ನಮ್ಮ ಬುದ್ಧಿ ಹೋಗಬೇಕು. ಪಾತ್ರೆಯಲ್ಲಿಯ ಹಾಲು ಬ್ರಹ್ಮವಸ್ತು, ಮೇಲಿನ ನೊರೆ ಪ್ರಪಂಚವಿದ್ದಂತೆ. ನೊರೆಗೆ ಕಾರಣ ಹಾಲು. ಅಂತೆಯೇ ಮೆರುಗಿನ ಪ್ರಪಂಚಕ್ಕೆ ಮೂಲ ನೆಲೆ ಪರಸತ್ವ. ನಮ್ಮ ಗುರಿ ಮೂಲವನ್ನು ತಲುಪುವುದಾಗಬೇಕು.

ಪದಬಂಧ 5341

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಸ ಒಸರುವ ಜಿಹ್ವೆ (3)
3.ಪ್ರಶ್ನೆಗೆ ತತ್ತರಿಸುತ್ತಾ ನೀಡಿದ ಜವಾಬು! (3)
5.ಅಭಾವದಲ್ಲಿ ಅಕ್ಕನ ಗಂಡ ಬಂದಿಹನಲ್ಲಾ? (2)
6.ಸರಾಸರಿಯಾಗಿ ಹೇಳಿರುವುದು ತಪ್ಪಲ್ಲ! (2)
8.ಕೂಸು ಎದ್ದಿದ್ದುಬೆಳಗಿನ ಜಾವ! (3)
9.ತಕ ತಕ ಕುಣಿಯಲು ಈ ಅತೀ ಆತುರ (3)
11.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
12. ವಿಧಿ ನಿರ್ಣಯಿಸುವಾತ (3)
13.ಮಲಗುವಾಗ ಬಂದಿರುವ ಅಡಿಯಾಳು (3)
15.ಪಾದದ ಬಳಿಯಿರುವ ಮರದ ಮೆಟ್ಟು (3)
17.ನಿಯಮ ಹೇಳಿರುವ ನರಕಾಧಿಪತಿ (2)
19.ನಿಹಾರಿಕೆ ನೋಡಿದ್ದಕ್ಕೇ ಈ ಕೇಡು! (2)
20.ತಿಕ್ಕಲನಿರಿಕೊಂಡಿರುವ ಹಣೆ ಬೊಟ್ಟು (3)
21.ಮಾಲು ತರುವಾಗ ತಲೆಗೆ ಸುತ್ತಿಕೊಂಡ ಬಟ್ಟೆ (3)

ಮೇಲಿಂದ ಕೆಳಕ್ಕೆ

1.ವರನಿಗೆ ಕೇಳಿಸಿದ ಧ್ವನಿ (2)
2.ನಯವಾಗಿ ಹೊಳೆಯುವ ಅಕ್ಷಿ (3)
3.ಕುಸುಕ್ಕನೆ ಜಾರಿದ ಜಾಗದಲ್ಲಿರುವ ಮರಳು (3)
4.ಅವಸರದಲ್ಲಿ ಚಲ್ಲಿದ ದ್ರವ (2)
5.ಭಾರ ಹೊತ್ತಿರುವ ನಮ್ಮ ದೇಶ (3)
7.ಪೇರಿ ಕೀಳುವ ಮೊದಲು ಮಾಡಿದ ದುರಸ್ತಿ (3)
10.ತಕ್ಕಡಿ ಹಿಡಿದಿದ್ದಕ್ಕೇ ಈ ತುರಿಕೆ! (3)
11.ಕಸದಿಂದಲೇ ಕುಕ್ಕು! (3)
12.ವಿಷದಿಂದ ಕೂಡಿರುವ ಸಂಗತಿ (3)
14.ಯಮನ ಸೂತ್ರವೇ ಉಲ್ಟಾ ಆಗಿದೆಯಲ್ಲಾ? (3)
15.ಪಾಕದಲ್ಲಿರುವ ದೋಷ (3)
16.ಮೊಸರು ಮಾರುವಾಗ ಸಿಡಿದ ರಾಡಿ (3)
18.ಮಧುಮತಿಯ ಬುದ್ಧಿ (2)
19.ಹಾಲಾಹಲದಲ್ಲಿ ಬೆರೆತಿರುವ ಕ್ಷೀರ (2)



5340ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಅರಸ 5.ನಗ್ನ 6.ರತ್ನಾಕರ 7.ಯುವಕ 9.ಭವಿ 10.ಸುಸಂಧಿ 11.ರೂಪ 12.ಕಕವ 14.ಚಾಡಿಕೋರ 15.ಮರ 16.ಸುದಿನ

ಮೇಲಿಂದ ಕೆಳಕ್ಕೆ:
1.ಬರ 2.ಮಗ್ನ 3.ಅಲ್ವಾಯು 4.ಸರೀಕ 5.ನರಭಕ್ಷಕ 6.ರಕ್ತಸಂಚಾರ 8.ವರೋಪಚಾರ 12.ಕಡಸು 13.ವದನ 15.ಮಣ್ಣು 17.ದಿಟ

ಸುಡೊಕು 5727

	6			2		5		
5		4			7		2	3
	2		5			6		7
8		1		3		7		9
			9	7	8		1	
9		2		5		3		6
7		3		9				
	8		7		5	9	3	
		9		8				5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5726 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಮುಂದಿನ ವರ್ಷ 'ಆಕಾಶ್' ಐಪಿಒ

ನವದೆಹಲಿ (ಪಿಟಿಐ): ಬೈಜೂಸ್ ಕಂಪನಿಯು ತನ್ನ ಅಂಗಸಂಸ್ಥೆ ಆಕಾಶ್ ಎಜುಕೇಶನ್ ಸರ್ವಿಸಸ್ ಲಿಮಿಟೆಡ್‌ನ ಷೇರುಗಳನ್ನು ಸಾರ್ವಜನಿಕ ಖರೀದಿಗೆ ಐಪಿಒ ಮೂಲಕ ಮುಂದಿನ ವರ್ಷ ಮುಕ್ತವಾಗಿಸಲಿದೆ.

ಐಪಿಒಗೆ ಆಡಳಿತ ಮಂಡಳಿಯು ಒಪ್ಪಿಗೆ ನೀಡಿದೆ. ಐಪಿಒ ನಿರ್ವಹಣೆಗಾಗಿ ಮರ್ಚೆಂಟ್ ಬ್ಯಾಂಕರ್‌ಗಳ ನೇಮಕವನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದು ಬೈಜೂಸ್ ಕಂಪನಿಯು ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ.

ಮುಂಬೈ ಧಾರಣೆ

ಶೇಂಗಾ

5-6-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	855 (850)
ಪಾಮ್ ವಾರದ ಡೆಲಿವರಿ	840 (838)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,500 (59,450)
ಬೆಳ್ಳಿ ಕೆ.ಜಿ 71,500 (71,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,534
ಇಂದಿನ ಅಂತ್ಯ	18,593
▲	59
ದಿನದ ಗರಿಷ್ಠ	18,640

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹572

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹900 (895)
ಸೂರ್ಯಕಾಂತಿ (ರಿಫೈನ್ಡ್)	₹895 (890)
ಪಾಮೋಲಿನ್	₹842 (840)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹276-451
ದ್ವಿತಳಿ (ಬಿ.ವಿ)	₹305-690

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹153
ಆರ್‌ಎಸ್‌ಎಸ್-5	₹148
ಗುಡ್ ಲಾಟ್	₹129

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15200
ಎಸಿ	₹7980
ಆರ್‌ಪಿ	₹10500
ಆರ್‌ಸಿ	₹5960

ಬ್ಯಾಂಕ್ ಗ್ರಾಹಕರಿಗೆ ಅನುಕೂಲ ಆರ್‌ಬಿಐಗೆ ಸಮಿತಿ ಶಿಫಾರಸು

ಮುಂಬೈ (ಪಿಟಿಐ): ಆರ್‌ಬಿಐ ನೇಮಕ ಮಾಡಿದ್ದ ತಜ್ಞರ ಸಮಿತಿಯೊಂದು ಗ್ರಾಹಕರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಜಾರಿಗೆ ತರಬೇಕಿರುವ ಶಿಫಾರಸುಗಳನ್ನು ಆರ್‌ಬಿಐಗೆ ಸಲ್ಲಿಸಿದೆ.

ಆರ್‌ಬಿಐ ನಿಯಂತ್ರಣಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಗ್ರಾಹಕ ಸೇವೆಗಳ ಬಗ್ಗೆ ಪರಿಶೀಲನೆಗೆ ಸಮಿತಿಯನ್ನು ಹಿಂದಿನ ವರ್ಷದ ಮೇ ತಿಂಗಳಲ್ಲಿ ರಚಿಸಲಾಗಿತ್ತು.

ಸಮಿತಿಯ ಕೆಲವು ಪ್ರಮುಖ ಶಿಫಾರಸುಗಳು ಇಲ್ಲಿವೆ:

- ಕಾಲಕಾಲಕ್ಕೆ ನಡೆಸುವ ಕೆವೈಸಿ ಅಪ್ಡೇಟ್ ಪ್ರಕ್ರಿಯೆ ಪೂರ್ಣಗೊಳ್ಳದಿದ್ದಾಗ ಗ್ರಾಹಕರಿಗೆ ಒದಗಿಸಬೇಕಿರುವ ಸೇವೆಗಳನ್ನು ಸ್ಥಗಿತಗೊಳಿಸುವಂತಿಲ್ಲ.
- ಸಾಲ ಮರುಪಾವತಿ ಪೂರ್ಣಗೊಂಡ ನಂತರದಲ್ಲಿ ಗ್ರಾಹಕರಿಗೆ ಅವರ ಆಸ್ತಿಯ ದಾಖಲೆಗಳನ್ನು ಕಾಲಮಿತಿಯಲ್ಲಿ ಮರಳಿಸಬೇಕು. ಇಲ್ಲದಿದ್ದರೆ ಹಣಕಾಸು ಸಂಸ್ಥೆಗೆ ದಂಡ ವಿಧಿಸಬೇಕು.
- ಆಸ್ತಿ ದಾಖಲೆಗಳನ್ನು ಹಣಕಾಸು ಸಂಸ್ಥೆ ಕಳೆದುಹಾಕಿದರೆ, ಅದರ ಪ್ರಮಾಣೀಕೃತ ಹೊಸ ಪ್ರತಿಗಳನ್ನು ಪಡೆದುಕೊಳ್ಳಲು ಗ್ರಾಹಕರಿಗೆ ತನ್ನ ಖರ್ಚಿನಲ್ಲಿ ನೆರವಾಗಬೇಕು. ಗ್ರಾಹಕರಿಗೆ ಪರಿಹಾರ ಕೊಡಬೇಕು.
- ದೂರುಗಳನ್ನು ದಾಖಲಿಸಲು ಸಮಗ್ರವಾದ ಪೋರ್ಟಲ್ ಅಸ್ತಿತ್ವಕ್ಕೆ ಬರುವತನಕ, ಹಣಕಾಸು ಸಂಸ್ಥೆಗಳು ಗ್ರಾಹಕರಿಗೆ ತಮ್ಮ ದೂರಿನ ಸ್ಥಿತಿಯನ್ನು ತಿಳಿದುಕೊಳ್ಳುವ ವ್ಯವಸ್ಥೆಯನ್ನು ರೂಪಿಸಬೇಕು.
- ಪಿಂಚಣಿ ಪಡೆಯುವವರು ತಮ್ಮ ಜೀವಿತ ಪ್ರಮಾಣಪತ್ರವನ್ನು ಪಿಂಚಣಿ ಖಾತೆ ಇರುವ ಬ್ಯಾಂಕ್‌ನ ಯಾವುದೇ ಶಾಖೆಯಲ್ಲಿ ಸಲ್ಲಿಸುವ ಅವಕಾಶ ಇರಬೇಕು.

13 ವರ್ಷದಲ್ಲಿ ಎರಡನೇ ಅತ್ಯಂತ ವೇಗದ ಬೆಳವಣಿಗೆ: ಎಸ್ ಆ್ಯಂಡ್ ಪಿ

ಸೇವಾ ವಲಯ: ಉತ್ತಮ ಪ್ರಗತಿ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಮೇ ತಿಂಗಳಿನಲ್ಲಿ 13 ವರ್ಷಗಳ ಎರಡನೆಯ ಅತ್ಯಂತ ವೇಗದ ಬೆಳವಣಿಗೆ ಕಂಡಿವೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯು ಸೋಮವಾರ ಹೇಳಿದೆ.

ಬೇಡಿಕೆಯು ಹೆಚ್ಚಾಗಿರುವುದು ಹಾಗೂ ಕಂಪನಿಗಳಿಗೆ ಹೊಸ ವಹಿವಾಟುಗಳು ಸಿಕ್ಕಿರುವುದರಿಂದ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ಅದು ತಿಳಿಸಿದೆ.

ಏಪ್ರಿಲ್‌ಗೆ ಹೋಲಿಸಿದರೆ ಮೇ ತಿಂಗಳಿನಲ್ಲಿ ವಲಯದ ಚಟುವಟಿಕೆಯು ಅಲ್ಪ ಇಳಿಕೆ ಕಂಡಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಇಂಡಿಯಾ ಸರ್ವಿಸಸ್ ಪಿಎಂಐ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಏಪ್ರಿಲ್‌ನಲ್ಲಿ 62 ಇದ್ದಿದ್ದು ಮೇ ನಲ್ಲಿ 61.2ಕ್ಕೆ ಇಳಿಕೆ ಆಗಿದೆ. ಹೀಗಿದ್ದರೂ ಇದು 13 ವರ್ಷಗಳ ಎರಡನೆಯ ಅತ್ಯಂತ ವೇಗದ ಬೆಳವಣಿಗೆ.

ಮುಖ್ಯಾಂಶಗಳು

- ಸತತ 22ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ
- 12 ತಿಂಗಳಲ್ಲಿ ವಹಿವಾಟು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆಯಲ್ಲಿ ಕಂಪನಿಗಳು

ಜಾಹೀರಾತು, ಬೇಡಿಕೆ ಮತ್ತು ಮಾರುಕಟ್ಟೆಯು ಅನುಕೂಲಕರವಾಗಿ ಇರುವ ಕಾರಣಗಳಿಂದಾಗಿ ಮುಂದಿನ 12 ತಿಂಗಳಲ್ಲಿ ಚಟುವಟಿಕೆಯು ಇನ್ನಷ್ಟು ಏರಿಕೆ ಕಾಣುವ ವಿಶ್ವಾಸವನ್ನು ಕಂಪನಿಗಳು ಹೊಂದಿವೆ ಎಂದು ಸಂಸ್ಥೆಯು ಹೇಳಿದೆ.

ಆಹಾರ, ಸಾರಿಗೆ ಮತ್ತು ವೇತನಕ್ಕೆ ಸಂಬಂಧಿಸಿದಂತೆ ಮೇ ತಿಂಗಳಿನಲ್ಲಿ ಹೆಚ್ಚು ವೆಚ್ಚ ಮಾಡಬೇಕಾಗಿದೆ. ವೆಚ್ಚ ಹೆಚ್ಚಾಗುತ್ತಿರುವುದರಿಂದ ಖರೀದಿ ಸಾಮರ್ಥ್ಯ ತಗ್ಗುವ ಸಾಧ್ಯತೆ ಇದ್ದು, ಕೈಗೆಟಕುವ ಬೆಲೆಗೆ ಸೇವೆಗಳು ಲಭ್ಯವಾಗದೇ ಆರ್ಥಿಕತೆಯ ಮೇಲೆ ಪ್ರತಿಕೂಲ ಪರಿಣಾಮ ಆಗಬಹುದು. ಕಂಪನಿಗಳು ತಮ್ಮ ಕಾರ್ಯಾಚರಣಾ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಮತ್ತು ಸವಾಲುಗಳನ್ನು ಎದುರಿಸಲು ಪರ್ಯಾಯ ಮೂಲಗಳ ಹುಡುಕಾಟ ನಡೆಸುತ್ತಿವೆ ಎಂದು ಎಸ್ ಆ್ಯಂಡ್ ಪಿಐ ಗ್ಲೋಬಲ್ ಮಾರ್ಕೆಟ್ ಇಂಟಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಅವರು ಹೇಳಿದ್ದಾರೆ.

ಬದಲಿಲ್ಲ: ತಯಾರಿಕಾ ವಲಯ ಮತ್ತು ಸೇವಾ ವಲಯದ ಒಟ್ಟು ಬೆಳವಣಿಗೆಯನ್ನು ತಿಳಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್‌ನಲ್ಲಿ ಏಪ್ರಿಲ್‌ಗೆ ಹೋಲಿಸಿದರೆ ಮೇನಲ್ಲಿ ಯಾವುದೇ ಬದಲಾವಣೆ ಆಗಿಲ್ಲ; 61.6ರಷ್ಟೇ ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29999-33099
ಕೋಕ	20569-32899
ಫ್ಯಾಕ್ಟರಿ	14019-22699
ಹಳೆಚಾಲಿ	36699-39299
ಹೊಸಚಾಲಿ	36000-39000
ಸಾಗರ	
ಬಿಳಿಗೋಟು	26199-33099
ಚಾಲಿ	34299-37699
ಕೋಕ	23989-34499
ಕೆಂಪುಗೋಟು	28111-36379
ರಾಶಿ	37866-49909
ಸಿಪ್ಪೆಗೋಟು	5786-21599
ಶಿವಮೊಗ್ಗ	
ಬೆಟ್ಟೆ	48099-53560
ಗೊರಬಲು	18000-37009
ರಾಶಿ	37500-50369
ಸರಕು	56100-83296
ಸಿದ್ದಾಪುರ	
ಬಿಳಿಗೋಟು	30500-32899
ಚಾಲಿ	36399-37709
ಕೋಕ	28199-32899
ಹಳೆಚಾಲಿ	36909-37199
ಕೆಂಪುಗೋಟು	29899-32689
ರಾಶಿ	43259-48489
ತಟ್ಟಿಬೆಟ್ಟೆ	38099-42099
ಶಿರಸಿ	
ಬೆಟ್ಟೆ	38689-45899
ಬಿಳಿಗೋಟು	25099-32992
ಚಾಲಿ	35109-38139
ಕೆಂಪುಗೋಟು	22199-35799
ರಾಶಿ	41699-47608
ಯಲ್ಲಾಪುರ	
ಬಿಳಿಗೋಟು	28899-34726
ಚಾಲಿ	34292-37799
ಕೋಕ	18612-31500
ಕೆಂಪುಗೋಟು	30009-35210
ರಾಶಿ	42269-52229
ತಟ್ಟಿಬೆಟ್ಟೆ	39000-46679

ರೆಪೊ ದರ ಯಥಾಸ್ಥಿತಿ: ಎಸ್‌ಬಿಐ ನಿರೀಕ್ಷೆ

ಬೆಂಗಳೂರು: ಭಾರತೀಯ ರಿಸರ್ವ್ ಬ್ಯಾಂಕ್ ಜೂನ್ 8ರಂದು ರೆಪೊ ದರ ಬದಲಾವಣೆ ಕುರಿತು ತೀರ್ಮಾನ ಪ್ರಕಟಿಸಲಿದ್ದು, ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರುವ ಸಾಧ್ಯತೆ ಇದೆ ಎಂದು ಎಸ್‌ಬಿಐ ಅಂದಾಜು ಮಾಡಿದೆ.

ಈಗ ರೆಪೊ ದರವು ಶೇಕಡ 6.50ರಷ್ಟು ಇದೆ. ರೆಪೊ ದೀರ್ಘಾವಧಿಗೆ ಈ ಹಂತದಲ್ಲಿಯೇ ಮುಂದುವರಿಯಬಹುದು ಎಂದು ಎಸ್‌ಬಿಐ ನಿರೀಕ್ಷಿಸಿದೆ.ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು ಮಂಗಳವಾರದಿಂದ ಆರಂಭವಾಗಲಿದೆ. ರೆಪೊ ದರದ ಬಗ್ಗೆ ಸಮಿತಿಯು ಗುರುವಾರ ತೀರ್ಮಾನ ಪ್ರಕಟಿಸಲಿದೆ.

ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ರೆಪೊ ದರದಲ್ಲಿ ಮಾಡಿರುವ ಬದಲಾವಣೆ ಬಗ್ಗೆ ಉಲ್ಲೇಖಿಸಿರುವ ಎಸ್‌ಬಿಐ, 147 ದೇಶಗಳ ಪೈಕಿ ಒಟ್ಟು 95 ದೇಶಗಳು ಈಚೆಗೆ ತಮ್ಮಲ್ಲಿ ರೆಪೊ ದರ ಹೆಚ್ಚಳಕ್ಕೆ ವಿರಾಮ ನೀಡಿವೆ ಎಂದು ಹೇಳಿದೆ. 43 ದೇಶಗಳಲ್ಲಿ ಮಾತ್ರ ರೆಪೊ ದರವು ಏರಿಕೆ ಆಗಿದೆ, ಒಂಬತ್ತು ದೇಶಗಳು ದರವನ್ನು ತಗ್ಗಿಸಿವೆ.

ಅಮೆರಿಕಕ್ಕೆ ಮೋದಿ: ಭಾರಿ ನಿರೀಕ್ಷೆ

ಹ್ಯೂಸ್ಟನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಇದೇ 21ರಿಂದ 24ರವರೆಗೆ ನೀಡಲಿರುವ ಭೇಟಿಯು ಇಲ್ಲಿನ ಭಾರತೀಯ ಸಮುದಾಯದ ಜನರಲ್ಲಿ ಭಾರಿ ನಿರೀಕ್ಷೆ ಮೂಡಿಸಿದೆ. ತಮ್ಮ ಮೊದಲ ಅಧಿಕೃತ ಭೇಟಿ ಸಂದರ್ಭದಲ್ಲಿ ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಮೋದಿ ಭಾಷಣ ಮಾಡಲಿದ್ದಾರೆ.

ಅಧ್ಯಕ್ಷ ಜೋ ಬೈಡನ್ ಅವರ ಆಹ್ವಾನದ ಮೇರೆಗೆ ಮೋದಿ ಅಮೆರಿಕಕ್ಕೆ ಭೇಟಿ ನೀಡುತ್ತಿದ್ದಾರೆ. ಭದ್ರತಾ ಸಹಕಾರ, ರಕ್ಷಣೆ, ವ್ಯಾಪಾರ, ತಂತ್ರಜ್ಞಾನ ಮತ್ತು ಬಾಹ್ಯಾಕಾಶ ಕ್ಷೇತ್ರಗಳು ಸೇರಿದಂತೆ ವಿವಿಧ ವಲಯಗಳಲ್ಲಿ ದ್ವಿಪಕ್ಷೀಯ ಸಂಬಂಧ ಬಲಪಡಿಸುವ ದಿಸೆಯಲ್ಲಿ ಈ ಭೇಟಿ ಮಹತ್ವ ಪಡೆದುಕೊಂಡಿದೆ ಎಂದು ವಿಶ್ಲೇಷಿಸಲಾಗಿದೆ.

ಮೋದಿ ಅವರು ತಮ್ಮ ಭೇಟಿ ವೇಳೆ, ಉದ್ಯಮ ಕ್ಷೇತ್ರದ ನಾಯಕರೊಂದಿಗೆ ಸಭೆ ನಡೆಸಲಿದ್ದಾರೆ.

ಮೋದಿ ಅವರ ಸ್ವಾಗತಕ್ಕೆ ಶ್ವೇತಭವನದ ಸೌತ್ ಲಾನ್‌ನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಅಮೆರಿಕದಾದ್ಯಂತ ಇರುವ ಪ್ರಮುಖ ಸಮುದಾಯಗಳ 5,000ಕ್ಕೂ ಹೆಚ್ಚು ಜನರನ್ನು ಆಹ್ವಾನಿಸಲಾಗಿದೆ

ಅಭಿಷೇಕ್ ಬ್ಯಾನರ್ಜಿ ಪತ್ನಿ ರುಜಿರಾ ವಿದೇಶ ಪ್ರಯಾಣಕ್ಕೆ ತಡೆ

ಕೋಲ್ಕತ್ತ (ಪಿಟಿಐ): 'ಯುಎಇಗೆ ತೆರಳುತ್ತಿದ್ದ ತೃಣಮೂಲ ಕಾಂಗ್ರೆಸ್‌ನ ಹಿರಿಯ ನಾಯಕ ಅಭಿಷೇಕ್ ಬ್ಯಾನರ್ಜಿ ಅವರ ಪತ್ನಿ ರುಜಿರಾ ಬ್ಯಾನರ್ಜಿ ಅವರ ವಿಮಾನ ಪ್ರಯಾಣಕ್ಕೆ ಜಾರಿ ನಿರ್ದೇಶನಾಲಯವು (ಇ.ಡಿ) ಸೋಮವಾರ ತಡೆಯೊಡ್ಡಿದೆ' ಎಂದು ರುಜಿರಾ ಪರ ವಕೀಲರು ತಿಳಿಸಿದ್ದಾರೆ.

'ರುಜಿರಾ ವಿರುದ್ಧ ಇ.ಡಿಯು ಲುಕ್‌ಔಟ್ ನೋಟಿಸ್ ಹೊರಡಿಸಿದ್ದು, ಜೂನ್ 8ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ಮೂಲಗಳ ಪ್ರಕಾರ, ಯುಇಎಗೆ ವಿಮಾನದ ಮೂಲಕ ತೆರಳಲು ರುಜಿರಾ ಅವರು ತಮ್ಮ ಇಬ್ಬರು ಮಕ್ಕಳೊಂದಿಗೆ ಇಲ್ಲಿನ ನೇತಾಜಿ ಸುಭಾಷ್ ಚಂದ್ರ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೋಮವಾರ ಬೆಳಿಗ್ಗೆ 7 ಗಂಟೆಗೆ ತಲುಪಿದ್ದರು ಎನ್ನಲಾಗಿದೆ.

'ಪ್ರಕರಣವೊಂದರಲ್ಲಿ ಇ.ಡಿ ಹೊರಡಿಸಿದ್ದ ಲುಕ್‌ಔಟ್ ನೋಟಿಸ್ ಅನ್ನು ಉಲ್ಲೇಖಿಸಿ ರುಜಿರಾ ಅವರಿಗೆ ವಿಮಾನ ನಿಲ್ದಾಣದ ವಲಸೆ ವಿಭಾಗದಲ್ಲಿ (ಇಮಿಗ್ರೇಷನ್) ತಡೆಯೊಡ್ಡಲಾಯಿತು. ಅವರ ವಿದೇಶ ಭೇಟಿಗೆ ಯಾವುದೇ ನಿರ್ಬಂಧವಿಲ್ಲ ಎಂದು ಸುಪ್ರೀಂ ಕೋರ್ಟ್ ಆದೇಶದಲ್ಲಿ ತಿಳಿಸಲಾಗಿದೆ' ಎಂದು ರುಜಿರಾ ಪರ ವಕೀಲರು 'ಪಿಟಿಐ' ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಅಭಿಷೇಕ್ ಬ್ಯಾನರ್ಜಿ

'ತಮ್ಮ ಯುಎಇ ಪ್ರವಾಸದ ವಿವರ ಕುರಿತು ರುಜಿರಾ ಅವರು ಶನಿವಾರವೇ ಇ.ಡಿಗೆ ಮಾಹಿತಿ ನೀಡಿದ್ದರು. ಅಲ್ಲದೇ, ವಿಮಾನ ಟಿಕೆಟ್‌ಗಳ ಪ್ರತಿಯನ್ನೂ ಒದಗಿಸಿದ್ದರು. ಆದರೆ, ಸೋಮವಾರ ಅವರ ಪ್ರಯಾಣಕ್ಕೆ ತಡೆಯೊಡ್ಡಲಾಗಿದೆ. ಜೂನ್ 8ರಂದು ಕೋಲ್ಕತ್ತದ ಇ.ಡಿ ಕಚೇರಿಗೆ ಹಾಜರಾಗುವಂತೆ ಸೂಚಿಸಿ, ಜೂನ್ 5ನೇ ತಾರೀಖಿನ ಸಮನ್ಸ್ ಪ್ರತಿಯನ್ನು ಅವರಿಗೆ ಹಸ್ತಾಂತರಿಸಲಾಗಿದೆ. ಅವರೀಗ ಮನೆಗೆ ಮರಳಿದ್ದಾರೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

ವಿಮಾನ ನಿಲ್ದಾಣದಲ್ಲಿ ರುಜಿರಾ ಅವರ ಪ್ರಯಾಣಕ್ಕೆ ತಡೆಯೊಡ್ಡಿದ್ದರ ಕುರಿತು ಇ.ಡಿ ಅಧಿಕಾರಿಗಳು ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ನಮೀಬಿಯಾಕ್ಕೆ ಜೈಶಂಕರ್ ಭೇಟಿ

ವಿಂಡ್‌ಹಾಕ್, ನಮೀಬಿಯಾ (ಪಿಟಿಐ): ಆಫ್ರಿಕಾ ಪ್ರವಾಸದಲ್ಲಿರುವ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಅವರು ಭಾನುವಾರ ನಮೀಬಿಯಾಕ್ಕೆ ತೆರಳಿದರು. ಈ ದೇಶಕ್ಕೆ ಭೇಟಿ ನೀಡಿದ ಭಾರತದ ಮೊದಲ ವಿದೇಶಾಂಗ ವ್ಯವಹಾರಗಳ ಸಚಿವ ಎಂಬ ಹೆಗ್ಗಳಿಕೆಗೆ ಪಾತ್ರವಾದರು.

ನಮೀಬಿಯಾದಲ್ಲಿಯ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಭಾರತದ ಬೆಳವಣಿಗೆಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ದೇಶವು ಜಾಗತಿಕ ಮಟ್ಟದಲ್ಲಿ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಭಾರತ ಈಗ ಜಗತ್ತಿನ ಐದನೇ ಅತಿ ದೊಡ್ಡ ಆರ್ಥಿಕತೆ. ಸದ್ಯದಲ್ಲೇ ನಾವು ಮೂರನೇ ಸ್ಥಾನಕ್ಕೇರುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಭಾರತ– ಆಫ್ರಿಕಾದ ದ್ವಿಪಕ್ಷೀಯ ಸಂಬಂಧವನ್ನು ಈಗ ಅವಲೋಕಿಸಿದರೆ ನನಗೆ ಕಾಣುವ ದೊಡ್ಡ ವ್ಯತ್ಯಾಸವೆಂದರೆ, ಭಾರತವನ್ನು ಆಫ್ರಿಕಾ ತನ್ನ ಜವಾಬ್ದಾರಿಯುತ ಪಾಲುದಾರ ರಾಷ್ಟ್ರವನ್ನಾಗಿ ನೋಡುತ್ತಿದೆ. ನಾವು ಈಗ ಆಫ್ರಿಕಾಕ್ಕೆ ಬಂದಿದ್ದೇವೆ. ಬೇರೆಯವರಿಗೂ ನಮಗೂ ಇರುವ ವ್ಯತ್ಯಾಸವೇನೆಂದರೆ, ನಾವು ನಿಮ್ಮ ಅಗತ್ಯಗಳಿಗೆ ಕಿವಿಗೊಡಲು ಬಂದಿದ್ದೇವೆ' ಎಂದರು.

ನಮೀಬಿಯಾದಲ್ಲಿ ಸೋಮವಾರ ನಡೆದ ಸಹಕಾರ ಜಂಟಿ ಆಯೋಗದ ಸಭೆಯ ಸಂದರ್ಭದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ನಮೀಬಿಯಾ ವಿದೇಶಾಂಗ ವ್ಯವಹಾರಗಳ ಸಚಿವೆ ನೆಟುಂಬೊ ನ್ಯಾಂಡಿ ಎನ್‌ದೈತ್ವಾ ಅವರಿಗೆ ಹಸ್ತಾಲಾಘವ ನೀಡಿದರು –ಪಿಟಿಐ ಚಿತ್ರ

ಬಾಲಸೋರ್ ರೈಲು ದುರಂತಕ್ಕೆ ಈ ವೇಳೆ ಸಂತಾಪ ಸೂಚಿಸಿದ ಅವರು, ನಮೀಬಿಯಾ ವಿದೇಶಾಂಗ ವ್ಯವಹಾರಗಳ ಸಚಿವರೂ ದುರಂತಕ್ಕೆ ವಿಷಾದ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಪಾತಕಿ ಮುಖ್ತಾರ್ ಅನ್ಸಾರಿಗೆ ಜೀವಾವಧಿ

ಲಖನೌ (ಪಿಟಿಐ): ಕಾಂಗ್ರೆಸ್ ಮುಖಂಡ ಅಜಯ್ ರಾಯ್ ಅವರ ಸಹೋದರ ಅವಧೇಶ್ ರಾಯ್ ಅವರನ್ನು ಮೂರು ದಶಕಗಳ ಹಿಂದೆ ಹತ್ಯೆಗೈದ ಪ್ರಕರಣದಲ್ಲಿ ಪಾತಕಿ ಮುಖ್ತಾರ್ ಅನ್ಸಾರಿಗೆ ವಾರಾಣಸಿ ನ್ಯಾಯಾಲಯ ಸೋಮವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ಅವಧೇಶ್ ರಾಯ್ ಅವರನ್ನು 1991ರ ಆಗಸ್ಟ್ 3ರಂದು ವಾರಾಣಸಿಯ ಲಾಹುರಾಬೀರ್ ನಿವಾಸದ ಬಳಿ ಗುಂಡಿಕ್ಕಿ ಕೊಲ್ಲಲಾಗಿತ್ತು. ಮುಖ್ತಾರ್ ಅನ್ಸಾರಿ ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಈ ಪೈಕಿ ಕಮಲೇಶ್ ಸಿಂಗ್ ಮತ್ತು ಅಬ್ದುಲ್ ಕಲಾಂ ವಿಚಾರಣೆ ಬಾಕಿ ಇರುವಾಗಲೇ ಮೃತಪಟ್ಟರು. ಮತ್ತೊಬ್ಬ ಆರೋಪಿ ರಾಕೇಶ್ ಅವರ ವಿಚಾರಣೆ ಪ್ರಯಾಗ್‌ರಾಜ್ ಜಿಲ್ಲಾ ನ್ಯಾಯಾಲಯದಲ್ಲಿ ಬಾಕಿ ಇದೆ.

ಸಂಸದರ/ಶಾಸಕರ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಅವನೀಶ್ ಗೌತಮ್ ಅವರು ಈ ಪ್ರಕರಣದಲ್ಲಿ ಅನ್ಸಾರಿಗೆ ಜೀವಾವಧಿ ಶಿಕ್ಷೆ ಹಾಗೂ ₹1.20 ಲಕ್ಷ ದಂಡ ವಿಧಿಸಿದ್ದಾರೆ ಎಂದು ವಕೀಲರು ಸುದ್ದಿಗಾರರಿಗೆ ತಿಳಿಸಿದರು.

ಅನ್ಸಾರಿ ಶಿಕ್ಷೆಗೆ ಗುರಿಯಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಅಜಯ್ ರಾಯ್, 'ಹಲವು ವರ್ಷಗಳ ಕಾಯುವಿಕೆ ಅಂತ್ಯವಾಗಿದೆ. ನಾನು, ನನ್ನ ಪೋಷಕರು, ಅವಧೇಶ್ ಅವರ ಮಗಳು ಮತ್ತು ಇಡೀ ಕುಟುಂಬ ತಾಳ್ಮೆ ಕಾಯ್ದುಕೊಂಡಿದ್ದೇವೆ. ನಮ್ಮ ವಕೀಲರ ಪ್ರಯತ್ನದಿಂದಾಗಿ ನ್ಯಾಯಾಲಯವು ಮುಖ್ತಾರ್‌ನನ್ನು ತಪ್ಪಿತಸ್ಥನೆಂದು ಘೋಷಿಸಿದೆ' ಎಂದು ಹೇಳಿದರು.

ಮೌ ಸಾದರ್ ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿದ್ದ ಅನ್ಸಾರಿ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ 2022ರಲ್ಲಿ ಸ್ಪರ್ಧಿಸಿರಲಿಲ್ಲ. ಈ ಕ್ಷೇತ್ರದಿಂದ ಅನ್ಸಾರಿ ಮಗ ಅಬ್ಬಾಸ್ ಅನ್ಸಾರಿ ಆಯ್ಕೆಯಾಗಿದ್ದಾರೆ.

ದಾಳಿಗೆ ಸಿದ್ಧತೆ: ರಷ್ಯಾ ಆರೋಪ ತಳ್ಳಿ ಹಾಕಿದ ಉಕ್ರೇನ್ ಸೇನೆ

ಕೀವ್ (ಎ.ಪಿ): ಉಕ್ರೇನ್ ದೊಡ್ಡ ಪ್ರಮಾಣದಲ್ಲಿ ದಾಳಿ ನಡೆಸಲು ಸಿದ್ಧತೆ ನಡೆಸಿದೆ ಎಂದು ರಷ್ಯಾ ಸೋಮವಾರ ಆರೋಪಿಸಿದೆ. ಆದರೆ, ಉಕ್ರೇನ್ ಸೇನೆ ಇದನ್ನು 'ತಪ್ಪುಮಾಹಿತಿ' ಎಂದು ತಳ್ಳಿಹಾಕಿದ್ದು, ರಕ್ಷಣೆಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಹೇಳಿದೆ.

'ದಾಳಿಗೆ ಸಿದ್ಧತೆ ನಡೆದಿದೆ ಎಂಬ ವರದಿಗಳು ರಷ್ಯಾದ ತಪ್ಪು ಮಾಹಿತಿ. ಉಕ್ರೇನ್‌ನ ಸೇನೆಯು ಯುದ್ಧ ಆರಂಭವಾದ 15 ತಿಂಗಳ ತರುವಾಯ ರಕ್ಷಣಾತ್ಮಕವಾದ ದಾಳಿಗೆ ಸಿದ್ಧತೆ ನಡೆಸುತ್ತಿದೆ' ಎಂದು ಹೇಳಿದೆ.

ಉಕ್ರೇನ್‌ನಲ್ಲಿ ಅತಿಕ್ರಮಿಸಿರುವ ಝಪೊರಿಝಿಯಾ ಪ್ರಾಂತ್ಯದಲ್ಲಿನ ರಷ್ಯಾದ ಅಧಿಕಾರಿಯು, ಗಡಿ ಭಾಗದಲ್ಲಿ ಉಕ್ರೇನ್‌ನಿಂದ ದಾಳಿ ನಡೆಸಿದ್ದು, ರಷ್ಯಾ ಸೇನೆಯು ಪ್ರತಿರೋಧ ತೋರಿದೆ ಎಂದು ತಿಳಿಸಿದೆ. ಉಕ್ರೇನ್‌ನ ದಾಳಿಯು ನಿನ್ನೆಗಿಂತಲೂ ದೊಡ್ಡ ಪ್ರಮಾಣದಲ್ಲಿತ್ತು. ದೊಡ್ಡ ಪ್ರಮಾಣದಲ್ಲಿ ನೆಲೆಯೂರಿರುವ ಮುಂಚೂಣಿ ಪಡೆಯನ್ನು ಕೇಂದ್ರವಾಗಿಸಿ ದಾಳಿ ನಡೆದಿದೆ ಎಂದು ತಿಳಿಸಿದ್ದಾರೆ.

ಉಕ್ರೇನ್‌ನ ಝಪೊರಿಝಿಯಾ ಮತ್ತು ಡೊನೆಟ್ಸ್ಕ ಸೇರಿದಂತೆ ನಾಲ್ಕು ಪ್ರಾಂತ್ಯಗಳನ್ನು ಮಾಸ್ಕೋ ತನ್ನ ಸ್ವಾಧೀನಕ್ಕೆ ಪಡೆದಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಹೇಳಿದ್ದಾರೆ.

ವಿಕ್ರಂ ಪಟೇಲ್ ಗ್ಲೋಬಲ್ ಹೆಲ್ತ್ ಆ್ಯಂಡ್ ಸೋಷಿಯಲ್ ಮೆಡಿಸಿನ್ ವಿಭಾಗದ ಮುಖ್ಯಸ್ಥ

ನ್ಯೂಯಾರ್ಕ್ (ಪಿಟಿಐ): ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನ ಗ್ಲೋಬಲ್ ಹೆಲ್ತ್ ಆ್ಯಂಡ್ ಸೋಷಿಯಲ್ ಮೆಡಿಸಿನ್ ವಿಭಾಗದ ಮುಖ್ಯಸ್ಥರಾಗಿ ಭಾರತೀಯ ಸಂಜಾತ ಖ್ಯಾತ ಸಂಶೋಧಕ ಹಾಗೂ ಮಾನಸಿಕ ಆರೋಗ್ಯ ತಜ್ಞ ವಿಕ್ರಂ ಪಟೇಲ್ ಅವರು ನೇಮಕವಾಗಿದ್ದಾರೆ ಎಂದು ಅಧಿಕೃತ ಪ್ರಕಟಣೆಯೊಂದು ತಿಳಿಸಿದೆ.

ಮುಂಬೈನಲ್ಲಿ ಜನಿಸಿದ ಪಟೇಲ್ ಅವರು ಪ್ರಸ್ತುತ ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನ ಬ್ಲಾವಾಟ್ನಿಕ್ ಇನ್‌ಸ್ಟಿಟ್ಯೂಟ್‌ನ ಗ್ಲೋಬಲ್ ಹೆಲ್ತ್ ವಿಭಾಗದ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸೆಪ್ಟೆಂಬರ್ 1ರಂದು ಪಟೇಲ್ ಅವರು ತಮ್ಮ ಅಧಿಕಾರ ವಹಿಸಿಕೊಳ್ಳುವ ಸಾಧ್ಯತೆ ಇದೆ ಎಂದೂ ಪ್ರಕಟಣೆ ತಿಳಿಸಿದೆ.



ವಿಕ್ರಂ ಪಟೇಲ್ (ಚಿತ್ರ ಕೃಪೆ: ಹಾರ್ವರ್ಡ್ ಮೆಡಿಕಲ್ ಸ್ಕೂಲ್)

'ಜೀವನದುದ್ದಕ್ಕೂ ಇರುವಂಥ ಮಾನಸಿಕ ಸಮಸ್ಯೆಗಳ ಹೊರೆ, ಸಾಮಾಜಿಕ ಅನನುಕೂಲಗಳೊಂದಿಗೆ ಇರುವ ಸಮಸ್ಯೆಗಳ ನಂಟು ಹಾಗೂ ಈ ಸಮಸ್ಯೆಗಳನ್ನು ತಡೆಗಟ್ಟುವಿಕೆಗೆ ಸಮುದಾಯದ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದರ ಕುರಿತು ಪಟೇಲ್ ಅವರ ಸಂಶೋಧನೆಗಳು ಬೆಳಕು ಚೆಲ್ಲಿವೆ. 2022ರವರೆಗೆ ವಿಭಾಗದ ಮುಖ್ಯಸ್ಥರಾಗಿದ್ದ ಪಾಲ್ ಅವರ ಉತ್ತರಾಧಿಕಾರಿಯಾಗಲಿದ್ದಾರೆ, ಪಟೇಲ್ ಈ ಸ್ಥಾನಕ್ಕೆ ಅರ್ಹರು' ಎಂದು ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನ ಮುಖ್ಯಸ್ಥ (ಎಚ್‌ಎಂಎಸ್) ಜಾರ್ಜ್ ಕ್ಯೂ. ದಾಲೇ ಅವರು ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಪಟೇಲ್ ಅವರು, 'ಗ್ಲೋಬಲ್ ಹೆಲ್ತ್ ಅಂಡ್ ಸೋಷಿಯಲ್ ಮೆಡಿಸಿನ್ ವಿಭಾಗದ ಮುಖ್ಯಸ್ಥನಾಗಿ ಗೌರವಯುತವಾಗಿ ಕಾರ್ಯನಿರ್ವಹಿಸುತ್ತೇನೆ' ಎಂದಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್ ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Hospital & Medical Jobs

ಅಡ್ರೆಸ್ ಹೆಲ್ತ್ ಶಾಲೆಗಳಲ್ಲಿ ತಕ್ಷಣವೇ ಬೇಕಾಗಿದ್ದಾರೆ. ಅನುಭವಿ ಜಿಎನ್‌ಎಂ/ಬಿ.ಎಸ್ಸಿ ನರ್ಸ್‌ಗಳು ಬೇಕಾಗಿದ್ದಾರೆ. ಗ್ರೀನ್ ಲೈನ್ ಮೆಟ್ರೋ/ಕನಕಪುರ ರಸ್ತೆಯಲ್ಲಿ ವಾಸಿಸುವ ಅಭ್ಯರ್ಥಿಗಳಿಗೆ ಆದ್ಯತೆ. hr@addresshealth.comಗೆ ಬಯೋಡೇಟಾವನ್ನು ಕಳುಹಿಸಿ/9591990945 ವಾಟ್ಸ್ ಆಪ್ ಮಾಡಿ.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ:- 8884777502, 8884777503.

Wanted

ಉಚಿತ ಮತ್ತು ಗ್ಯಾರಂಟಿ ಉದ್ಯೋಗ. ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಲು 115 ಜನ, SSLC, PUC ಪಾಸಾದ ಫೇಲಾದ ಕೆಲಸಗಾರರು ಬೇಕಾಗಿದ್ದಾರೆ. ವೇತನ 14000 to 20000 ಊಟ ವಸತಿ ಸೌಲಭ್ಯವಿದೆ ಸಂಪರ್ಕಿಸಿ 9632660308, 9141632106

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ಶ್ರೀ ವಿಜಯಚಂದ್ರ, ನಂ. 80, ಹರಳೆಪೇಟೆ ಮುಖ್ಯ ರಸ್ತೆ, ಬೆಂಗಳೂರು–53, ದಿ: 15.2.2023 ರಂದು ಪೊಲೀಸ್ ಕಮೀಷನರ್, ಹೋಮ್ ಮಿನಿಸ್ಟರ್, ಸಿಎಂ ಅವರಿಗೆ ದೂರು ನೀಡಿದ್ದರ ವಿಷಯ. ಸ್ವತ್ತಿನ ಸಂಖ್ಯೆ: 77, 79 & 82ರ ಆಸ್ತಿಗಳಿಗೆ ಸಂಬಂಧಿಸಿದ್ದು, 82ರ ಆಸ್ತಿಯಿಂದ ಪ್ಲಾಸ್ಟಿಂಗ್ ಬಿದ್ದಿದ್ದು, ದೂರು ನೀಡಿದ ಸರಿಪಡಿಸಿರುತ್ತಾರೆ. ಮುಂದೆ ಏನಾದರೂ, ಈ ರೀತಿಯ ಅಪಘಾತಗಳು ನಡೆದರೆ ಅದಕ್ಕೆ ಬಿ.ಇ ರವಿಶಂಕರ್, ಕುಟುಂಬದವರು ಜವಾಬ್ದಾರರಾಗಿರುತ್ತಾರೆ. ಇವರು 82ರ ಖಾತೆಯ ಪೊಸೆಷನ್ ಇರುತ್ತವೆ. ಅವರು ಬೀಗ ಹಾಕಿಕೊಂಡು ಬೇರೆ ಕಡೆ ವಾಸ ಮಾಡುತ್ತಿದ್ದಾರೆ. ಮತ್ತು 2011-12-13ರ ಕೋರ್ಟ್ ಆರ್ಡರ್ ಇದ್ದರೂ ಕೂಡ, ಸದರಿ ಆರ್ಡರನ್ನು ಉಲ್ಲಂಘಿಸಿ ಅತಿಕ್ರಮಣ ಪ್ರವೇಶ ಮಾಡಿರುತ್ತಾರೆ.

ಎಸ್. ಬಾಲು, ವಕೀಲರು,
ನಂ. 100, 1ನೇ ಕ್ರಾಸ್, 2ನೇ ಮುಖ್ಯರಸ್ತೆ,
ಹೆಚ್‌ಎಎಲ್ 3ನೇ ಹಂತ, ಬೆಂಗಳೂರು–75
ಮೊ: 9341948513, 7975996075

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/6 ದಿನಗಳು. 14.06.2023 AC ಬಸ್ಸಿನಲ್ಲಿ ದಾಂಡೇಲಿ,ಯಾಣ ಬನವಾಸಿ,ಸಿರ್ಸಿ ಮಾರಿಕಾಂಬ ಉಳವಿ ಚೆನ್ನಬಸವೇಶ್ವರ ಸಿಂತೆರಿ ಫಾಲ್ಸ್ ಸಿಗಂದೂರು ಚೌಡೇಶ್ವರಿ, ಜೋಗ ಫಾಲ್ಸ್ 7500 28.06.2023 ರೈಲು ಬಸ್ಸಿನಲ್ಲಿ ರಾಮೇಶ್ವರ ಧನುಷ್ಕೋಟಿ ಕನ್ಯಾಕುಮಾರಿ,ಮಧುರೈ,ಶ್ರೀರಂಗಂ, ಸುಚೇಂದ್ರಂ ಇತ್ಯಾದಿ 7800 9448390735 9449721678

07.07.2023 11.09.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 15.06.2023 19.07.2023 ಭೂತಾನ್ 8 ದಿನಗಳು. 18.07.2023 20.08.2023 ನೇಪಾಳ,ಮುಕ್ತಿನಾಥ್ 9 ದಿನಗಳು. 22.06.2023 27.07.2023 ರಾಮೇಶ್ವರ,ಮದುರೈ, ಕುಂಭಕೋಣಮ್ 6 ದಿನಗಳು. 25.06.2023 27.07.2023 ಗ್ಯಾಂಗ್‌ಟಾಕ್,ಡಾರ್ಜಲಿಂಗ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03 9448402248 7022547922

ಶ್ರೀರಾಜರಾಜೇಶ್ವರಿ ಟೂರ್ಸ್ 19.6.2023 8ದಿನ ಮಹಾರಾಷ್ಟ್ರದ 5ಜ್ಯೋತಿರ್ಲಿಂಗ ಶಿರಡಿ,ಪಂಡರಾಪುರ ಕೊಲ್ಲಾಪುರ. 20.7.2023 8ದಿನ ಕಾಶಿ,ಗಯ ಅಯೋಧ್ಯ ನೈಮಿಷರಣ್ಯ 9739618243, 9743895346.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/06 ಕಾಶಿ, ಅಯೋಧ್ಯ. 29/06 ರಾಮೇಶ್ವರಂ, ಕನ್ಯಾಕುಮಾರಿ. 11/07 ಗುಜರಾತ್ ಪ್ರವಾಸ. 01/09 ಕೇದಾರನಾಥ, ಬದ್ರಿನಾಥ್ 9964527782

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಂಕ್ಷಿಪ್ತ ಸುದ್ದಿ

ಬಾಂಗ್ಲಾ ಸೇನಾಧಿಕಾರಿ ಭೇಟಿಯಾದ ಜನರಲ್ ಮನೋಜ್ ಪಾಂಡೆ

ಢಾಕಾ (ಪಿಟಿಐ): ಎರಡು ದಿನಗಳ ಬಾಂಗ್ಲಾದೇಶ ಪ್ರವಾಸ ಕೈಗೊಂಡಿರುವ ಭಾರತೀಯ ಸೇನೆ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಬಾಂಗ್ಲಾದೇಶದ ಸೇನ ಮುಖ್ಯಸ್ಥ ಎಸ್.ಎಂ. ಶೈಫಿಯುದ್ದೀನ್ ಅಹಮದ್ ಮತ್ತು ಸಶಸ್ತ್ರ ಪಡೆಗಳ ಮುಖ್ಯ ಸೇನಾ ಅಧಿಕಾರಿ ವಾಕರ್– ಉಜ್–ಜಮನ್ ಅವರನ್ನು ಸೋಮವಾರ ಭೇಟಿಯಾಗಿ ಮಾತುಕತೆ ನಡೆಸಿದರು.

ಈ ವೇಳೆ ದ್ವಿಪಕ್ಷೀಯ ಹಿತಾಸಕ್ತಿ, ರಕ್ಷಣೆ ಮತ್ತು ಭದ್ರತಾ ವಲಯದಲ್ಲಿಯ ಸಹಕಾರವನ್ನು ಮತ್ತಷ್ಟು ವಿಸ್ತರಿಸುವುದು ಸೇರಿ ಹಲವಾರು ವಿಷಯಗಳ ಕುರಿತು ಉಭಯ ದೇಶಗಳ ಅಧಿಕಾರಿಗಳು ಮಾತುಕತೆ ನಡೆಸಿದರು ಎನ್ನಲಾಗಿದೆ. ಢಾಕಾದಲ್ಲಿಯ ಸ್ನೇಹಕುಂಜ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪಾಂಡೆ ಅವರಿಗೆ 'ಗಾರ್ಡ್ ಆಫ್ ಆನರ್' ನೀಡಿ ಗೌರವಿಸಲಾಯಿತು.

ಅಧ್ಯಕ್ಷ ಸ್ಥಾನ: ಮೈಕ್ ಪೆನ್ಸ್ ಸಿದ್ಧತೆ

ನ್ಯೂಯಾರ್ಕ್ (ಎ.ಪಿ): ಅಮೆರಿಕದ ಮಾಜಿ ಉಪಾಧ್ಯಕ್ಷ ಮೈಕ್ ಪೆನ್ಸ್ 2024ರ ಅಧ್ಯಕ್ಷೀಯ ಚುನಾವಣೆಯ ಪ್ರಚಾರ ಕಾರ್ಯಕ್ಕೆ ಸೋಮವಾರ ಚಾಲನೆ ನೀಡಿದ್ದು, ತನ್ನ ಮಾಜಿ ನಾಯಕ ಡೊನಾಲ್ಡ್ ಟ್ರಂಪ್ ಅವರಿಗೆ ಮುಖಾಮುಖಿ ಆಗಲಿದ್ದಾರೆ.

2 ವರ್ಷಗಳ ಆಡಳಿತದ ತರುವಾಯ ಅಮೆರಿಕದ ರಾಜಧಾನಿಯಲ್ಲಿ ಎದುರಾದ ತೀವ್ರ ಪ್ರತಿಭಟನೆಯ ಬಳಿಕ, ಜೀವ ರಕ್ಷಣೆಗಾಗಿ ಪೆನ್ಸ್ ಪಲಾಯನ ಮಾಡಿದ್ದರು.

ತ್ರಿವಳಿ ರೈಲು ದುರಂತ: ಮರುಸ್ಥಾಪಿಸಿದ ಹಳಿಗಳ ಮೇಲೆ ಹಾದು ಹೋದ ಹೈಸ್ಪೀಡ್ ರೈಲು

ಅಪಘಾತ: ಸುರಕ್ಷಾ ಆಯುಕ್ತರ ತನಿಖೆ ಶುರು

ಬಾಲೇಶ್ವರ (ಪಿಟಿಐ): ಬಹನಾಗಾ ರೈಲು ನಿಲ್ದಾಣದ ಸಮೀಪ ನಡೆದ ತ್ರಿವಳಿ ರೈಲು ಅಪಘಾತದ ಕುರಿತು ರೈಲ್ವೆ ಸುರಕ್ಷಾ ಆಯುಕ್ತ (ಎಸ್‌ಇ ವೃತ್ತ) ಶೈಲೇಶ್ ಕುಮಾರ್ ಪಾಠಕ್ ಅವರು ಸೋಮವಾರ ತನಿಖೆ ಆರಂಭಿಸಿದ್ದಾರೆ. ಬಹನಾಗಾ ಸ್ಟೇಷನ್ ಬಜಾರ್ ನಿಲ್ದಾಣದಲ್ಲಿ ಅಪಘಾತದ ಸ್ಥಳಕ್ಕೆ ಭೇಟಿ ನೀಡಿದರು. ನಿಯಂತ್ರಣ ಕೊಠಡಿ ಪರಿಶೀಲಿಸಿದರು, ಸಿಗ್ನಲ್ ರೂಮ್ ನಿಲ್ದಾಣದ ವ್ಯವಸ್ಥಾಪಕರೊಂದಿಗೂ ಮಾತನಾಡಿದರು. ಕೋರೊಮಂಡಲ್ ಎಕ್ಸ್‌ಪ್ರೆಸ್ ಲೂಪ್ ಲೈನ್ ಪ್ರವೇಶಿಸಲು ಕಾರಣವಾದ ಇಂಟರ್‌ಲಿಂಕಿಂಗ್ ವ್ಯವಸ್ಥೆಯನ್ನು ಸಹ ವೀಕ್ಷಿಸಿದರು.

'ಈಗಷ್ಟೇ ತನಿಖೆ ಪ್ರಾರಂಭಿಸಿದ್ದೇವೆ. ಸಮಯ ತೆಗೆದುಕೊಳ್ಳುತ್ತದೆ. ತನಿಖೆ ಮುಗಿದ ನಂತರ ಅಪಘಾತದ ನಿಖರ ಕಾರಣ ಗೊತ್ತಾಗಲಿದೆ' ಎಂದು ಪಾಠಕ್ ಅವರು ಸುದ್ದಿಗಾರರಿಗೆ ತಿಳಿಸಿದರು.

ರೈಲು ಸಂಚಾರ ಪುನರಾರಂಭ: ಅಪಘಾತದ ಬಳಿಕ ಮರುಸ್ಥಾಪಿಸಲಾದ ಹಳಿಗಳ ಮೂಲಕ ಹೈಸ್ಪೀಡ್ ಪ್ರಯಾಣಿಕ ರೈಲು ಹೌರಾ-ಪುರಿ ವಂದೇ ಭಾರತ್ ಎಕ್ಸ್‌ಪ್ರೆಸ್ ಸೋಮವಾರ ಬೆಳಿಗ್ಗೆ ಹಾದು ಹೋಯಿತು. ಈ ಮಧ್ಯೆ ದುರಂತದ ಬಗ್ಗೆ ರೈಲ್ವೆ ಸುರಕ್ಷತಾ ಆಯುಕ್ತರು ತನಿಖೆ ಪ್ರಾರಂಭಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಂದೇ ಭಾರತ್ ಎಕ್ಸ್‌ಪ್ರೆಸ್ ಸೋಮವಾರ ಬೆಳಿಗ್ಗೆ 9.30ರ ಸುಮಾರಿಗೆ ಬಹನಾಗಾ ಬಜಾರ್ ನಿಲ್ದಾಣ ದಾಟಿತು. ರೈಲುಗಳನ್ನು ಓಡಿಸಲು ಹಳಿಗಳು ಯೋಗ್ಯವಾಗಿವೆ ಎಂದು ಅವರು ಹೇಳಿದರು.

ಸೆಮಿ ಹೈಸ್ಪೀಡ್ ರೈಲು ಹಾದು ಹೋಗುವ ವೇಳೆ ಹಾಜರಿದ್ದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಚಾಲಕರಿಗೆ ಕೈ ಬೀಸಿದರು.

ಇತರೆ ಎರಡು ಪ್ರಯಾಣಿಕ ರೈಲುಗಳಾದ ಹೌರಾ-ಪುರಿ ಎಕ್ಸ್‌ಪ್ರೆಸ್ ಮತ್ತು ಭುವನೇಶ್ವರ-ನವ ದೆಹಲಿ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ಸಹ ಸೋಮವಾರ ಮುಂಜಾನೆ ಕ್ರಮವಾಗಿ ಎರಡು ಹಳಿಗಳ ಮೂಲಕ ಹಾದು ಹೋದವು.

ಮೂರು ರೈಲುಗಳನ್ನೊಳಗೊಂಡ ಅಪಘಾತ ಸಂಭವಿಸಿದ ಸ್ಥಳದಲ್ಲಿ ರೈಲು ಸಂಚಾರ ಪುನರಾರಂಭ ಆದ ಬಳಿಕ ಕಂಡು ಬಂದ ದೃಶ್ಯ –ಪಿಟಿಐ ಚಿತ್ರ

ರೈಲ್ವೆ ವಲಯಗಳಲ್ಲಿ ಸುರಕ್ಷತಾ ವ್ಯವಸ್ಥೆ ಪರಿಶೀಲನೆಗೆ ಸೂಚನೆ

ಸಿಗ್ನಲಿಂಗ್ ಕಾರ್ಯವಿಧಾನಗಳಲ್ಲಿ ಅಳವಡಿಸಿರುವ ಸುರಕ್ಷತಾ ವ್ಯವಸ್ಥೆಯನ್ನು ತಕ್ಷಣ ಪರಿಶೀಲಿಸುವಂತೆ ಭಾರತೀಯ ರೈಲ್ವೆಯು ತನ್ನ 19 ವಲಯ ಕಚೇರಿಗಳಿಗೆ ಸೂಚಿಸಿದೆ.

ಬಾಲೇಶ್ವರ ರೈಲು ದುರಂತದ ಕುರಿತು ನಡೆದ ಪ್ರಾಥಮಿಕ ಹಂತದ ತನಿಖೆಯಲ್ಲಿ ಮೂರು ರೈಲುಗಳ ಅಪಘಾತಕ್ಕೆ ಸಿಗ್ನಲಿಂಗ್ ವ್ಯವಸ್ಥೆಯಲ್ಲಿ ದೋಷ ಇದ್ದದ್ದು ಕಂಡು ಬಂದಿತ್ತು. ಈ ಹಿನ್ನೆಲೆಯಲ್ಲಿ ರೈಲು ಚಾಲನೆಯ ಸಮಯದಲ್ಲಿನ ಎಲ್ಲಾ ನ್ಯೂನತೆಗಳನ್ನು ಕಂಡುಹಿಡಿದು ಜೂನ್ 14ರ ಒಳಗೆ ವರದಿಗಳನ್ನು ಸಲ್ಲಿಸುವಂತೆ ರೈಲ್ವೆ ಮಂಡಳಿಯು ತನ್ನ ವಲಯ ಕಚೇರಿಗಳಿಗೆ ಸೂಚನೆ ನೀಡಿದೆ.

ಈ ವರ್ಷದ ಆರಂಭದಲ್ಲೇ ನೈರುತ್ಯ ರೈಲ್ವೆಯ ಉನ್ನತ ಅಧಿಕಾರಿಯೊಬ್ಬರು, ಇಂಟರ್ ಲಾಕಿಂಗ್ ವ್ಯವಸ್ಥೆಯಲ್ಲಿನ ದೋಷಗಳನ್ನು ಪತ್ತೆ ಹಚ್ಚಿ, ಈ ದೋಷಗಳನ್ನು ಸರಿಪಡಿಸದಿದ್ದರೆ ಅನಾಹುತ ಉಂಟಾಗುವ ಎಚ್ಚರಿಕೆಯನ್ನು ನೀಡಿದ್ದರು.

'ಸಾವಿನ ಸಂಖ್ಯೆ ಮರೆಮಾಚುವ ಉದ್ದೇಶವಿಲ್ಲ'

ರೈಲು ದುರಂತದಲ್ಲಿ ಸಂಭವಿಸಿದ ಸಾವಿನ ಸಂಖ್ಯೆಯನ್ನು ಮರೆಮಾಚುವ ಯಾವುದೇ ಉದ್ದೇಶ ರಾಜ್ಯ ಸರ್ಕಾರಕ್ಕೆ ಇಲ್ಲ ಎಂದು ಒಡಿಶಾದ ಮುಖ್ಯ ಕಾರ್ಯದರ್ಶಿ ಪಿ. ಕೆ. ಜೆನಾ ಹೇಳಿದರು.

ತ್ರಿವಳಿ ರೈಲುಗಳ ನಡುವಣ ಅಪಘಾತದಲ್ಲಿ 275 ಮಂದಿ ಸಾವಿಗೀಡಾಗಿದ್ದಾರೆ ಎಂದು ಒಡಿಶಾ ಸರ್ಕಾರ ಭಾನುವಾರ ಅಧಿಕೃತ ಮಾಹಿತಿ ನೀಡಿತ್ತು. ಇದಕ್ಕೂ ಮೊದಲು ಸಾವಿನ ಸಂಖ್ಯೆ 288 ಎಂದು ರೈಲ್ವೆ ಇಲಾಖೆ ತಿಳಿಸಿತ್ತು. ಅಲ್ಲದೇ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ತಮ್ಮ ರಾಜ್ಯದ 182 ಮಂದಿ ಕಾಣೆಯಾಗಿದ್ದಾರೆ' ಎಂದು ಹೇಳಿದ್ದರು. ಸಾವಿಗೀಡಾದವರ ಸಂಖ್ಯೆಯನ್ನು ಸರ್ಕಾರ ಮುಚ್ಚಿಡುತ್ತಿದೆ ಎಂದು ಪ್ರತಿಪಕ್ಷದ ಕೆಲವು ನಾಯಕರು ಆರೋಪಿಸಿದ್ದರು.

ಈ ಆರೋಪಗಳಿಗೆ ಪ್ರತಿಕ್ರಿಯೆ ನೀಡಿದ ಪಿ. ಕೆ. ಜೆನಾ, 'ಅಪಘಾತ ನಡೆದ ಕ್ಷಣದಿಂದ ಮಾಧ್ಯಮದವರು ಸ್ಥಳದಲ್ಲಿಯೇ ಇದ್ದರು. ರಕ್ಷಣಾ ಕಾರ್ಯಚರಣೆ ಕ್ಯಾಮೆರಾಗಳ ಮುಂದೆಯೇ ನಡೆದಿದೆ. ಸರ್ಕಾರ ಪಾರದರ್ಶಕತೆಯಲ್ಲಿ ನಂಬಿಕೆಯಿಟ್ಟಿದೆ' ಎಂದು ತಿರುಗೇಟು ನೀಡಿದ್ದಾರೆ. ಸಾವಿನ ಸಂಖ್ಯೆಯಲ್ಲಿ ವ್ಯತ್ಯಾಸವಾಗಿರುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಕೆಲವೊಂದು ಮೃತದೇಹಗಳನ್ನು ಎರಡೆರಡು ಬಾರಿ ಲೆಕ್ಕ ಹಾಕಿರುವುದೇ ಈ ಗೊಂದಲಕ್ಕೆ ಕಾರಣವಾಗಿದೆ. 275 ಮೃತ ದೇಹಗಳ ಪೈಕಿ ಈವರೆಗೆ 108 ಮೃತದೇಹಗಳನ್ನು ಗುರುತಿಸಲಾಗಿದೆ' ಎಂದು ಹೇಳಿದರು.

ಎನ್‌ಡಿಆರ್‌ಎಫ್ ಕಾರ್ಯಾಚರಣೆ ಪೂರ್ಣ

ನವದೆಹಲಿ (ಪಿಟಿಐ): ' ರೈಲು ಅಪಘಾತದ ಸ್ಥಳದಲ್ಲಿನ ಕಾರ್ಯಾಚರಣೆಯನ್ನು ಸೋಮವಾರ ಪೂರ್ಣಗೊಳಿಸಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯು (ಎನ್‌ಡಿಆರ್‌ಎಫ್) ತನ್ನ ಎಲ್ಲ ಒಂಬತ್ತು ತಂಡಗಳನ್ನು ಘಟನಾ ಸ್ಥಳದಿಂದ ಹಿಂದಕ್ಕೆ ಕರೆಸಿಕೊಂಡಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಶುಕ್ರವಾರ ಅಪಘಾತ ಸಂಭವಿಸಿದ ಬಳಿಕ ರಕ್ಷಣಾ ಕಾರ್ಯಾಚರಣೆಗಾಗಿ ಎನ್‌ಡಿಆರ್‌ಎಫ್ ಪಡೆಯನ್ನು ಘಟನಾ ಸ್ಥಳಕ್ಕೆ ನಿಯೋಜಿಸಲಾಗಿತ್ತು. ಈ ವೇಳೆ ಪಡೆಗಳು 44 ಸಂತ್ರಸ್ತರನ್ನು ರಕ್ಷಿಸಿದ್ದು, 121 ಮೃತದೇಹಗಳನ್ನು ರೈಲುಗಳ ಬೋಗಿಗಳಿಂದ ಹೊರತೆಗೆದಿವೆ' ಎಂದಿದ್ದಾರೆ.

ಸರ್ಕಾರಿ ನೌಕರಿ: ಮೃತರ ಕುಟುಂಬ ಸದಸ್ಯರಿಗೆ ಸರ್ಕಾರಿ ನೌಕರಿ– ಮಮತಾ ಅಪಘಾತದಲ್ಲಿ ಮಡಿದವರ ಕುಟುಂಬ ಸದಸ್ಯರಿಗೆ ಸರ್ಕಾರಿ ನೌಕರಿ ನೀಡಲಾಗುವುದು ಎಂದು ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಘೋಷಿಸಿದ್ದಾರೆ.

ಮಮತಾ ಅವರು ಭುವನೇಶ್ವರ ಮತ್ತು ಕಟಕ್‌ನ ವಿವಿಧ ಆಸ್ಪತ್ರೆಗಳಿಗೆ ಮಂಗಳವಾರ ತೆರಳಿ ಗಾಯಾಳುಗಳನ್ನು ಭೇಟಿಯಾಗುವರು ಎಂದು ಮೂಲಗಳು ತಿಳಿಸಿವೆ.

ಬದುಕುಳಿದ ಚಾಲಕರ ಆರೋಗ್ಯ ಸ್ಥಿರ: ಅಪಘಾತದದಲ್ಲಿ ಬದುಕುಳಿದ ಕೋರೊಮಂಡಲ್ ರೈಲು ಎಂಜಿನ್ ಚಾಲಕ ಗುಣನಿಧಿ ಮೊಹಂತಿ ಮತ್ತು ಅವರ ಸಹ ಚಾಲಕ ಹಜಾರಿ ಬೆಹರಾ ಅವರ ಆರೋಗ್ಯ ಸ್ಥಿರವಾಗಿದೆ.

ರೈಲಿನಲ್ಲಿ ಗಾಯಗೊಂಡಿದ್ದ ಈ ಇಬ್ಬರನ್ನು ರಕ್ಷಿಸಲಾಗಿತ್ತು. ಈ ಇಬ್ಬರೂ ಏಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಚಾಲಕರಿಬ್ಬರ ಆರೋಗ್ಯ ಸ್ಥಿರವಾಗಿದೆ. ಮೊಹಂತಿ ಅವರನ್ನು ತೀವ್ರ ನಿಗಾ ಘಟಕದಿಂದ ವಾರ್ಡ್‌ಗೆ ಸ್ಥಳಾಂತರಿಸಲಾಗಿದೆ. ತಲೆಗೆ ಪೆಟ್ಟುಬಿದ್ದಿರುವ ಬೆಹರಾ ಅವರಿಗೆ ಶಸ್ತ್ರ ಚಿಕಿತ್ಸೆ ನಡೆಯಬೇಕಿದೆ' ಎಂದು ಆಗ್ನೇಯ ರೈಲ್ವೆ (ಎಸ್‌ಇಆರ್) ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಆದಿತ್ಯ ಚೌಧರಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ನಿಯಮಗಳ ಪ್ರಕಾರವೇ ಲೋಕೋಮೋಟಿವ್ ಕಾರ್ಯಾಚರಣೆ ನಡೆಸಿದ ಕಾರಣ ರೈಲಿನ ಚಾಲಕರದ್ದು ಯಾವುದೇ ತಪ್ಪಿಲ್ಲವೆಂದು ಈಗಾಗಲೇ ರೈಲ್ವೆ ಇಲಾಖೆ ಇಬ್ಬರು ಚಾಲಕರಿಗೂ ಕ್ಲೀನ್ ಚಿಟ್ ನೀಡಿದೆ.

ತನಿಖೆ ಸಿಬಿಐ ಕೆಲಸ ಅಲ್ಲ: ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): 'ಸಿಬಿಐನಂಥ ಕಾನೂನು ಜಾರಿ ಸಂಸ್ಥೆಗಳು ಇರುವುದು ಅಪರಾಧ ಪ್ರಕರಣಗಳ ತನಿಖೆ ನಡೆಸುವುದಕ್ಕೇ ಹೊರತು ರೈಲು ಅಪಘಾತದ ತನಿಖೆ ನಡೆಸಲು ಅಲ್ಲ. ಜೊತೆಗೆ, ತಾಂತ್ರಿಕ, ಸಾಂಸ್ಥಿಕ ಮತ್ತು ರಾಜಕೀಯ ವೈಫಲ್ಯಗಳ ಹೊಣೆಗಾರಿಕೆಯನ್ನು ನಿಗದಿಡಿಸಲು ಆ ಸಂಸ್ಥೆಯಿಂದ ಸಾಧ್ಯವಿಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾರೆ.

ಬಾಲೇಶ್ವರ ರೈಲು ದುರಂತದ ತನಿಖೆಯನ್ನು ಸಿಬಿಐಗೆ ಒಪ್ಪಿಸುವುದಾಗಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಹೇಳಿಕೆ ನೀಡಿದ ಬೆನ್ನಲ್ಲೇ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ಸುದೀರ್ಘ ಪತ್ರ ಬರೆದಿದ್ದಾರೆ. 'ರೈಲ್ವೆ ಭದ್ರತೆಯ ಕುರಿತು ಅಶ್ವಿನಿ ವೈಷ್ಣವ್ ಅವರು ನೀಡಿದ್ದ ಟೊಳ್ಳು ಭರವಸೆಗಳ ನಿಜ ಬಣ್ಣ ಈಗ ಬಯಲಾಗಿದೆ' ಎಂದು ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ತನಿಖೆಯ ಜವಾಬ್ದಾರಿ ಸಿಬಿಐಗೆ ಸಲ್ಲ: ಅಪಘಾತಕ್ಕೆ ಮೂಲಕಾರಣವೇನು ಎಂಬುದನ್ನು ಕಂಡುಕೊಂಡಿರುವುದಾಗಿ ವೈಷ್ಣವ್ ಅವರು ಹೇಳಿದ್ದಾರೆ. ಆದರೂ, ತನಿಖೆ ಕೈಗೆತ್ತಿಕೊಳ್ಳುವಂತೆ ಸಿಬಿಐಗೆ ಮನವಿ ಮಾಡಿದ್ದಾರೆ. ರೈಲ್ವೆ ಸುರಕ್ಷತೆ, ಸಿಗ್ನಲಿಂಗ್, ನಿರ್ವಹಣಾ ಪರಿಪಾಟಗಳ ಕುರಿತ ತಾಂತ್ರಿಕ ಪರಿಣತಿಯ ಕೊರತೆ ಸಿಬಿಐನಲ್ಲಿ ಇದೆ ಎಂದು ಹೇಳಿದ್ದಾರೆ.

ಒಡಿಶಾ: ಹಳಿ ತಪ್ಪಿದ ಗೂಡ್ಸ್ ರೈಲು

ನವದೆಹಲಿ (ಪಿಟಿಐ): ಒಡಿಶಾದ ಬರಗಢ ಜಿಲ್ಲೆಯಲ್ಲಿ ಖಾಸಗಿ ನ್ಯಾರೊ ಗೇಜ್‌ನಲ್ಲಿ ಚಲಿಸುತ್ತಿದ್ದ ಗೂಡ್ಸ್ ರೈಲೊಂದು ಸೋಮವಾರ ಹಳಿತಪ್ಪಿದ್ದು, ಯಾವುದೇ ಅನಾಹುತ ಸಂಭವಿಸಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಸುಣ್ಣದ ಕಲ್ಲುಗಳನ್ನು ಸಾಗಿಸುತ್ತಿದ್ದ ಐದು ಬೋಗಿಗಳ ಗೂಡ್ಸ್ ರೈಲು ಹಳಿತಪ್ಪಿದೆ. ಖಾಸಗಿ ಕಂಪನಿ ನಿರ್ಮಿಸಿದ ಹಳಿಗಳಲ್ಲಿ ಈ ಘಟನೆ ನಡೆದಿದ್ದು, ಈ ಹಳಿಗಳ ನಿರ್ವಹಣೆ ಹಾಗೂ ಕಾರ್ಯಾಚರಣೆಯನ್ನು ರೈಲ್ವೆ ಇಲಾಖೆಯು ನೋಡಿಕೊಳ್ಳುವುದಿಲ್ಲ' ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಡುಂಗ್ರಿ ಲೈಮ್‌ಸ್ಟೋನ್ ಮೈನ್ಸ್ ಹಾಗೂ ಬರಗಢದ ಎಸಿಸಿ ಸಿಮೆಂಟ್ ಘಟಕದ ಮಧ್ಯೆ ನ್ಯಾರೊ ಗೇಜ್‌ನ ಖಾಸಗಿ ಮಾರ್ಗವನ್ನು ನಿರ್ಮಿಸಲಾಗಿದೆ. ಈ ಮಾರ್ಗದ ಹಳಿ, ಬೋಗಿಗಳು ಹಾಗೂ ರೈಲು ಇಂಜಿನ್– ಎಲ್ಲವೂ ಖಾಸಗಿಯದ್ದು' ಎಂದೂ ಅವರು ಹೇಳಿದರು.

ಸುರಕ್ಷತೆ: 5 ವರ್ಷಗಳಲ್ಲಿ ಲಕ್ಷ ಕೋಟಿ ವ್ಯಯ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲ್ವೆಯ ಸುರಕ್ಷತಾ ಕ್ರಮಗಳಿಗೆ ಇಲಾಖೆಯು 2017–18 ಮತ್ತು 2021–22ರ ಅವಧಿಯಲ್ಲಿ ₹ 1 ಲಕ್ಷ ಕೋಟಿ ಅನ್ನು ವಿನಿಯೋಗಿಸಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಕೇಂದ್ರ ಸುರಕ್ಷತಾ ಕ್ರಮಗಳನ್ನು ಕಡೆಗಣಿಸಿದೆ ಎಂದು ಒಡಿಶಾದ ಅಪಘಾತದ ಬಳಿಕ ಪ್ರತಿಪಕ್ಷಗಳು ಟೀಕಿಸಿದ್ದವು. ಹಿಂದೆಯೇ ಕೇಂದ್ರ ಸ್ಪಷ್ಟನೆ ನೀಡಿದೆ. ಹಳಿ ಬದಲಾವಣೆ, ಸೇತುವೆ ನಿರ್ಮಾಣ, ಲೆವೆಲ್ ಕ್ರಾಸಿಂಗ್, ಸಿಗ್ನಲಿಂಗ್ ಕಾರ್ಯಕ್ಕೆ ಆದ್ಯತೆ ನೀಡಿದೆ ಎಂದಿದೆ.

ರಿಲಯನ್ಸ್‌ನಿಂದ ಸಂತ್ರಸ್ತರಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲೇಶ್ವರ ರೈಲು ದುರಂತದಲ್ಲಿ ತೊಂದರೆಗೆ ಒಳಗಾದವರಿಗೆ, ಜೀವ ಕಳೆದುಕೊಂಡವರ ಕುಟುಂಬಗಳಿಗೆ ನೆರವು ಒದಗಿಸುತ್ತಿರುವುದಾಗಿ ರಿಲಯನ್ಸ್ ಫೌಂಡೇಷನ್ ಹೇಳಿದೆ. ಅಪಘಾತದಲ್ಲಿ ಮೃತಪಟ್ಟವರ ಕುಟುಂಬದ ಒಬ್ಬ ಸದಸ್ಯನಿಗೆ, ಅವರ ಅಗತ್ಯವನ್ನು ಆಧರಿಸಿ ರಿಲಯನ್ಸ್ ಜಿಯೊ ಅಥವಾ ರಿಲಯನ್ಸ್ ರಿಟೇಲ್ ಮೂಲಕ ಉದ್ಯೋಗ ಅವಕಾಶ ಕಲ್ಪಿಸುವುದು ಕೂಡ ಇದರಲ್ಲಿ ಸೇರಿದೆ.

ತೊಂದರೆಗೆ ಒಳಗಾದವರ ಕುಟುಂಬಗಳಿಗೆ ಆರು ತಿಂಗಳ ಅವಧಿಗೆ ರಿಲಯನ್ಸ್ ಮಳಿಗೆಗಳ ಮೂಲಕ ಉಚಿತವಾಗಿ ದಿನಸಿ, ಅಡುಗೆ ಎಣ್ಣೆ ವಿತರಿಸಲಾಗುತ್ತದೆ. ಗಾಯಗೊಂಡವರಿಗೆ ಉಚಿತವಾಗಿ ಔಷಧಗಳನ್ನು ಪೂರೈಸಲಾಗುತ್ತದೆ, ಆಸ್ಪತ್ರೆಗೆ ದಾಖಲಾದವರ ವೈದ್ಯಕೀಯ ವೆಚ್ಚಗಳನ್ನು ಭರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮೃತರ ಕುಟುಂಬದ ಹೆಣ್ಣುಮಕ್ಕಳಿಗೆ ಕಿರು ಹಣಕಾಸಿನ ನೆರವು ಒದಗಿಸಲಾಗುವುದು ಎಂದು ಹೇಳಿದೆ. ದುರಂತದಲ್ಲಿ ಮಡಿದವರ ಕುಟುಂಬದ ಒಬ್ಬ ಸದಸ್ಯನಿಗೆ ಒಂದು ವರ್ಷದ ಅವಧಿಗೆ ಉಚಿತ ಮೊಬೈಲ್ ಸೇವೆ ಒದಗಿಸಲಾಗುತ್ತದೆ.

ಪ್ರತಿಪಕ್ಷಗಳ ಸಭೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಚುನಾವಣೆ ಹತ್ತಿರವಾಗುತ್ತಿರುವ ಕಾರಣ ಪ್ರತಿಪಕ್ಷಗಳ ಒಗ್ಗೂಡುವಿಕೆಯ ಉದ್ದೇಶದಿಂದ ಇದೇ 12ರಂದು ಬಿಹಾರದ ಪಟ್ನಾದಲ್ಲಿ ಕರೆದಿದ್ದ ಸಭೆಯನ್ನು ಮುಂದೂಡಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡ ರಾಹುಲ್ ಗಾಂಧಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ನಿಗದಿತ ದಿನ ಲಭ್ಯವಿರಲಿಲ್ಲ ಎಂದು ಮುಂದೂಡಿಕೆಗೆ ಕಾರಣವನ್ನು ನೀಡಲಾಗಿದೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಈ ಸಭೆಯನ್ನು ಕರೆದಿದ್ದರು. 'ಕೆಲ ಮುಖಂಡರು ಆ ದಿನ ಪೂರ್ವ ನಿಗದಿತ ಕಾರ್ಯಕ್ರಮ ಇದ್ದು, ಬೇರೊಂದು ದಿನ ಸಭೆ ಕರೆಯಲು ತಿಳಿಸಿದ್ದರು. ಆದರೆ ನಿತೀಶ್ 12ರಂದೇ ಸಭೆ ಕರೆದಿದ್ದರು' ಎಂದು ಮೂಲಗಳು ತಿಳಿಸಿವೆ.

ರಾಹುಲ್ ಗಾಂಧಿ ಅವರು ಜೂನ್ 12ರಂದು ಸಭೆಗೆ ಹಾಜರಾಗಲು ಸಾಧ್ಯವಾಗದು ಎಂದು ಕಾಂಗ್ರೆಸ್ ಪಕ್ಷವು ನಿತೀಶ್ ಅವರಿಗೆ ತಿಳಿಸಿತ್ತು. ಎಂ.ಕೆ. ಸ್ಟಾಲಿನ್ ಮತ್ತು ಸೀತಾರಾಂ ಯೆಚೂರಿ ಅವರೂ ಇಂತಹುದೇ ಸಂದೇಶ ರವಾನಿಸಿದ್ದರು.

ಕನಿಮೊಳಿ ಅವರನ್ನು ಸಭೆಗೆ ಕಳುಹಿಸಲಾಗುವುದು ಎಂದು ಸ್ಟಾಲಿನ್ ಅವರು ತಿಳಿಸಿದ್ದರೆ ಕಾಂಗ್ರೆಸ್ ಪಕ್ಷವು, ಖರ್ಗೆ ಅವರು ಸಭೆಗೆ ಬರುವುದಿಲ್ಲ. ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಮುಖ್ಯಮಂತ್ರಿಯೊಬ್ಬರನ್ನು ಕಳುಹಿಸಲಾಗುವುದು ಎಂದು ತಿಳಿಸಿತ್ತು. ಪ್ರತಿಪಕ್ಷಗಳ ಸಭೆ ಶಿಮ್ಲಾದಲ್ಲಿ ನಡೆಯಬೇಕು ಎಂದು ಪಕ್ಷ ಬಯಸಿದ್ದು, ತಾತ್ಕಾಲಿಕವಾಗಿ ಜೂನ್ 23ರ ದಿನ ನಿಗದಿಯಾಗಿದೆ.

ಟಿಡಿಪಿ–ಬಿಜೆಪಿ ಮೈತ್ರಿ?

ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವ ವಿಚಾರದಲ್ಲಿ 2018ರಲ್ಲಿ ಮೈತ್ರಿ ಕಡಿದುಕೊಂಡಿದ್ದ ಟಿಡಿಪಿ ಮತ್ತು ಬಿಜೆಪಿ ನಡುವೆ ಮತ್ತೆ ಮೈತ್ರಿ ಕೂಡುವ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆಗಳು ನಡೆಯುತ್ತಿವೆ. ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಭೇಟಿಯು ಇದಕ್ಕೆ ಪುಷ್ಟಿ ನೀಡಿದೆ.

ಎರಡು ತೆಲುಗು ಭಾಷಿಕ ರಾಜ್ಯಗಳಿಗೆ ನಡೆಯಲಿರುವ ಚುನಾವಣೆ ಹಾಗೂ ಲೋಕಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಶನಿವಾರ ರಾತ್ರಿ ನಡೆದ ಈ ಭೇಟಿ ಮಹತ್ವ ಪಡೆದುಕೊಂಡಿದೆ. ಈ ಸಭೆಯಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಅವರೂ ಇದ್ದರು ಎನ್ನಲಾಗಿದೆ.

ಎನ್‌ಐಆರ್‌ಎಫ್ ಶ್ರೇಯಾಂಕ ಪಟ್ಟಿ ಬಿಡುಗಡೆ

ಐಐಎಸ್ಸಿ ಬೆಂಗಳೂರು ಅತ್ಯುತ್ತಮ ವಿವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸ್ತುತ ವರ್ಷದ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು (ಎನ್‌ಐಆರ್‌ಎಫ್) ರ‍್ಯಾಂಕಿಂಗ್‌ನ ಮೊದಲ ಹತ್ತು ಅಗ್ರ ಶ್ರೇಯಾಂಕದ ಶಿಕ್ಷಣ ಸಂಸ್ಥೆಗಳಲ್ಲಿ ದೇಶದ ವಿವಿಧ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಸಂಸ್ಥೆಗಳು ಪಾರಮ್ಯ ಮೆರೆದಿದ್ದು, ಐಐಟಿ ಮದ್ರಾಸ್, ಐಐಟಿ ದೆಹಲಿ, ಐಐಟಿ ಕಾನ್ಪುರ ಮೊದಲ ಐದರಲ್ಲಿ ಮೂರು ಸ್ಥಾನಗಳನ್ನು ಪಡೆದುಕೊಂಡಿವೆ.

ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯ (ಜೆಎನ್‌ಯು) ಮತ್ತೊಮ್ಮೆ ಹತ್ತು ಅಗ್ರ ಶ್ರೇಯಾಂಕಗಳಲ್ಲಿ ಸ್ಥಾನ ಪಡೆದ ಏಕೈಕ ಕಲಾ ಶಿಕ್ಷಣ ಸಂಸ್ಥೆಯಾಗಿದೆ.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ದೇಶದ ಅತ್ಯುತ್ತಮ ವಿಶ್ವವಿದ್ಯಾಲಯ ಎಂಬ ಶ್ರೇಯಕ್ಕೆ ಮತ್ತೊಮ್ಮೆ ಭಾಜನವಾಗಿದೆ. ಅಂತೆಯೇ, ಅತ್ಯುತ್ತಮ ಶಿಕ್ಷಣ ಸಂಸ್ಥೆಗಳ ಪೈಕಿಯೂ ಬೆಂಗಳೂರಿನ ಐಐಎಸ್‌ಸಿಯು 2ನೇ ಸ್ಥಾನ ಪಡೆದಿದೆ.

ಒಟ್ಟಾರೆ ವಿಭಾಗದಲ್ಲಿ ಮೊದಲ ಹತ್ತರಲ್ಲಿ ಸ್ಥಾನ ಪಡೆದ ಇತರ ಸಂಸ್ಥೆಗಳ ಪೈಕಿ ಐಐಟಿ ಬಾಂಬೆ, ಐಐಟಿ ಕಾನ್ಪುರ, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ದೆಹಲಿ, ಐಐಟಿ ಖರಗ್‌ಪುರ, ಐಐಟಿ ರೂರ್ಕಿ ಮತ್ತು ಐಐಟಿ ಗುವಾಹಟಿ ಇವೆ.

ದೆಹಲಿಯ ವಿಶ್ವವಿದ್ಯಾಲಯದ ಮಿರಾಂಡಾ ಹೌಸ್ ಕಾಲೇಜು ಮತ್ತು ಹಿಂದೂ ಕಾಲೇಜು, ಚೆನ್ನೈನ ಪ್ರೆಸಿಡೆನ್ಸಿ ಕಾಲೇಜು ಮತ್ತೊಮ್ಮೆ ಅತ್ಯುತ್ತಮ ಕಾಲೇಜುಗಳು ಎಂಬ ಮನ್ನಣೆ ಪಡೆದಿವೆ. ಕೊಯಮತ್ತೂರಿನ ಪಿಎಸ್‌ಜಿಆರ್ ಕೃಷ್ಣಾಮ್ಮಾಳ್ ಕಾಲೇಜ್ ಫಾರ್ ವುಮೆನ್ ಮತ್ತು ಕೋಲ್ಕತ್ತದ ಸೇಂಟ್ ಕ್ಸೇವಿಯರ್ಸ್ ಕಾಲೇಜು ಈ ವರ್ಷ ಐದು ಅಗ್ರ ಕಾಲೇಜುಗಳಲ್ಲಿ ಸ್ಥಾನ ಪಡೆದಿವೆ.

ವೈದ್ಯಕೀಯ ಕಾಲೇಜುಗಳಲ್ಲಿ ಪೈಕಿ ದೆಹಲಿಯ ಏಮ್ಸ್ ಹೊರತುಪಡಿಸಿ, ಚಂಡೀಗಢದ ವೈದ್ಯಕೀಯ ಶಿಕ್ಷಣ ಮತ್ತು ಸ್ನಾತಕೋತ್ತರ ಸಂಶೋಧನಾ ಸಂಸ್ಥೆ, ವೆಲ್ಲೂರಿನ ಕ್ರಿಶ್ಚಿಯನ್ ವೈದ್ಯಕೀಯ ಕಾಲೇಜು, ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ಪುದುಚೇರಿಯ ಜವಾಹರಲಾಲ್ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಮೊದಲ ಐದು ಸ್ಥಾನಗಳಲ್ಲಿವೆ.

ದೇಶದ ಹತ್ತು ಅಗ್ರ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಐಐಎಂ ಅಹಮದಾಬಾದ್, ಐಐಎಂ ಬೆಂಗಳೂರು, ಐಐಎಂ ಕೋಯಿಕ್ಕೋಡ್, ಐಐಎಂ ಕ್ಯಾಲಿಕಟ್, ಐಐಎಂ ದೆಹಲಿ, ಐಐಎಂ ಲಖನೌ, ಮುಂಬೈನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಎಂಜಿನಿಯರಿಂಗ್, ಸ್ಥಾನ ಪಡೆದಿವೆ.

ದೇಶದ ಹತ್ತು ಅತ್ಯುತ್ತಮ ವಿಶ್ವವಿದ್ಯಾಲಯಗಳು

1. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ಬೆಂಗಳೂರು
2. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ನವದೆಹಲಿ
3. ಜಾಮಿಯಾ ಮಿಲಿಯಾ ಇಸ್ಲಾಮಿಯಾ, ನವದೆಹಲಿ
4. ಜಾಧವಪುರ ವಿಶ್ವವಿದ್ಯಾಲಯ, ಕೋಲ್ಕತ್ತ
5. ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಾಣಸಿ
6. ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಮಣಿಪಾಲ
7. ಅಮೃತ ವಿಶ್ವವಿದ್ಯಾಪೀಠಂ, ಕೊಯಮತ್ತೂರು
8. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ವೆಲ್ಲೂರು
9. ಅಲೀಗಡ ಮುಸ್ಲಿಂ ವಿಶ್ವವಿದ್ಯಾಲಯ, ಅಲೀಗಡ
10. ಹೈದರಾಬಾದ್ ವಿಶ್ವವಿದ್ಯಾಲಯ, ಹೈದರಾಬಾದ್

ದೇಶದ ಹತ್ತು ಅತ್ಯುತ್ತಮ ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳು

1. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮದ್ರಾಸ್
2. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ದೆಹಲಿ
3. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಬಾಂಬೆ
4. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾನ್ಪುರ
5. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ರೂರ್ಕಿ
6. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಖರಗಪುರ
7. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಗುವಾಹಟಿ
8. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹೈದರಾಬಾದ್
9. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಿರುಚಿರಾಪಳ್ಳಿ
10. ಜಾಧವ್‌ಪುರ ವಿಶ್ವವಿದ್ಯಾಲಯ, ಕೋಲ್ಕತ್ತ

ಹಿಂದೆ ಹೋಗಿಲ್ಲ: ಸಾಕ್ಷಿ

ಒಂದನೇ ಪುಟದಿಂದ...

ಉದ್ಯೋಗಕ್ಕೆ ಪುನಃ ಸೇರ್ಪಡೆಯಾಗುವ ಮೂಲಕ ಪ್ರತಿಭಟನೆಯಿಂದ ದೂರ ಸರಿಯುತ್ತಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸಿರುವ ಅವರು, 'ಹೋರಾಟವನ್ನು ಮುಂದೆ ಕೊಂಡೊಯ್ಯಲು ನಾವು ತಂತ್ರಗಾರಿಕೆ ರೂಪಿಸುತ್ತಿದ್ದೇವೆ. ಹಿಂಸಾಚಾರ ಇಲ್ಲದೇ ಪ್ರತಿಭಟನೆಯನ್ನು ಮುನ್ನಡೆಸುವುದು ಹೇಗೆ ಎಂಬುದರ ಕುರಿತು ನಾವು ರೂಪುರೇಷೆ ಸಿದ್ಧಪಡಿಸುತ್ತಿದ್ದೇವೆ. ರೈಲ್ವೆ ಇಲಾಖೆಯಲ್ಲಿ ವಿಶೇಷ ಕರ್ತವ್ಯಗಳ ಅಧಿಕಾರಿ ಹುದ್ದೆಯನ್ನು (ಒಎಸ್‌ಡಿ) ಹೊಂದಿದ್ದೇನೆ. ಪ್ರತಿಭಟನೆಯನ್ನು ಪುನಃ ಆರಂಭಿಸುವವರೆಗೆ ನನ್ನ ಉದ್ಯೋಗದ ಜವಾಬ್ದಾರಿಗಳನ್ನು ನಿಭಾಯಿಸುತ್ತೇನೆ' ಎಂದು ಹೇಳಿದರು.

ಪ್ರತಿಭಟನಕಾರರಿಗೆ ತೊಂದರೆ ನೀಡಬೇಕೆಂದೇ ಸುಳ್ಳು ಸುದ್ದಿ ಹಬ್ಬಿಸಲಾಗುತ್ತದೆ ಎಂದು ಆರೋಪಿಸಿರುವ ಪೂನಿಯಾ, 'ನಮ್ಮನ್ನು ಹಿಮ್ಮೆಟ್ಟಿಸಲಾಯಿತು ಅಥವಾ ನಾವು ಪ್ರತಿಭಟನೆಯಿಂದ ಹಿಂದೆ ಸರಿದಿದ್ದೇವೆ ಎಂಬುದು ಸುಳ್ಳು' ಎಂದರು.

ದುರ್ಬಲ ಆರೋಪಪಟ್ಟಿ: ಸಿಬಲ್

ನವದೆಹಲಿ (ಪಿಟಿಐ): ಪ್ರತಿಭಟನೆನಿರತ ಕುಸ್ತಿಪಟುಗಳು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದ ಕಾರಣ ಹಿರಿಯ ವಕೀಲ, ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ಅವರು ಕೇಂದ್ರ ಸರ್ಕಾರವನ್ನು ಗುರಿಯಾಗಿಸಿ ಟ್ವೀಟ್ ಮಾಡಿದ್ದಾರೆ.

'ಅಮಿತ್ ಶಾ ಅವರು ಕುಸ್ತಿಪಟುಗಳನ್ನು ಭೇಟಿಯಾಗಿದ್ದಾರೆ ಮತ್ತು ಈ ಪ್ರಕರಣದಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ನನ್ನ ಊಹೆ ಪ್ರಕಾರ, ದುರ್ಬಲವಾದ ಆರೋಪಪಟ್ಟಿಯನ್ನು ಸಲ್ಲಿಸಲಾಗುತ್ತದೆ. ಬ್ರಿಜ್‌ಭೂಷಣ್‌ಗೆ ಜಾಮೀನು ಕೊಡಲಾಗುತ್ತದೆ. ಬಳಿಕ ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವುದರಿಂದ ಈ ಕುರಿತು ಮಾತನಾಡಬಾರದು ಎಂದು ಅವರು ಹೇಳುತ್ತಾರೆ' ಎಂದು ಸಿಬಲ್ ವ್ಯಂಗ್ಯವಾಡಿದ್ದಾರೆ.

ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತ?

ನವದೆಹಲಿ (ಪಿಟಿಐ): ಚಂಡಮಾರುತದ ಚಲನೆಯಿಂದಾಗಿ ಅರಬ್ಬಿ ಸಮುದ್ರದ ಆಗ್ನೇಯದಲ್ಲಿ ವಾಯುಭಾರ ಕುಸಿತ ಉಂಟಾಗುವ ಸಾಧ್ಯತೆ ಇದೆ. ಇದು ಮುಂದಿನ ಎರಡು ದಿನಗಳಲ್ಲಿ ತೀವ್ರತೆ ಪಡೆಯಲಿದೆ. ಕೇರಳದ ಕರಾವಳಿ ಪ್ರವೇಶಿಸಲಿರುವ ಮುಂಗಾರು ಮಾರುತಗಳ ಮೇಲೆ ಇದು ಪರಿಣಾಮ ಬೀರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಸೋಮವಾರ ಹೇಳಿದೆ.

ಆದಾಗ್ಯೂ, ಮುಂಗಾರು ಮಾರುತಗಳು ಕೇರಳ ಪ್ರವೇಶಿಸಲಿರುವ ಅಂದಾಜು ದಿನಾಂಕವನ್ನು ಐಎಂಡಿ ತಿಳಿಸಿಲ್ಲ.

ಕೋಲ್ಕತ್ತ ಉದ್ಯಮಿಯ ₹ 2.74 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಪನಾಮ ಹಗರಣ: ಬೆಂಗಳೂರಿನಲ್ಲಿ ಇ.ಡಿ ದಾಳಿ

ನವದೆಹಲಿ (ಪಿಟಿಐ): ಪನಾಮ ಪೇಪರ್ಸ್ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ಕಾರ್ಯಾಚರಣೆಯಲ್ಲಿ ಬೆಂಗಳೂರಿನ ರಾಜೇಂದ್ರ ಪಾಟೀಲ ಎಂಬುವರ ಮನೆ ಮತ್ತು ಕಚೇರಿಯಲ್ಲಿ ಜಾರಿ ನಿರ್ದೇಶನಾಲಯವು ಶೋಧ ಕಾರ್ಯಾಚರಣೆ ಕೈಗೊಂಡಿದೆ.

ಪನಾಮ ಪೇಪರ್ಸ್ ಸೋರಿಕೆ ಪ್ರಕರಣದಲ್ಲಿ ರಾಜೇಂದ್ರ ಪಾಟೀಲ ಅವರ ಹೆಸರು ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿಯಲ್ಲಿ ಪಾಟೀಲ ಅವರ ಮನೆ ಹಾಗೂ ಅವರು ನಿರ್ದೇಶಕರಾಗಿರುವ ಶ್ರೀಪಾರ್ವತಿ ಟೆಕ್ಸ್ (ಇಂಡಿಯಾ)ಪ್ರೈವೇಟ್ ಲಿಮಿಟೆಡ್‌ನ ಕಚೇರಿ ಆವರಣದಲ್ಲಿ ಜೂನ್ 2ರಂದು ಶೋಧ ನಡೆಸಲಾಗಿದೆ ಎಂದು ಇ.ಡಿ ತಿಳಿಸಿದೆ.

ಪಾಟೀಲ ಅವರು ದುಬೈ, ತಾಂಜಾನಿಯಾ ಸೇರಿದಂತೆ ಇತರೆಡೆಗಳಲ್ಲಿರುವ ವಿವಿಧ ಕಂಪನಿಗಳಲ್ಲಿ ₹ 66.35 ಕೋಟಿ ಮೊತ್ತವನ್ನು ಹೂಡಿಕೆ ಮಾಡಿದ್ದರು ಎಂದು ಆರೋಪಿಸಲಾಗಿದೆ. ಅಷ್ಟೇ ಅಲ್ಲ, ಅವರು ದುಬೈ, ತಾಂಜಾನಿಯಾದಲ್ಲಿನ ವಿವಿಧ ಬ್ಯಾಂಕುಗಳಲ್ಲಿ ಖಾತೆಗಳನ್ನು ಹೊಂದಿದ್ದಾರೆ. ವಿದೇಶಿ ಹೂಡಿಕೆಗೆ ಸಂಬಂಧಿಸಿದ ಅನೇಕ ದಾಖಲೆಗಳನ್ನು ಶೋಧ ಕಾರ್ಯಾಚರಣೆ ಸಮಯದಲ್ಲಿ ವಶಪಡಿಸಿಕೊಳ್ಳಲಾಗಿದೆ.

₹2.74 ಮೌಲ್ಯದ ಆಸ್ತಿ ಜಪ್ತಿ: ಮತ್ತೊಂದು ಕಾರ್ಯಾಚರಣೆಯಲ್ಲಿ ಸ್ವಿಸ್ ಬ್ಯಾಂಕ್‌ನ ಖಾತೆ ಹೊಂದಿರುವ ಹಾಗೂ ಪನಾಮ ಪೇಪರ್ಸ್ ಪ್ರಕರಣದಲ್ಲಿ ಕೇಳಿಬಂದಿರುವ ಕೋಲ್ಕತ್ತದ ಉದ್ಯಮಿ ಕುಟುಂಬವೊಂದರ ₹ 2.74 ಕೋಟಿ ಮೌಲ್ಯದ ಆಸ್ತಿಯನ್ನು ಇ.ಡಿ ಜಪ್ತಿ ಮಾಡಿದೆ. ಕೋಲ್ಕತ್ತದ ದಿ. ಶ್ಯಾಮಪ್ರಸಾದ್ ಮುರಾರ್ಕಾ ಮತ್ತು ಸಂಜಯ್ ಮುರಾರ್ಕಾ ಎಂಬುವರಿಗೆ ಸೇರಿದ ಸ್ಥಿರ ಠೇವಣಿ, ಜಮೀನನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಈ ಇಬ್ಬರೂ ಬಿಲ್ಲಿಪ್ಯಾಕ್ ಲಿಮಿಟೆಡ್ ಕಂಪನಿಯ ಷೇರುದಾರರಾಗಿದ್ದರು. ಅಲ್ಲದೇ ಸ್ವಿಟ್ಜರ್ಲೆಂಡ್‌ನ ಎಚ್‌ಎಸ್‌ಬಿಸಿಯಲ್ಲಿದ್ದ ಕಂಪನಿಯ ಬ್ಯಾಂಕ್ ಖಾತೆಯ ಫಲಾನುಭವಿಗಳಾಗಿದ್ದರು. ತನಿಖೆಯಲ್ಲಿ ಇಬ್ಬರೂ ತಮ್ಮ ಮತ್ತು ಕಂಪನಿಯ ಹೆಸರಿನಲ್ಲಿದ್ದ ವಿವಿಧ ಖಾತೆಗಳಲ್ಲಿ ವಿದೇಶಿ ವಿನಿಮಯ ರೂಪದಲ್ಲಿ ಆಸ್ತಿ ಹೊಂದಿರುವುದು ಕಂಡುಬಂದಿತ್ತು.

ಸಿಸೋಡಿಯಾಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ ಮನೀಷ್ ಸಿಸೋಡಿಯಾ ಅವರಿಗೆ ದೆಹಲಿ ಹೈಕೋರ್ಟ್ ಸೋಮವಾರ ಮಧ್ಯಂತರ ಜಾಮೀನು ನಿರಾಕರಿಸಿದೆ.

ರಕ್ಷಣಾ ಸಚಿವ ರಾಜನಾಥ್, ರಕ್ಷಣಾ ಕಾರ್ಯದರ್ಶಿ ಆಸ್ಟಿನ್ ಚರ್ಚೆ

ರಕ್ಷಣಾ ಕ್ಷೇತ್ರ: ಭಾರತ –ಅಮೆರಿಕ ಸಹಭಾಗಿತ್ವ

ನವದೆಹಲಿ (ಪಿಟಿಐ): ಸೇನಾ ಪರಿಕರಗಳು, ಹಾರ್ಡ್‌ವೇರ್‌ಗಳ ಅಭಿವೃದ್ಧಿ, ವಿವಿಧ ಯೋಜನೆಗಳಿಗೆ ಆದ್ಯತೆ ನೀಡುವುದು ಸೇರಿದಂತೆ ರಕ್ಷಣಾ ಕ್ಷೇತ್ರದಲ್ಲಿ ಜಂಟಿ ಸಹಭಾಗಿತ್ವ ಕುರಿತು ಭಾರತ ಮತ್ತು ಅಮೆರಿಕ ನೀಲನಕ್ಷೆ ರೂಪಿಸಿವೆ.

ಉಕ್ರೇನ್-ರಷ್ಯಾ ಘರ್ಷಣೆ ಹಾಗೂ ಗಡಿಯಲ್ಲಿ ಚೀನಾದ ಬಲವೃದ್ಧಿ ಬೆಳವಣಿಗೆಗಳಿಂದಾಗಿ ಈ ಸಹಭಾಗಿತ್ವವು ಮಹತ್ವ ಪಡೆದುಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಮೆರಿಕ ಭೇಟಿಯ ಎರಡು ವಾರ ಮೊದಲು ಇದು ಕಾರ್ಯಗತಗೊಂಡಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಅಮೆರಿಕದ ರಕ್ಷಣಾ ಇಲಾಖೆ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರ ನಡುವೆ ಇಲ್ಲಿ ನಡೆದ ಮಾತುಕತೆಯ ವೇಳೆ ನೀಲನಕ್ಷೆಗೆ ಅಂತಿಮರೂಪವನ್ನು ನೀಡಲಾಯಿತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಟಿನ್ ಅವರು, 'ಇಂಡೊ–ಪೆಸಿಫಿಕ್ ವಲಯವನ್ನು ಮುಕ್ತಗೊಳಿಸಲು ಹಾಗೂ ಎರಡು ಬಲಶಾಲಿ ರಾಷ್ಟ್ರಗಳ ನಡುವಣ ತಾಂತ್ರಿಕ ಅನ್ವೇಷಣೆ ಮತ್ತು ಸೇನಾ ಸಹಕಾರ, ಜಗದ ಒಳಿತಿಗೆ ಹೇಗೆ ಶಕ್ತಿಯಾಗಬಹುದು ಎಂಬುದನ್ನು ನಿರೂಪಿಸಲು ಈ ಸಹಭಾಗಿತ್ವವು ಉದಾಹರಣೆ ಆಗಲಿದೆ' ಎಂದು ಹೇಳಿದರು.

'ಜಗತ್ತು ತೀವ್ರತರದಲ್ಲಿ ಬದಲಾಗುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಚೀನಾದ ದಬ್ಬಾಳಿಕೆ, ಉಕ್ರೇನ್ ಮೇಲೆ ರಷ್ಯಾದ ಅತಿಕ್ರಮಣ ಮತ್ತೆ ಗಡಿರೇಖೆಯನ್ನು ನಿಗದಿಪಡಿಸಬೇಕಾದ ಅಗತ್ಯವನ್ನು ಪ್ರತಿಪಾದಿಸಿದೆ. ರಾಷ್ಟ್ರೀಯ ಭದ್ರತೆಗೂ ಧಕ್ಕೆ ತಂದಿದೆ. ಇಂತಹ ಸಂದರ್ಭದಲ್ಲಿ ಭಾರತ ಮತ್ತು ಅಮೆರಿಕದ ಸಹಭಾಗಿತ್ವವು ಮಹತ್ವದ್ದಾಗಲಿದೆ' ಎಂದು ಅಭಿಪ್ರಾಯಪಟ್ಟರು.

ಯುದ್ಧ ವಿಮಾನಗಳ ಎಂಜಿನ್ ತಯಾರಿಕೆಯ ತಂತ್ರಜ್ಞಾನವನ್ನು ಭಾರತದ ಜೊತೆಗೆ ವಿನಿಮಯ ಮಾಡಿಕೊಳ್ಳುವ ಜನರಲ್ ಎಲೆಕ್ಟ್ರಿಕ್ (ಜಿ.ಇ) ಪ್ರಸ್ತಾವ ಕುರಿತು ಉಭಯ ನಾಯಕರು ಚರ್ಚಿಸಿದರು. ಅಮೆರಿಕದ ಜನರಲ್ ಅಟೊಮಿಕ್ಸ್ ಏರೋನಾಟಿಕಲ್ ಸಿಸ್ಟಮ್ಸ್ ಸಂಸ್ಥೆಯಿಂದ 30 ಎಂಕ್ಯೂ-9ಬಿ ಹೆಸರಿನ ಶಸ್ತ್ರಸಜ್ಜಿತ ಡ್ರೋನ್ ಖರೀದಿಸಲು ಭಾರತ ಉದ್ದೇಶಿಸಿದೆ.

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರ ಜೊತೆಗೂ ಆಸ್ಟಿನ್ ಪ್ರತ್ಯೇಕವಾಗಿ ಚರ್ಚಿಸಿದರು. ಮೋದಿ ಅವರ ಅಮೆರಿಕ ಭೇಟಿ ವೇಳೆ ಕೆಲವು ಯೋಜನೆಗಳು ಸ್ಪಷ್ಟ ರೂಪ ಪಡೆಯಬಹುದು ಎಂದು ಆಸ್ಟಿನ್ ವಿಶ್ವಾಸ ವ್ಯಕ್ತಪಡಿಸಿದರು.

'ಜಂಟಿ ಸಹಭಾಗಿತ್ವದಲ್ಲಿ ಹೊಸ ತಂತ್ರಜ್ಞಾನ ಅಭಿವೃದ್ಧಿ, ಉತ್ಪಾದನೆಗೆ ಅವಕಾಶಗಳನ್ನು ಗುರುತಿಸಲಾಗಿದೆ. ಉಭಯ ದೇಶಗಳಲ್ಲಿ ರಕ್ಷಣಾ ಕ್ಷೇತ್ರದ ನವೋದ್ಯಮ ಕುರಿತು ಸಹಭಾಗಿತ್ವ ಹೊಂದಲಾಗುವುದು' ಎಂದು ರಕ್ಷಣಾ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಅಮೆರಿಕದ ರಕ್ಷಣಾ ಇಲಾಖೆ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಸೋಮವಾರ ನವದೆಹಲಿಯಲ್ಲಿ ರಕ್ಷಣಾ ಕ್ಷೇತ್ರದ ಸಹಕಾರ ಕುರಿತು ದ್ವಿಪಕ್ಷೀಯ ಚರ್ಚೆ ನಡೆಸಿದರು –ಪಿಟಿಐ ಚಿತ್ರ

ಮಹಾಭಾರತದ 'ಶಕುನಿ' ಗೂಫಿ ಪೈಂಟಲ್ ಇನ್ನಿಲ್ಲ

ಮುಂಬೈ: 'ಮಹಾಭಾರತ' ಧಾರಾವಾಹಿಯ 'ಶಕುನಿ ಮಾಮಾ' ಖ್ಯಾತಿಯ, ಸಿನಿಮಾ ಹಾಗೂ ಕಿರುತೆರೆ ನಟ ಗೂಫಿ ಪೈಂಟಲ್ (ಸರಬ್ಜಿತ್ ಸಿಂಗ್ ಪೈಂಟಲ್) (79) ಅವರು ಸೋಮವಾರ ಮುಂಬೈನಲ್ಲಿ ನಿಧನರಾಗಿದ್ದಾರೆ.

ಗೂಫಿ ಅವರಿಗೆ ತಮ್ಮ, ಹಾಸ್ಯ ಕಲಾವಿದ ಕನ್ವರ್‌ಜಿತ್ ಸಿಂಗ್ ಪೈಂಟಲ್, ಪುತ್ರ, ಸೊಸೆ ಹಾಗೂ ಮೊಮ್ಮಗು ಇದ್ದಾರೆ. 'ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದ ಅವರನ್ನು ಅಂಧೇರಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಸೋಮವಾರ ಮುಂಜಾನೆ ನಿಧನ ಹೊಂದಿದರು' ಎಂದು ಕುಟುಂಬದ ಮೂಲಗಳು ತಿಳಿಸಿವೆ.

80 ದಶಕದಲ್ಲಿ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಚಿತ್ರ ನಿರ್ಮಾಪಕ ಬಿ.ಆರ್. ಚೋಪ್ರಾ ನಿರ್ಮಾಣದ 'ಮಹಾಭಾರತ' ಧಾರಾವಾಹಿಯಲ್ಲಿನ ಶಕುನಿ ಮಾಮಾ ಪಾತ್ರವು ಗೂಫಿ ಅವರಿಗೆ ಜನಪ್ರಿಯತೆ ತಂದುಕೊಟ್ಟಿತ್ತು.

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3 ಮತ್ತು 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001. E-Mail: splocaima21@gmail.com ದೂರವಾಣಿ ಸಂಖ್ಯೆ : 080–29565353, 29604556

No. SPLOCA/ADM/GEN/06/2023-24 Date: 02/06/2023

ಟೆಂಡರ್ ಪ್ರಕಟಣೆ

Under the powers conferred under sec 6(3) of the KPIDFE act THE SPECIAL OFFICER AND COMPETENT AUTHORITY, IMA & OTHER KPIDFE SCAM CASES is inviting pre qualification tender for EoI to empanel eligible valuation agencies or individuals subjected to the final approval of the Government.

Interested agencies and/or individuals may apply only if they are qualified as per the condition of the wealth tax act and ICAI guidelines 2018 which are outlined in the tender document, uploaded in the e-procurement portal.

ವೇಳಾಪಟ್ಟಿ

ಇ– ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್: https://eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭದ ದಿನಾಂಕ:	05.06.2023
ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ :	09.06.2023 ಸಂಜೆ 5.00 ಗಂಟೆಯವರೆಗೆ
ಪ್ರಿ–ಬಿಡ್ ಮೀಟಿಂಗ್ ದಿನಾಂಕ :	12.06.2023 ಬೆಳಿಗ್ಗೆ 11.00 ಗಂಟೆಗೆ
ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ :	14.06.2023 ಸಂಜೆ 5.00 ಗಂಟೆಯವರೆಗೆ
ಇ.ಒ.ಐಗಳನ್ನು ತೆರೆಯುವ ದಿನಾಂಕ :	16.06.2023 ಮಧ್ಯಾಹ್ನ 12.00 ಗಂಟೆಯವರೆಗೆ
ಮೂಲ ದಾಖಲೆಗಳ ಪರಿಶೀಲನೆಯ ದಿನಾಂಕ:	18.06.2023ರಂದು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ದಾಖಲೆಗಳಲ್ಲಿ ಮಾಡಲಾಗುತ್ತದೆ.
ಎಂಪ್ಯಾನೆಲ್‌ಮೆಂಟ್ ಅಧಿಸೂಚನೆ	ತಿಳಿಸಲಾಗುವುದು

For any query contact: O/o SPLOCA, IMA & OTHER KPIDFE SCAM CASES, 3rd floor, podium block, V V Towers, Bengaluru – 560001. e-mail: **splocaima21@gmail.com**, Contact: 080-29565353 / 9902006121. Details regarding Tender terms and conditions are available at e-procurement portal **https://kppp.karnataka.gov.in/#/portal/portal-home.**

ಸಹಿ/–

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ

ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು

DIPR/CP/172/Zenkar/2023-24

ಫ್ರೆಂಚ್ ಓಪನ್ ಟೆನಿಸ್: ಹೋಲ್ಗರ್ ರೂನ್, ಗಾಫ್‌ಗೆ ಗೆಲುವು

ಎಂಟರ ಘಟ್ಟಕ್ಕೆ ರೂಡ್, ಜಬೇರ್

ಪ್ಯಾರಿಸ್ (ರಾಯಿಟರ್ಸ್): ಚಿಲಿಯ ನಿಕೊಲಸ್ ಜ್ಯಾರಿ ಒಡ್ಡಿದ ಸವಾಲನ್ನು ಆಕ್ರಮಣಕಾರಿ ಆಟದ ಮೂಲಕ ಬದಿಗೊತ್ತಿದ ನಾರ್ವೆಯ ಕ್ಯಾಸ್ಪರ್ ರೂಡ್, ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟರು.

ಫಿಲಿಪ್ ಶಾತ್ರಿಯೆರ್ ಕೋರ್ಟ್‌ನಲ್ಲಿ ಸೋಮವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ನಾಲ್ಕನೇ ಸುತ್ತಿನ ಪಂದ್ಯವನ್ನು ಕಳೆದ ಬಾರಿಯ ರನ್ನರ್ ಅಪ್ ರೂಡ್, 7-6, 7-5, 7-5 ರಲ್ಲಿ ಗೆದ್ದುಕೊಂಡರು.

'ಕ್ಲೇ ಕೋರ್ಟ್ ಸ್ಪೆಶಲಿಸ್ಟ್' ಎನಿಸಿರುವ ನಿಕೊಲಸ್ ವಿರುದ್ಧದ ಪಂದ್ಯದಲ್ಲಿ ಹಿಡಿತ ಸಾಧಿಸಲು ರೂಡ್ ಸಾಕಷ್ಟು ಪ್ರಯಾಸಪಟ್ಟರು. ಈ ಹೋರಾಟ 3 ಗಂಟೆ 20 ನಿಮಿಷ ನಡೆಯಿತು.

ಮೊದಲ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ ಗೆದ್ದುಕೊಂಡ ರೂಡ್, ಎರಡನೇ ಸೆಟ್‌ನಲ್ಲಿ 1-4 ರಲ್ಲಿ ಹಿನ್ನಡೆ ಅನುಭವಿಸಿದ್ದರು. ಆ ಬಳಿಕ ಮರುಹೋರಾಟ ನಡೆಸಿ ಮುಂದಿನ ಏಳು ಗೇಮ್‌ಗಳಲ್ಲಿ ಆರನ್ನು ಗೆದ್ದು, ಪಂದ್ಯದ ಮೇಲೆ ಹಿಡಿತ ಸಾಧಿಸಿದರು.

ನಾಲ್ಕನೇ ಶ್ರೇಯಾಂಕದ ರೂಡ್, ಕ್ವಾರ್ಟರ್ ಫೈನಲ್‌ನಲ್ಲಿ ಡೆನ್ಮಾರ್ಕ್‌ನ ಹೋಲ್ಗರ್ ರೂನ್ ವಿರುದ್ಧ ಸೆಣಸಾಡುವರು. ವಿಶ್ವದ ಆರನೇ ರ‍್ಯಾಂಕ್‌ನ ಆಟಗಾರ ರೂನ್ 7-6, 3-6, 6-4, 1-6, 7-6 ರಿಂದ ಅರ್ಜೆಂಟೀನಾದ ಫ್ರಾನ್ಸಿಸ್ಕೊ ಸೆರುಂಡೊಲೊ ವಿರುದ್ಧ ಗೆದ್ದರು.

ಕ್ವಾರ್ಟರ್ ಫೈನಲ್‌ಗೆ ಜಬೇರ್: ಏಳನೇ ಶ್ರೇಯಾಂಕದ ಆಟಗಾರ್ತಿ ಟ್ಯುನೀಷಿಯಾದ ಆನ್ಸ್ ಜಬೇರ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 6-3, 6-1 ರಲ್ಲಿ ಅಮೆರಿಕದ ಬರ್ನಾರ್ಡಾ ಪೆರಾ ಅವರನ್ನು ಮಣಿಸಿದರು.

ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಆನ್ಸ್ ಜಬೇರ್ ಅವರ ಬ್ಯಾಕ್‌ಹ್ಯಾಂಡ್ ರಿಟರ್ನ್ –ಎಎಫ್‌ಪಿ ಚಿತ್ರ

ಈ ವರ್ಷದ ಆರಂಭದಲ್ಲಿ ಮಂಡಿಯ ಶಸ್ತ್ರಚಿಕಿತ್ಸೆಗೆ ಒಳಗಾಗಿ ಚೇತರಿಸಿಕೊಂಡಿದ್ದ ಜಬೇರ್ ಉತ್ತಮ ಲಯದಲ್ಲಿ ಆಡಿದರಲ್ಲದೆ, 1 ಗಂಟೆ ಮೂರು ನಿಮಿಷಗಳಲ್ಲಿ ಗೆಲುವು ಸಾಧಿಸಿದರು. ಮೊದಲ ಸೆಟ್‌ನಲ್ಲಿ 4-1 ರಲ್ಲಿ ಮುನ್ನಡೆ ಸಾಧಿಸಿದ ಜಬೇರ್, ಎದುರಾಳಿಯ ಮೇಲೆ ಒತ್ತಡ ಹೇರುವಲ್ಲಿ ಯಶಸ್ವಿಯಾದರು. ಆ ಬಳಿಕ ಎರಡು ಗೇಮ್ ಗಿಟ್ಟಿಸಿ 35 ನಿಮಿಷಗಳಲ್ಲಿ ಸೆಟ್ ಗೆದ್ದುಕೊಂಡರು. ಶಕ್ತಿಶಾಲಿ ಹೊಡೆತಗಳ ಮೂಲಕ 2ನೇ ಸೆಟ್‌ನಲ್ಲಿ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಿದ ಅವರು, ಕೇವಲ ಒಂದು ಗೇಮ್ ಮಾತ್ರ ಬಿಟ್ಟುಕೊಟ್ಟು ಮುಂದಿನ ಸುತ್ತು ಪ್ರವೇಶಿಸಿದರು.

ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಜಬೇರ್, ಕ್ವಾರ್ಟರ್ ಫೈನಲ್‌ನಲ್ಲಿ ಬ್ರೆಜಿಲ್‌ನ ಬ್ಯಾತ್ರಿಜ್ ಹದಾದ್ ಮಯಾ ಅವರನ್ನು ಎದುರಿಸುವರು.

ದೀರ್ಘ ಹೋರಾಟದಿಂದ ಪ್ರೇಕ್ಷಕರನ್ನು ರಂಜಿಸಿದ ಪಂದ್ಯದಲ್ಲಿ ಮಯಾ 6-7, 6-3, 7-5 ರಲ್ಲಿ ಸ್ಪೇನ್‌ನ ಸಾರಾ ಸೊರಿಬೆಸ್ ಅವರನ್ನು ಮಣಿಸಿದರು. ಮೊದಲ ಸೆಟ್ ಸೋತು, ಎರಡನೇ ಸೆಟ್‌ನಲ್ಲಿ 0-3 ರಲ್ಲಿ ಹಿನ್ನಡೆಯಲ್ಲಿದ್ದ ಬ್ರೆಜಿಲ್‌ನ 27 ವರ್ಷದ ಆಟಗಾರ್ತಿ ಅಮೋಘ ಮರುಹೋರಾಟ ನಡೆಸುವಲ್ಲಿ ಯಶಸ್ವಿಯಾದರು.

ಮರಿಯಾ ಬುಯೆನೊ (1968 ರಲ್ಲಿ) ಅವರ ಬಳಿಕ ಗ್ರ್ಯಾನ್ ಸ್ಲಾಮ್ ಟೂರ್ನಿಯ ಎಂಟರಘಟ್ಟ ಪ್ರವೇಶಿಸಿದ ಬ್ರೆಜಿಲ್‌ನ ಮೊದಲ ಆಟಗಾರ್ತಿ ಎಂಬ ಶ್ರೇಯಕ್ಕೂ ಅವರು ಪಾತ್ರರಾದರು.

3 ಗಂಟೆ 51 ನಿಮಿಷ ನಡೆದ ಪೈಪೋಟಿಯ ಆರಂಭದಲ್ಲಿ ಸೊರಿಬೆಸ್ ಹಿಡಿತ ಸಾಧಿಸಿದರೂ, ಬಳಿಕ ಲಯ ಕಳೆದುಕೊಂಡರು.

ಇನ್ನೊಂದು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕಳೆದ ಬಾರಿಯ ರನ್ನರ್ ಅಪ್ ಅಮೆರಿಕದ ಕೊಕೊ ಗಾಫ್ 7-5, 6-2 ರಲ್ಲಿ ಸ್ಲೊವಾಕಿಯದ ಅನಾ ಕರೊಲಿನಾ ಸ್ಮಡ್ಲೊವಾ ವಿರುದ್ಧ ಗೆದ್ದರು.

ಹಾಲಿ ಚಾಂಪಿಯನ್ ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರೂ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. 16ರ ಘಟ್ಟದ ಪಂದ್ಯದಲ್ಲಿ ಶ್ವಾಂಟೆಕ್ ಮೊದಲ ಸೆಟ್‌ನಲ್ಲಿ 4-1 ರಲ್ಲಿ ಮುನ್ನಡೆ ಸಾಧಿಸಿದ್ದಾಗ ಉಕ್ರೇನ್‌ನ ಎದುರಾಳಿ ಲೆಸಿಯಾ ಸುರೆಂಕೊ ಅವರು ಅನಾರೋಗ್ಯದ ಕಾರಣ ಹಿಂದೆ ಸರಿದರು.

ತಳವೂರಿ ನಿಂತು ಆಡಲು ಸಿದ್ಧರಾಗಿ

ಡಬ್ಲ್ಯುಟಿಸಿ ಫೈನಲ್ ಪಂದ್ಯ ನಾಳೆಯಿಂದ: ಬ್ಯಾಟರ್‌ಗಳಿಗೆ ರೋಹಿತ್ ಕಿವಿಮಾತು

ಲಂಡನ್ (ರಾಯಿಟರ್ಸ್): ಬ್ಯಾಟರ್‌ಗಳಿಗೆ ಸವಾಲೊಡ್ಡುವ ಇಂಗ್ಲೆಂಡ್‌ನ ಪಿಚ್‌ಗಳಲ್ಲಿ ಟೆಸ್ಟ್ ಮಾದರಿಯಲ್ಲಿ ಯಶಸ್ಸು ಸಾಧಿಸಬೇಕಾದರೆ, ಕ್ರೀಸ್‌ನಲ್ಲಿ ತುಂಬಾ ಹೊತ್ತು ಬೇರೂರಿ ನಿಂತು ಆಡಲು ಸಿದ್ಧರಿರಬೇಕು ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ಬುಧವಾರ ಆರಂಭವಾಗಲಿರುವ ಡಬ್ಲ್ಯುಟಿಸಿ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ವಿರುದ್ಧ ಪೈಪೋಟಿ ನಡೆಸಲಿದೆ. ಕಳೆದ ವಾರದವರೆಗೆ ಐಪಿಎಲ್‌ನಲ್ಲಿ ಆಡಿದ್ದ ಭಾರತದ ಆಟಗಾರರಿಗೆ ಟೆಸ್ಟ್ ಪಂದ್ಯದ ಮಾದರಿಗೆ ಒಗ್ಗಿಕೊಳ್ಳಬೇಕಿದೆ. ಆಸ್ಟ್ರೇಲಿಯಾದ ವೇಗಿಗಳಾದ ಪ್ಯಾಟ್ ಕಮಿನ್ಸ್ ಮತ್ತು ಮಿಚೆಲ್ ಸ್ಟಾರ್ಕ್ ಅವರ 'ಸ್ವಿಂಗ್' ಬೌಲಿಂಗ್ ಎದುರಿಸುವುದು ರೋಹಿತ್ ಪಡೆಗೆ ಭಿನ್ನ ಅನುಭವ ನೀಡಲಿದೆ.

ರೋಹಿತ್ ಅವರು ಇಂಗ್ಲೆಂಡ್‌ನ ಪರಿಸ್ಥಿತಿಗೆ ಹೊಂದಿಕೊಂಡು ಆಡುವ ಕಲೆಯನ್ನು ಕರಗತಮಾಡಿಕೊಂಡಿದ್ದಾರೆ. 2019ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಒಂಬತ್ತು ಇನಿಂಗ್ಸ್‌ಗಳಲ್ಲಿ ಅವರು ಐದು ಶತಕ ಹೊಡೆದಿದ್ದರು. ಎರಡು ವರ್ಷಗಳ ಹಿಂದೆ ಓವಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ನಡೆದಿದ್ದ ಟೆಸ್ಟ್‌ನಲ್ಲಿ ಶತಕ ಗಳಿಸಿದ್ದರು.

'ಇಂಗ್ಲೆಂಡ್‌ನ ಪರಿಸ್ಥಿತಿ ಸಾಮಾನ್ಯವಾಗಿ ಬ್ಯಾಟರ್‌ಗಳಿಗೆ ಸಾಕಷ್ಟು ಸವಾಲು ಒಡ್ಡುತ್ತದೆ. ಕ್ರೀಸ್‌ನಲ್ಲಿ ತುಂಬಾ ಹೊತ್ತು ತಳವೂರಿ ನಿಲ್ಲಲು ತಕ್ಕ ಸಿದ್ಧತೆ ನಡೆಸಿದ್ದರೆ ಮಾತ್ರ ಒಬ್ಬ ಬ್ಯಾಟರ್ ಆಗಿ ನಿಮಗೆ ಯಶಸ್ಸು ಗಳಿಸಬಹುದು' ಎಂದು ಅವರು ಸೋಮವಾರ ಹೇಳಿದ್ದಾರೆ.

'ನಾನು ಇಂಗ್ಲೆಂಡ್‌ನಲ್ಲಿ ಬ್ಯಾಟಿಂಗ್ ಮಾಡುವಾಗ ಅರಿತುಕೊಂಡ ಒಂದು ವಿಷಯವೆಂದರೆ, ಇಲ್ಲಿ ಹವಾಮಾನ ಆಗಿಂದಾಗ್ಗೆ ಬದಲಾಗುತ್ತಿರುತ್ತದೆ. ಆದ್ದರಿಂದ ದೀರ್ಘ ಅವಧಿಯವರೆಗೆ ಆಡಬೇಕಾದರೆ ಏಕಾಗ್ರತೆ ಹೊಂದಿರಬೇಕು. ಟೆಸ್ಟ್ ಮಾದರಿಯಲ್ಲಿ ನಿಮಗೆ ಎದುರಾಗುವ ಸವಾಲು ಅದು. ಪರಿಸ್ಥಿತಿಗೆ ಹೊಂದಿಕೊಂಡ ಬಳಿಕವೇ ಬೌಲರ್‌ಗಳ ಮೇಲೆ ಪ್ರಭುತ್ವ ಸಾಧಿಸಲು ಮುಂದಾಗಬೇಕು' ಎಂದು ಸಲಹೆ ನೀಡಿದ್ದಾರೆ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅಭ್ಯಾಸ ನಡೆಸಿದರು –ಬಿಸಿಸಿಐ ಟ್ವಿಟರ್ ಚಿತ್ರ

ಭಾರತದ ಬೌಲಿಂಗ್ ಎದುರಿಸಲು ಸಿದ್ಧ–ಸ್ಮಿತ್: ಭಾರತದ ವೇಗಿಗಳು ಮತ್ತು ಸ್ಪಿನ್ನರ್‌ಗಳ ದಾಳಿಯನ್ನು ಎದುರಿಸಲು ನಮ್ಮ ತಂಡ ಸಿದ್ಧವಾಗಿದೆ ಎಂದು ಆಸ್ಟ್ರೇಲಿಯಾ ತಂಡದ ಬ್ಯಾಟರ್ ಸ್ಟೀವ್ ಸ್ಮಿತ್ ಹೇಳಿದ್ದಾರೆ.

'ಭಾರತ ತಂಡವು ಉತ್ತಮ ವೇಗಿಗಳನ್ನು ಹೊಂದಿದೆ. ಶಮಿ ಮತ್ತು ಮೊಹಮ್ಮದ್ ಸಿರಾಜ್ ಅವರು ಪ್ರಮುಖರಾಗಿದ್ದು, ಉತ್ತಮ ಕೌಶಲ ಹೊಂದಿದ್ದಾರೆ. ಡ್ಯೂಕ್ಸ್ ಚೆಂಡುಗಳು ಅವರ ಬೌಲಿಂಗ್ ಶೈಲಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ ಎಂಬುದು ನನ್ನ ಭಾವನೆ' ಎಂದಿದ್ದಾರೆ.

'ಎಲ್ಲ ಪರಿಸ್ಥಿತಿಗಳಲ್ಲೂ ಪರಿಣಾಮಕಾರಿ ಎನಿಸಬಲ್ಲ ಸ್ಪಿನ್ನರ್‌ಗಳೂ ಅವರಲ್ಲಿದ್ದಾರೆ. ಆದ್ದರಿಂದ ಒಟ್ಟಾರೆಯಾಗಿ ಭಾರತದ ಬೌಲಿಂಗ್ ವಿಭಾಗ ಬಲಿಷ್ಠವಾಗಿದ್ದು, ನಾವು ಚೆನ್ನಾಗಿ ಆಡಬೇಕಿದೆ' ಎಂದು ನುಡಿದಿದ್ದಾರೆ.

ಟೆಸ್ಟ್ ಕ್ರಿಕೆಟ್ ಭವಿಷ್ಯ: ತುಸು ಆತಂಕ– ಸ್ಮಿತ್

ಲಂಡನ್ (ಪಿಟಿಐ): ಟೆಸ್ಟ್ ಕ್ರಿಕೆಟ್ ಭವಿಷ್ಯದ ಬಗ್ಗೆ ಆಸ್ಟ್ರೇಲಿಯಾದ ಪ್ರಮುಖ ಬ್ಯಾಟ್ಸ್‌ಮನ್ ಸ್ಟೀವ್ ಸ್ಮಿತ್ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಇನ್ನೆರಡು ದಿನ ಉಳಿದಿರುವಂತೆ ಅವರಿಂದ ಆತಂಕದ ಮಾತುಗಳು ಬಂದಿವೆ.

ವಿಶ್ವದ ವಿವಿಧೆಡೆ ಫ್ರಾಂಚೈಸಿ ಕ್ರಿಕೆಟ್‌ನ ವೇಗದ ಬೆಳವಣಿಗೆಯಿಂದ ಅಂತರರಾಷ್ಟ್ರೀಯ ವೇಳಾಪಟ್ಟಿಯ ಮೇಲೆ ಒತ್ತಡ ಹೆಚ್ಚುತ್ತಿದೆ. ಸಣ್ಣ ರಾಷ್ಟ್ರಗಳು ಸಾಕಷ್ಟು ಟೆಸ್ಟ್ ಪಂದ್ಯಗಳನ್ನು ಆಡುತ್ತಿಲ್ಲ. ಭಾರತ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಮಾತ್ರ ದೀರ್ಘಾವಧಿಯ ಕ್ರಿಕೆಟ್‌ಗೂ ಉತ್ತೇಜನ ನೀಡುತ್ತಿವೆ.

'ನಿಜ, ಟೆಸ್ಟ್ ಕ್ರಿಕೆಟ್ ಭವಿಷ್ಯದ ಬಗ್ಗೆ ನನಗೆ ಸ್ವಲ್ಪ ಆತಂಕವಿದೆ. ಟೆಸ್ಟ್ ಕ್ರಿಕೆಟ್ ಉಳಿಯಲಿದೆ ಎಂಬ ವಿಶ್ವಾಸವಿದೆ' ಎಂದು ಭಾರತ ವಿರುದ್ಧ ಬುಧವಾರ ಆರಂಭವಾಗುವ ಡಬ್ಲ್ಯುಟಿಸಿ ಫೈನಲ್‌ಗೆ ಪೂರ್ವಭಾವಿಯಾಗಿ ಸ್ಮಿತ್ ಹೇಳಿದರು.

ಆಸ್ಟ್ರೇಲಿಯಾ ತಂಡದವರು ಸೋಮವಾರ ಅಭ್ಯಾಸ ನಡೆಸಿದರು. ಗಾಯಾಳು ಜೋಸ್ ಹ್ಯಾಸಲ್‌ವುಡ್ ಬದಲು ಸ್ಕಾಟ್ ಬೋಲ್ಯಾಂಡ್ ಅವರು ಆಡುವ ಸಂಕೇತಗಳೂ ಕಂಡುಬಂದವು. ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಜೊತೆಗೆ ಆಲ್‌ರೌಂಡ್ ಕ್ಯಾಮರಾನ್ ಗ್ರೀನ್ ನಾಲ್ಕನೇ ವೇಗದ ಬೌಲರ್ ಆಯ್ಕೆ ಎನಿಸಲಿದ್ದಾರೆ.

ಲಂಡನ್‌ನ ವಾತಾವರಣ ಕಳೆದ ವಾರ ಹದವಾದ ಬಿಸಿಲಿನಿಂದ ಕೂಡಿತ್ತು. ಆದರೆ ಸೋಮವಾರ ಮೋಡ ಮತ್ತು ತಂಪಾದ ವಾತಾವರಣ ಕಂಡುಬಂದಿದೆ.

ಸಂಕ್ಷಿಪ್ತ ಸುದ್ದಿ

ಮಲೇಷ್ಯಾ ವಿರುದ್ಧ ಭಾರತಕ್ಕೆ ಗೆಲುವು

ಕಾಕಮಿಗಾರಾ, ಜಪಾನ್ (ಪಿಟಿಐ): ಮುಮ್ತಾಜ್ ಖಾನ್ ಮತ್ತು ದೀಪಿಕಾ ಗಳಿಸಿದ ಗೋಲುಗಳ ನೆರವಿನಿಂದ ಭಾರತ ತಂಡವು, ಮಹಿಳಾ ಜೂನಿಯರ್ ಏಷ್ಯ ಕಪ್ ಹಾಕಿ ಟೂರ್ನಿಯಲ್ಲಿ ಸೋಮವಾರ 2–1 ಗೋಲುಗಳಿಂದ ಮಲೇಷ್ಯಾ ತಂಡದ ವಿರುದ್ಧ ಪ್ರಯಾಸದ ಗೆಲುವು ದಾಖಲಿಸಿತು.

ಶನಿವಾರ ಮೊದಲ ಪಂದ್ಯದಲ್ಲಿ ಉಜ್ಬೇಕಿಸ್ತಾನ ತಂಡವನ್ನು 22–0 ಗೋಲುಗಳಿಂದ ಸದೆಬಡಿದು ವಿಶ್ವಾಸ ಹೆಚ್ಚಿಸಿಕೊಂಡಿದ್ದ ಭಾರತ ತಂಡಕ್ಕೆ ಮಲೇಷ್ಯಾ ಪ್ರಬಲ ಸ್ಪರ್ಧೆ ನೀಡಿತು. ಮಲೇಷ್ಯಾದ ಡಯಾನ್ ನಜೇರಿ 6ನೇ ನಿಮಿಷದಲ್ಲಿ ಗೋಲು ಹೊಡೆದು ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಆದರೆ, ಮುಮ್ತಾಜ್ ಖಾನ್ 10ನೇ ನಿಮಿಷ ಗೋಲು ಹೊಡೆದು ಸಮಬಲ ಸಾಧಿಸಿದರು. ದೀಪಿಕಾ 26ನೇ ನಿಮಿಷದಲ್ಲಿ ಗೋಲು ಹೊಡೆದು ಭಾರತದ ಮುನ್ನಡೆ ಹೆಚ್ಚಿಸಿದರು.

ಭಾರತ ಜೂನ್ 6ರಂದು ದಕ್ಷಿಣ ಕೊರಿಯಾವನ್ನು ಎದುರಿಸಲಿದೆ.

ಗಾಲ್ಫ್: ಅದಿತಿಗೆ ಜಂಟಿ 4ನೇ ಸ್ಥಾನ

ನ್ಯೂಜೆರ್ಸಿ (ಪಿಟಿಐ): ಭಾರತದ ಅದಿತಿ ಅಶೋಕ್ ಅವರು ಭಾನುವಾರ ಇಲ್ಲಿ ಕೊನೆಗೊಂಡ ಮಿಜುಹೊ ಅಮೆರಿಕಸ್ ಓಪನ್ ಗಾಲ್ಫ್ ಟೂರ್ನಿಯಲ್ಲಿ ಜಂಟಿ ನಾಲ್ಕನೇ ಸ್ಥಾನ ಪಡೆದರು. ಬೆಂಗಳೂರಿನ ಗಾಲ್ಫರ್ ಎಲ್‌ಪಿಜಿಎ ಟೂರ್‌ನ ಸತತ ಮೂರನೇ ಟೂರ್ನಿಯಲ್ಲಿ 'ಟಾಪ್ 5'ರಲ್ಲಿ ಕಾಣಿಸಿಕೊಂಡ ಸಾಧನೆ ಮಾಡಿದರು.

ಲಿಬರ್ಟಿ ನ್ಯಾಷನಲ್ ಗಾಲ್ಫ್ ಕೋರ್ಸ್‌ನಲ್ಲಿ ನಡೆದ ಟೂರ್ನಿಯ ಅಂತಿಮ ಸುತ್ತಿನ ಸ್ಪರ್ಧೆಯನ್ನು ಅವರು 74 ಸ್ಟ್ರೋಕ್‌ಗಳೊಂದಿಗೆ ಕೊನೆಗೊಳಿಸಿದರು. ಒಟ್ಟಾರೆಯಾಗಿ 281 ಸ್ಟ್ರೋಕ್‌ಗಳೊಂದಿಗೆ ಜಪಾನ್‌ನ ಅಯಾಕ ಫುರುಯೆ ಮತ್ತು ಕೊರಿಯಾದ ಜಿ ಯುನ್ ಹೀ ಅವರೊಂದಿಗೆ ನಾಲ್ಕನೇ ಸ್ಥಾನ ಹಂಚಿಕೊಂಡರು.

ರೋಸ್ ಜಾಂಗ್‌ಗೆ ಪ್ರಶಸ್ತಿ: ಅಮೆರಿಕದ ರೋಸ್ ಜಾಂಗ್ ಅವರು ಇಲ್ಲಿ ಚಾಂಪಿಯನ್ ಆದರಲ್ಲದೆ, ಎಲ್‌ಪಿಜಿಎ ಟೂರ್‌ನ ಪದಾರ್ಪಣೆ ಟೂರ್ನಿಯಲ್ಲೇ ಪ್ರಶಸ್ತಿ ಗೆದ್ದ ಸಾಧನೆ ಮಾಡಿದರು. ಜಾಂಗ್ ಮತ್ತು ಅಮೆರಿಕದವರೇ ಆದ ಜೆನಿಫರ್ ಕುಪ್ಚೊ ತಲಾ 279 ಸ್ಕೋರ್‌ಗಳೊಂದಿಗೆ ಸಮಬಲ ಸಾಧಿಸಿದ್ದರು. 'ಪ್ಲೇ ಆಫ್'ನಲ್ಲಿ ಜಾಂಗ್ ಗೆದ್ದರು.

ಕಿಮ್ಸ್ ಕಪ್ ಚೆಸ್

ಹುಬ್ಬಳ್ಳಿ: ಕಿಮ್ಸ್ ಹುಬ್ಬಳ್ಳಿಯ ಸ್ಟೂಡೆಂಟ್ಸ್ ಸ್ಪೋರ್ಟ್ಸ್ ಅಸೋಸಿಯೇಷನ್, ಹುಬ್ಬಳಿ ಚೆಸ್ ಅಕಾಡಮಿ ಸಹಯೋಗದೊಂದಿಗೆ ಜೂನ್ 11 ರಂದು 'ಕಿಮ್ಸ್ ಕಪ್ ಕರ್ನಾಟಕ ಚೆಸ್ ಪಂದ್ಯಾವಳಿ' ಏರ್ಪಡಿಸಿದೆ.

9, 12, 16 ವರ್ಷದೊಳಗಿನ ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ಟೂರ್ನಿ ಯಲ್ಲಿ ಭಾಗವಹಿಸಬಹುದು.

ವಿದ್ಯಾನಗರ ಕಿಮ್ಸ್‌ನಲ್ಲಿರುವ ಅಡ್ಮಿನಿಸ್ಟ್ರೇಟಿವ್ ಬ್ಲಾಕ್‌ನಲ್ಲಿ ಸ್ಪರ್ಧೆಯ ದಿನ ಬೆಳಿಗ್ಗೆ 8.30ಕ್ಕೆ ಶಾಲೆ ಮತ್ತು ಮಹಾವಿದ್ಯಾಲಯದ ಗುರುತಿನ ಪತ್ರದೊಂದಿಗೆ ವರದಿ ಮಾಡಿಕೊಳ್ಳಬೇಕು. ಮಾಹಿತಿಗೆ ವಿಭಾಗದ ಮುಖ್ಯಸ್ಥ ಡಾ.ಆದಂ ನದಾಫ್ (94494 35376) ಅಥವಾ ಸಂಸ್ಥೆಯ ಸ್ಥಾಪಕರಾದ ಕೆ.ವಿ.ಶ್ರೀಪಾದ್ (98864 97747) ರನ್ನು ಸಂಪರ್ಕಿಸಬಹುದು.

ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್

ಧನುಷ್ ಶ್ರೀಕಾಂತ್‌ಗೆ ಚಿನ್ನ

ಜೂಲ್, ಜರ್ಮನಿ (ರಾಯಿಟರ್ಸ್): ಭಾರತದ ಧನುಷ್ ಶ್ರೀಕಾಂತ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್‌ನ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

ಸೋಮವಾರ ನಡೆದ ಸ್ಪರ್ಧೆಯಲ್ಲಿ ಧನುಷ್ ಒಟ್ಟು 249.4 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಪಡೆದರು. ಧನುಷ್ ಅವರಿಗಿಂತ 1.3 ಪಾಯಿಂಟ್ಸ್‌ಗಳಿಂದ ಹಿಂದೆ ಬಿದ್ದ ಸ್ವೀಡನ್‌ನ ಪಾಂಟಸ್ ಕಲಿನ್ ಬೆಳ್ಳಿ ಜಯಿಸಿದರೆ, ಫ್ರಾನ್ಸ್‌ನ ರೊಮೇನ್ ಆಫ್ರೆರ್ ಕಂಚು ಪಡೆದರು. ಈ ಕೂಟದಲ್ಲಿ ಭಾರತಕ್ಕೆ ಲಭಿಸಿದ ಮೂರನೇ ಚಿನ್ನ ಇದು.

ಸ್ಕೀಟ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಭಾರತ ಕಂಚು ಗೆದ್ದುಕೊಂಡಿತು. ಹರ್‌ಮೆಹರ್ ಮತ್ತು ಸಂಜನಾ ಸೂದ್ ಅವರು ಮೂರನೇ ಸ್ಥಾನಕ್ಕಾಗಿ ನಡೆದ ಹಣಾಹಣಿಯಲ್ಲಿ ಸ್ವೀಡನ್‌ನ ಡೇವಿಡ್ ಜಾನ್ಸನ್ ಮತ್ತು ಫೆಲಿಸಿಯಾ ರಾಸ್ ವಿರುದ್ಧ ಗೆದ್ದರು.

ಧನುಷ್ ಶ್ರೀಕಾಂತ್ –ಎಸ್‌ಎಐ ಮೀಡಿಯಾ ಟ್ವಿಟರ್ ಚಿತ್ರ

ಭಾರತ ತಂಡ ಮೂರು ಚಿನ್ನ, ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಎರಡು ಚಿನ್ನ ಮತ್ತು ಒಂದು ಬೆಳ್ಳಿಯ ಪದಕದೊಂದಿಗೆ ಅಮೆರಿಕ ಎರಡನೇ ಸ್ಥಾನದಲ್ಲಿದೆ.

ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ಧನುಷ್ ಸೇರಿದಂತೆ ಭಾರತದ ಮೂವರು ಫೈನಲ್ ಸುತ್ತು ಪ್ರವೇಶಿಸಿದ್ದರು.

ಧನುಷ್ ಅವರು ಅರ್ಹತಾ ಸುತ್ತಿನಲ್ಲಿ 628.4 ಪಾಯಿಂಟ್ಸ್‌ಗಳೊಂದಿಗೆ ಆರನೆಯವರಾಗಿ ಅಂತಿಮ ಸುತ್ತು ತಲುಪಿದ್ದರು. ಪ್ರಥಮ್ ಭಡಾನಾ ಅವರು 628.7 ಪಾಯಿಂಟ್ಸ್‌ಗಳೊಂದಿಗೆ ಐದನೆಯವರಾಗಿ ಮತ್ತು ಅಭಿನವ್ ಶಾ (626.7) ಎಂಟನೇ ಸ್ಥಾನ ಪಡೆದು ಫೈನಲ್‌ಗೆ ಲಗ್ಗೆಯಿಟ್ಟಿದ್ದರು.

ಆದರೆ ಅಂತಿಮ ಸುತ್ತಿನಲ್ಲಿ ನಿಖರ ಗುರಿ ಹಿಡಿಯುವಲ್ಲಿ ಎಡವಿದ ಅಭಿನವ್ ಏಳನೇ ಸ್ಥಾನ ಪಡೆದರೆ, ಪ್ರಥಮ್ ನಾಲ್ಕನೇ ಸ್ಥಾನ ಪಡೆದು, ಅಲ್ಪ ಅಂತರದಲ್ಲಿ ಪದಕ ತಪ್ಪಿಸಿಕೊಂಡರು.

ಬ್ಯಾಡ್ಮಿಂಟನ್: ಸಿಂಗಪುರ ಓಪನ್ ಇಂದಿನಿಂದ

ಸಿಂಧು, ಪ್ರಣಯ್ ಮೇಲೆ ನಿರೀಕ್ಷೆ

ಸಿಂಗಪುರ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಸಿಂಗಪುರ ಓಪನ್ ಸೂಪರ್ 750 ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಕಳೆದ ವಾರ ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದ ಸಿಂಧು ಈ ಟೂರ್ನಿಯಲ್ಲಿ ಪುಟಿದೇಳುವ ವಿಶ್ವಾಸ ಹೊಂದಿದ್ದಾರೆ. ಕಳೆದ ವರ್ಷ ಇಲ್ಲಿ ಚಾಂಪಿಯನ್ ಆಗಿದ್ದ ಸಿಂಧು ಈ ಬಾರಿ ಮೊದಲ ಸುತ್ತಿನಲ್ಲಿ ವಿಶ್ವದ ಅಗ್ರ ಕ್ರಮಾಂಕದ ಆಟಗಾರ್ತಿ, ಜಪಾನ್‌ನ ಅಕಾನೆ ಯಮಗುಚಿ ಅವರನ್ನು ಎದುರಿಸಬೇಕಾಗಿದೆ.

ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಚಾಂಪಿಯನ್ ಎಚ್.ಎಸ್. ಪ್ರಣಯ್ ಅವರು, ಜಪಾನ್ ಮೂರನೇ ಕ್ರಮಾಂಕದ ಕೊಡೈ ನರವೋಕಾ ಅವರಿಗೆ ಸವಾಲೊಡ್ಡಲಿದ್ದಾರೆ.

ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಪರಾಭವಗೊಂಡ ಲಕ್ಷ್ಯ ಸೇನ್ ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸ ಹೊಂದಿದ್ದಾರೆ. ಮೊದಲ ಸುತ್ತಿನಲ್ಲಿ ಚೀನಾದ ಚೊ ಟಿಯೆನ್ ಚೆನ್ ಅವರನ್ನು ಎದುರಿಸಲಿದ್ದಾರೆ.

ಪಿ.ವಿ. ಸಿಂಧು

ಎಚ್‌ಎಸ್ ಪ್ರಣಯ್

ಭಾರತದ ಕಿದಂಬಿ ಶ್ರೀಕಾಂತ್, ಪ್ರಿಯಾಂಶು ರಾಜಾವತ್, ಸೈನಾ ನೆಹ್ವಾಲ್ ಕೂಡ ಉತ್ತಮ ಆಟದ ವಿಶ್ವಾಸದಲ್ಲಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ– ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಧ್ರುವ್ ಕಪಿಲಾ–ಎಂ.ಆರ್. ಅರ್ಜುನ್ ಜೋಡಿಯು ಸುಧಾರಿತ ಆಟದ ತವಕದಲ್ಲಿದೆ. ತ್ರೀಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಮಹಿಳೆಯರ ಡಬಲ್ಸ್‌ನಲ್ಲಿ ಕಣಕ್ಕೆ ಇಳಿಯಲಿದೆ.

ರಾಹುಲ್ ದ್ರಾವಿಡ್

ತಂಡದ ಮೇಲೆ ಯಾವುದೇ ಒತ್ತಡವಿಲ್ಲ: ರಾಹುಲ್ ದ್ರಾವಿಡ್

ಲಂಡನ್ (ಪಿಟಿಐ): ಭಾರತ ತಂಡ, ಕಳೆದ ಹತ್ತು ವರ್ಷಗಳಿಂದ ಐಸಿಸಿಯ ಯಾವುದೇ ಟ್ರೋಫಿಯನ್ನು ಗೆದ್ದುಕೊಂಡಿಲ್ಲ. ಆದರೆ ಇದರಿಂದಾಗಿ ತಂಡವು, ಆಸ್ಟ್ರೇಲಿಯಾ ಎದುರಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ವೇಳೆ ಯಾವುದೇ ಒತ್ತಡವನ್ನು ಎದುರಿಸುತ್ತಿಲ್ಲ ಎಂದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅಭಿಪ್ರಾಯಪಟ್ಟಿದ್ದಾರೆ.

ಆದರೆ ತಂಡ ಟ್ರೋಫಿ ಗೆದ್ದರೆ ಬಹಳ ಸಂತಸ ಉಂಟಾಗುತ್ತದೆ. ಎರಡು ವರ್ಷಗಳಿಂದ ಈ ತಂಡವು ಯಶಸ್ಸು ಪಡೆಯಲು ಶ್ರಮಹಾಕುತ್ತ ಬಂದಿದೆ ಎಂದು ತಂಡದ ಮಾಜಿ ನಾಯಕರೂ ಆಗಿರುವ ದ್ರಾವಿಡ್ ಹೇಳಿದರು.

ಭಾರತ 2021ರಲ್ಲಿ ಮೊದಲ ಬಾರಿ ನಡೆದ ಡಬ್ಲ್ಯುಟಿಸಿ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡದ ಎದುರು ಸೋಲನುಭವಿಸಿತ್ತು. ತಂಡ ಪ್ರಮುಖ ಟೂರ್ನಿಗಳ ನಾಕ್‌ಔಟ್ ಪಂದ್ಯಗಳಲ್ಲಿ ಎಡವುತ್ತಿದೆ ಎಂಬ ಟೀಕೆಗಳೂ ಆಗ ಕೇಳಿಬಂದಿದ್ದವು.

'ಐಸಿಸಿ ಟ್ರೋಫಿ ಗೆಲ್ಲಬೇಕೆಂಬ ಒತ್ತಡ ನಮ್ಮ ಮೇಲಿದೆ ಎಂದು ನನಗೇನೂ ಅನಿಸಿಲ್ಲ. ಗೆದ್ದರೆ ಖುಷಿಯಾಗುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ಐಸಿಸಿ ಟೂರ್ನಿ ಗೆಲ್ಲುವುದು ಖಂಡಿತಕ್ಕೂ ಸಂಭ್ರಮವೇ. ಆದರೆ ಎರಡು ವರ್ಷಗಳ ಶ್ರಮದ ಫಲವಾಗಿ ನಾವಿಲ್ಲಿಗೆ ಬಂದಿದ್ದೇವೆ ಎಂಬುದನ್ನೂ ಗಮನಿಸಬೇಕು' ಎಂದಿದ್ದಾರೆ.

ಐಪಿಎಲ್‌ನಲ್ಲಿ ಮಿಂಚಿದ್ದ ಆಸ್ಟ್ರೇಲಿಯಾ ಆಟಗಾರ

ಆಕ್ರಮಣದ ಆಟಕ್ಕೆ ಗ್ರೀನ್ ನಿರ್ಧಾರ

ಲಂಡನ್ (ಪಿಟಿಐ): ಐಪಿಎಲ್‌ನಲ್ಲಿ ಮಿಂಚಿದ್ದ ಭರವಸೆಯ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಅದೇ ರೀತಿಯ ಆಟವನ್ನು ಭಾರತ ವಿರುದ್ಧದ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೂ ಮುಂದುವರಿಸಲು ಬಯಸಿದ್ದಾರೆ. ಮಾದರಿ ಬದಲಾದ ಮಾತ್ರಕ್ಕೆ ಅಕ್ರಮಣಕಾರಿ ಆಟದ ಶೈಲಿಯಿಂದ ಸಾಂಪ್ರದಾಯಿಕ ಶೈಲಿಗೆ ಬದಲಾಗಬೇಕಾದ ಅಗತ್ಯವೇನೂ ಇಲ್ಲ ಎಂಬುದು ಗ್ರೀನ್ ಅಭಿಪ್ರಾಯ.

ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವಣ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಓವಲ್‌ನಲ್ಲಿ ಜೂನ್ 7 ರಿಂದ ನಡೆಯಲಿದೆ.

ಗ್ರೀನ್, ಈ ಬಾರಿ ಐಪಿಎಲ್‌ನಲ್ಲಿ ಮಿಂಚಿದ ಆಸ್ಟ್ರೇಲಿಯಾದ ಆಟಗಾರರಲ್ಲಿ ಹೆಚ್ಚಿನ ಗಮನ ಸೆಳೆದಿದ್ದರು. ಮುಂಬೈ ಇಂಡಿಯನ್ಸ್ ಪರ 16 ಇನಿಂಗ್ಸ್‌ಗಳಿಂದ 160ರ ಸ್ಟ್ರೈಕ್ ರೇಟ್‌ನಲ್ಲಿ 452 ರನ್ ಕಲೆಹಾಕಿದ್ದರು. ಅದರಲ್ಲೂ ಅವರು 47 ಎಸೆತಗಳಲ್ಲಿ ಗಳಿಸಿದ್ದ ಶತಕ ಮುಂಬೈ ಇಂಡಿಯನ್ಸ್ ತಂಡವನ್ನು ಪ್ಲೇ ಆಫ್ ಹಂತಕ್ಕೆ ತಲುಪಿಸಿತ್ತು. ಆರು ವಿಕೆಟ್‌ಗಳನ್ನೂ ಅವರು ಪಡೆದಿದ್ದರು.

ಕ್ಯಾಮರಾನ್ ಗ್ರೀನ್

'ಇಂಗ್ಲೆಂಡ್ ಆಡುತ್ತಿರುವ ಶೈಲಿಯ ಕ್ರಿಕೆಟ್ ಆಕ್ರಮಣಕಾರಿ ರೀತಿಯಲ್ಲಿದೆ. ಇದೆಲ್ಲಾ ನೋಡಿದರೆ ಆಟದಲ್ಲಿ ತುಂಬಾ ಬದಲಾವಣೆ ಅಗತ್ಯವಿಲ್ಲ ಎನಿಸುತ್ತದೆ' ಎಂದು ಡಬ್ಲ್ಯುಟಿಸಿ ಫೈನಲ್‌ಗೆ ಪೂರ್ವಭಾವಿಯಾಗಿ ಗ್ರೀನ್ ಅವರ ಹೇಳಿಕೆಯನ್ನು ಕ್ರಿಕೆಟ್.ಕಾಂ.ಎಯು ಉದ್ಧರಿಸಿದೆ.

'ಕಳೆದ ವರ್ಷ, ನಾನು ಬಿರುಸಿನ ರನ್‌ಗಳಿಗೆ ಹೋಗುವ ಬದಲು ಬಹುಶಃ ಅಗತ್ಯಕ್ಕಿಂತ ಹೆಚ್ಚು ರಕ್ಷಣಾತ್ಮಕವಾಗಿ ಆಡಿದೆ. ಬರೇ ಉತ್ತಮ ಎಸೆತಗಳಿಗೆ ರಕ್ಷಣಾತ್ಮಕ ಆಟ ಅಗತ್ಯ. ಮೈದಾನದಲ್ಲೇ ನಿರ್ಧಾರ ತಳೆಯಬೇಕು' ಎಂದಿದ್ದಾರೆ 24 ವರ್ಷದ ಆಲ್‌ರೌಂಡರ್.

ಆಸ್ಟ್ರೇಲಿಯಾದ ವೇಗದ ದಾಳಿಯಲ್ಲೂ ಗ್ರೀನ್ ಭಾಗವಾಗಿದ್ದಾರೆ. ಇಂಗ್ಲೆಂಡ್‌ನ ವಾತಾವರಣದಲ್ಲಿ ಡ್ಯೂಕ್ ಚೆಂಡಿನಿಂದ ಬೌಲ್ ಮಾಡಲು ಅವರು ಕಾತರರಾಗಿದ್ದಾರೆ.

ಏಷ್ಯನ್ ಅಥ್ಲೆಟಿಕ್ಸ್: ಸಿದ್ಧಾರ್ಥ್ ಚೌಧರಿಗೆ ಚಿನ್ನದ ಪದಕ

ಯೆಚೊಯಾನ್ (ದಕ್ಷಿಣ ಕೊರಿಯಾ), (ಪಿಟಿಐ): ಸಿದ್ಧಾರ್ಥ್ ಚೌಧರಿ ಇಲ್ಲಿ ನಡೆಯುತ್ತಿರುವ ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಶಾಟ್‌ಪಟ್‌ನಲ್ಲಿ ಭಾರತಕ್ಕೆ 3ನೇ ಚಿನ್ನವನ್ನು ತಂದುಕೊಟ್ಟರು.

17 ವರ್ಷದ ಸಿದ್ಧಾರ್ಥ್ ತಮ್ಮ ಮೂರನೇ ಪ್ರಯತ್ನದಲ್ಲಿ ಶಾಟ್‌ಪಟ್ ಅನ್ನು 19.52 ಮೀಟರ್ ಎಸೆಯುವ ಮೂಲಕ ಚಿನ್ನದ ಪದಕ ಗಳಿಸಿದರು.

ಪುರುಷರ ಜಾವೆಲಿನ್ ಥ್ರೋನಲ್ಲಿ ಶಿವಂ ಲೊಹಕರೆ (ದೂರ: 72.34 ಮೀ), 3,000 ಮೀಟರ್ ಸ್ಟೀಪಲ್‌ಚೇಸ್‌ನಲ್ಲಿ ಶಾರುಖ್ ಖಾನ್ (ಕಾಲ: 8ನಿ.51.74 ಸೆ) ಮತ್ತು ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಸುಷ್ಮಿತಾ (ದೂರ: 5.96 ಮೀ) ಬೆಳ್ಳಿ ಪದಕವನ್ನು ಗೆದ್ದರು.

800 ಮೀ. ಓಟದಲ್ಲಿ ಶಕೀಲ್ (ಕಾಲ: 1ನಿ.49.79ಸೆ) ಕಂಚಿನ ಪದಕ ಗೆದ್ದರು. 4x400 ಮೀ. ರಿಲೇ ಮಿಕ್ಸೆಡ್ ರಿಲೆ ತಂಡ (ಕಾಲ:3 ನಿ.30.12ಸೆ) ಕೂಡ ಮೂರನೇ ಸ್ಥಾನ ಪಡೆಯಿತು.

ಸೋಮವಾರ ಒಂದೇ ದಿನ ಭಾರತದ ಅಥ್ಲೀಟುಗಳು ಒಂದು ಚಿನ್ನ, 3 ಬೆಳ್ಳಿ, 2 ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಭಾನುವಾರ 2 ಚಿನ್ನ ಮತ್ತು 1 ಕಂಚಿನ ಪದಕ ಬಂದಿತ್ತು.

ಫುಟ್‌ಬಾಲ್: ಜ್ಲಾಟನ್ ನಿವೃತ್ತಿ

ಮಿಲಾನ್ (ಎಎಫ್‌ಪಿ): ಎ.ಸಿ ಮಿಲಾನ್ ಕ್ಲಬ್‌ಗೆ ಆಡುವ ಸ್ವೀಡನ್‌ನ ಸ್ಟ್ರೈಕರ್ ಜ್ಲಾಟನ್ ಇಬ್ರಾಹಿಮೋವಿಚ್ ಅವರು ಕ್ಲಬ್ ಫುಟ್‌ಬಾಲ್ ವೃತ್ತಿಜೀವನಕ್ಕೆ ತೆರೆ ಎಳೆದಿದ್ದಾರೆ.

ಸೀರಿ–ಎ ಟೂರ್ನಿಯಲ್ಲಿ ಭಾನುವಾರ ನಡೆದ ವೆರೋನಾ ವಿರುದ್ಧದ ಪಂದ್ಯದ ಬಳಿಕ ಅವರು ನಿವೃತ್ತಿ ನಿರ್ಧಾರ ಪ್ರಕಟಿಸಿದರು. ಈ ಪಂದ್ಯವನ್ನು ಮಿಲಾನ್ 3–1 ರಲ್ಲಿ ಗೆದ್ದುಕೊಂಡಿತು.

100 ಮೀ. ಓಟವನ್ನು 10 ಸೆ.ಗಳ ಒಳಗೆ ಕ್ರಮಿಸಿದ ಮೊದಲ ಅಥ್ಲೀಟ್

ಅಮೆರಿಕದ ಓಟಗಾರ ಜಿಮ್ ಹೈನ್ಸ್ ನಿಧನ

ಲಾಸ್ ಏಂಜೆಲಿಸ್ (ಎಎಫ್‌ಪಿ): 100 ಮೀಟರ್ಸ್ ಓಟವನ್ನು 10 ಸೆಕೆಂಡುಗಳ ಒಳಗೆ ಕ್ರಮಿಸಿದ ವಿಶ್ವದ ಮೊದಲ ಓಟಗಾರ, ಅಮೆರಿಕದ ಜಿಮ್ ಹೈನ್ಸ್ (76) ಅವರು ಸೋಮವಾರ ನಿಧನರಾದರು ಎಂದು ವಿಶ್ವ ಅಥ್ಲೆಟಿಕ್ಸ್ ತಿಳಿಸಿದೆ.

1968ರ ಜೂನ್‌ನಲ್ಲಿ ಸಾಕ್ರಮೆಂಟೊದಲ್ಲಿ ನಡೆದ ಅಮೆರಿಕ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ಸ್‌ನಲ್ಲಿ ಅವರು ಈ ಓಟವನ್ನು 9.9 ಸೆಕೆಂಡುಗಳಲ್ಲಿ ಓಡಿ ದಾಖಲೆ ಸ್ಥಾಪಿಸಿದ್ದರು. 100 ಮೀ. ಓಟವನ್ನು 10 ಸೆಕೆಂಡುಗಳ ಅಥ್ಲೀಟ್ ಒಬ್ಬರು ಅಧಿಕೃತವಾಗಿ ಓಡಿದ್ದು ಅದೇ ಮೊದಲು. ಆದರೆ ಅದು ಗಡಿಯಾರದಲ್ಲಿ (hand time) ದಾಖಲಾದ ಕಾಲಾವಧಿ.

ಆ ವರ್ಷದ ಕೊನೆಯಲ್ಲಿ ಮೆಕ್ಸಿಕೊ ಸಿಟಿಯಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಅವರು 100 ಮೀ. ಓಟವನ್ನು 9.95 ಸೆಕೆಂಡುಗಳಲ್ಲಿ ಓಡಿದ್ದು ಎಲೆಕ್ಟ್ರಾನಿಕ್ ಟೈಮರ್‌ನಲ್ಲಿ ದಾಖಲಾಗಿತ್ತು. ವಿಶೇಷವೆಂದರೆ ಆ ವಿಶ್ವದಾಖಲೆ 15 ವರ್ಷಗಳ ಕಾಲ ಅಬಾಧಿತವಾಗಿ ಉಳಿದಿತ್ತು. 100 ಮೀ. ವಿಶ್ವದಾಖಲೆಯಲ್ಲಿ ದೀರ್ಘಕಾಲ ಅಭೇದ್ಯವಾಗಿ ಉಳಿದ ದಾಖಲೆ ಎನಿಸಿತ್ತು. 1983ರಲ್ಲಿ ಅಮೆರಿಕದ ಮತ್ತೊಬ್ಬ ಓಟಗಾರ ಕೆಲ್ವಿನ್ ಸ್ಮಿತ್ 9.93 ಸೆಕೆಂಡುಗಳಲ್ಲಿ ಓಡುವ ಮೂಲಕ ಹೈನ್ಸ್ ದಾಖಲೆ ಮುರಿದಿದ್ದರು.


ಜಿಮ್ ಹೈನ್ಸ್ (ಬಲಗಡೆ) -ಎಎಫ್‌ಪಿ ಚಿತ್ರ

ಅರ್ಕಾನ್ಸಸ್‌ನ ಡೂಮಾಸ್‌ನಲ್ಲಿ ಕಟ್ಟಡ ಕಾರ್ಮಿಕರೊಬ್ಬರ ಮಗನಾಗಿ ಹುಟ್ಟಿದ ಹೈನ್ಸ್ ಬೆಳೆದಿದ್ದು ಕ್ಯಾಲಿಫೋರ್ನಿಯಾದ ಓಕ್‌ಲ್ಯಾಂಡ್‌ನಲ್ಲಿ. ಬಾಲ್ಯದಲ್ಲಿ ಅವರಿಗೆ ಬೇಸ್‌ಬಾಲ್ ಪ್ರಿಯವಾದ ಆಟವಾಗಿತ್ತು. ಅವರಲ್ಲಿರುವ ಓಟದ ಪ್ರತಿಭೆಯನ್ನು ಗುರುತಿಸಿದ್ದು ಅಥ್ಲೆಟಿಕ್ ಕೋಚ್ ಜಿಮ್ ಕೋಲ್‌ಮನ್ ಅವರು. 17 ವರ್ಷ ವಯಸ್ಸು ಆಗುವಷ್ಟರಲ್ಲಿ ಅವರು ವಿಶ್ವದ ಅಗ್ರ 20 ಸ್ಪ್ರಿಂಟರ್‌ಗಳಲ್ಲಿ ಒಬ್ಬರಾಗಿ ಪ್ರಸಿದ್ಧಿಗೆ ಬಂದಿದ್ದರು.

ಮೆಕ್ಸಿಕೊ ಒಲಿಂಪಿಕ್ಸ್‌ನಲ್ಲಿ ಅವರು ಜಮೈಕಾದ ಲೆನಾಕ್ಸ್ ಮಿಲ್ಲರ್ ಮತ್ತು ಚಾರ್ಲ್ಸ್ ಗ್ರೀನ್ ಅವರನ್ನು ಸೋಲಿಸಿ ನೂತನ ವಿಶ್ವ ದಾಖಲೆ ಸ್ಥಾಪಿಸಿದ್ದರು. ಅಮೆರಿಕದ ತಂಡ 4x100 ಮೀ. ರಿಲೇ ಓಟದಲ್ಲೂ ವಿಶ್ವದಾಖಲೆಯೊಡನೆ ಚಿನ್ನ ಗೆಲ್ಲುವಲ್ಲಿ (ಕಾಲ: 38.24 ಸೆ.) ಅವರ ಪಾತ್ರವೇ ಪ್ರಮುಖವಾಗಿತ್ತು.

ಒಲಿಂಪಿಕ್ ಮುಗಿದ ಕೆಲವೇ ದಿನಗಳ ನಂತರ ಕಳ್ಳರು ಹೌಸ್ಟನ್‌ನಲ್ಲಿರುವ ಅವರ ಮನೆಗೆ ನುಗ್ಗಿ ಚಿನ್ನದ ಪದಕಗಳನ್ನು ಕಳವು ಮಾಡಿದ್ದರು. ಪದಕಗಳನ್ನು ಹಿಂತಿರುಗಿಸುವಂತೆ ಅವರು ಸ್ಥಳೀಯ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಮನವಿ ಮಾಡಿದ್ದರು. ಇದರ ಪರಿಣಾಮ ಕಂದುಬಣ್ಣದ ಲಕೋಟೆಯಲ್ಲಿ ಈ ಪದಕಗಳು ಅವರ ಮನೆಯ ವಿಳಾಸಕ್ಕೆ ಮರಳಿದ್ದವು.

1968ರಲ್ಲಿ ಅಥ್ಲೆಟಿಕ್ಸ್‌ನಿಂದ ನಿವೃತ್ತರಾದ ಅವರು ಕೆಲಕಾಲ ಫುಟ್‌ಬಾಲ್ ಆಟದ ಕಡೆ ಗಮನ ಹರಿಸಿದ್ದರು. ಎನ್‌ಎಫ್‌ಎಲ್‌ನಲ್ಲಿ ಮಿಯಾಮಿ ಡಾಲ್ಫಿನ್ಸ್ ಮತ್ತು ಕನ್ಸಾಸ್ ಸಿಟಿ ಚೀಫ್ಸ್ ತಂಡಕ್ಕೆ ಆಡಿದ್ದರು.